ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್


ಸೆಪ್ಟೆಂಬರ್ 04, 2013 ಪುಟ 20 ರೂ. 14/-

ರಂಗತಂಡ
ಚಾಮರಾಜನಗರದ ರಂಗವಾಹಿನಿ

ಸಂದರ್ಶನ
ನರೇಂದ್ರನಾಯಕ್



...ಂಬಲಿಗರಿಗೆ ...ತ್ತು ಒದೆ




ತುಂಡಾ ಕ್ಷುದ್ರ ಜಿಹಾದಿ



...ಾಯಭಾಗ ...ಕಂಟಕ ...ಹೊಳೆಯ ...ರಗಳೆಗಳು


ಕರಾವಳಿ ಭಜರಂಗಿ ಗೋವು ಕಳ್ಳರು



ದಾವಣಗೆರೆ ದಲ್ಲಾಳಿ ಮಂಡಿಯಾದ ನಗರಪಾಲಿಕೆ

...ಭಿಮಾನಿ ರೈತರೂ, ಸುಜುಕಿ ಏಜೆಂಟ್ ಮೋದಿಯೂ

ಬಿಎಂಟಿಸಿ: 3000 ರೂ. ಕೊಟ್ಟರೆ ಹೊಸ ಬಸ್



ಬೆಂಗಳೂರು ನಗರಕ್ಕೆ ಬಿಎಂಟಿಸಿ ತೀರಾ ಅನಿವಾರ್ಯ. ಒಂದು ದಿನ ಈ ಸಾರಿಗೆಯಲ್ಲಿ ವ್ಯತ್ಯಯವುಂಟಾದರೆ ಲಕ್ಷಾಂತರ ಜನರು ತೊಂದರೆ ಅನುಭವಿಸುವುದು ಮಾತ್ರವಲ್ಲದೆ, ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ಆರ್ಥಿಕ ನಷ್ಟವುಂಟಾಗುತ್ತದೆ. ಬಿಎಂಟಿಸಿ ಇಲ್ಲದೇ ಹೋದಲ್ಲಿ ಇಡೀ ಬೆಂಗಳೂರು ಸ್ತಬ್ಧಗೊಳ್ಳುವುದಂತೂ ನಿಜ.

ಆದರೆ ಇಂಥಾ ಸಂಸ್ಥೆಯಲ್ಲಿ ದುಡಿಯುತ್ತಿರುವ ಡ್ರೈವರ್-ಕಂಡಕ್ಟರ್‌ಗಳೆಂಬ ಜೋಡಿ ಎತ್ತುಗಳನ್ನು ಅಕ್ಷರಶಃ ಜೀತದಾಳುಗಳಂತೆ ದುಡಿಸಿಕೊಳ್ಳಲಾಗುತ್ತಿದೆ.

ಬಿಎಂಟಿಸಿ ಬಸ್ ಹರಿದು ಸಾವು, ಚಾಲಕನ ನಿಯಂತ್ರಣ ತಪ್ಪಿ ಮನೆಯೊಳಗೆ, ಅಂಗಡಿಗೆ, ಚರಂಡಿಗೆ ನುಗ್ಗಿದ ಬಸ್... ಹೀಗೆ ಸುದ್ದಿಗಳು ಪ್ರಕಟಗೊಳ್ಳದ ದಿನಗಳಿಲ್ಲ. ಬಸ್ ನಡೆಸುತ್ತಿರುವಾಗಲೇ ಸ್ಟೇರಿಂಗ್ ಕಿತ್ತುಬಂದ ಪ್ರಸಂಗಗಳು, ನಿಂತಿರುವ ಬಸ್‌ಗಳು ತನ್ನಂತೆ ತಾನೇ ಮುಂದಕ್ಕೆ ಹಿಂದಕ್ಕೆ ಚಲಿಸಿ ನಡೆದಂಥ ಅವಘಡಗಳಿಗೇನು ಕೊರತೆಯಿಲ್ಲ. ಇನ್ನು ಫುಲ್ ಟ್ರಾಫಿಕ್ ಇರುವ ರಸ್ತೆಗಳಲ್ಲಿ ರೈಲು ಹಳಿಗಳ ಮೇಲೆ ಅಥವಾ ಸಿಗ್ನಲ್‌ಗಳಲ್ಲೇ ಬಸ್ ಸ್ಟಾರ್ಟ್ ಆಗದೆ ಪ್ರಯಾಣಿಕರು, ಟ್ರಾಫಿಕ್ ಪೊಲೀಸರು ಸೇರಿಕೊಂಡು ಬೆವರಿಳಿಸಿ ತಳ್ಳಿದ ದೃಶ್ಯಗಳು ನೂರಾರು...

ಇಂಥಾ ಎಲ್ಲಾ ಸಂದರ್ಭಗಳಲ್ಲೂ ಸಾರ್ವಜನಿಕರ ಕೆಂಗಣ್ಣಿಗೆ ಗುರಿಯಾಗುವವರು ಡ್ರೈವರ್-ಕಂಡಕ್ಟರ್‌ಗಳೇ. ಆದರೆ ಬಿಎಂಟಿಸಿ ಬಸ್‌ಗಳಿಂದಾಗುವ ಇಂಥಾ ನಾನಾ ಅವಘಡಗಳಿಗೆ ಬಿಎಂಟಿಸಿಯಲ್ಲಿರುವ ಭ್ರಷ್ಟ ಅಧಿಕಾರಿಗಳೇ ನೇರ ಹೊಣೆಯೆಂಬುದು ವಿಚಿತ್ರ ಸತ್ಯ.

ಪ್ರತಿನಿತ್ಯ ಬೀದಿಗಿಳಿಯುತ್ತವೆ ಯಮದೂತ ಬಸ್‌ಗಳು!

ನಗರದಲ್ಲಿ ಸಂಚರಿಸುತ್ತಿರುವ ಬಸ್‌ಗಳಲ್ಲಿ ಶೇಕಡ 30ರಷ್ಟು ಗುಜರಿಗೆ ಹೋಗಬೇಕಾದ ಬಸ್‌ಗಳೇ ಆಗಿವೆ. ಬಸ್‌ಗಳಲ್ಲಿ ಪ್ರಯಾಣಿಸಿದರೆ ಇದರ ಅನುಭವವಾಗುತ್ತದೆ. ಡಿಪೋದಿಂದ ಹೊರಡುವ ಬಸ್‌ಗಳು ಹಿಂದಿನ ರಾತ್ರಿ ಯಾವ ಕಂಡಿಷನ್‌ನಲ್ಲಿರುತ್ತವೋ ಅದೇ ಕಂಡಿಷನ್‌ನಲ್ಲಿ ಹೊರಬರುತ್ತವೆ. ಬಸ್‌ಗಳ ಸಮಸ್ಯೆಗಳೇನು? ಬೆಳಿಗ್ಗೆ ಹೊರಡುವ ಕಂಡಿಷನ್ ಇದೆಯೋ ಇಲ್ಲವೋ? ಎಂಬ ಬಗ್ಗೆ ಡಿಪೋದಲ್ಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿಗಳ್ಯಾರೂ ಕಣ್ಣೂ ಹಾಯಿಸುವುದಿಲ್ಲ.

ನಿಯಮಾವಳಿ ಪ್ರಕಾರ ಪ್ರತಿ ಪಾಳಿಯಲ್ಲಿ ಕೆಲಸ ಮುಗಿಸಿದ ಡ್ರೈವರ್ ಕಂಡಕ್ಟರ್‌ಗಳು ತಮ್ಮ ಕೆಲಸ ಮುಗಿಸಿದ ನಂತರ ಆ ಗಾಡಿಯ ಸಮಸ್ಯೆಯೇನೆಂದು ತಮ್ಮ ತಮ್ಮ ಲಾಗ್‌ಶಿಟ್‌ಗಳಲ್ಲಿ ನಮೂದಿಸಬೇಕು. ಈ ಲಾಗ್‌ಶಿಟ್‌ಗಳನ್ನು ಪ್ರತಿದಿನ ಅಧಿಕಾರಿಗಳು ಚೆಕ್‌ಮಾಡಿ, ಆಯಾ ಬಸ್‌ನ ಸಮಸ್ಯೆಯನ್ನು ಸರಿಪಡಿಸಿ, ಲಾಗ್‌ಶಿಟ್‌ಗೆ ಸಹಿ ಹಾಕಬೇಕು.

ಆದರೆ ಜೀವವನ್ನು ಕೈಯಲ್ಲಿಡಿದುಕೊಂಡು ಬಸ್ ಓಡಿಸಬೇಕಾದವರು ಅಧಿಕಾರಿಗಳಲ್ಲವಲ್ಲ? ಹೀಗಾಗಿ ಅಧಿಕಾರಿಗಳು ತಲೆಯೇ ಕೆಡಿಸಿಕೊಳ್ಳುವುದಿಲ್ಲ. ಇಂಥಾ ಸನ್ನಿವೇಶ ಇರೋದರಿಂದ ಡ್ರೈವರ್-ಕಂಡಕ್ಟರ್‌ಗಳೇ ಬ್ರೇಕ್, ಆಯಿಲ್, ಏರ್, ಕ್ಲಚ್, ಬ್ಯಾಟರಿ ಮುಂತಾದವುಗಳನ್ನು ರಿಪೇರಿ ಮಾಡಿಸಿಕೊಳ್ಳಬೇಕು. ಅದೂ ಪುಕ್ಕಟೆಯಾಗಿ ಅಲ್ಲ. ಇಂಥಾ ಕೆಲಸಗಳಿಗೂ ಮೆಕ್ಯಾನಿಕ್, ಸ್ಟೋರ್‌ಕೀಪರ್‌ನಿಂದ ಹಿಡಿದು ಡಿಪೋ ಮ್ಯಾನೇಜರ್‌ತನಕ ಕೈಬಿಸಿ ಮಾಡಬೇಕು. ಇಲ್ಲವಾದರೆ ಆ ಬಸ್ ರಿಪೇರಿಯೇ ಆಗುವುದಿಲ್ಲ. ಬಸ್ ಆಪರೇಟ್ ಆಗದೇ ಹೋದರೆ ಕೆಲಸಕ್ಕೆ ಆಬ್‌ಸೆಂಟ್ ಬೀಳುವ ಭಯ. ಹೊಟ್ಟೆಪಾಡಿಗಾಗಿ ಇಂಥ ವರ್ತುಲದಲ್ಲಿ ಸಿಕ್ಕು ಡ್ರೈವರ್-ಕಂಡಕ್ಟರ್‌ಗಳು ಹೈರಾಣಾಗಿ ಹೋಗಿದ್ದಾರೆ.

3000 ರೂ. ಕೊಟ್ಟರೆ ಹೊಸಬಸ್!

ಹೌದು ಇಂಥದೊಂದು ಸಂಪ್ರದಾಯ ಅನಾದಿಕಾಲದಿಂದಲೂ ಬಿಎಂಟಿಸಿಯಲ್ಲಿ ನಡೆದುಕೊಂಡು ಬಂದಿದೆ. ಹಳೆಯ ಗುಜರಿಗಾಡಿಗಳು ಬೇಡವೆಂದರೆ, ಹೊಸಬಸ್‌ಗಳನ್ನು ಅಲಾಟ್ ಮಾಡಿಸಿಕೊಳ್ಳಲು ಡ್ರೈವರ್-ಕಂಡಕ್ಟರ್‌ಗಳು ಮ್ಯಾನೇಜರ್‌ಗಳಿಗೆ ಲಂಚ ಕೊಡಬೇಕು. ಅದು 2000 ದಿಂದ 3000 ರೂ.ಗಳವರೆಗೆ ಬೇರೆಬೇರೆ ಡಿಪೋಗಳಲ್ಲಿ ಬೇರೆಬೇರೆ ರೇಟು ಫಿಕ್ಸ್ ಆಗಿ ಹೋಗಿದೆ. ಇಲ್ಲಿ ಎಲ್ಲದಕ್ಕೂ ಹಣ; ಇಂಥಾ ವ್ಯವಹಾರ ನಡೆಸಲು ಡಿಪೋ ಮ್ಯಾನೇಜರ್‌ಗಳು ತಮಗೆ ನಿಷ್ಠರಾದ ಮೆಕ್ಯಾನಿಕ್‌ಗಳನ್ನೋ, ವಾಚ್‌ಮ್ಯಾನ್‌ರನ್ನೋ ನೇಮಿಸಿಕೊಂಡಿರುತ್ತಾರೆ. ಮರಿ ಮ್ಯಾನೇಜರ್‌ಗಳಂತೆ ವರ್ತಿಸುವ ಇವರಿಗೆ ಡಿಪೋದಲ್ಲಿ 'ಪಿಂಪು', 'ಬಕೆಟ್ಟು' ಎಂಬ ಅಡ್ಡ ಹೆಸರುಗಳು ಚಾಲ್ತಿಯಲ್ಲಿವೆ.



ಕಾಯಿಲೆ ಬಿದ್ದರೂ ಕಾಸು ಕೊಡಬೇಕು!

ಮನುಷ್ಯ ಅಂದಮೇಲೆ ಕಾಯಿಲೆ ಕಸಾಲೆ ಮಾಮೂಲಿ. ಕಾಯಿಲೆಗಳು ಹೆಚ್ಚಾದಂತೆಲ್ಲಾ ಡಾಕ್ಟರ್‌ಗಳಿಗೆ ಒಳ್ಳೇ ಸೀಸನ್. ಕಂಡಕ್ಟರ್-ಡ್ರೈವರ್‌ಗಳು ಅಥವಾ ಅವರ ಹೆಂಡತಿ ಮಕ್ಕಳು ಕಾಯಿಲೆ ಬಿದ್ದರೆ ಡಾಕ್ಟರ್‌ಗಳ ಜೊತೆಗೆ ಬಿಎಂಟಿಸಿ ಅಧಿಕಾರಿಗಳಿಗೂ ಒಳ್ಳೇ ಸೀಸನ್ ಆಗುತ್ತದೆ ಎಂದರೆ ಆಶ್ಚರ್ಯವೆನಿಸುತ್ತದೆ ಅಲ್ಲವೇ? ಇದೊಂದು ವಿಚಿತ್ರ ಸತ್ಯ. ನೌಕರರು ಅನುಮತಿ ರಜೆ ತೆಗೆದುಕೊಂಡರೆ 100 ರೂ., ಅನುಮತಿಯಿಲ್ಲದ ರಜೆ ತೆಗೆದುಕೊಂಡರೆ 200 ರೂ. "ಫೀಜು" ನಿಗದಿಯಾಗಿಬಿಟ್ಟಿದೆ. 300 ರೂ. ಕೊಟ್ಟರೆ ಅಟೆಂಡೆನ್ಸ್ ಕೂಡ ಬೀಳುತ್ತದೆ. ಹೇಗಿದೆ ಬಿಎಂಟಿಸಿ ವರಸೆ?

ನಿಗದಿತ ಸಮಯವಿಲ್ಲ!

ಡ್ರೈವರ್-ಕಂಡಕ್ಟರ್‌ಗಳು ಎಂದಿನಂತೆ ತಮ್ಮ ಡ್ಯೂಟಿ ಮುಗಿಸಿ ಡಿಪೋಗೆ ಬಂದರೆ ಇನ್ನೊಂದು ಲೈನ್‌ಗೆ ಅಥವಾ ಶಿಫ್ಟ್‌ಗೆ ಹೋಗಬೇಕೆಂದು ಡಿ.ಎಂ ಆದೇಶ ಹೊರಡುತ್ತದೆ. ಇಂಥಾ ಆದೇಶಗಳಿಗೆ ಇನ್ನೂ ಪರ್ಮನೆಂಟ್ ಆಗದಿರುವ ನೌಕರರು ಹೆಚ್ಚು ಬಲಿಪಶುಗಳು. ಏನೇ ಒತ್ತಡವಿದ್ದರೂ ಇಂಥಾ ಆದೇಶ ಒಪ್ಪಲೇಬೇಕು, ಇಲ್ಲವಾದರೆ ಮೆಮೋ, ಕೆಲಸ ಕಳೆದುಕೊಳ್ಳುವ ಭೀತಿ. ಇಂಥಾ ಸನ್ನಿವೇಶಗಳಲ್ಲಿ ಸಿಲುಕಿದ ಕೆಲ ನೌಕರರು ವಾರಗಟ್ಟಲೆ ಮನೆಮಠಗಳಿಂದ ದೂರವಿರಬೇಕಾದ ಅನಿವಾರ್ಯತೆಗೆ ಸಿಕ್ಕಿರುತ್ತಾರೆ. ಬಿಎಂಟಿಸಿಯ ಈ ಜೀತಗಾರಿಕೆಯ ಬದುಕು ಹಲವಾರು ನೌಕರರ ಸಾಂಸಾರಿಕ ಜೀವನದ ಮೇಲೆ ನಾನಾ ಬಿಕ್ಕಟ್ಟುಗಳನ್ನು ಸೃಷ್ಟಿಸಿ, ಎಷ್ಟೋ ಸಂಸಾರಗಳು ಬೀದಿಗೆ ಬಿದ್ದಿವೆ.

ತಮ್ಮ ನೀಚ ನಡವಳಿಕೆಗಳನ್ನು ಪ್ರಶ್ನಿಸುವ ಅಥವಾ ತಮ್ಮ ಹಕ್ಕು, ನ್ಯಾಯ ಅಂತ ದನಿಯೆತ್ತುವ ನೌಕರರಿಗೆ ಚೆಕಿಂಗ್ ಸ್ಕ್ವಾಡ್ ಮೂಲಕ ಕಿರುಕುಳ ಕೊಡುವ ವಿಶೇಷ ಅಸ್ತ್ರವನ್ನೂ ಅಧಿಕಾರಿಗಳು ಬಳಸುತ್ತಿದ್ದಾರೆ. ಪ್ರಾಮಾಣಿಕವಾಗಿ ಬ... ಬದುಕಲು ಬಿಡದ ಇಂಥಾ ವಿಷವರ್ತುಲದಲ್ಲಿ ಸಿಲು... ಡ್ರೈವರ್-ಕಂಡಕ್ಟರ್‌ಗಳು ಭ್ರಷ್ಟಾಚಾರದ ಕೊಚ್ಚೆಯಲ್ಲಿ ಮುಳುಗು... ಅನಿವಾರ್ಯ ಪರಿಸ್ಥಿತಿಯನ್ನು ಬಿಎಂಟಿಸಿ ಸೃಷ್ಟಿಸಿದೆ.

ಓಟಿ ಎಂದರೆ ಬಿಟ್ಟಿ ಎಂದರ್ಥ!

ಯಾವುದೇ ಇಲಾಖೆ ಅಥವಾ ಕಾರ್ಖಾನೆಯ ನೌಕರರಿರಲಿ, ... ಅವಧಿಗಿಂತ ಹೆಚ್ಚಾಗಿ ದುಡಿದರೆ ಅಂಥಾ ಅವಧಿಯನ್ನು ಓವರ್‌ಟೈಮ್ ... ಎಂದು ಪರಿಗಣಿಸಿ ಹೆಚ್ಚುವರಿ ಭತ್ಯೆ ಕೊಡುವ ಕಾನೂನು ಜಾರಿ... ಆದರೆ ಬಿಎಂಟಿಸಿ ನೌಕರರ ಪಾಲಿಗೆ ಈ ಕಾನೂನು ಅನ್ವಯವಾಗುವುದೇ...

ಬೆಂಗಳೂರಿನ ಟ್ರಾಫಿಕ್ ಸಮಸ್ಯೆಯಲ್ಲಿ ಸಮಯಕ್ಕೆ ಸರಿಯಾಗಿ ... ಮುಗಿಸಿ ಬಸ್‌ಗಳು ಡಿಪೋ ಸೇರುವುದು ಸಾಧ್ಯವೇ ಇಲ್ಲ. ಹೀಗಾಗಿ ಗಂಟೆ... ಹೆಚ್ಚುವರಿಯಾಗಿ ದುಡಿಯಬೇಕಾದ ಅನಿವಾರ್ಯತೆ ನೌಕರರಿಗಿದೆ. ಇದ್ಯಾ... ಓಟಿ ಎಂದು ಪರಿಗಣಿಸುವುದಿಲ್ಲ. ಹೋಗಲಿ, ಬಸ್ ರಿಪೇರಿಯಾಗಿ... ನಿಂತಾಗ ಡ್ರೈವರ್-ಕಂಡಕ್ಟರ್‌ಗಳು ಅದನ್ನು ಕಾಯುತ್ತಾ ಕೂರಬೇಕಾ... ರಿಪೇರಿಯಾಗಿ ಬಸ್ ಡಿಪೋ ಸೇರಲು ಎಷ್ಟೇ ಹೊತ್ತಾದರೂ ಸರಿ ಅದ... ಓಟಿ ಲೆಕ್ಕದಲ್ಲಿ ಪರಿಗಣಿತವಾಗುವುದಿಲ್ಲ. ಇವು ಅಪರೂಪದ ಘಟನೆ... ನೌಕರರ ಪ್ರತಿನಿತ್ಯದ ಗೋಳು.

ದಿನವಿಡೀ ಲಕ್ಷಾಂತರ ನಾಗರಿಕರ ಪ್ರಯಾಣಕ್ಕಾಗಿ ದುಡಿ... ಡ್ರೈವರ್-ಕಂಡಕ್ಟರ್‌ಗಳ ಪ್ರಯಾಣಕ್ಕೆ ತತ್ವಾರ ಎಂದರೆ ಯಾರೂ ನಂಬ... ಎರಡನೇ ಶಿಫ್ಟ್‌ನ ಕೆಲಸ ಮುಗಿಸಿ ಡಿಪೋದಿಂದ ಹೊರಬೀಳುವ ... ರಾತ್ರಿ 11 ಗಂಟೆಯಾಗಿರುತ್ತದೆ. ಆ ವೇಳೆಯಲ್ಲಿ ದೂರದಲ್ಲಿರುವ ... ಗೂಡು ಸೇರಿಕೊಳ್ಳುವುದು ನೌಕರರಿಗೆ ಒಂದು ಸಾಹಸವೇ ಸರಿ. ರಾತ್ರಿವೇ... ಖಾಕಿ ಧರಿಸಿದ ನೌಕರರು ಕಂಡಕಂಡ ವಾಹನಗಳಿಗೆ ಕೈಚಾಚಿ ಲಿಫ್ಟ್ ಬ... ದೃಶ್ಯ ನಿತ್ಯವೂ ಮಾಮೂಲು. ಐಷಾರಾಮಿ ಕಾರುಗಳಲ್ಲಿ ತಿರುಗಾಡುವ ಬಿ... ಅಧಿಕಾರಿಗಳು ತಡರಾತ್ರಿ ನೌಕರರನ್ನು ತಲುಪಿಸಲಿಕ್ಕೆಂದು ಇದ್ದ 'ಕಾಲ... ವ್ಯವಸ್ಥೆಯನ್ನು ರದ್ದುಪಡಿಸಿ ಪುಣ್ಯ ಕಟ್ಟಿಕೊಂಡಿದ್ದಾರೆ.

ರಾತ್ರಿ ಪಾಳಿಗೆ 15 ರೂ. ಭತ್ಯೆ!

ರಾತ್ರಿವೇಳೆ ಸಂಚರಿಸುವ ಬಸ್‌ಗಳಲ್ಲಿ ಮಾಮೂಲಿಗಿಂತ ಎರಡು ... ದರವನ್ನು ಪ್ರಯಾಣಿಕರು ತೆರಬೇಕು. ಈ ದರದ ವಿಷಯವಾಗಿ ಪ್ರಯಾ... ಮತ್ತು ಕಂಡಕ್ಟರ್‌ಗಳ ಜಟಾಪಟಿ ರಾತ್ರಿ ಬಸ್‌ಗಳಲ್ಲಿ ಮಾಮೂಲು. ... ರಾತ್ರಿ ಬಸ್ ಓಡಿಸುವ ಮೂಲಕ ಸಂಸ್ಥೆ ಸೇವೆ ಮಾಡಿದ್ದಕ್ಕಿಂತಲೂ ಆದಾ... ಹೆಚ್ಚಿಸಿಕೊಂಡಿದ್ದೇ ಹೆಚ್ಚು.

ಇನ್ನೂ ಹಳ್ಳಿಗಳಲ್ಲಿ ಹಾಲ್ಟ್ ಆಗುವ ಬಸ್‌ಗಳಲ್ಲಿ 24 ತಾಸುಗಳ ದ... ಆದರೆ ಇಂಥಾ ರಾತ್ರಿ ದುಡಿಮೆಯ ಪ್ರತಿಫಲ ಎಷ್ಟಿರಬಹುದೆಂದು ... ಊಹಿಸಲೂ ಸಾಧ್ಯವಿಲ್ಲ. ಬಿಎಂಟಿಸಿ ಯಲ್ಲಿ ರಾತ್ರಿ ದುಡಿಮೆಗೆ ಕೇವ... ರೂ. ಭತ್ಯೆ!

ದಂಡ! ದಂಡ!! ದಂಡ!!!

ಬಿಎಂಟಿಸಿಯ ಯಾವುದೇ ಬಸ್ ಲೈನ್ ಮೇಲೆ ಹೊರಟರೆ ... ಹಣ ಕಲೆಕ್ಷನ್ ಕಟ್ಟಲೇಬೇಕೆಂಬ ಮೌಖಿಕ ಆದೇಶ ಇರುತ್ತದಂತೆ. ... ಕಡಿಮೆಯಾದರೆ 200 ರೂ. ದಂಡ! ಬಸ್‌ನ ಮೈಲೇಜ್ ಕಡಿಮೆ... 200 ರೂ. ದಂಡ! ಗಾಡಿಗೆ ಏನಾದರೂ ಡ್ಯಾಮೇಜ್ ಆದರೆ ... ದಂಡ! ಕೆಲವೊಮ್ಮೆ ಟ್ರಾಫಿಕ್ ಕಾರಣಕ್ಕೆ ತಡವಾಗಿ ಡಿಪೋಗೆ ಬ... ದಂಡ ವಿಧಿಸಿದ ಉದಾಹರಣೆಗಳಿವೆ. ಹೀಗೆ ದಂಡದ ಬಿಸಿ ಅನು... ಡ್ರೈವರ್-ಕಂಡಕ್ಟರ್‌ಗಳು ಇಲ್ಲವೇ ಇಲ್ಲ ಎನ್ನಬಹುದು. ಈ ದಂಡ ... ವಸೂಲಿಬಾಜಿಯ ಹಾವಳಿ ಆ ಪ್ರಮಾಣದಲ್ಲಿದೆ. ವಿಶ್ವವಿಖ್ಯಾತ ಬೆಂ... ಮಹಾನಗರದ ಬಿಎಂಟಿಸಿ ಸಂಸ್ಥೆ ತನ್ನ ನೌಕರರನ್ನು ಜೀತದಾಳು... ಪರಿಗಣಿಸಿರುವುದು ಒಂದು ದೊಡ್ಡ ದುರಂತ. ನೌಕರರು ಇಂಥಾ ... ಗೋಳನ್ನು ಇನ್ನೆಷ್ಟು ದಿನ ಸಹಿಸಿಯಾರು?

ಸಾರಿಗೆ ಮಂತ್ರಿ ರಾಮಲಿಂಗಾರೆಡ್ಡಿ ಅವರಾದರೂ ಬಿಎಂಟಿಸಿ ಕಾ... ಗೋಳನ್ನು ಆಲಿಸುವರೇ?

■ ಕುಮಾರ್ ಸವ...

ಸುತ್ತ ಮುತ್ತ

ಮತ್ತೊಮ್ಮೆ ಯೋಚಿಸಿ

ಆರ್ಥಿಕತಜ್ಞರು ಆಹಾರ ಮಸೂದೆಯಿಂದಾಗಿ ವೆಚ್ಚವಾಗಲಿರುವ 1.25 ಲಕ್ಷ ಕೋಟಿ ರೂಪಾಯಿಗಳನ್ನು ವ್ಯರ್ಥ ಖರ್ಚೆ ಎಂದು ಟೀಕಿಸುತ್ತಿದ್ದಾರೆ. ಆದರೆ ಭಾರತದ ಉದ್ಯಮಗಳಿಗೆ ಇದೇ ಸರ್ಕಾರ 32 ಲಕ್ಷ ಕೋಟಿ ರೂಪಾಯಿಗಳ ತೆರಿಗೆ ವಿನಾಯತಿಯನ್ನು ಕೊಟ್ಟದ್ದರ ಬಗ್ಗೆ ಅವರೆಲ್ಲರೂ ತೆಪ್ಪಗಿದ್ದಾರೆ.

ಇಷ್ಟು ದೊಡ್ಡ ಮೊತ್ತದ ವಿನಾಯತಿಯನ್ನು ಕೊಟ್ಟದ್ದರಿಂದ ಭಾರತಕ್ಕೆ ಯಾವ ಲಾಭವೂ ಆಗಲಿಲ್ಲ. ಬದಲಾಗಿ ದೇಶದಲ್ಲಿ ಉತ್ಪಾದನೆ ಶೇ. 1.0 ಕುಸಿಯಿತು. ಹಾಗಾದರೆ 32 ಲಕ್ಷ ಕೋಟಿ ರೂಪಾಯಿಗಳು ಏನಾದವು? ಅದು ಕಾರ್ಪೊರೇಟ್ ಕಂಪನಿಗಳ ಜೇಬು ಸೇರಿತಷ್ಟೇ.

ಕಾರ್ಪೊರೇಟ್ ಕಂಪನಿಗಳಿಗೆ ಈ ವಿನಾಯತಿಯನ್ನು ಕೊಡದಿದ್ದರೆ ಒಂದೇ ಏಟಿನಲ್ಲಿ ನಮ್ಮ ದೇಶದ ಇಡೀ ಆರ್ಥಿಕ ಕೊರತೆಯನ್ನು ತೊಡೆದುಹಾಕಬಹುದಿತ್ತಲ್ಲದೆ ರೂಪಾಯಿ ಕೂಡ ಹೀಗೆ ಕುಸಿಯುತ್ತಿರಲಿಲ್ಲ.

- ಆಹಾರ ತಜ್ಞ ದೇವಿಂದರ್ ಶರ್ಮಾ

ಇದೊಂದು ರೋಗ

ಬಿಳಿ ಚರ್ಮದ ಬಗ್ಗೆ ಭಾರತೀಯರಿಗೆ ಅದೆಂತ ಗೀಳು ಇದೆಯೆಂದರೆ 1978ರಲ್ಲಿ ಯೂನಿಲಿವರ್ ಕಂಪನಿ ಫೇರ್ ಅಂಡ್ ಲವ್ಲಿ ಕ್ರೀಮನ್ನು ಮಾರಾಟ ಮಾಡಲು ಶುರುಮಾಡಿದಾಗ ಅದಕ್ಕೆ ತಕ್ಷಣವೇ ದೊಡ್ಡ ಮಾರುಕಟ್ಟೆ ಸಿಕ್ಕಿತು. ಎಸಿ ನೀಲ್ಸನ್ ಕಂಪನಿಯ ವರದಿಯ ಪ್ರಕಾರ 2010ರಲ್ಲಿ ಭಾರತೀಯರು ಇಂತಹ ಕ್ರೀಮ್‌ಗಳ ಮೇಲೆ ಒಟ್ಟು 432 ಮಿಲಿಯನ್ ಡಾಲರ್‌ಗಳನ್ನು ವೆಚ್ಚ ಮಾಡಿದರಲ್ಲದೆ ಈ ಮಾರುಕಟ್ಟೆ ಪ್ರತಿ ವರ್ಷ ಶೇ. 18ರಷ್ಟು ಬೆಳೆಯುತ್ತಿದೆ. ಅದೇ ವರದಿಯ ಪ್ರಕಾರ ಕಳೆದ ವರ್ಷ ಭಾರತೀಯರು ತಮ್ಮ ಮೈಬಣ್ಣವನ್ನು 'ಬಿಳಿ' ಮಾಡಿಕೊಳ್ಳಲು ಬರೋಬ್ಬರಿ 233 ಟನ್‌ನಷ್ಟು ಇಂತಹ ಕ್ರೀಮ್‌ಗಳನ್ನು ಖರೀದಿಸಿದ್ದರು.

- ಪತ್ರಿಕಾ ವರದಿ

ನಿನಗೂ ಇಂತಹದ್ದೇ ಸಾವು ಬಂದರೆ?

"ದೇವರ ದಯೆ ಇದ್ದವರು ಮಾತ್ರ ದಾಬೋಲ್ಕರ್ ಅವರಂತೆ ಕ್ಷಣಾರ್ಧದಲ್ಲಿ ಸಾವನ್ನು ಕಾಣುತ್ತಾರೆ. ಅನಾರೋಗ್ಯದಿಂದಲೋ, ಶಸ್ತ್ರ ಚಿಕಿತ್ಸೆಯಿಂದಲೋ ತತ್ತರಿಸಿ ಸಾಯುವುದಕ್ಕಿಂತ ಹೀಗೆ ಸಾಯುವುದು ಎಷ್ಟೋ ವಾಸಿ."

- ವಿಚಾರವಾದಿ ದಾಬೋಲ್ಕರ್ ಅವರನ್ನು ವಿರೋಧಿಸುತ್ತಿದ್ದ ಸನಾತನ ಸಂಸ್ಥಾನದ ನಾಯಕ ಡಾ.ಜಯಂತ್ ಅಥವಾಲೆ

ಬಿಎಂಡಬ್ಲ್ಯು ಕಾರ್‌ಗಿಂತಲೂ ದುಬಾರಿ ಎಮ್ಮೆ

ಲಕ್ಷ್ಮಿ ಎಂಬ ಎಮ್ಮೆಯನ್ನು ಹರಿಯಾಣಾ ರಾಜ್ಯದಲ್ಲಿ ಬರೋಬ್ಬರಿ 25 ಲಕ್ಷ ರೂಪಾಯಿಗಳಿಗೆ ಮಾರಾಟ ಮಾಡಲಾಗಿದೆ. ಆಂಧ್ರ ಪ್ರದೇಶದ ರೈತರೊಬ್ಬರು ಹರಿಯಾಣಾದ ಹಿಸಾರ್ ಜಿಲ್ಲೆಯ ರೈತ ಕಪೂರ್‌ಸಿಂಗ್ ಎಂಬುವವರಿಗೆ ಇಷ್ಟೊಂದು ಬೆಲೆ ತೆತ್ತು ಈ ಎಮ್ಮೆಯನ್ನು ಖರೀದಿಸಿದ್ದಾರೆ.



ಈ ಎಮ್ಮೆ ದಿನಕ್ಕೆ 32 ಲೀಟರ್ ಹಾಲುಗಳನ್ನು ಕರೆಯುತ್ತಿದ್ದು ಈಗಾಗಲೇ ಹಲವಾರು ಸ್ಪರ್ಧೆಗಳಲ್ಲಿ ಮೂರು ಲಕ್ಷ ರೂಪಾಯಿಗಳನ್ನು ಬಹುಮಾನದ ರೂಪದಲ್ಲಿ ಗೆದ್ದಿದೆ. ಈ ಎಮ್ಮೆಯ ಕರು ಕೂಡ ಮೂರು ಲಕ್ಷ ರೂಪಾಯಿಗಳಿಗೆ ಮಾರಾಟವಾಗಿದೆ.

ವಿಚಾರವಾದಿ ದಾಬೋಲ್ಕರ್ ಅವರಿಗೆ ನಮನಗಳು

ಕಂಡಹಾಗೆ



• ಗೌರಿ ಲಂಕೇಶ್
ಪ್ರಧಾನ ಸಂಪಾದಕಿ
editorlankesh@gmail.com

ಭಾರತದ ವಿಚಾರವಾದಿಗಳಿಗೆ ಆಗಸ್ಟ್ 20 ಕರಾಳದಿನವಾಗಿ ರಿಣಮಿಸಿದೆ. ಯಾಕೆಂದರೆ ಅಂದು ಪೂಣೆಯಲ್ಲಿ ಡಾ.ನರೇಂದ್ರ ಬೋಲ್ಕರ್ ಎಂಬ ಖ್ಯಾತ ವಿಚಾರವಾದಿಯನ್ನು ಇಬ್ಬರು ಹಾಡುಹಗಲೇ ಂದು ಹಾಕಿದ್ದ. ಈ ಕೊಲೆಗೆ ಕಾರಣ ದಾಬೋಲ್ಕರ್ ಅವರು ಮೂಢನಂಬಿಕೆಗಳನ್ನು, ಅಂಧಶ್ರದ್ಧೆಯನ್ನು ವಿರೋಧಿಸುತ್ತಿದ್ದದ್ದು, ಆ ಮೂಲಕ ಅಮಾಯಕರ ಭಾವನೆಗಳನ್ನೇ ಬಂಡವಾಳ ಮಾಡಿಕೊಂಡು ನರನ್ನು ಸುಲಿಯುತ್ತಿದ್ದ ಹಿತಾಸಕ್ತಿಗಳಿಗೆ ದೊಡ್ಡ ಸವಾಲಾಗಿದ್ದದ್ದು. ಲೆಯನ್ನು ಎಷ್ಟು ವ್ಯವಸ್ಥಿತವಾಗಿ ಮಾಡಲಾಗಿದೆ ಎಂದರೆ ವಾರದಲ್ಲಿ ದು ದಿನಗಳನ್ನು ಪೂಣೆಯಲ್ಲಿ ಕಳೆಯುತ್ತಿದ್ದ ದಾಬೋಲ್ಕರ್ ಅವರು ವ ಹೊತ್ತಿಗೆ ಎಲ್ಲಿ ಹೋಗುತ್ತಾರೆಂದು ನಿಗಾ ವಹಿಸಿ ಕೊಲೆಯ ಚು ಎಣೆಯಲಾಗಿದೆ. ಕಳೆದ ಮಂಗಳವಾರ ಅವರು ತಮ್ಮ ಭ್ಯಾಸದಂತೆ ಬೆಳಗ್ಗಿನ ವಾಕಿಂಗ್‌ಗೆ ಓಂಕಾರೇಶ್ವರ ಸೇತುವೆ ಮೇಲೆ ದುಹೋಗುತ್ತಿದ್ದಾಗ ಇಬ್ಬರು ಮೋಟಾರ್ ಸೈಕಲ್ ಮೇಲೆ ಬಂದು ವರ ಮೇಲೆ ಐದು ಗುಂಡುಗಳನ್ನು ಹಾರಿಸಿ ಹೋಗಿದ್ದಾರೆ. ಅಂದರೆ ದು ಯಾವುದೋ ಪುಂಡರ ಕೆಲಸ ಖಂಡಿತವಾಗಿಯೂ ಅಲ್ಲ, ಬದಲಾಗಿ ಮೊಂದು ಬಲಿಷ್ಠ ಗುಂಪಿನ ಕಾರ್ಯಾಚರಣೆ ಎಂಬುದು ಸ್ಪಷ್ಟವಾಗಿ ಲ್ನೋಟಕ್ಕೆ ಕಾಣಿಸುತ್ತಿದೆ.


ವಿಚಾರವಾದಿಗಳೊಂದಿಗಿನ ನನ್ನ ನಂಟು ಹಲವಾರು ದಶಕಗಳದ್ದು. ದಕ್ಕೆ ಮುಖ್ಯ ಕಾರಣ ನಾನು ಓದಿದ ನ್ಯಾಷನಲ್ ಕಾಲೇಜಿನ ಪಕರಾಗಿದ್ದ ನನ್ನ ಗುರು ಡಾ.ಎಚ್.ನರಸಿಂಹಯ್ಯ. "ಯಾವುದನ್ನೂ ಶ್ನಿಸದೆ ನಂಬಬೇಡ" ಎಂಬುದು ಎಚ್.ಎನ್ ಅವರು ತಮ್ಮ ಷ್ಯರಿಗೆ ನೀಡುತ್ತಿದ್ದ ಬಹಳ ಮುಖ್ಯವಾದ ಪ್ರಾಥಮಿಕ ಪಾಠ. ಗೆಯೇ ನನ್ನ ಮೇಲೆ ಅಪಾರ ಪ್ರಭಾವ ಬೀರಿದ್ದು ಖ್ಯಾತ ಚಾರವಾದಿ ಡಾ.ಅಬ್ರಹಾಂ ಕುವೂರ್ ಅವರು ಬರೆದಿರುವ ಲವಾರು ಪುಸ್ತಕಗಳ ಓದು. (ಅವುಗಳಲ್ಲಿ ಮುಖ್ಯವಾದದ್ದು ನ್ನಡದಲ್ಲಿ ಲಭ್ಯವಿಲ್ಲ. ಅದನ್ನು ಪ್ರಕಟಿಸಲು ನಾನು ಒಮ್ಮೆ ಯತ್ನಿಸಿದೆನಾದರೂ ಅವುಗಳ ಕಾಪಿರೈಟ್ ರೇಜಿಗೆಗಳಲ್ಲಿ ಸಿಕ್ಕಿಕೊಂಡಿರುವುದರಿಂದ ಸುಮ್ಮನಾದೆ). ಜೊತೆಗೆ ನನ್ನ ಅಪ್ಪ ಮತ್ತು ಅಮ್ಮನ ನಾಸ್ತಿಕತೆ, ಡಾ.ಬಿ.ವಿ.ವೀರಭದ್ರಪ್ಪನವರ ಲೇಖನಗಳು ಇತ್ಯಾದಿ ನನ್ನನ್ನು ರೂಪಿಸಿವೆ. ಇವೆಲ್ಲದರ ಜೊತೆ ಹಲವಾರು ವರ್ಷಗಳಿಂದ ನಾನು ದೂರದಿಂದಲೇ ನಮ್ಮ ಮಂಗಳೂರಿನವರಾದ ನರೇಂದ್ರ ನಾಯಕ್ ಅವರು ವಿಚಾರವಾದಿಯಾಗಿ ಮಾಡುತ್ತಿರುವ ಕೆಲಸಗಳನ್ನು ಗಮನಿಸುತ್ತಿರುತ್ತೇನೆ.

ವಿಚಾರವಾದದ ಬಗ್ಗೆ ನನಗೆ ಇಷ್ಟೆಲ್ಲ ಆಸಕ್ತಿ ಇದ್ದರೂ ನಾನು ಹಿಂದೆ ನರೇಂದ್ರ ದಾಬೋಲ್ಕರ್ ಅವರ ಹೆಸರನ್ನೇ ಕೇಳಿರಲಿಲ್ಲ. ದಕ್ಕೆ ಕಾರಣ ಅವರು ತಮ್ಮ ಕೆಲಸಗಳನ್ನು ಮಹಾರಾಷ್ಟ್ರಕ್ಕೆ ಸೀಮಿತವಾಗಿಸಿಕೊಂಡಿದ್ದೂ ಒಂದಾಗಿರಬಹುದು. ಆದರೆ ಅವರ ಹತ್ಯೆಯ ಸುದ್ದಿಯನ್ನು ಕೇಳಿದಕೂಡಲೆ ಅವರ ಬಗ್ಗೆ ಅಲ್ಲಲ್ಲಿ ಓದಿದೆ ಮತ್ತು ನರೇಂದ್ರ ನಾಯಕ್ ಅವರೊಂದಿಗೆ ಚರ್ಚಿಸಿದೆ (ನಾಯಕ್ ಅವರ ಸಂದರ್ಶನ ಇದೇ ಸಂಚಿಕೆಯಲ್ಲಿ ಪ್ರಕಟಗೊಂಡಿದೆ). ದಾಬೋಲ್ಕರ್ ಎಂತಹ ವಿಶಿಷ್ಟ ವ್ಯಕ್ತಿಯಾಗಿದ್ದರು ಎಂಬುದನ್ನು ನಮ್ಮ ಓದುಗರೊಂದಿಗೆ ಹಂಚಿಕೊಳ್ಳುವ ಪ್ರಯತ್ನವನ್ನು ಇಲ್ಲಿ ಮಾಡುವ ಮೂಲಕ ಅವರಿಗೆ ನನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

ಸತಾರ, ದಾಬೋಲ್ಕರ್ ಅವರ ಮೂಲ ಊರು. ಅವರು ಜನಿಸಿದ್ದು ಬ್ರಾಹ್ಮಣ ಕುಟುಂಬದಲ್ಲಿ, ಓದಿದ್ದು ವೈದ್ಯಕೀಯ. ಆರಂಭದಲ್ಲಿ ಅವರು ಹತ್ತು ವರ್ಷಗಳ ಕಾಲ ಸತಾರದಲ್ಲಿ ವೈದ್ಯರಾಗಿಯೇ ಕರ್ತವ್ಯನಿರ್ವಹಿಸಿದರು. ಆದರೆ ಸೂಕ್ಷ್ಮ ಸಂವೇದನೆಯ ವ್ಯಕ್ತಿಯಾಗಿದ್ದ ದಾಬೋಲ್ಕರ್ ಅವರನ್ನು ಸಾಮಾಜಿಕ ಅಸಮಾನತೆ ಕಾಡಲಾರಂಭಿಸಿತು. ಯಾಕೆ ಕೆಲವರನ್ನು ಸ್ಪೃಶ್ಯರನ್ನಾಗಿಯೂ, ಹಲವರನ್ನು ಅಸ್ಪೃಶ್ಯರನ್ನಾಗಿಯೂ ಪರಿಗಣಿಸಲಾಗಿದೆ ಎಂದು ಬೇಸರಗೊಂಡರು. ಅದೇ ಹೊತ್ತಿಗೆ ಸಮಾಜ ಸುಧಾರಕ ಡಾ.ಬಾಬಾ ಅಧವ್ ಎಂಬುವವರು ಪ್ರಾರಂಭಿಸಿದ 'ಒಂದು ಹಳ್ಳಿ, ಒಂದು ಬಾವಿ' ಎಂಬ ಹೋರಾಟದಲ್ಲಿ ಭಾಗವಹಿಸಿದ್ದರು. ಈ ಚಳವಳಿಯ ಉದ್ದೇಶ ಕೆಳಜಾತಿಗಳಿಗೂ ಹಳ್ಳಿಯ ಮುಖ್ಯ ಬಾವಿಯಿಂದ ನೀರು ಪಡೆಯುವ ಅವಕಾಶ ಕಲ್ಪಿಸುವುದಾಗಿತ್ತು. ಪ್ರಾಯಶಃ ವಿಚಾರವಾದಿಯಾಗಿ ಅವರ ಪಯಣ ಪ್ರಾರಂಭವಾಗಿದ್ದು ಈ ಹಂತದಿಂದ. ನಂತರ ಅವರು ಮಹಾರಾಷ್ಟ್ರದ ಅಹ್ಮದ್ ನಗರದಲ್ಲಿರುವ ಶನಿ ಶಿಗ್ನಾಪುರ ಎಂಬ ಪ್ರಮುಖ ದೇಗುಲಕ್ಕೆ ಮಹಿಳೆಯರಿಗೂ ಪ್ರವೇಶ ಸಿಗಬೇಕೆಂಬ ಆಂದೋಲನವನ್ನು ಪ್ರಾರಂಭಿಸಿ ಅದರಲ್ಲಿ ಯಶಸ್ವಿಯೂ ಆದರು. ಅಷ್ಟೊತ್ತಿಗೆ ನಮ್ಮ ಸಮಾಜದಲ್ಲಿ ಅಂಧಶ್ರದ್ಧೆ, ಮೂಢನಂಬಿಕೆ, ಜಾತಿ ವ್ಯವಸ್ಥೆ ಇತ್ಯಾದಿಗಳು ಎಷ್ಟು ಆಳವಾಗಿ ಬೇರು ಬಿಟ್ಟಿವೆ ಎಂಬುದು ಅವರಿಗೆ ಮನವರಿಕೆಯಾಗಿತ್ತು. ಅದನ್ನೆಲ್ಲ ಬುಡಸಮೇತ ಕಿತ್ತು ಹಾಕಲು ನಿರ್ಧರಿಸಿದ ದಾಬೋಲ್ಕರ್ ಅವರು ತಮ್ಮ ವೈದ್ಯಕೀಯ ವೃತ್ತಿಯನ್ನು ಬಿಟ್ಟು ಸಂಪೂರ್ಣ ಈ ಹೋರಾಟಕ್ಕೆ ಧುಮುಕಿದರು. ಮೊದಲು ಅವರು ಗುರಿಯಾಗಿಸಿಕೊಂಡಿದ್ದು ವಿವಿಧ ರೋಗಗಳಿಗೆ 'ದಿವ್ಯ ಔಷಧಿ'ಗಳನ್ನು ಕೊಟ್ಟು ಗುಣಪಡಿಸುತ್ತೇವೆ ಎಂದು ಜನರನ್ನು ಮೋಸ ಮಾಡುತ್ತಿದ್ದ ವಂಚಕರು ಮತ್ತು ಸ್ವಯಂಘೋಷಿತ 'ದೇವಮಾನವ'ರನ್ನು. ಇವರ ಈ ಹೋರಾಟದಿಂದಾಗಿ ಮಹಾರಾಷ್ಟ್ರದಲ್ಲಿ ಅದೆಷ್ಟೋ ಕಪಟ ಬಾಬಾಗಳ, ಸ್ವಾಮಿಗಳ ಮುಖವಾಡಗಳು ಕಳಚಿಬಿದ್ದವು.

ಈ ಹೋರಾಟವನ್ನು ತಾವೊಬ್ಬರೇ ಮಾಡಕೂಡದು, ಇದರಲ್ಲಿ ಇತರೆ ಸಮಾನ ಮನಸ್ಕರನ್ನೂ ಸೇರಿಸಿಕೊಳ್ಳಬೇಕೆಂದು ಅವರು 'ಮಹಾರಾಷ್ಟ್ರ ಅಂಧಶ್ರದ್ಧಾ ನಿರ್ಮೂಲನಾ ಸಮಿತಿ' ಎಂಬ ಸಂಘಟನೆಯನ್ನು ಸ್ಥಾಪಿಸಿದರು. ನರೇಂದ್ರ ನಾಯಕ್ ಅವರು ಹೇಳುವಂತೆ "ನಾನು ಹಲವಾರು ಬಾರಿ ದಾಬೋಲ್ಕರ್ ಅವರನ್ನು ರಾಷ್ಟ್ರೀಯ ಮಟ್ಟದ ಕಾರ್ಯಾಗಾರಗಳಿಗೆ ಆಹ್ವಾನಿಸಿದೆ. ಆದರೆ ಅವರೆಂದೂ ಅದಕ್ಕೆ ಒಪ್ಪಲಿಲ್ಲ. ಬದಲಾಗಿ ಮಹಾರಾಷ್ಟ್ರದಲ್ಲೇ ತನಗೆ ಬೇಕಾದಷ್ಟು ಕೆಲಸವಿದೆ ಎಂದು ಹೇಳುತ್ತಿದ್ದರು. ಮಾತ್ರವಲ್ಲ ಮಹಾರಾಷ್ಟ್ರದ ಪ್ರತಿ ಹಳ್ಳಿಯಲ್ಲೂ ತಮ್ಮ ಅಂಧಶ್ರದ್ಧಾ ನಿರ್ಮೂಲನಾ ಸಮಿತಿಯ ಘಟಕವನ್ನು ಸ್ಥಾಪಿಸುವ ಗುರಿ ಅವರದ್ದಾಗಿತ್ತು." ದಾಬೋಲ್ಕರ್ ಅವರು ತಮ್ಮ ಕಾರ್ಯಕ್ಷೇತ್ರವನ್ನು ಮಹಾರಾಷ್ಟ್ರಕ್ಕೆ ಸೀಮಿತಗೊಳಿಸಿದ್ದರಿಂದ ಬೇರೆ ರಾಜ್ಯಗಳಿಗೆ ಒಂದು ನಷ್ಟವಾಗಿದ್ದರೂ ಅದರಿಂದ ಅವರ ಮೂಲ ರಾಜ್ಯಕ್ಕೆ ಲಾಭವೇ ಆಗಿದೆ ಎನ್ನಬಹುದು. ಯಾಕೆಂದರೆ ಇವತ್ತು ಮಹಾರಾಷ್ಟ್ರದಾದ್ಯಂತ ಅವರ ಸಮಿತಿಯ 200ಕ್ಕೂ ಹೆಚ್ಚು ಘಟಕಗಳಿದ್ದು ಅವೆಲ್ಲ ಮೂಢನಂಬಿಕೆಗಳ ವಿರುದ್ಧ ನಿರಂತರವಾಗಿ ಕೆಲಸ ಮಾಡುತ್ತಿವೆ.

ಇವತ್ತು ನಮ್ಮೆಲ್ಲರ ಸುತ್ತ ಜೋತಿಷ್ಯ, ವಾಸ್ತು, ಮಾಟಮಂತ್ರ, ಹೋಮ, ಹವನ, ನ್ಯೂಮೆರಾಲಜಿ, ವ್ರತ, ಪೂಜೆ, ಪುನಸ್ಕಾರ ಇತ್ಯಾದಿ ಮೂಢನಂಬಿಕೆಗಳು ತಾಂಡವವಾಡುತ್ತಿವೆ. ಜನರನ್ನು ವಿಚಾರವಂತರನ್ನಾಗಿಸಬೇಕಾದ ಪತ್ರಿಕೆ ಮತ್ತು ಟಿವಿ ಚಾನೆಲ್‌ಗಳಲ್ಲೂ ವಾಸ್ತು ಮತ್ತು ಜೋತಿಷ್ಯ ಎಂಬ ಮೂಢನಂಬಿಕೆಗಳ ಮಾರಾಟಗಾರರು



ಪ್ರಾಮುಖ್ಯತೆ ಪಡೆದಿದ್ದಾರೆ. ಇನ್ನು ಅಧಿಕಾರದಲ್ಲಿರುವವರ ಮಾತಂತೂ ಬಿಡಿ. ತಮ್ಮನ್ನು ಗೆಲ್ಲಿಸಿದ ಜನರಿಗಿಂತ ಬಾಬಾಗಳು, ಸ್ವಾಮಿಗಳು, ಹೋಮಗಳು, ವಾಸ್ತು ಇತ್ಯಾದಿಗಳ ಬಗ್ಗೆಯೇ ಹೆಚ್ಚು ನಂಬಿಕೆ. ಕರ್ನಾಟಕದಲ್ಲಿ ಅಧಿಕಾರದಲ್ಲಿದ್ದ ಯಡಿಯೂರಪ್ಪನ ಸರ್ಕಾರವಂತೂ ಇದೆಲ್ಲದರ ಪರಮಾವಧಿಯಂತಿತ್ತು. ಪ್ರಾಯಶಃ ಯಡಿಯೂರಪ್ಪ ಮಾಡಿಸದೇ ಇದ್ದಂತಹ ಯಾವ ಹೋಮ, ಹವನ, ಮಾಟಮಂತ್ರ ಇರಲಿಕ್ಕೇ ಇಲ್ಲ ಎನ್ನಬಹುದು. ಅಂತಹ ಎಲ್ಲ ಕಾರ್ಯಗಳ ಪ್ರಭಾವವೋ ಏನೋ, ಕಳೆದ ಚುನಾವಣೆಯಲ್ಲಿ ಯಡ್ಡಿ ಮತ್ತು ಆತನ ತೆಂಗಿನಕಾಯಿ ಪಕ್ಷ ಹೇಳಹೆಸರಿಲ್ಲದಂತೆ ನೆಲಕಚ್ಚಿತು.

ಇಂತಹ ಮೂಢನಂಬಿಕೆಗಳು ಕರ್ನಾಟಕಕ್ಕೆ ಸೀಮಿತವಾಗಿಲ್ಲ. ಅದು ಎಲ್ಲಾ ರಾಜ್ಯಗಳಲ್ಲೂ ಬೇರು ಬಿಟ್ಟಿದೆ. ಅದಕ್ಕೆ ಮಹಾರಾಷ್ಟ್ರ ಕೂಡ ಹೊರತಾಗಿಲ್ಲ. ದಾಬೋಲ್ಕರ್ ಅವರು ಇಂತವುಗಳ ವಿರುದ್ಧ ಹೋರಾಡುತ್ತಲೇ ಬಂದರು. ಆದರೆ ದಾಬೋಲ್ಕರ್ ಸಮಾಜದಲ್ಲಿ ಅರಿವನ್ನು ಮೂಡಿಸಿದಷ್ಟೂ ಜನರ ಅಜ್ಞಾನವನ್ನೇ ಬಂಡವಾಳ ಮಾಡಿಕೊಂಡು ಅವರನ್ನು ಸುಲಿಯುತ್ತಿದ್ದ ದುಷ್ಟ ಶಕ್ತಿಗಳು ಎಚ್ಚೆತ್ತುಕೊಂಡವು. ದಾಬೋಲ್ಕರ್ ಮತ್ತು ಅವರ ಸಂಗಡಿಗರಿಗೆ ಬೆದರಿಕೆಗಳನ್ನು ಒಡ್ಡಲಾರಂಭಿಸಿದರು. ಅದರಲ್ಲೂ ನರೇಂದ್ರ ಮಹಾರಾಜ್ ಮತ್ತು ನಿರ್ಮಲಾ ಎಂಬ 'ದೇವ ದಂಪತಿ'ಗಳ ಸಾವಿರಾರು ಶಿಷ್ಯರು ದಾಬೋಲ್ಕರ್ ಮತ್ತು ಅವರ ಸಂಗಡಿಗರ ಮೇಲೆ ಹಲ್ಲೆಗಳನ್ನೂ ಮಾಡಿದ್ದರು. ಆದರೆ ಇದ್ಯಾವುದರಿಂದಲೂ ಬೆದರದ ದಾಬೋಲ್ಕರ್ ನಮ್ಮ ಸಂವಿಧಾನದಲ್ಲಿ 'ವೈಜ್ಞಾನಿಕ ಮನೋಭಾವವನ್ನು ಬೆಳೆಸುವುದು ಪ್ರತಿ ಪ್ರಜೆಯ ಕರ್ತವ್ಯ ಆಗಿದೆ' ಎಂಬ ಧೋರಣೆಯಲ್ಲಿ ನಂಬಿಕೆ ಇಟ್ಟು ತಮ್ಮ ಕಾರ್ಯವನ್ನು ಮುಂದುವರೆಸಿದ್ದರು.

ತಮ್ಮಂತಹವರ ಕೆಲಸ ಮಾತ್ರವಲ್ಲದೆ ಮೂಢನಂಬಿಕೆಗಳನ್ನು ಬುಡಸಮೇತ ನಿರ್ಮೂಲನೆಗೊಳಿಸಲು ಒಂದು ಕಠಿಣ ಕಾನೂನಿನ ಅಗತ್ಯವೂ ಇದೆ ಎಂದು ನಂಬಿದ್ದ ದಾಬೋಲ್ಕರ್ ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿ ಒಂದು ಮಸೂದೆಯನ್ನೂ ರೂಪಿಸಿದ್ದರು. 'ಮಂತ್ರ-ತಂತ್ರ ಮತ್ತು ಮೂಢನಂಬಿಕೆಗಳ ವಿರುದ್ಧ'ದ ಆ ಮಸೂದೆಯ ಕರಡನ್ನು ಅವರು 18 ವರ್ಷಗಳ ಹಿಂದೆಯೇ ಮಹಾರಾಷ್ಟ್ರ ಸರ್ಕಾರಕ್ಕೆ ಒಪ್ಪಿಸಿ ಅದನ್ನು ಜಾರಿಗೆ ತರಬೇಕೆಂದು ಒತ್ತಾಯಿಸುತ್ತಲೇ ಇದ್ದರು.

ಯಾವಾಗ ಅವರು ಇಂತಹ ಒಂದು ಮಸೂದೆಯ ಕರಡನ್ನು ತಯಾರಿಸಿದರೋ ಆಗ ಹಲವಾರು ಧಾರ್ಮಿಕ ಸಂಘಟನೆಗಳು ಅವರ ಮೇಲೆ ಮುರಕೊಂಡು ಬಿದ್ದವು. ಅದರಲ್ಲೂ ಹಿಂದೂ ಧಾರ್ಮಿಕ ಸಂಘಟನೆಗಳು "ಈ ಮನುಷ್ಯ ಸಾವಿರಾರು ವರ್ಷಗಳಿಂದ ಆಚರಣೆಯಲ್ಲಿರುವ ಸಂಪ್ರದಾಯವನ್ನು ವಿರೋಧಿಸುತ್ತಿದ್ದಾನೆ" ಎಂದು ಆರೋಪಿಸಿ ಆ ಮಸೂದೆ ಕಾನೂನಾಗದಂತೆ ಒತ್ತಡ ಹೇರಿದವು. ಅಂತಹ ಸಂಘಟನೆಗಳಿಗೆ ಭಾರತೀಯ ಜನತಾ ಪಕ್ಷ ಮತ್ತು ಶಿವಸೇನೆಯ ಬೆಂಬಲವಿತ್ತು ಎಂದು ಪ್ರತ್ಯೇಕವಾಗಿ ಹೇಳುವ ಅಗತ್ಯವಿಲ್ಲ.

ಆದರೆ ದಾಬೋಲ್ಕರ್ ಅಂತಹ ವಿರೋಧವನ್ನೂ ಸಮರ್ಥವಾಗಿ ಎದುರಿಸಿದ್ದರು. ತಾವು ಯಾವುದೇ ಧರ್ಮದ ವಿರೋಧಿಯಲ್ಲ, ಬದಲಾಗಿ ಜನರ ಧಾರ್ಮಿಕ ಭಾವನೆಗಳನ್ನು ಆಧಾರವಾಗಿಟ್ಟುಕೊಂಡು ಜನರನ್ನು ಸುಲಿಯುವವರನ್ನು ತಾವು ವಿರೋಧಿಸುತ್ತೇವೆ ಎಂಬ ದಿಟ್ಟ ನಿಲುವು ಅವರದ್ದಾಗಿತ್ತು.

ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದನಂತರ ದಾಬೋಲ್ಕರ್ ಅವರು ರೂಪಿಸಿದ್ದ ಮಸೂದೆಯನ್ನು ಕಳೆದ ಏಳು ವಿಧಾನ ಸಭೆಯ ಅಧಿವೇಶನಗಳ ಕಲಾಪಗಳ ಪಟ್ಟಿಯಲ್ಲಿ ಸೇರಿಸಲಾಗಿತ್ತಾದರೂ ಅದು ಎಂದೂ ಚರ್ಚೆಗೆ ಬಂದಿರಲೇ ಇಲ್ಲ. ಈ ಹುನ್ನಾರದ ಹಿಂದೆಯೂ ಧಾರ್ಮಿಕ ಬಂಡವಾಳಶಾಹಿಗಳ ಕೈವಾಡ ಇತ್ತೆಂಬುದನ್ನು ಪ್ರತ್ಯೇಕವಾಗಿ ಹೇಳುವ ಅಗತ್ಯವಿಲ್ಲ.

ಎರಡು ವಾರಗಳ ಹಿಂದೆಯಷ್ಟೇ ದಾಬೋಲ್ಕರ್ ಅವರು ಇದರ ಬಗ್ಗೆ ನಿರಾಶೆಯನ್ನು ವ್ಯಕ್ತಪಡಿಸಿ ಮಹಾರಾಷ್ಟ್ರದ ಹಾಲಿ ಕಾಂಗ್ರೆಸ್ ಮುಖ್ಯಮಂತ್ರಿ ಪೃಥ್ವಿರಾಜ್ ಚೌಹಾಣ್ ಅವರನ್ನು ಟೀಕಿಸಿದ್ದರು. "ನನ್ನ ಮಾತಿನ ಬಗ್ಗೆ ಜನರಿಗೆ ನನ್ನ ಸಾವಿನ ನಂತರವೇ ನಂಬಿಕೆ ಬರುತ್ತೇನೋ" ಎಂದೂ ಅವರು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದರು.

ಅವರ ಮಾತು ಈಗ ಅಕ್ಷರಶಃ ನಿಜವಾಗಿದೆ.


ಅದಕ್ಕೆ ಕಾರಣವೂ ಇದೆ. ದಾಬೋಲ್ಕರ್ ಅವರ ಕೊಲೆಯ ಸುದ್ದಿ ಮಹಾರಾಷ್ಟ್ರದಾದ್ಯಂತ ಹರಡುತ್ತಿದ್ದಂತೆ ಜನಸಾಮಾನ್ಯರು ತಮ್ಮ ದುಃಖವನ್ನು ಇನ್ನಿಲ್ಲದಂತೆ ವ್ಯಕ್ತಪಡಿಸಿದರು. ತನ್ನ ಜೀವನವಿಡೀ ಜನರ ಪರವಾಗಿ ಹೋರಾಡಿದ್ದ ದಾಬೋಲ್ಕರ್ ಅವರ ಕೊಲೆಯನ್ನು ಖಂಡಿಸಲು ಅವರ ಸ್ವಂತ ಊರಾದ ಸತಾರದಲ್ಲಿ ಜನರು ಸಾಗರೋಪಾದಿಯಲ್ಲಿ ಸೇರಿದರು. ಅವರು ಕೊಲೆಯಾದ ಪೂಣೆಯಲ್ಲೂ ಜನ ಸ್ವಯಂಪ್ರೇರಣೆಯಿಂದ ಬಂದ್ ಆಚರಿಸಿದರು. ಮಹಾರಾಷ್ಟ್ರದ ಹಲವಾರು ಕಡೆ ಪ್ರತಿಭಟನೆಗಳು ನಡೆದವು. ಜನಸಾಮಾನ್ಯರ ಆಕ್ರೋಶವನ್ನು ಕಂಡ ಬಿಜೆಪಿ ಮತ್ತು ಶಿವಸೇನೆ ಕೂಡ ವಿಧಿ ಇಲ್ಲದೆ ಅವರ ಕೊಲೆಯನ್ನು ಖಂಡಿಸಿ ಬಂದ್‌ಗೆ ಕರೆ ನೀಡಿದವು. ಇದೆಲ್ಲದರ ಪರಿಣಾಮ ಎಂಬಂತೆ ಕಾಂಗ್ರೆಸ್ ಸರ್ಕಾರ ದಾಬೋಲ್ಕರ್ ಅವರ ಕೊಲೆಯಾದ ಮಾರನೆ ದಿನವೇ ಅವರು ರೂಪಿಸಿದ್ದ ಜಾರಿಗೆ ತರಲು ಹಲವಾರು ವರ್ಷಗಳಿಂದ ಶ್ರಮಿಸಿದ್ದ ಅಂಧಶ್ರದ್ಧೆ ವಿರುದ್ಧದ ಕಾನೂನನ್ನು ಸುಗ್ರೀವಾಜ್ಞೆ ಹೊರಡಿಸುವ ಮೂಲಕ ಜಾರಿಗೆ ತಂದಿತು. ಹೀಗೆ ದಾಬೋಲ್ಕರ್ ಅವರು ಕಂಡಿದ್ದ ಕನಸು ಅವರ ಸಾವಿನ ನಂತರ ನನಸಾಯಿತು. ಇವತ್ತು ಇಡೀ ದೇಶದಲ್ಲಿ ಮೂಢನಂಬಿಕೆಗಳ ವಿರುದ್ಧ ಕಾನೂನನ್ನು ಹೊರಡಿಸಿರುವ ಪ್ರಥಮ ರಾಜ್ಯ ಮಹಾರಾಷ್ಟ್ರವಾಗಿದೆ.

ಅಂಧಶ್ರದ್ಧೆ ಮತ್ತು ಮೂಢನಂಬಿಕೆಗಳ ವಿರುದ್ಧ ಕೆಲಸ ಮಾಡುವುದು ಸಂವಿಧಾನದಡಿ ಪ್ರತಿ ಸರ್ಕಾರದ ಕರ್ತವ್ಯವಾಗಿದೆ. ಅದು ಮಹಾರಾಷ್ಟ್ರ ಸರ್ಕಾರಕ್ಕೆ ಅರ್ಥವಾಗಿದ್ದು ದಾಬೋಲ್ಕರ್ ಎಂಬ ಜನಪರ ಹೋರಾಟಗಾರನ ಕೊಲೆಯ ನಂತರವೇ ಎಂಬುದು ಒಂದು ದೊಡ್ಡ ದುರಂತ.

ದಾಬೋಲ್ಕರ್ ಅವರಿಗೆ ನಮನಗಳು. ■

ಸ್ವಾಭಿಮಾನಿ ರೈತರೂ... ಸುಜುಕಿ ಏಜೆಂಟ್ ಮೋದಿಯೂ...

ಇಂಥಾ ಪ್ರಸಂಗ ಎದುರಾಗಬಹುದೆಂದು ಮೋದಿಯಾಗಲಿ, ಆತನ ಬೆನ್ನ ಹಿಂದಿರುವ ಕಾರ್ಪೋರೇಟ್ ಖದೀಮರಾಗಲಿ ಕನಸು ಮನಸಿನಲ್ಲೂ ಎಣಿಸಿರಲಿಲ್ಲ. ಅದೂ ಸ್ವಾತಂತ್ರ್ಯ ದಿನಾಚರಣೆಯ ದಿನದಂದು ತಾವು ನಿರ್ದೇಶಿಸಿದ್ದ ನಾಟಕಕ್ಕೆ ಗುಜರಾತ್‌ನಲ್ಲೇ ಇಂಥಾ ತಿರುಗೇಟು ಬೀಳುತ್ತದೆ ಎಂದು ಊಹಿಸಿಯೂ ಇರಲಿಲ್ಲ.



ಲಾಲ್ ಖಿಲಾದಲ್ಲಿ ಪ್ರಧಾನಿ ಭಾಷಣಕ್ಕೆ ಪರ್ಯಾಯವೆಂಬಂತೆ ಪೋಸುಕೊಟ್ಟು ಲಾಲ್ ಕಾಲೇಜಿನಲ್ಲಿ ಮೋದಿ ಭರ್ಜರಿ ರಾಜಕೀಯ ಭಾಷಣ ಬಿಗಿಯುತ್ತಿದ್ದ ಸಂದರ್ಭದಲ್ಲೇ ಗುಜರಾತ್‌ನ ರೈತರು ಹತ್ತಾರು ಸಾವಿರ ಸಂಖ್ಯೆಯಲ್ಲಿ ನೆರೆದು ಸ್ವಾತಂತ್ರ್ಯ ದಿನವನ್ನು ತದ್ವಿರುದ್ಧ ರೀತಿಯಲ್ಲಿ ಆಚರಿಸಿದರು. ಗುಜರಾತ್ ಅಭಿವೃದ್ಧಿ ಮಾದರಿಗೆ ಸೆಡ್ಡು ಹೊಡೆದು ನಿಂತ ರೈತ ನಾಯಕರು ಮೋದಿಯ ಮುಖಕ್ಕೆ ಮಂಗಳಾರತಿ ಎತ್ತುತ್ತಿದ್ದರು. ಇದು ನಡೆದದ್ದು ರಾಜಧಾನಿ ಅಹಮದಾಬಾದ್‌ನ ಪಕ್ಕದ ಜಿಲ್ಲೆಯಾದ ಸುರೇಂದ್ರ ನಗರದ ದಾಲೋಡ್ ಎಂಬ ಊರಿನಲ್ಲಿ, ಮೋದಿ ಭಾಷಣದ ಸ್ಥಳದಿಂದ ಸುಮಾರು 150 ಕಿಲೋಮೀಟರ್ ದೂರದಲ್ಲಿ.

ತನ್ನ ಭಾಷಣದ ಉದ್ದಕ್ಕೂ ಪ್ರಧಾನಿಯನ್ನು ಬಹಿರಂಗ ಚರ್ಚೆಗೆ ಆಹ್ವಾನಿಸಿ ಮೋದಿ ಸವಾಲೆಸೆದು ಸೆಡ್ಡು ಹೊಡೆದು ಪೋಸು ಕೊಡುತ್ತಿದ್ದ. ಆದರೆ ಅದೇ ಸಂದರ್ಭದಲ್ಲಿ ಗುಜರಾತ್‌ನ ರೈತರು ಮೋದಿಯ ವಿದೇಶಿಪರ ನೀತಿಗಳನ್ನು ಖಂಡಿಸಿ ಗಂಭೀರ ಸವಾಲು ಎಸೆದಿದ್ದರು. ತನ್ನದೇ ಆಳ್ವಿಕೆಯಲ್ಲಿರುವ ರೈತರ ಯಾವೊಂದು ಪ್ರಶ್ನೆಗಳಿಗೂ ಉತ್ತರಿಸುವ ಧೈರ್ಯವಿಲ್ಲದ ಮೋದಿ ಹೇಡಿಯಂತೆ ತೆರೆಮರೆಗೆ ಸರಿದುಬಿಟ್ಟ.

ಆದರೆ ದೇಶದಾದ್ಯಂತ ಎಲ್ಲ ಭಾಷೆಗಳ ಚಾನೆಲ್‌ನಲ್ಲೂ ಮೋದಿಯ ಭಾಷಣ ಪ್ರಚಾರವಾಯಿತೇ ವಿನಃ ಮೋದಿಯ ವಿರುದ್ಧ ಹತ್ತಾರು ಸಾವಿರ ರೈತರು ನಡೆಸಿದ ಪ್ರತಿಭಟನೆ ಸುದ್ದಿಯಾಗಲೇ ಇಲ್ಲ. ಕಾರಣ ಬಹಳ ಸ್ಪಷ್ಟ. ಮಾಧ್ಯಮ ಸಂಸ್ಥೆಗಳೆಲ್ಲಾ ಭಾರೀ ಕಾರ್ಪೋರೇಟ್ ಕಂಪನಿಗಳ ಕೈಯಲ್ಲಿವೆ ಹಾಗೂ ಈ ರೈತರು ನೇರವಾಗಿ ಕಾರ್ಪೋರೇಟ್ ಪರ ಅಭಿವೃದ್ಧಿ ಯೋಜನೆಯನ್ನು ವಿರೋಧಿಸಿ ಬೀದಿಗಿಳಿದಿದ್ದರು.

ವಾಸ್ತವದಲ್ಲಿ ಈ ಪ್ರತಿಭಟನೆ ಸುಜುಕಿ ಕಂಪನಿ ನಿರ್ಮಾಣ ಹಂತದಲ್ಲಿರುವ ಹನ್ಸಾಲ್‌ಪುರ್‌ದಲ್ಲಿ ನಡೆಯಬೇಕಿತ್ತು. ಅಲ್ಲಿ ಸುಮಾರು 50 ಸಾವಿರ ಮಂದಿ ಜಮಾಯಿಸುವ ಸಾಧ್ಯತೆಯಿತ್ತು. ಜನರ ಆಕ್ರೋಶವನ್ನು ಅರಿತ ಮೋದಿ ಸರ್ಕಾರ ಕೊನೆ ಗಳಿಗೆಯಲ್ಲಿ ಸಭೆಗೆ ಅನುಮತಿ ನಿರಾಕರಿಸಿದರು.

ಈ ರೈತರು ಅಷ್ಟು ಭಾರೀ ಸಂಖ್ಯೆಯಲ್ಲಿ ಬೀದಿಗಿಳಿಯಲು ಕಾರಣವಾದರೂ ಏನು?

ಎಲುಬಿಲ್ಲ ನಾಲಗೆಗೆ, ಬಲವಿಲ್ಲ ಬಡವಂಗೆ


ನಾಳೆ ಇಡೀ ದೇಶ ಕೆಂಪುಕೋಟೆಯತ್ತ ನೋಡುವ ಬದಲಿಗೆ ಕೆಂಪು ಕಾಲೇಜಿನತ್ತ ನೋಡುತ್ತದೆ?

ಈ ಮಾತನ್ನು ಯಾರು, ಯಾರಿಗೆ ಹೇಳಿದರು?

ಈ ಮಾತನ್ನು ಮಾನ್ಯ ನರೇಂದ್ರ ಮೋದಿಯವರು ಕಾರ್ಪೋರೇಟ್ ಮಾಧ್ಯಮಗಳ ಪ್ರಚಾರಕ್ಕೆ ಮರುಳಾಗಿ ಮಂಕುದಿಣ್ಣೆಗಳಾಗಿರುವ ಭಾರತದ ಸತ್-ಪ್ರಜೆಗಳನ್ನುದ್ದೇಶಿಸಿ ಹೇಳಿದರು.

ಯಾವ ಸಂದರ್ಭದಲ್ಲಿ ?

ಸ್ವಾತಂತ್ರ್ಯ ದಿನಾಚರಣೆಯಂದು ಎಂದಿನಂತೆ ಕೆಂಪುಕೋಟೆಯ ಮೇಲಿಂದ ಪ್ರಧಾನಿ ಭಾಷಣ ಮಾಡುವವರಿದ್ದರು. ದೇಶದ ಎಲ್ಲ ರಾಜ್ಯಗಳ ರಾಜಧಾನಿಯಲ್ಲೂ ಆಗಸ್ಟ್ 15ರ ಬೆಳಿಗ್ಗೆ ಆಯಾ ರಾಜ್ಯಗಳ ಮುಖ್ಯಮಂತ್ರಿಗಳೂ ಭಾಷಣ ಮಾಡುವುದು ಅನೂಚಾನವಾಗಿ ನಡೆದುಬಂದ ವಾಡಿಕೆ. ಅದರಂತೆಯೇ



ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿಯ ಭಾಷಣ ಅಹಮದಾಬಾದ್‌ನ ಲಾಲ್ ಕಾಲೇಜು ಮೈದಾನದಲ್ಲಿ ಆಯೋಜಿಸಲಾಗಿತ್ತು. ಆದರಲ್ಲಿ ಯಾವ ವಿಶೇಷವೂ ಇರಲಿಲ್ಲ.

ಆದರೆ ಅದರ ಹಿಂದಿನ ದಿನ, ಅಂದರೆ ಆಗಸ್ಟ್ 14ರಂದು ನರೇಂದ್ರ ಮೋದಿ ಈ ಮೇಲಿನ ಉದ್ಧಟತನದ ಹೇಳಿಕೆ ಕೊಟ್ಟರು.

ಕಾರ್ಪೋರೇಟ್ ಕಂಪನಿಗಳ ಹಿಡಿತದಲ್ಲಿರುವ ಮಾಧ್ಯಮಗಳು ಇದನ್ನೊಂದು ಸ್ಫೋಟಕ ಸುದ್ದಿಯೆಂಬಂತೆ ಪದೇಪದೇ ಪ್ರಚುರಪಡಿಸಿ, ಮೋದಿ ಮಾಡಲಿರುವ ಭಾಷಣದ ಬಗ್ಗೆ ಭಾರೀ ಕುತೂಹಲ ಹುಟ್ಟುಹಾಕಿದವು. ಅದರ ಮುಂದುವರೆದ ಭಾಗವಾಗಿ ಮರುದಿನ ಅಂತೆಕಂತೆಗಳಿಂದ ಕೂಡಿದ ಮೋದಿಯ ಭಾಷಣವನ್ನು ಮಹತ್ವದ ರಾಷ್ಟ್ರೀಯ ವಿದ್ಯಮಾನವೆಂಬಂತೆ ಬಿತ್ತರಿಸಿದವು. ಸಂಘ ಪರಿವಾರಿಗಳು ಅಂದು ಮೋದಿ ಭಾಷಣ ಕೇಳಿ ಸಂಭ್ರಮಿಸಿದರು; ಈಡಿಯಟ್ ಬಾಕ್ಸ್‌ನ ಬಲಿಪಶುಗಳು ಕಣ್ಣು ಬಾಯಿ ಬಿಟ್ಟು ಆಲಿಸಿದರು.

ಇವೆಲ್ಲವೂ ಪೂರ್ವ ನಿರ್ದೇಶಿತ ನಾಟಕದ ದೃಶ್ಯಗಳಂತೆ ನಡೆದುಹೋದವು.

ಈ ಘಟನಾವಳಿಗಳು ನಮ್ಮ ದೇಶದ ಇಂದಿನ ರಾಜಕೀಯ-ಆರ್ಥಿಕ ವಿದ್ಯಮಾನಗಳಿಗೆ ಸಂಬಂಧಿಸಿದ ಹಲವಾರು ತೆರೆಮರೆಯ ಮಸಲತ್ತುಗಳನ್ನು ನಮ್ಮ ಮುಂದಿರಿಸಿದೆ.

ಆಗಸ್ಟ್ 15ರ ಪ್ರಧಾನಿ ಭಾಷಣವನ್ನು ಅವಹೇಳನ ಮಾಡುವ ಮಾತನ್ನು ಬೇರೆ ಯಾರಾದರೂ ಆಡಿದ್ದರೆ ಅಂಥಾ ಬೇಜವಾಬ್ದಾರಿ ಹೇಳಿಕೆಯ ವಿರುದ್ಧ ಸಂಘ ಪರಿವಾರವೇ ದೇಶಾದ್ಯಂತ ಹುಯಿಲೆಬ್ಬಿಸುತ್ತಿತ್ತು. ಮೇಲಾಗಿ ಆ ಭಾಷಣ ಸ್ವಾತಂತ್ರ್ಯ ದಿನಾಚರಣೆಯ ಭಾಷಣಕ್ಕೆ ಯಾವ ರೀತಿಯಲ್ಲೂ ಹೋಲುತ್ತಿರಲಿಲ್ಲ; ಬದಲಿಗೆ ಚುನಾವಣಾ ಭಾಷಣವನ್ನು ಹೋಲುತ್ತಿತ್ತು.

ಸಂಘ ಪರಿವಾರದ ಅವಳಿಕೂಸಿನಂತಿರುವ ಶಿವಸೇನೆಯ ನಾಯಕರೂ ಕೂಡ 'ಪ್ರಧಾನಿಯ ಮೇಲೆ ಟೀಕಾಪ್ರಹಾರ ಮಾಡಲು 364 ದಿನಗಳಿವೆ, ಆದರೆ ಸ್ವಾತಂತ್ರ್ಯ ದಿನಾಚರಣೆಯ ದಿನದಲ್ಲಿ ಅಲ್ಲ' ಎಂದು ಬಹಿರಂಗವಾಗಿ ಮೋದಿಯನ್ನೂ, ಆತನ ಭಾಷಣವನ್ನೂ ಖಂಡಿಸಿದ್ದಾರೆ.

ಮೋದಿಯ ಭಾಷಣದಲ್ಲಿ ವಿಶೇಷವಾಗಿ ಗಮನಿಸಬೇಕಿರುವ ಒಂದು ಸಂಗತಿಯಿದೆ. ಪಾಕಿಸ್ತಾನದ ಬಗ್ಗೆ ಹಗಲಿರುಳೂ ಕೆಂಡಕಾರುವ ಮೋದಿ, ತನ್ನ ಭಾಷಣದಲ್ಲಿ ಪಾಕಿಸ್ತಾನದೊಂದಿಗೆ ರಾಜತಾಂತ್ರಿಕ ಸಂಬಂಧಗಳನ್ನು ಉತ್ತಮಪಡಿಸಿಕೊಳ್ಳಬೇಕೆಂದು ಹೇಳಿ ಆಶ್ಚರ್ಯ ಮೂಡಿಸಿದ್ದಾರೆ. ಈ ರಾಜತಾಂತ್ರಿಕ ನಡೆ ಯಾಕೆ ಗೊತ್ತೆ? ಮೋದಿಯ ಬೆನ್ನೆಲುಬಿನಂತಿರುವ ರಿಲಯನ್ಸ್‌ನ ಅಂಬಾನಿ ಪಾಕಿಸ್ತಾನದ ಮೂಲಕ ತೈಲ ಸರಬರಾಜು ಕೊಳವೆ ಯೋಜನೆಯಲ್ಲಿ ತೊಡಗಿಸಿಕೊಂಡಿದ್ದಾನೆ. ಅಂಬಾನಿಗೆ ಲಾಭವಾಗಬೇಕಾದರೆ ಶಾಂತಿ ಇರಬೇಕಾದ್ದು ಅನಿವಾರ್ಯತೆ ಅಲ್ಲವೆ?

ಇದೇ ಮೋದಿಯ ದೇಶಭಕ್ತಿಯ ಒಳಹೂರಣ.

ಬೆಂದ ಮನೆಯಲ್ಲಿ ಗಳ ಎಳೆದ

ಕಳೆದ ವರ್ಷ ಆಗಸ್ಟ್‌ನಲ್ಲಿ ಹರ್‍ಯಾಣದ ಮಾನೇಸರ್‌ನಲ್ಲಿ ಮಾರುತಿ ಸುಜುಕಿ ಕಂಪನಿಯಲ್ಲಿ ಕಾರ್ಮಿಕರಿ... ಕಂಪನಿಯ ಗೂಂಡಾಗಳಿಗೂ ನಡೆದ ಘಟಾಪಟಿಯಲ್ಲಿ ಕಾರ್ಖಾನೆಗೆ ಬೆಂಕಿ ಬಿದ್ದು ಒಬ್ಬ ಮ್ಯಾನೇಜರ್ ಬೆಂಕಿಗಾಹುತಿಯಾ... ಪೊಲೀಸರು ಮತ್ತು ಕಂಪನಿ ಗೂಂಡಾಗಳ ದಾಳಿಯಿಂದ ನೂರಾರು ಕಾರ್ಮಿಕರು ಕೈಕಾಲು ಮುರಿದುಕೊಂಡಿದ್ದ... 170 ಮಂದಿ ಕಾರ್ಮಿಕರು ಜೈಲು ಪಾಲಾಗಿದ್ದರು. ಗೂಂಡಾಗಳು ಹಾಗೂ ಪೊಲೀಸರ ಭೀತಿಯಿಂದ ಸಾವಿರಾ... ಕಾರ್ಮಿಕರು ಪರಾರಿಯಾಗಿದ್ದರು. ಕಂಪನಿ ಉತ್ಪಾದನೆ ನಿಲ್ಲಿಸಿ ಬೀಗಮುದ್ರೆ ಘೋಷಿಸಿತ್ತು. ಇಡೀ ವಾತಾವ... ಪ್ರಕ್ಷುಬ್ಧತೆಯಿಂದ ಕೂಡಿತ್ತು.

ಎಂದೂ ಕಂಡರಿಯದ ಇಂಥಾ ಸನ್ನಿವೇಶದಿಂದ ಎಲ್ಲರೂ ಆತಂಕಿತರಾಗಿದ್ದರೆ, ನರೇಂದ್ರ ಮೋದಿ ಮಾರ... ದಿನವೇ ಜಪಾನ್‌ಗೆ ಹಾರಿಹೋಗಿ ಸುಜುಕಿ ಕಂಪನಿಯ ಮಾಲೀಕ ಒಸಾಮು ಸುಜುಕಿಯನ್ನು ಭೇಟಿಯಾದ. ಗುಜರಾ... ರಾಜ್ಯದಲ್ಲಿ ವಿದೇಶಿ ಹೂಡಿಕೆಗೆ ಬಹಳ ಪ್ರಶಾಂತವಾದ ವಾತಾವರಣವಿದೆ, ನಿಮಗೆ ಬೇಕಾದ ಎಲ್ಲ ಸಂಪನ್ಮೂಲ... ಜೊತೆಗೆ ರಿಯಾಯಿತಿಗಳನ್ನೂ ಕೊಡುತ್ತೇವೆ, ದಯಮಾಡಿ ಈ ಸದವಕಾಶವನ್ನು ಉಪಯೋಗಿಸಿಕೊಳ್ಳಲು ಗುಜರಾತ್‌ಗೆ ಬನ್ನಿ ಎಂದು ಆಹ್ವಾನಿಸಿದ.



ಸುಜುಕಿ ಧಣಿಗೆ ಮೋದಿ ಕೊಟ್ಟ ಆಶ್ವಾಸನೆಯೇನೂ ಸುಳ್ಳಾಗಿರಲಿಲ್ಲ. ಗುಜರಾತ್‌ನ ಸನ್ನಿವೇಶದಲ್ಲಿ ಯಾಕೆಂದರೆ ಹಿಂದೂಗಳಿಗೂ ಮುಸಲ್ಮಾನರಿಗೂ ನಡುವೆ ನಿರಂತರ ದಳ್ಳುರಿ ಇರುವುದರಿಂದ ಯಾವುದೇ ಕಂಪನಿಯ ಲೂಟಿ ಬಗ್ಗೆಯಾಗಲಿ, ರೈತರು-ಕಾರ್ಮಿಕರ ಗೋಳಿನ ಬಗ್ಗೆಯಾಗಲೀ ತಲೆಕೆಡಿಸಿಕೊಳ್ಳುವ ವ್ಯವಧಾನ ಯಾರಿಗೂ ಇರಲಿಲ್ಲ.

ಒಸಾಮು ಸುಜುಕಿ ಗಂಭೀರವಾಗಿ ಆಲೋಚಿಸಿದ, ಭಾರತೀಯ ಹಿತೈಷಿಗಳೊಂದಿಗೂ ಚರ್ಚಿಸಿ ಕೊನೆಗೆ ಗುಜರಾ... ರಾಜ್ಯವೇ ಸೂಕ್ತ ಸ್ಥಳವೆಂದು ನಿರ್ಧರಿಸಿದ. ಕೆಲದಿನಗಳಲ್ಲೇ ಭಾರತಕ್ಕೆ ಭೇಟಿ ನೀಡಿದ ಸುಜುಕಿ ಬಿಕ್ಕಟ್ಟಿನಲ್ಲಿರು... ಮಾನೇಸರ್ ಘಟಕಕ್ಕೆ ಶಾಸ್ತ್ರಕ್ಕೇನೋ ಎಂಬಂತೆ ಭೇಟಿಕೊಟ್ಟ. ಆದರೆ ಅದೇ ಅವಧಿಯಲ್ಲಿ ಗುಜರಾತ್‌ನಲ್ಲಿ ಮೂ... ದಿನಗಳ ಕಾಲ ತಂಗಿದ್ದ. ಈ ಸಂದರ್ಭದಲ್ಲೇ ಮೋದಿ ಮತ್ತು ಸುಜುಕಿ ನಡುವೆ ಒಳಒಪ್ಪಂದಗಳು ಕುದುರಿದ್ದು... ಕಾನೂನುಗಳನ್ನು ಗಾಳಿಗೆ ತೂರಿದ ಮೋದಿ ಸುಜುಕಿ ಧಣಿಯ ಸೇವೆಗೆ ನಿಂತುಬಿಟ್ಟ. ವ್ಯಾಟ್ ತೆರಿಗೆ, ಹೂಡಿಕೆ ತೆ... ಮುಂತಾದ ಸಾವಿರಾರು ಕೋಟಿ ಮೌಲ್ಯದ ರಿಯಾಯಿತಿ ಘೋಷಿಸಿದ. ಅದಕ್ಕೆ ತಕ್ಕಷ್ಟು ಭಕ್ಷೀಸು ಪಡೆದು ಪುನೀತನಾ...

ಇದೆಲ್ಲದರ ಪರಿಣಾಮವಾಗಿ ಹನ್ಸಾಲ್‌ಪುರ್ ಗ್ರಾಮದ ರೈತರ ಸಾವಿರಾರು ಎಕರೆ ಫಲವತ್ತಾದ ಭೂಮಿ... ಸಂಚಕಾರ ಬಂತು. ಸುಜುಕಿ ಧಣಿಗಳ ಸಹವಾಸ ಭಾಗ್ಯದಿಂದ ಪುಳಕಿತಗೊಂಡ ಮೋದಿ ಹನ್ಸಾಲ್‌ಪುರವನ್ನು... ಒಳಗೊಂಡಂತೆ ಮೂರು ತಾಲೂಕುಗಳ ಒಟ್ಟು 44 ಹಳ್ಳಿಗಳನ್ನು ಎತ್ತಂಗಡಿ ಮಾಡಿ 1,25,000 ಎಕರೆ ಪ್ರದೇಶದ... 'ವಿಶೇಷ ಹೂಡಿಕಾ ಪ್ರದೇಶ ಎಸ್‌ಐಆರ್' ಯೋಜನೆಯನ್ನು ಘೋಷಿಸಿ, ರೈತರ ಭೂಮಿ ಕಸಿಯಲು ಮುಂದಾ...

ಆದರೆ ರೈತರು ಮೋದಿಯ ಅಭಿವೃದ್ಧಿ ಮಾದರಿಯ ವಿರುದ್ಧ ಬಂಡಾಯದ ಬಾವುಟ ಹಾರಿಸಿ ಆತನ ನಯವಂ... ಮೋಡಿಗಳನ್ನು ಬಯಲು ಮಾಡುತ್ತಿದ್ದಾರೆ.

ಮೋದಿಯ ಸುಳ್ಳುಗಳನ್ನು ತೆರೆದಿಡುವ 'ಫೇಕು.ಇನ್'



ಗುಜರಾತಿನ ಮುಖ್ಯಮಂತ್ರಿ ನರಹಂತಕ ನರೇಂದ್ರ ಮೋದಿ ಈ ದೇಶದ ಪ್ರಧಾನಿಯಾಗುವ ಕನಸು ಕಾಣುತ್ತಿದ್ದಾನೆ. ಆ ನಿಟ್ಟಿನಲ್ಲಿ ಮೋದಿ ತಾನು ತನ್ನ ರಾಜ್ಯವನ್ನು ಅಭಿವೃದ್ಧಿ ಮಾಡಿದ್ದೇನೆ ಎಂದು ಹಲವಾರು ಸುಳ್ಳುಗಳನ್ನು, ಅರ್ಧ... ಸತ್ಯಗಳನ್ನು ಹೇಳುತ್ತಿದ್ದಾನೆ.

ಅಸಲಿಗೆ ಮೋದಿ ಓರ್ವ ಸರ್ವಾಧಿಕಾರಿ ಮತ್ತು ಅಪ್ಪಟ ಕೋಮುವಾದಿ. ಇತಿಹಾಸದ ಎಲ್ಲ ಸರ್ವಾಧಿಕಾ... ಮತ್ತು ಕೋಮುವಾದಿಗಳಂತೆ ಮೋದಿ ಕೂಡ ಸಾವಿರಾರು ಸುಳ್ಳುಗಳನ್ನು ನೂರಾರು ಬಾರಿ ಹೇಳುವ ಮೂಲ... ಅದನ್ನು ನಿಜವಾಗಿಸುವ ತಂತ್ರದಲ್ಲಿ ತೊಡಗಿದ್ದಾನೆ. ಅವರ ಇಂತಹ ಸುಳ್ಳುಗಳನ್ನು ಬಹಿರಂಗಪಡಿಸುವ ಉದ್ದೇಶದಿಂ... ಈಗ 'ಫೇಕು.ಇನ್' (pheku.in) ಎಂಬ ವೆಬ್‌ಸೈಟ್ ಅನ್ನು ಇದೇ ಶುಕ್ರವಾರ ಆಗಸ್ಟ್ 23ರಂದು ದೇಶಾದ್ಯಂ... 30ಕ್ಕೂ ಹೆಚ್ಚು ನಗರಗಳಲ್ಲಿ ಉದ್ಘಾಟಿಸಲಾಗುತ್ತಿದೆ.

ಈ ವೆಬ್‌ಸೈಟನ್ನು ಸಮಾಜ ಸುಧಾರಕಿ ಶಬನಮ್ ಹಶ್ಮಿ ಅವರ ನೇತೃತ್ವದಲ್ಲಿ ಹತ್ತಾರು ಜನ ರೂಪಿಸಿದ್ದಾ... ಇದನ್ನು ತಯಾರಿಸಿದವರು ದೇಶದ 15 ರಾಜ್ಯಗಳಲ್ಲಿ ಮತ್ತು ನಾಲ್ಕು ಪರದೇಶಗಳ ನಗರಗಳಲ್ಲಿ ವಾಸಿಸುತ್ತಿದ್ದಾ... ಇವರೆಲ್ಲರ ಆಶೆ ಕೋಮುವಾದಿ ಮೋದಿಯ ಸುಳ್ಳುಗಳನ್ನು ಬಹಿರಂಗಪಡಿಸುವ ಮೂಲಕ ಜನರನ್ನು ಎಚ್ಚರಿಸುವುದಾಗಿ... 'ಲಂಕೇಶ್ ಮೀಡಿಯಾ' ತಂಡವೂ ಈ ಪ್ರಯತ್ನದಲ್ಲಿ ಭಾಗಿ ಆಗಿದೆ.

ಗುಜರಾತಿ ಭಾಷೆಯಲ್ಲಿ 'ಫೇಕು' ಪದದ ಅರ್ಥ ಸುಳ್ಳುಗಾರ. ಅದನ್ನೇ ಈ ವೆಬ್‌ಸೈಟಿಗೆ ಇಡಲಾಗಿ... ಮೋದಿಯ ಸರ್ವಾಧಿಕಾರಿ ಧೋರಣೆ, ಆತನ ನೇತೃತ್ವದಲ್ಲಿ ನಡೆದ ಅಮಾಯಕರ ಮಾರಣಹೋಮ ಮತ್ತು ಸರ... ಸುಳ್ಳುಗಳನ್ನು ಈ ವೆಬ್‌ಸೈಟ್ ಎತ್ತಿ ತೋರಿಸಲಿದೆ. ಆತ ಗುಜರಾತ್ ರಾಜ್ಯದಲ್ಲಿ ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ನಾ... ಮಾಡಿರುವುದನ್ನೂ, ಹತ್ತಾರು ಹಗರಣಗಳ ರುವಾರಿಯಾಗಿರುವುದನ್ನೂ ಈ ವೆಬ್‌ಸೈಟ್ ಸಾಬೀತುಪಡಿಸಲಿದೆ.

ವಾಸ್ತವವಾಗಿ ಸಾವಿರಾರು ಅಮಾಯಕರ ಸಾವಿಗೆ, ಹತ್ತಾರು ನಕಲಿ ಎನ್‌ಕೌಂಟರ್‌ಗಳಿಗೆ ಕಾರಣವಾಗಿರುವ ವ್ಯ... ಈ ದೇಶದ ಪ್ರಧಾನಿ ಆಗುವ ಸಾಧ್ಯತೆಯೇ ಇರಕೂಡದು. ಆದರೂ ಇವತ್ತು ಮೋದಿ ಪ್ರಧಾನಿಯ ಹುದ್ದೆ... ಆಕಾಂಕ್ಷಿಯಲ್ಲದೆ ಅವರ ಬಿಜೆಪಿ ಪಕ್ಷ ಮತ್ತು ಬೆಂಬಲಿಗರು ಅದನ್ನು ಸಾಧ್ಯವಾಗಿಸಲು ಯತ್ನಿಸುತ್ತಿದ್ದಾರೆ. ಇದ... ಪ್ರಜಾತಂತ್ರ ವ್ಯವಸ್ಥೆಗೇ ಅಪಾಯಕಾರಿ ಬೆಳವಣಿಗೆಯಾಗಿದೆ.

ಪತ್ರಿಕೆಯ ಓದುಗರು ಈ 'ಫೇಕು.ಇನ್' ವೆಬ್‌ಸೈಟನ್ನು ನೋಡಬೇಕೆಂದೂ ಮತ್ತು ಅದಕ್ಕೆ ವ್ಯಾಪಕ ಪ್ರಚಾ... ಕೊಡಬೇಕೆಂದು ವಿನಂತಿಸುತ್ತೇವೆ.

ಹಾಗೆಯೇ, ಮುಂದಿನ ವಾರದಿಂದ ಪ್ರತಿ ಸಂಚಿಕೆಯಲ್ಲಿ ಮೋದಿಯ ಸುಳ್ಳುಗಳನ್ನು ಸಣ್ಣ ಟಿಪ್ಪಣಿಯಾ... ಪ್ರಕಟಿಸಲಿದ್ದೇವೆ. ಅದನ್ನು ನಮ್ಮ ಸುರೇಶ್ ಭಟ್ ಬಾಕ್ರಬೈಲ್ ಅವರು ನಿರೂಪಿಸಲಿದ್ದಾರೆ. ಅದನ್ನೂ ಓದುಗ... ಎಲ್ಲೆಡೆ ಪ್ರಚಾರ ಮಾಡುವ ಮೂಲಕ ಜನರಲ್ಲಿ ಮೋದಿಯ ಕುತಂತ್ರಗಳ ಬಗ್ಗೆ ಅರಿವನ್ನು ಮೂಡಿಸಬೇಕೆಂ... ಕೋರಿಕೆ.

ವಿಶೇಷ ಹೂಡಿಕಾ ಪ್ರದೇಶ(ಸ್ಪೆಷಲ್ ಇನ್‌ವೆಸ್ಟ್‌ಮೆಂಟ್ ರೀಜನ್-ಎಸ್‌ಐಆರ್)

ಮೋದಿ ಸರ್ಕಾರ ರೈತರ ಸಮ್ಮತಿಯನ್ನೂ ಕೇಳದೆ ಮಂಡಲ್-ಬೆಚರಾಜಿ ಎಸ್‌ಐಆರ್ ಯೋಜನೆಗೆಂದು ಭೂಮಿ ಸ್ವಾಧೀನಪಡಿಸಿಕೊಳ್ಳಲು ಹೊರಟಿದೆ. ...ದಕ್ಕಾಗಿ ಒಟ್ಟು 44 ಗ್ರಾಮಗಳ 50,885 ಹೆಕ್ಟೇರ್, ಅಂದರೆ 1,27,000 ...ಕರೆ ಜಮೀನನ್ನು ವಿಶೇಷ ಹೂಡಿಕಾ ಪ್ರದೇಶ ಎಂಬುದಾಗಿ ಘೋಷಿಸಿ ...ಭಿವೃದ್ಧಿ ಚಾಂಪಿಯನ್ ಮೋದಿ ಅಧಿಕೃತ ಆದೇಶ ಹೊರಡಿಸಿದ್ದಾನೆ. ಅಷ್ಟು ...ಮಾತ್ರವಲ್ಲದೆ ಮಾರುತಿ ಸುಜುಕಿ ಕಂಪನಿಗೆ ಇದೇ ಪ್ರದೇಶದ ಹನ್ಸಾಲ್‌ಪುರ್ ...ಮದ ಜಮೀನನ್ನು ಈಗಾಗಲೇ ತೆರೆಮರೆಯಲ್ಲಿ ವರ್ಗಾವಣೆ ಮಾಡಲಾಗಿದೆ. ...ರಿ ಭೂಮಿಯಲ್ಲಿ ಸುಜುಕಿ ಕಂಪನಿ ಕಾರು ತಯಾರಿಕಾ ಕೈಗಾರಿಕೆಯ ...ರ್ಮಾಣ ಕಾರ್ಯ ಆರಂಭಿಸಿದೆ.

ಮೋದಿ ಸರ್ಕಾರದ ವಾದದ ಪ್ರಕಾರ ಎಸ್‌ಐಆರ್‌ಗೆ ನೀಡಲಾಗಿರುವ ...ೂಮಿ ಬಂಜರು ಹಾಗೂ ಪಾಳು ಭೂಮಿ. ಈ ಪಾಳು ಭೂಮಿಯಲ್ಲಿರುವ ...ನರು ಹತ್ತಾರು ದೂಧ್ ಉತ್ಪಾದನ್ ಮಂಡಲ್‌ಗಳು(ಹಾಲು ಉತ್ಪಾದಕ ...ಘ), ಸೇವಾ ಸಹಕಾರಿ ಮಂಡಲ್(ಸಹಕಾರ ಸಂಘಗಳು)ಗಳಡಿ ...ಘಟಿತರಾಗಿದ್ದಾರೆ. ಪಾಳು ಭೂಮಿಯಲ್ಲಿ ದೂಧ್ ಮಂಡಲ್‌ಗಳನ್ನು ಸಹಕಾರಿ ...ಘಗಳನ್ನು ಕಟ್ಟಿಕೊಳ್ಳಲು ಗುಜರಾತ್ ರೈತರಿಗೆ ಹುಚ್ಚು ಹಿಡಿದಿದೆಯೆ? ...ಂಡಿತಾ ಇಲ್ಲ.

ಹುಚ್ಚು ಹಿಡಿದಿರುವುದು ನರೇಂದ್ರ ಮೋದಿಗೆ ಮತ್ತು ಆತನ ಸರ್ಕಾರಕ್ಕೆ. ...ಶಿ-ವಿದೇಶಿ ಕಂಪನಿಗಳ ಗುಲಾಮನಂತೆ ವರ್ತಿಸುತ್ತಿರುವ ನರೇಂದ್ರ ಮೋದಿಗೆ ...ದು ನಮೂನೆಯ ಕಾರ್ಪೋರೇಟ್ ಹುಚ್ಚು ಹಿಡಿದಿದೆ. ಹೀಗಾಗಿ ಅತ್ಯಂತ ...ಂಪದ್ಭರಿತವಾದ ಭೂಮಿಯನ್ನು ಬಂಜರು ಎಂದು ಬಣ್ಣಿಸಿ ಭೂಮಿತಾಯಿಗೆ ...ಪಚಾರವೆಸಗುತ್ತಿದ್ದಾನೆ.

ಹತ್ತಾರು ವರ್ಷಗಳಿಂದಲೂ ಕೃಷಿ ಸಂಬಂಧಿ ಚಟುವಟಿಕೆಗಳಿಗೆ ...ಮಿತವಾಗಿದ್ದ ಈ ಸಂಘಗಳೆಲ್ಲಾ ಸೇರಿಕೊಂಡು ಜಮೀನ್ ಅಧಿಕಾರ್ ...ಂದೋಲನ್- ಗುಜರಾತ್(ಜೆಎಜೆ) ಬ್ಯಾನರ್‌ನಡಿಯಲ್ಲಿ ಒಗ್ಗೂಡಿದ್ದಾರೆ. ...ಾವುದೇ ಕಾರಣಕ್ಕೂ ತಮ್ಮ ಭೂಮಿಯನ್ನು ಬಿಟ್ಟುಕೊಡುವುದಿಲ್ಲವೆಂದು ...ಪಥ ಮಾಡಿದ್ದಾರೆ. ಅಷ್ಟು ಮಾತ್ರವಲ್ಲ, ಕಂಪನಿಯ ಅಧಿಕಾರಿಗಳಾಗಲಿ, ...ರ್ಕಾರಿ ಅಧಿಕಾರಿಗಳಾಗಲಿ ತಮ್ಮ ಊರುಗಳಿಗೆ ಕಾಲಿರಿಸಲು ಬಿಡುವುದಿಲ್ಲವೆಂದು ...ಘೋಷಿಸಿದ್ದಾರೆ.



ಈ ಆಗಸ್ಟ್ 15ರ ಸಭೆಗೆ ಮುಂಚಿತವಾಗಿ ಜೂನ್ 18ರಂದು ...ಲ್‌ಪುರ್‌ದಿಂದ ಗಾಂಧಿನಗರದವರೆಗೆ 500 ಟ್ರಾಕ್ಟರ್‌ಗಳು, ಹತ್ತಾರು ಕಾರುಗಳು ...ಗೂ ನೂರಾರು ಬೈಕುಗಳನ್ನೊಳಗೊಂಡ ಬೃಹತ್ ರ‍್ಯಾಲಿಯೊಂದನ್ನು ನಡೆಸಿದ್ದರು. ...ಲೂ ಮೋದಿ ಸರ್ಕಾರ ನಾನಾ ಕಿರುಕುಳ ನೀಡಿ ರೈತರ ಸಂಘಟನೆಯನ್ನು ...ಯುವ ಹುನ್ನಾರ ಮಾಡಿತ್ತು. ವೇದಿಕೆಯ ಮೇಲೆ ಭಾಷಣ ಮಾಡಿದ ...ತ್ತಾರು ಮುಖಂಡರ ಮೇಲೆ ನಾನಾ ಸುಳ್ಳುಕೇಸುಗಳನ್ನು ದಾಖಲಿಸಿತ್ತು. ...ೀದಿಯ ಹಿಟ್ಲರ್‌ಶಾಹಿ ಬೆದರಿಕೆಗೆ ಬಗ್ಗದ ರೈತರ ಹೋರಾಟದ ಕಾವು ...ದಿನೇ ಹೆಚ್ಚಾಗುತ್ತಿದೆ.


ಈ ಒಟ್ಟಾರೆ ಬೆಳವಣಿಗೆಗಳ ಬಗ್ಗೆ ಕೆಲವು ಪತ್ರಿಕೆಗಳು ಇದು ಮತ್ತೊಂದು ...ಗೂರ್(ಪಶ್ಚಿಮ ಬಂಗಾಳ) ಆಗುವ ಅಪಾಯವಿದೆಯೆಂದು ಬರೆದಿದ್ದರು. ...ರೊಂದಿಗೆ ಚರ್ಚಿಸಿ ಇಂಥಾ ಅಪಾಯವನ್ನು ತಡೆಗಟ್ಟಲು ನಾಲ್ಕು ಕ್ಯಾಬಿನೆಟ್ ...ತ್ರಿಗಳಾದ ನಿತಿನ್ ಪಟೇಲ್, ಆನಂದಿ ಪಟೇಲ್, ಸೌರಭ್ ಪಟೇಲ್ ...ತ್ತು ಭೂಪೇಂದ್ರಸಿಂಗ್ ಎಂಬುವವರನ್ನು ಮೋದಿ ಕಳಿಸಿಕೊಟ್ಟ. ಆ ಸಭೆಯಲ್ಲೂ ...ಜೆಪಿ ಕಾರ್ಯಕರ್ತರು ಹಾಗೂ ಲ್ಯಾಂಡ್ ಬ್ರೋಕರ್‌ಗಳನ್ನೇ ಹೆಚ್ಚಿನ ಸಂಖ್ಯೆಯಲ್ಲಿ ...ಮಾವಣೆ ಮಾಡಲಾಗಿತ್ತೆಂದು ರೈತರು ಆ ಸಭೆಯನ್ನು ಬಹಿಷ್ಕರಿಸಿದ್ದರು.

...ರಾಜ್ಯಾದ್ಯಂತ ಭಾರೀ ಪ್ರಭಾವ ಬೀರುತ್ತಿರುವ ಎಸ್‌ಐಆರ್ ವಿರೋಧಿ ...ವಳಿಗೆ ಗುಜರಾತ್‌ನಲ್ಲಿ ಭಾರೀ ಬೆಂಬಲ ವ್ಯಕ್ತವಾಗಿದೆ. ಮಾಜಿ ಸಚಿವ ...ಶ್ ಮೆಹ್ತಾ, ಯೋಜನಾ ಆಯೋಗದ ಮಾಜಿ ಸದಸ್ಯ ವೈ.ಕೆ.ಅಲಘ್, ...ಂತ್ಮ ಹೋರಾಟಗಾರರು, ಪರಿಸರವಾದಿಗಳು, ಮಾನವ ಹಕ್ಕು ಸಂಘಟನೆಗಳು ...ೋರಾಟದಲ್ಲಿ ಕೈಜೋಡಿಸಿವೆ. ರಾಜ್ಯದ ಇತರೆಡೆಗಳಲ್ಲಿ ಭೂಸ್ವಾಧೀನ ವಿರೋಧಿಸಿ ...ೋರಾಡುತ್ತಿರುವ ಸಂಘಟನೆಗಳೂ ಇದಕ್ಕೆ ಬೆಂಬಲ ವ್ಯಕ್ತಪಡಿಸಿ ಒಗ್ಗೂಡಿವೆ. ...ಜೆಪಿಯ ಮಾಜಿ ಎಂಎಲ್‌ಎ ಕಾನು ಕಲ್ಸಾರಿಯ, ಆರೆಸ್ಸೆಸ್ ನಿಯಂತ್ರಣದಲ್ಲಿರುವ ...ರತೀಯ ಕಿಸಾನ್ ಸಂಘ ಕೂಡ ಈ ಹೋರಾಟಕ್ಕೆ ಬೆಂಬಲ ...ೋಷಿಸಿದ್ದಾರೆಂದರೆ ಪರಿಸ್ಥಿತಿಯನ್ನು ನೀವೇ ಅರ್ಥ ಮಾಡಿಕೊಳ್ಳಬಹುದು.

...ಗುಜರಾತ್‌ನಲ್ಲಿ ಮತ್ತೊಂದು ಸಿಂಗೂರ್-ನಂದಿಗ್ರಾಮ ಹುಟ್ಟಿಕೊಳ್ಳುತ್ತಿರುವ ...ಣಗಳನ್ನು ಕಂಡು ಮೋದಿ ಇದರಿಂದ ಬಚಾವಾಗಲು ಹೆಣಗುತ್ತಿದ್ದಾನೆ. ...ಐಆರ್‌ಗೆ ನೋಟಿಫೈ ಆಗಿರುವ 44 ಹಳ್ಳಿಗಳ ಪೈಕಿ 36 ಹಳ್ಳಿಗಳನ್ನು ...ಡುವುದಾಗಿ ಅಧಿಕೃತ ಸರ್ಕಾರಿ ಘೋಷಣೆ ಹೊರಬಿದ್ದಿದೆ. ಹನ್ನೆರಡು ...ರ್ಷಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಗುಜರಾತ್ ಸರ್ಕಾರ ...ಸ ಹೋರಾಟಕ್ಕೆ ಮಣಿದಿದೆ. ಗೆಲುವಿನ ಉತ್ಸಾಹದಲ್ಲಿರುವ ರೈತರು ...ಸ್ತು ಹೋರಾಟಗಾರರು ಎಸ್‌ಐಆರ್ ರದ್ದಾಗುವವರೆಗೂ ಹೋರಾಡಲು ...ಕೊಟ್ಟಿದ್ದಾರೆ.

...ಮೋದಿಯ ಅಭಿವೃದ್ಧಿ ಮಾದರಿಯನ್ನು ಗುಜರಾತ್‌ನ ರೈತರು ...ರಿಸುತ್ತಿದ್ದಾರೆ.

● ದೊಡ್ಡಿಪಾಳ್ಯ ನರಸಿಂಹಮೂರ್ತಿ



ಸಂಜಯ್ ಶೆಟ್ಟಣ್ಣವರ್ · ವಾಸಣ್ಣ · ರಮೇಶ್ ಎಂ.ಪಿ · ಉದಯ್‌ಕುಮಾರ್ · ರುಕ್ಮಿಣಿ

ದಲ್ಲಾಳಿ ಮಂಡಿಯಾದ ದಾವಣಗೆರೆ ನಗರಪಾಲಿಕೆ

ದಾವಣಗೆರೆ ಎಂಬ ಮಾಜಿ ಮ್ಯಾಂಚೆಸ್ಟರ್ ಸಿಟಿ ಅಹೋರಾತ್ರಿ ಲೂಟಿಯಾಗುತ್ತಿದೆ. ಹಾಗೆ ಲೂಟಿ ಮಾಡುತ್ತಿರೋದು ಭಯಂಕರ ದರೋಡೆಕೋರರೂ ಅಲ್ಲ, ಕಡೇಪಕ್ಷ ಖಾದಿ ಟೋಪಿಗೆಯ ರಾಜಕಾರಣಿಗಳೂ ಅಲ್ಲ. ಸ್ವತಃ ಪಾಲಿಕೆಯ ಅಧಿಕಾರಿಗಳು ಮತ್ತು ನೌಕರರೇ ಇದರ ನೇತೃತ್ವ ವಹಿಸಿ ನಿಂತಿದ್ದಾರೆ. ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದು ಆರು ತಿಂಗಳಾದರೂ ಅಧಿಕಾರ ಚಲಾಯಿಸುವ ಯೋಗ ಮಾತ್ರ ಯಾವೊಬ್ಬ ಕಾರ್ಪೋರೇಟರ್‌ಗೂ ಕೂಡಿಬಂದಿಲ್ಲ. ಇದನ್ನೇ ಬಂಡವಾಳ ಮಾಡಿಕೊಂಡ ಪಾಲಿಕೆಯ ನುಂಗಣ್ಣರು ಸರ್ಕಾರದ ಅನುದಾನವನ್ನು ಎಗ್ಗಿಲ್ಲದಂತೆ ಮುಕ್ಕುತ್ತಿದ್ದಾರೆ.

ಪಾಲಿಕೆಗೆ ಸಂಜಯ್ ಶೆಟ್ಟಣ್ಣವರ್ ಎಂಬುವವನೇ ಕಮಿಷನರ್! ಈ ಆಸಾಮಿ ಇಲ್ಲಿಗೆ ಬಂದು ವರ್ಷವೇ ಕಳೆದರೂ ನಗರದ ಜನಸಂಖ್ಯೆ, ಅವೆಷ್ಟು ವಾರ್ಡುಗಳಿವೆ, ಪ್ರತೀದಿನ ವಸೂಲಾಗುವ ಕಂದಾಯವೆಷ್ಟು, ಪಾರ್ಕುಗಳು, ಕಮರ್ಷಿಯಲ್ ಕಾಂಪ್ಲೆಕ್ಸ್‌ಗಳು ಹೋಗಲಿ ಪಾಲಿಕೆಯಲ್ಲಿ ಕಸ ಎತ್ತುವ ಲಾರಿ, ಟ್ರಾಕ್ಟರ್‌ಗಳೆಷ್ಟು ಎನ್ನುವ ಅಂಕಿಅಂಶಗಳೇ ಗೊತ್ತಿಲ್ಲ. ಹಾಗಾಗಿಯೇ ಪಾಲಿಕೆಯಲ್ಲಿ ಅಖಂಡ ಭ್ರಷ್ಟಾಚಾರ ಲಂಗೂಲಗಾಮಿಲ್ಲದೆ ಸಾಗಿದೆ. ಇದ್ದ ರಸ್ತೆಗಳನ್ನು ಅಗೆದು ಆರು ತಿಂಗಳಾದರೂ ಮುಕ್ತಿ ನೀಡಿಲ್ಲ, ಪಾರ್ಕುಗಳಲ್ಲಿ ಬೆಂಚುಗಳು ಮಂಗಮಾಯವಾಗುತ್ತಿವೆ, ದೇವನಗರಿಯ ತುಂಬ ಕೆಸರು, ಬೀದಿಗಳಲ್ಲಿ ಬಿದ್ದ ಕಸ ಎತ್ತುವವರು ಗತಿ ಇಲ್ಲ. ಒಟ್ಟಿನಲ್ಲಿ ದಾವಣಗೆರೆ ಎಂಬ 'ಅಂದಕಾಲತ್ತಿಲ್' ಸುಂದರಿ ಇದೀಗ ಕುರೂಪಿಯಾಗುವ ಹಾದಿಯಲ್ಲಿದ್ದಾಳೆ. ಇದು ಹೀಗೇ ಮುಂದುವರೆದರೆ ನಗರದೇವತೆ ದುಗ್ಗಮ್ಮನೇ ಊರು ಬಿಟ್ಟು ಪರಾರಿಯಾದರೂ ಅಚ್ಚರಿಪಡಬೇಕಿಲ್ಲ.

ಕಂದಾಯವೇ ಮಂಗಮಾಯ

ದಾವಣಗೆರೆಗೆ ಇಬ್ಬರು ಕಂದಾಯಾಧಿಕಾರಿಗಳಿದ್ದಾರೆ. ಆರ್.ವಾಸಣ್ಣ ಮತ್ತು ರುಕ್ಮಿಣಿದ್ವಯರೇ ಆ ಪರಮ ಪಾಪಿಗಳು. ಪಲಿಕೆಯ ಗಂಟು ನುಂಗಲು ಈ ಇಬ್ಬರಲ್ಲೂ ರಣ ಪೈಪೋಟಿ. ದಾವಣಗೆರೆಯನ್ನು ಉತ್ತರ, ದಕ್ಷಿಣ ಅಂತ ಇಬ್ಭಾಗ ಮಾಡಿದ ಕಮೀಷನರ್ ಇವರಿಬ್ಬರಿಗೂ ಹಂಚಿದ ದಿನದಿಂದ ಇವರ ಖಾಸಗಿ 'ಖಾನ್‌ದಾನ್'ಗಳು ಭಯಂಕರವಾಗಿ ಚಿಗುರಿಕೊಂಡಿವೆ.

ಅದರಲ್ಲೂ ವಾಸಣ್ಣನಿಗೆ ಪಾಲಿಕೆಯಲ್ಲಿ ಮ್ಯಾನೇಜರ್ ಕಂ ಕಂದಾಯಾಧಿಕಾರಿ ಎಂಬ ಡಬಲ್ ರೋಲ್! ಪ್ರತಿದಿನ ಪಾಲಿಕೆಯ ವೆಹಿಕಲ್‌ಗಳಿಗೆ ಡೀಸೆಲ್ ಪೆಟ್ರೋಲ್ ಇಂಡೆಂಟ್ ಕೊಡುವುದು ಇವನೇ ಆದ್ದರಿಂದ ನೂರಾರು ಲೀಟರು ಪೆಟ್ರೋಲ್, ಡೀಸೆಲನ್ನು ನೀರು ಕುಡಿದಷ್ಟೇ ಸಲೀಸಾಗಿ ಕುಡಿದು ತೇಗುತ್ತಾನೆ. ಅಲ್ಲದೆ ಅನುಕಂಪದ ಫೈಲುಗಳಿಗೆ ಮುಕ್ತಿ ನೀಡುವ ಅಥಾರಿಟಿಯನ್ನೂ ತನ್ನ ಬಳಿಯೇ ಕಾಯ್ದಿರಿಸಿಕೊಂಡಿರುವ ವಾಸಣ್ಣ ಅದರಲ್ಲೂ ಸಕತ್ ಮೇಯಣ್ಣನೆ. ಏನಿಲ್ಲೆಂದರೂ ದಿನಕ್ಕೆ ಮೂರು-ನಾಲ್ಕು ಫೈಲುಗಳು ಬಂದೇಬರುತ್ತವೆ. ಇವತ್ತಿನ ಪಾಲಿಕೆ ಬಜಾರ್‌ನಲ್ಲಿ ಒಂದು ಫೈಲಿಗೆ ಕನಿಷ್ಟ 50 ರಿಂದ ಅರವತ್ತು ಸಾವಿರ ವಸೂಲಿ ಮಾಡಲಾಗುತ್ತಿದೆ. ಹಾಗಿದ್ದ ಮೇಲೆ ವಾಸಣ್ಣನ ದಿನದ ಆದಾಯ ಅದೆಷ್ಟಿರಬಹುದು ನೀವೇ ಲೆಕ್ಕಹಾಕಿ ನೋಡಿ.

ಇನ್ನು ರುಕ್ಮಿಣಮ್ಮನ ಕರಾಮತ್ತೇನು ಸಣ್ಣದಲ್ಲ. ಹಟಕ್ಕೆ ಬಿದ್ದವಳಂತೆ ದುಡ್ಡುಮಾಡತೊಡಗಿದ್ದಾಳೆ. ಪಾಲಿಕೆಯ ಅಂಗಳದಲ್ಲಿ ಈಕೆ 'ನಕಲಿ ಡೋರ್ ನಂಬರುಗಳ ಸೃಷ್ಟಿಕರ್ತೆ' ಎಂತಲೇ ಕುಖ್ಯಾತಿ ಗಿಟ್ಟಿಸಿಕೊಂಡಿದ್ದಾಳೆ. ನಗರದ ಯಾವುದೇ ಮೂಲೆಯಲ್ಲಿ ಹೊಸ ಕಟ್ಟಡ ನಿರ್ಮಾಣವಾಗುತ್ತಿದ್ದರೂ ಈಕೆಯ ಚೇಲಾ ಗುಮಾಸ್ತರು ಹಾಜರಾಗಿಬಿಡುತ್ತಾರೆ. ಅದಕ್ಕೆಂದೇ ತ್ರಿಮೂರ್ತಿಗಳ ಗ್ಯಾಂಗನ್ನೇ ಈಕೆ ಕಟ್ಟಿಕೊಂಡಿದ್ದಾಳೆ. ನಿರೀಕ್ಷಕರಾದ ಎಸ್.ಹೆಚ್.ಗುರುಮೂರ್ತಿ, ಶಾಮನೂರು ಬಸವರಾಜ ಮತ್ತು ಪ್ರಭು ಎಂಬವರೇ ರುಕ್ಮಿಣಿಗೆ ಆಮದಾನಿ ಎತ್ತಿಕೊಡುವ ತ್ರಿಮೂರ್ತಿಗಳು. ಇವರು ಪಾಲಿಕೆಯ ಪುರಾತನ ನುಂಗಣ್ಣರು. ಇದೇ ನಗರಸಭೆಯಲ್ಲಿ ಕೆಲಸ ಆರಂಭಿಸಿ ಈಗ ಇಲ್ಲಿಯೇ ರಿಟೈರ್ಡ್ ಆಗುವ ಹಂತದವರೆಗೂ 'ಭ್ರಷ್ಟ' ಹಾದಿ ಸವೆಸಿ ಬಂದಿದ್ದಾರೆ. ಲೋಕಾಯುಕ್ತರೇನಾದರೂ ಈ ತ್ರಿಮೂರ್ತಿಗಳಿಗೆ ಸೀರಿಯಸ್ಸಾಗಿ ಗಂಟುಬಿದ್ದು ಅಕ್ರಮ ಸಂಪಾದನೆಯನ್ನೆಲ್ಲ ಬಯಲಿಗೆಳೆದರೆ ಸರ್ಕಾರದ ನಯಾಪೈಸೆ ಅನುದಾನವೇ ಇಲ್ಲದೆ ದಾವಣಗೆರೆ ಮಹಾನಗರವನ್ನು ಅನಾಮತ್ತು ಐದುವರ್ಷಗಳ ಕಾಲ ಯಾವ ಕಿಂಚಿತ್ತೂ ಕೊರತೆ ಬರದಂತೆ ಸಾಕಿಬಿಡಬಹುದು. ಇಂತಹ 'ಖತರ್ನಾಕ್' ಪಡೆಯೇ ಕುಮಾರಿ ರುಕ್ಮಿಣಿಯ ಬೆನ್ನಿಗಿದೆ. ಈಕೆಯ ಆಸ್ಥಾನದಲ್ಲಿ ಖಾತಾ ಬದಲಾವಣೆಯ ಫೈಲಿಗೊಂದರಂತೆ ಎರಡುಸಾವಿರ, ಹೊಸದಾಗಿ ಕಟ್ಟುವ ಮನೆಗೆ 20 ಸಾವಿರ, ಕಮರ್ಶಿಯಲ್ ಮಳಿಗೆ ನಿರ್ಮಾಣಕ್ಕೆ 50 ಸಾವಿರದಿಂದ ಒಂದು ಲಕ್ಷ ಹೀಗೆ ರೇಟ್ ಫಿಕ್ಸ್ ಆಗಿದೆ. ಚೌಕಾಸಿಯ ಮಾತೇ ಇಲ್ಲ.

ಇಂಜಿನಿಯರುಗಳೆಂಬ ದಂಡಪಿಂಡಗಳು

ಮಹಾನಗರ ಪಾಲಿಕೆಗೆ ಒಟ್ಟು 16 ಜನ ಇಂಜಿನಿಯರ್‌ಗಳಿದ್ದಾರೆ. ಅದರಲ್ಲಿ 9 ಮಂದಿ ಎ.ಇ.ಇ.ಗಳು ಇನ್ನುಳಿದ 7 ಜನ ಎ.ಇ.ಗಳು. ನಗರಕ್ಕೆ ಇವರಿಂದ ಉಪಕಾರವಾಗುವುದಕ್ಕಿಂತ ಇವರೇ ಪಾಲಿಕೆಗೆ ಹೊರೆಯಾಗಿ ಹೋಗಿದ್ದಾರೆ. ಪ್ರತಿಯೊಬ್ಬರಿಗೂ ಪಾಲಿಕೆ ವತಿಯಿಂದ ಇಂಡಿಕಾ ಕಾರು ಕೊಡಲಾಗಿದೆಯಾದರು ಅವೆಲ್ಲ ಅವರ ಹೆಂಡತಿ ಮಕ್ಕಳನ್ನು ಹೊತ್ತೊಯ್ಯುವುದಕ್ಕಷ್ಟೇ ಸೀಮಿತವಾಗಿವೆ.

ಅದರಲ್ಲಿ ಎಂ.ನಾಗರಾಜ ಎಂಬಾತ ಎ.ಇ.ಇ.ಯಾಗಿ ಇಲ್ಲಿಗೆ ಬಂದೇ ಹದಿನೈದು ವರ್ಷಗಳಾಗಿವೆ. ಅನೇಕ ಬಾರಿ ಇಲ್ಲಿಂದ ವರ್ಗಾವಣೆಯಾದರೂ ದಾವಣಗೆರೆಯ ಹುಲುಸು ಮೇವಿನ ಆಸೆಗೆ ಬಿದ್ದು ಉನ್ನತ ಮಟ್ಟದಲ್ಲೇ ಆ ಟ್ರಾನ್ಸ್‌ಫರ್‌ಗಳನ್ನು ಕ್ಯಾನ್ಸಲ್ ಮಾಡಿಸಿಕೊಂಡು ಬರುತ್ತಾನೆ. ಹಳೆಯ ಕಾಮಗಾರಿಗಳಿಗೇ ಹೊಸ ಬಿಲ್ಲು ಬರೆಯುವ ಬೋಗಸ್ ದಂಧೆಯೇ ನಾಗರಾಜ ಮತ್ತು ಅವನ ಸಹೋದ್ಯೋಗಿಗಳ ಕಸುಬು.

ದಾವಣಗೆರೆ ಮಹಾನಗರಕ್ಕೆ ವಿದ್ಯುತ್ ಸರಬರಾಜು ಮಾಡುವ ಹೊಣೆಗಾರಿಕೆ ಹೊತ್ತಿರುವ ಅಸಿಸ್ಟೆಂಟ್ ಇಂಜಿನಿಯರ್ ಉದಯಕುಮಾರ ಮಹಾನ್ ಕರೆಂಟ್ ಕಳ್ಳ. ಹರಿವ ಕರೆಂಟಿಗೇ ಬಾಯಿ ಅಗಲಿಸಿ ಸ್ವಾಹಾ ಮಾಡಿಬಿಡುವಂತ ಭೂಪ ಈತ. ನಗರದ ಬೋರ್‌ವೆಲ್‌ಗಳು, ಕಿರು-ನೀರು ಸರಬರಾಜು ಘಟಕಗಳು, ಬೀದಿದೀಪಗಳು, ಮೋಟಾರುಗಳ ವೈಂಡಿಂಗ್ ರಿಪೇರಿಯ ಸಮಸ್ತ ಉಸ್ತುವಾರಿಯೂ ಇವನ ತಟ್ಟೆಗೆ ಬಂದು ಬೀಳುತ್ತವೆ. ನಗರದ ಬೀದಿ ದೀಪಗಳ ನಿರ್ವಹಣೆಯನ್ನು ಬೆಂಗಳೂರಿನ ಶ್ರೀ ವೆಂಕಟೇಶ್ವರ ಎಲೆಕ್ಟ್ರಿಕಲ್ ಮತ್ತು ಶ್ರೀಕಂಠೇಶ್ವರ ಎಲೆಕ್ಟ್ರಿಕಲ್ ಎನ್ನುವ ಒಂದೇ ಮಾಲಿಕತ್ವದ ಎರಡು ಹೆಸರಿನ ಏಜೆನ್ಸಿಗೆ ನೀಡಲಾಗಿದೆ. ಅಲ್ಲಿಂದಲೂ ಉದಯಕುಮಾರನಿಗೆ ಆಮೇದ್ಯ ಎಡೆಯಾಗುತ್ತದೆ. ಸರಿಯಾಗಿರುವ ಬೀದಿದೀಪ ಮತ್ತು ಕಂಬಗಳಿಗೆ ಸುಖಾಸುಮ್ಮನೇ ಸರ್ಜರಿ ಮಾಡಿ ಬಿಲ್ಲು ಸುತ್ತುವುದು ಇವನ ಕಾಯಕ. ಪಾಲಿಕೆಯ ಕೆಲಸಕ್ಕೆಂದು ನೀಡಿರುವ ಲ್ಯಾಪ್‌ಟಾಪ್ ಈತನ ಮನೆಯ ಕಪಾಟಿನಲ್ಲಿದೆ. ಇನ್ನು ಪಾಲಿಕೆಗೆ ವಿದ್ಯುತ್ ಉಪಕರಣಗಳನ್ನು ಸರಬರಾಜು ಮಾಡುವ ಕಾಂಟ್ರಾಕ್ಟನ್ನು ತನ್ನ ಸಂಬಂಧಿಕರ ಹರ್ಷಿತ ಎಲೆಕ್ಟ್ರಿಕಲ್ ಮತ್ತು ಶ್ರೀಸಿದ್ದೇಶ್ವರ ಎಲೆಕ್ಟ್ರಿಕಲ್ಸ್‌ಗಳಿಗೆ ಸಿಗುವಂತೆ ನೋಡಿಕೊಂಡಿರುವ ಉದಯಕುಮಾರ ನಕಲಿ ಮಾಲುಗಳಿಗೂ ದುಪ್ಪಟ್ಟು ಬಿಲ್ಲು ಜಡಿದು ಕೋಟಿಗಟ್ಟಲೆ ಕಮಾಯಿ ಕಾಣುತ್ತಿದ್ದಾನೆ.

ಇದೆಲ್ಲಾ ಅಧಿಕಾರಿಗಳ ಆರ್ಭಟವಾಯ್ತು. ಇನ್ನು ಗ್ರೂಪ್ ಡಿ ದರ್ಜೆಯ ನೌಕರನಾಗಿ ಪಾಲಿಕೆ ಹೊಕ್ಕು ಇವತ್ತು ಭಾರೀ ಕುಳವಾಗಿ ಬೆಳೆದುನಿಂತಿರುವ ಮಂಜ ಅಲಿಯಾಸ್ ಫೊಟ್‌ಲಾಯರ್ ಮಂಜನೇ ದಾವಣಗೆರೆಯ ಜಲಕಂಟಕ. ಇಡೀ ನಗರಕ್ಕೆ ನೀರು ಸರಬರಾಜು ಮಾಡುವ ಉಸ್ತುವಾರಿ ಈತನದು. ಅಂತಹ ಬೃಹತ್ ಜವಾಬ್ದಾರಿ ಹೊರುವ ನೈಪುಣ್ಯತೆಯಾಗಲಿ, ಅರ್ಹತೆಯಾಗಲಿ ಇವನಿಗಿಲ್ಲ. ಅದಕ್ಕೆಂದೇ ಇಂಜಿನಿಯರ್ ಇರುತ್ತಾರೆ. ಆದರೆ ಮಂಜ ನೌಕರಿ ಸೇರಿದಾಗಿನಿಂದ ನೀರು ಸರಬರಾಜು ವಿಭಾಗದಲ್ಲೇ ಪಳಗಿದವನೆಂಬ ಕಾರಣಕ್ಕೆ ಅವನನ್ನು ನೇಮಿಸಿದ್ದಾರೆ. ಈ ಹಿಂದೆ ಮಂಜ, ನೀರು ಸರಬರಾಜು ವಿಭಾಗದ ಇಂಜಿನಿಯರಾಗಿದ್ದ ರಾಜಾಚಾರಿ ಎನ್ನುವವನ ಖಾಸಾ ಶಿಷ್ಯನಾಗಿದ್ದ. ಆತ ನೀರಿನ ಲೆಕ್ಕದಲ್ಲಿ ಅಕೌಂಟ್ ಎಗರಿಸುವ ಚಾಣಾಕ್ಷತೆಯನ್ನು ಮಂಜನಿಗೆ ಧಾರೆ ಎರೆದು ನಿವೃತ್ತನಾಗಿದ್ದ. ಅಲ್ಲಿಂದ ಈ ಮಂಜನೇ ನೀರು ಹರಿಸಿ ದುಡ್ಡು ಮಾಡುವ ದಂಧೆಯಲ್ಲಿ ಡಾನ್‌ನಂತೆ ಮೆರೆದಾಡಿಕೊಂಡಿದ್ದಾನೆ. ನಗರಕ್ಕೆ ಕುಂದುವಾಡ ಕೆರೆ ಮತ್ತು ರಾಜನಹಳ್ಳಿ ಬಳಿಯ ತುಂಗಭದ್ರಾನದಿಯ ಪಂಪ್‌ಹೌಸಿನಿಂದ ನೀರು ಸರಬರಾಜಾಗುತ್ತದೆ. ಈ ಎರಡೂ ಪಂಪ್‌ಹೌಸ್‌ಗಳಿಗೆ ಇವನೇ ಅಧಿಪತಿ. ಪಂಪ್‌ಹೌಸಿನ ಬೃಹತ್ ಮೋಟಾರ್‌ಗಳು ಇವನ ದಂಧೆಗೆ ಬಲಿಯಾಗುತ್ತವೆ. ಸುಖಾಸುಮ್ಮನೇ ಕೆಟ್ಟು ನಿಲ್ಲುತ್ತವೆ ಇಲ್ಲವಾದರೆ ಮಾಯವಾಗಿಬಿಡುತ್ತವೆ. ಅವುಗಳ ದುರಸ್ತಿ, ಖರೀದಿ ಅಂತ ಮಂಜ ಬಿಲ್ ಮೇಲೆ ಬಿಲ್ ಸೃಷ್ಟಿಸುತ್ತಲೇ ದುಂಡಗಾಗಿದ್ದಾನೆ.

ಒಂದು ಕಡೆ ಸರ್ಕಾರದ ಹಣವನ್ನು ಬೇಕಾಬಿಟ್ಟಿಯಾಗಿ ಖಾಲಿ ಮಾಡುತ್ತಾ ಮತ್ತೊಂದು ಕಡೆ ನಗರದ ಸೌಂದರ್ಯ, ಘನತೆಯನ್ನೇ ಮಣ್ಣುಪಾಲು ಮಾಡುತ್ತಿರುವ ಅಧಿಕಾರಿಶಾಹಿ ವರ್ಗಕ್ಕೆ ತಕ್ಷಣವೇ ಬಿಸಿ ಮುಟ್ಟಿಸಬೇಕಿದೆ.

■ ವರದಿಗಾರ

ಶಾಮನೂರರು ಕ್ರಮ ಕೈಗೊಳ್ಳಲಿ



ದಾವಣಗೆರೆ ಮಹಾನಗರ ಪಾಲಿಕೆಯಲ್ಲಿ ಅಧಿಕಾರಿಗಳ ಅಂಧಾದುಂಧಿ ದರ್ಬಾರಿನತ್ತ ಶಾಸಕ ಮಲ್ಲಿಕಾರ್ಜುನ್, ಮಂತ್ರಿ ಶಾಮನೂರು ಶಿವಶಂಕರಪ್ಪ ಗಮನ ಹರಿಸದಿದ್ದರೆ ಪಾಲಿಕೆಯ ಆಡಳಿತ ಅಧೋಗತಿಗಿಳಿಯುವುದು ಗ್ಯಾರಂಟಿ. ಅಧಿಕಾರಿಗಳ ಅಟ್ಟಹಾಸ, ಕಮೀಷನರ್‌ನ ಬೇಜವಾಬ್ದಾರಿತನ, ಇಂಜಿನಿಯರುಗಳ ಸೋಮಾರಿತನ, ಗುಮಾಸ್ತರುಗಳ ಲಂಚಗುಳಿತನ, ಕಂದಾಯಾಧಿಕಾರಿಗಳ ಭ್ರಷ್ಟಾಚಾರಗಳಿಗೆ ಬ್ರೇಕ್ ಹಾಕದೇ ಹೋದಲ್ಲಿ ಬಹಳ ದಿನಗಳ ನಂತರ ದಾವಣಗೆರೆಯಲ್ಲಿ ತಮ್ಮ ಸಾಮ್ರಾಜ್ಯವನ್ನು ಪುನರ್ ಪ್ರತಿಷ್ಠಾಪಿಸಿರುವ ಅಪ್ಪ-ಮಗನಿಗೆ ಕಳಂಕ ತಪ್ಪಿದ್ದಲ್ಲ. ಇಂತಹ ಆಡಳಿತವರ್ಗದಿಂದಾಗಿ ಕಮೀಷನ್ ದಲ್ಲಾಳಿಗಳ ಹಟ್ಟಾಲಮ್ಮೇ ಸೃಷ್ಟಿಯಾಗಿದೆ. ಸಾರ್ವಜನಿಕರು ನೇರವಾಗಿ, ಮುಕ್ತವಾಗಿ ಹೋಗಿಬರಲು ಆಗದಷ್ಟು ದಲ್ಲಾಳಿ ಮಂಡಿಯಾಗಿರುವ ಪಾಲಿಕೆಗೆ ಕೂಡಲೇ ಸರ್ಜರಿ ಆಗಬೇಕಿದೆ. ಜನಪ್ರತಿನಿಧಿಗಳಿರಲಿ, ಯಾವೊಂದು ಸಂಘ-ಸಂಸ್ಥೆಗಳೂ ಪಾಲಿಕೆಯ ನುಂಗಣ್ಣರ ವಿರುದ್ಧ ಸೊಲ್ಲೆತ್ತದೇ ಇರುವುದು ನಗರದ ಮತ್ತೊಂದು ದೌರ್ಭಾಗ್ಯ!

ಕರಾವಳಿ: ಗೋವು ಕಳ್ಳ ಭಜರಂಗಿಗಳು!



ಗೋವುಗಳನ್ನು ಕದ್ದ ಚಡ್ಡಿಗಳು...

ಈ ಹಿಂದೆ ಪಾಕಿಸ್ತಾನದ ಧ್ವಜ ಹಾರಿಸಿ, ಮಂದಿರ ಮಸೀದಿಗಳಲ್ಲಿ ಬಾಂಬ್ ಸ್ಫೋಟಿಸಿ ಆ ದುಷ್ಕೃತ್ಯಗಳನ್ನು ಅಲ್ಪಸಂಖ್ಯಾತರ ತಲೆಗಟ್ಟುವ ಹುನ್ನಾರ ನಡೆಸಿ ಸಂಘ ಪರಿವಾರದ ಪಾಖಂಡಿಗಳು ಸಿಕ್ಕಿಬಿದ್ದಿದ್ದು ಹಳೆಯ ಸುದ್ದಿ. ಈಗ ಇದೇ ಭಜರಂಗಿ ಕೂಟ ಕರಾವಳಿಯಲ್ಲಿ ಗೋವುಗಳನ್ನು ಕದ್ದು ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದಾರೆ. ಹಗಲಿರುಳೂ ಗೋರಕ್ಷಣೆಯೆಂದು ಬೊಬ್ಬೆ ಹಾಕುವ ಈ ಭಯೋತ್ಪಾದಕ ಪುಂಡರ ಕೂಟಕ್ಕೆ ಗೋವುಗಳನ್ನು ಕದ್ದು ಮಾರಿ ಬದುಕಬೇಕಾದ ಸ್ಥಿತಿ ಬಂದಿದೆಯೆಂದು ಭಾವಿಸಬೇಡಿ. ಇದು ಹೊಟ್ಟೆಪಾಡಿಗಾಗಿ ಮಾಡಿದ ಕಳ್ಳತನವಲ್ಲ; ರೈತರ ದನಗಳನ್ನು ಮುಸಲ್ಮಾನರು ಕದ್ದು ಕಸಾಯಿಖಾನೆಗಳಿಗೆ ಸಾಗಿಸುತ್ತಿದ್ದಾರೆ ಎಂದು ಆರೋಪಿಸಿ ರೈತ ಸಮುದಾಯವನ್ನು ಎತ್ತಿಕಟ್ಟಿ ಕೋಮು ಗಲಭೆ ಸೃಷ್ಟಿಸುವ ಷಡ್ಯಂತ್ರದ ಒಂದು ಭಾಗವಷ್ಟೆ.

ಇತ್ತೀಚೆಗೆ ಕರಾವಳಿ ಜಿಲ್ಲೆಗಳಲ್ಲಿ ಗೋವುಕಳ್ಳತನದ ಪ್ರಕರಣಗಳು ಇದ್ದಕ್ಕಿದ್ದಂತೆ ಹೆಚ್ಚಾಗಿಬಿಟ್ಟಿದ್ದವು. ಇದ್ದಕ್ಕಿದ್ದಂತೆ ಶುರುವಾದ ಈ ಹೊಸಬಗೆಯ ಕಳ್ಳತನದ ಪ್ರಕರಣಗಳ ಮೂಲ ಪತ್ತೆಯಾಗದೆ ಪೊಲೀಸರಿಗೆ ತಲೆನೋವಾಗಿತ್ತು. ಅದರಲ್ಲೂ ಇತ್ತೀಚೆಗೆ ಆರೋಗ್ಯ ಮಂತ್ರಿ ಯು.ಟಿ.ಖಾದರ್ ಅವರು ಈ ಗೋವು ಕಳ್ಳತನವನ್ನು ನಿಲ್ಲಿಸಲು ಸಾಧ್ಯವಾಗದೆ ಹೋದರೆ ಮಂಗಳೂರಿನಿಂದ ಜಾಗ ಖಾಲಿ ಮಾಡಬೇಕಾಗುತ್ತದೆ ಎಂದು ಮಂಗಳೂರು ಪೊಲೀಸ್ ಕಮೀಷನರ್ ಮನೀಷ್ ಕರ್ಬೀಕರ್ ಅವರಿಗೆ ಬಹಿರಂಗ ಪತ್ರಿಕಾಗೋಷ್ಠಿಯಲ್ಲೇ ಎಚ್ಚರಿಕೆ ನೀಡಿದ್ದೂ ನಡೆಯಿತು. ಮಂತ್ರಿಯ ಹೇಳಿಕೆಯಿಂದ ಉತ್ತೇಜಿತರಾದ ಪೊಲೀಸರು ಕಳ್ಳರನ್ನು ಹಿಡಿಯುವ ಬದಲಿಗೆ ಗೋವುಗಳ ಸಾಗಣೆ ಮಾಡುತ್ತಿದ್ದವರ ಮೇಲೆ ಮುಗಿಬಿದ್ದು ಯದ್ವಾತದ್ವಾ ಕೇಸುಗಳನ್ನು ಜಡಿದು ತಮ್ಮ ವೀರಾವೇಶ ಮೆರೆದಿದ್ದರು. ಹೀಗೆ ಸಚಿವರು ನೀಡಿದ ಎಚ್ಚರಿಕೆ ಪೊಲೀಸರ ಪಾಲಿಗೆ ಒಂದು ವರದಾನವಾಗಿ ಖಾಕಿ ಜೇಬುಗಳಿಗೆ ಸುಗ್ಗಿಯೋ ಸುಗ್ಗಿ.

ಈ ಗೋವು ಕಳ್ಳರು ಟಾರ್ಗೆಟ್ ಮಾಡುತ್ತಿದ್ದುದು ಕೂಡ ಬಡಬಗ್ಗರ ಗೋವುಗಳನ್ನೇ. ಹೀಗಾಗಿ ತಮ್ಮ ಗೋವುಗಳನ್ನು ಕಳ್ಳರಿಂದ ರಕ್ಷಿಸಿಕೊಳ್ಳುವುದು ಒಂದು ಹೊಸ ತಲೆನೋವಾಗಿ ಸಾರ್ವಜನಿಕರಿಗೆ ನಿದ್ದೆಗೆಡಲು ಶುರುವಾಗಿತ್ತು. ಆದರೆ ಭಜರಂಗಿಗಳು ಹಾಗೂ ಇನ್ನಿತರ ಸ್ವಘೋಷಿತ ಹಿಂದೂ ನಾಯಕರು ಅತ್ಯುತ್ಸಾಹಕ್ಕೊಳಗಾಗಿ 'ಮುಸಲ್ಮಾನರೇ ರೈತರ ಗೋವುಗಳನ್ನು ಕದ್ದು ಕಸಾಯಿಖಾನೆಗೆ ಸಾಗಿಸುತ್ತಿದ್ದಾರೆ' ಎಂದು ಬೊಂಬಡಾ ಬಜಾಯಿಸಲು ಶುರುವಿಟ್ಟುಕೊಂಡಿದ್ದರು.

ಇಂಥಾ ಸನ್ನಿವೇಶದಲ್ಲಿ ಪುತ್ತೂರು ಬಳಿಯ ಸವಣೂರಿನಲ್ಲಿ ದಲಿತರ ಮನೆಯೊಂದರಿಂದ ಇದೇ ಆಗಸ್ಟ್ 21ರ ರಾತ್ರಿ ಗೋವುಗಳನ್ನು ಕದ್ದು ಟೆಂಪೋಗೆ ತುಂಬುತ್ತಿದ್ದ ವೇಳೆಯಲ್ಲಿ ಕಳ್ಳರ ತಂಡವೊಂದು ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದಿದೆ. ಹೀಗೆ ಸಿಕ್ಕಿಬಿದ್ದ ಮೂವರಲ್ಲಿ ಒಬ್ಬ ಬಿಜೆಪಿ ಪಕ್ಷದಿಂದ ಗೆದ್ದಿದ್ದ ತಾಲ್ಲೂಕು ಪಂಚಾಯತಿ ಸದಸ್ಯ! ಮತ್ತೊಬ್ಬ ಸ್ಥಳೀಯ ಭಜರಂಗದಳದ ಸಂಚಾಲಕ!! ಮಗದೊಬ್ಬ ಕೂಡ ಭಜರಂಗಿ ಕಾರ್ಯಕರ್ತ!!! ಕರುಣಾಕರ, ಪ್ರಕಾಶ, ಈಶ್ವರ ಎಂಬ ನಾಮಾಂಕಿತವುಳ್ಳ ಈ ಭಜರಂಗಿಗಳು ತಮ್ಮ 'ಆಪರೇಷನ್ ಗೋಮಾತೆ'ಯನ್ನು ಎಕ್ಸ್‌ಪೋಸ್ ಮಾಡಿ ಭಜರಂಗಿಗಳ ಕೆಂಗಣ್ಣಿಗೂ ಗುರಿಯಾಗಿದ್ದಾರೆ.

ಸವಣೂರು ಮುಸ್ಲಿಂ ಬಾಹುಳ್ಯವಿರುವ ಗ್ರಾಮ. ಇಲ್ಲಿ ಅಂಥಾ ಕೋಮು ಸಮಸ್ಯೆಗಳೇನಿರಲಿಲ್ಲ. ಈ ಊರಿನಲ್ಲಿ ದನ ಕಳುವಾದರೆ ಸಹಜವಾಗಿಯೇ ಅದು ಅಲ್ಲಿನ ಮುಸ್ಲಿಮರ ಮೇಲೆ ಬರುತ್ತದೆಯೆಂಬುದು ಭಜರಂಗಿಗಳ ಮಾಸ್ಟರ್ ಪ್ಲಾನ್. ಆದರೆ ಇಷ್ಟು ಬೇಗನೇ ಬೆತ್ತಲಾಗುತ್ತೇವೆಂದು ಭಜರಂಗಿಗಳು ಕನಸಿನಲ್ಲೂ ಊಹಿಸಿರಲಿಲ್ಲ. ಪಾಪ! ಭಜರಂಗಿಗಳ ಗ್ರಹಗತಿಗಳು ಕೆಟ್ಟಿದ್ದವು ಅಂತಾ ಕಾಣುತ್ತೆ, ನಡುರಾತ್ರಿಯಲ್ಲಿ ಟೆಂಪೋವೊಂದು ದನಗಳನ್ನು ಲೋಡ್ ಮಾಡುತ್ತಿರುವ ದೃಶ್ಯ ಆ ಊರಿನ ಕೆಲವು ಯುವಕರ ಕಣ್ಣಿಗೆ ಬಿದ್ದಿದೆ. ಮತ್ತಷ್ಟು ಜನರನ್ನು ಎಚ್ಚರಗೊಳಿಸಿ, ಕತ್ತಲೆಯಲ್ಲೇ ಭಜರಂಗಿ ಕಳ್ಳರನ್ನು ಸುತ್ತುವರೆದಿದ್ದಾರೆ. ಅಷ್ಟರಲ್ಲಿ ಎಚ್ಚರಗೊಂಡ ಆ ಮನೆಯವರೂ ಬಂದು ಸೇರಿಕೊಂಡಿದ್ದಾರೆ. ಈ ದುಷ್ಕೃತ್ಯ ನಡೆದ ಸ್ಥಳದಲ್ಲಿ 600ಕ್ಕೂ ಹೆಚ್ಚು ಜನರು ಜಮಾಯಿಸಿದ್ದರಿಂದ ಗೋವು ಕಳ್ಳ ಭಜರಂಗಿಗಳು ತಪ್ಪಿಸಿಕೊಳ್ಳಲಾಗಲಿಲ್ಲ, ಸದ್ಯ ಕಳ್ಳರನ್ನು ಹಿಡಿದು ಪೊಲೀಸರಿಗೆ ಒಪ್ಪಿಸಲಾಗಿದೆ.

ಹಾಗೆ ನೋಡಿದರೆ ಇದು ಮೊದಲನೇ ಘಟನೆಯೇನಲ್ಲ. ಒಂದು ತಿಂಗಳ ಹಿಂದೆ ಸುರತ್ಕಲ್ ಬಳಿಯ ದಲಿತರ ಮನೆಯೊಂದರಿಂದ ದನ ಕದ್ದು ಟೆಂಪೋಗೆ ತುಂಬುತ್ತಿದ್ದ ಗೋವುಕಳ್ಳರನ್ನು ತಡೆಯಲು ಹೋದ ಮನೆಯವರಿಗೆ ತಲವಾರ್‌ಗಳನ್ನು ತೋರಿಸಿ ಬೆದರಿಸಿ ಪರಾರಿಯಾಗಿದ್ದರು. ಈ ಬಗ್ಗೆ ಡಿವೈಎಫ್‌ಐ ನಾಯಕತ್ವದಲ್ಲಿ ಪೊಲೀಸ್ ಕಂಪ್ಲೈಂಟು ಕೂಡ ದಾಖಲಾಗಿತ್ತು. ಈ ಸಂದರ್ಭದಲ್ಲಿ ಇದೇ ಭಜರಂಗಿಗಳು ಸುಮಾರು ಒಂದು ಸಾವಿರ ಸಂಖ್ಯೆಯಲ್ಲಿ ಜಮಾಯಿಸಿ ಕಳ್ಳರನ್ನು ಹಿಡಿಯಬೇಕೆಂದು 'ಉಗ್ರ' ಪ್ರತಿಭಟನೆ ಮಾಡಿದ ಪ್ರಹಸನವೂ ನಡೆದಿತ್ತು.

ಒಂದುವಾರದ ಹಿಂದೆ ನಡೆದ ಘಟನೆ ಮತ್ತಷ್ಟು ಕುತೂಹಲಕರವಾಗಿದೆ. ಪಣಂಬೂರಿನ ಬಳಿ ರಿಕ್ಷಾ ಚಾಲಕರು ಗೋವುಗಳನ್ನು ಕದ್ದು ಸಾಗಿಸುತ್ತಿದ್ದ ವಾಹನವನ್ನು ತಡೆಗಟ್ಟಿದಾಗ ಅವರಿಗೆ ಆಶ್ಚರ್ಯ ಕಾದಿತ್ತು, ಆ ಕಳ್ಳರು ಇದೇ ಭಜರಂಗಿ ಕಾರ್ಯಕರ್ತರಾಗಿದ್ದರು. ಆದರೂ ಪಟ್ಟು ಬಿಡದ ರಿಕ್ಷಾ ಚಾಲಕರ ಗುಂಪು ಆ ಖೂಳರನ್ನು ಪಣಂಬೂರು ಠಾಣೆಗೆ ಒಪ್ಪಿಸಿದರು. ಕೂಡಲೆ ಬಿಜೆಪಿಯ ಸಂಸದ ನವೀನ್ ಕುಮಾರ್ ಕಟೀಲು ರಂಗಪ್ರವೇಶ ಮಾಡಿದ. ಪೊಲೀಸರ ಮೇಲೆ ಇನ್ನಿಲ್ಲದ ಒತ್ತಡ ತಂದು ತಮ್ಮವರನ್ನು ಬಿಡಿಸಿಕೊಳ್ಳುವಲ್ಲಿ ಯಶಸ್ವಿಯಾದ.

ಇವು ತೀರಾ ಅಪರೂಪದ ಘಟನೆಗಳೇನಲ್ಲ. ಅಪರೂಪಕ್ಕೊಮ್ಮೆ ಬಹಿರಂಗವಾಗುತ್ತಿರುವ ಘಟನೆಗಳಷ್ಟೆ. ಸಿದ್ದರಾಮಯ್ಯ ಸಿಎಂ ಆದನಂತರ ಹತಾಶಗೊಂಡಿರುವ ಕೇಸರಿ ಕೂಟ ಕೋಮುದಳ್ಳುರಿ ಹಚ್ಚಲು ಭಿನ್ನವಿಭಿನ್ನ ಮಾರ್ಗಗಳ ಆವಿಷ್ಕಾರದಲ್ಲಿದ್ದಾರೆ. ಕಾಂಗ್ರೆಸ್ ಸರ್ಕಾರ ಪೊಲೀಸ್ ವ್ಯವಸ್ಥೆಯನ್ನು ಬಿಗಿಗೊಳಿಸದೇ ಹೋದರೆ ಅನಾಹುತ ತಪ್ಪಿದ್ದಲ್ಲ.

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ಗೋವು ಕಳ್ಳರ ಚೀರಾಟ

ಇದೇ ಆಗಸ್ಟ್ ಮೊದಲ ವಾರದಲ್ಲಿ ವಿಶ್ವಹಿಂದೂ ಪರಿಷತ್ ಮತ್ತು ಭಜರಂಗದಳ ಸಂಘಟನೆಗಳು ಗೋವುಗಳ "ಕಳ್ಳತನ"ದ ಬಗ್ಗೆ ಮಂಗಳೂರಿನಲ್ಲಿ ಪತ್ರಿಕಾಗೋಷ್ಠಿಯೊಂದನ್ನು ನಡೆಸಿದವು. ಈ ಗೋಮುಖ ವ್ಯಾಘ್ರಗಳು ಮುಂದಿಟ್ಟ ಬೇಡಿಕೆಗಳು ಹೀಗಿವೆ.

- ಗೋವುಗಳನ್ನು ಕಳೆದುಕೊಂಡವರಿಗೆ ತಲಾ 50,000 ರೂಪಾಯಿ ಪರಿಹಾರ ಕೊಡಬೇಕು.
- ಗೋವುಗಳ ಮಾಲಿಕರು ಗೋರಕ್ಷಣೆಗಾಗಿ ರೈಫಲ್ ಇಟ್ಟುಕೊಳ್ಳಲು ಪರವಾನಗಿ ನೀಡಬೇಕು.
- ಕಳ್ಳತನ ತಡೆಗಟ್ಟಲು "ಗ್ರಾಮ-ಗೋರಕ್ಷಣಾ ದಳ" ಗಳನ್ನು ಸ್ಥಾಪಿಸಬೇಕು.

ಈ ಸಂದರ್ಭದಲ್ಲಿ ವಿಎಚ್‌ಪಿ ಅಧ್ಯಕ್ಷ ಎಂಬಿ ಪುರಾಣಿಕ್ ಹೇಳಿದ ವಿಷಯ ಮತ್ತಷ್ಟು ಅರ್ಥಗರ್ಭಿತವಾಗಿದ್ದವು. ಗೋವು ಕಳ್ಳತನದ ವಿಷಯವಾಗಿ ಕಳೆದ ಸಲ ಕೋಮುಗಲಭೆ ನಡೆದಿದೆ; ಆದ್ದರಿಂದ ಪೊಲೀಸರು ಹೆಚ್ಚಿನ ಜಾಗ್ರತೆ ವಹಿಸಿ ಕಳ್ಳರನ್ನು ಹಿಡಿಯಬೇಕು ಎಂಬುದು ಪುರಾಣಿಕನ ಹಿತವಚನ.

ಇತ್ತೀಚೆಗೆ ನಡೆದ ಬಹಿರಂಗ ಸಭೆಯೊಂದರಲ್ಲಿ ಭಜರಂಗದಳದ ಪ್ರಾಂತೀಯ ಸಂಚಾಲಕ ಮಂಡ್ಯ ಮಂಜುನಾಥ್ ಆಡಿದ ಮಾತುಗಳನ್ನು ಕೇಳಿ. 'ಹಿಂದೂ ಧರ್ಮ ನಮಗೆ ವಿಶೇಷವಾದ ಸಂಸ್ಕೃತಿ ಕೊಟ್ಟಿದೆ. ಅದೇ ಆಯುಧ ಪೂಜೆ. ಆದರೆ ಇತ್ತೀಚೆಗೆ ಆಯುಧ ಪೂಜೆಯ ಹೆಸರಿನಲ್ಲಿ ಟಿವಿ, ಫ್ರಿಡ್ಜ್‌ಗಳಿಗೆ ಪೂಜೆ ಮಾಡುವುದು ನಮ್ಮವರಿಗೆ ರೂಢಿಯಾಗುತ್ತಿದೆ. ಇದು ನಮ್ಮ ಸಂಸ್ಕೃತಿಯಲ್ಲ; ಹಿಂದೂಗಳು ನಿಜವಾದ ಆಯುಧಗಳನ್ನು ಇಟ್ಟುಕೊಳ್ಳಬೇಕು. ನಿಜವಾದ ಆಯುಧಗಳನ್ನೇ ಪೂಜೆ ಮಾಡಬೇಕು' ಎಂದು ಅಪ್ಪಣೆ ಕೊಡಿಸಿದ್ದ.

ಇಷ್ಟೆಲ್ಲಾ ನಾಟಕೀಯ ವಿದ್ಯಮಾನಗಳು ನಡೆಯುತ್ತಿರುವುದು ಯಾತಕ್ಕಾಗಿ? ಇದನ್ನು ಅರ್ಥಮಾಡಿಕೊಳ್ಳಲು ಇತ್ತೀಚೆಗೆ ಸೆಂಟ್ರಲ್ ಇಂಟೆಲಿಜೆನ್ಸ್‌ನವರು ತಯಾರಿಸಿದ ವರದಿಯ ಬಗ್ಗೆ ತಿಳಿದುಕೊಳ್ಳುವುದು ಸೂಕ್ತ.

ಮುಂಬರುವ ಲೋಕಸಭಾ ಚುನಾವಣೆಯ ವೇಳೆಗೆ ಸಂಘಪರಿವಾರದವರು ಗೋವುಗಳ ಕಳ್ಳತನದ ಬಗ್ಗೆ ಭಾರೀ ಕೋಮು ಗಲಭೆಗಳನ್ನು ಹುಟ್ಟುಹಾಕಲು ಸಿದ್ಧತೆ ನಡೆಸುತ್ತಿದ್ದಾರೆಂಬ ಆತಂಕಕಾರಿ ಸುದ್ದಿಯನ್ನು ಇಂಟೆಲಿಜೆನ್ಸ್‌ನವರು ಕಳಿಸಿಕೊಟ್ಟಿದ್ದಾರಂತೆ. ಗೋವುಗಳ ಕಳ್ಳತನ ಹೆಚ್ಚುತ್ತಿರುವುದನ್ನೂ, ಇದನ್ನೇ ಅಜೆಂಡಾ ಮಾಡಿಕೊಂಡು ಚೆಡ್ಡಿಗಳು ಅರಚಾಡುತ್ತಿರುವುದನ್ನೂ ಇದೇ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕು.

ಕರುಣಾಕರ, ಪ್ರಕಾಶ, ಈಶ್ವರ ಮುಂತಾದವರು ಈ ಷಡ್ಯಂತ್ರದ ಕಾಲಾಳುಗಳಷ್ಟೆ.

ಹೀಗೊಂದು 'ಡೈವರ್ಸ್' ಕತೆ



ಸಣ್ಣ ಕಥೆ

ಬೆಂಗಳೂರಿನಲ್ಲಿ ವಾಸಿಸುತಿದ್ದ ವಯೋವೃದ್ಧರೊಬ್ಬರು ಒಂದು ದಿನ ನ್ಯೂಯಾರ್ಕ್ ನಗರದಲ್ಲಿ ಕೆಲಸ ಮಾಡುತ್ತಿದ್ದ ತಮ್ಮ ಮಗನಿಗೆ ಫೋನ್ ಮಾಡಿ "ನೋಡು ಈ ಸುದ್ದಿಯನ್ನು ನಿನಗೆ ಹೇಳಲು ಮನಸ್ಸು ಬರುತ್ತಿಲ್ಲ, ಆದರೆ ವಿಧಿ ಇಲ್ಲ, ಹೇಳಲೇಬೇಕಿದೆ. ನಾನು ನಿನ್ನ ಅಮ್ಮನಿಂದ ಡೈವೊರ್ಸ್ ಪಡೆಯುತ್ತಿದ್ದೇನೆ. 35 ವರ್ಷಗಳಿಂದ ಅವಳ ಕಾಟ ಅನುಭವಿಸಿ ನನಗೆ ಸಾಕುಸಾಕಾಗಿದೆ" ಎಂದರು.

"ಅಪ್ಪಾ, ಏನಂದೆ?" ಎಂದು ಮಗ ಅತ್ತ ಕಡೆಯಿಂದ ಅರಚಿದ.

"ನಮ್ಮಿಬ್ಬರಿಗೂ ಈಗ ಒಬ್ಬರನ್ನೊಬ್ಬರ ಮುಖ ಕಂಡರೂ ಆಗಲ್ಲ, ಇದರ ಬಗ್ಗೆ ಮಾತಾಡೋಕೂ ನನಗೆ ಮನಸ್ಸಿಲ್ಲ, ಈ ವಿಷಯಾನ ಹಾಂಗ್ ಕಾಂಗ್‌ನಲ್ಲಿರುವ ನಿನ್ನ ತಂಗಿಗೆ ನೀನೇ ತಿಳಿಸು" ಎಂದರು ತಂದೆ.

ಗಾಬರಿಗೊಂಡ ಮಗ ಕೂಡಲೇ ತನ್ನ ತಂಗಿಗೆ ಫೋನ್ ಮಾಡಿ ವಿಚಾರ ತಿಳಿಸಿದ.

ಸುದ್ದಿ ಕೇಳಿ ಸ್ಫೋಟಗೊಂಡ ತಂಗಿ "ಏನಂತೇ? ಡೈವೊರ್ಸಾ? ಅವರಿಬ್ಬರು ಅದು ಹೇಗೆ ಡೈವೊರ್ಸ್ ಮಾಡ್ತಾರೆ ಅಂತ ನಾನು ನೋಡ್ತೀನಿ" ಎಂದಳು.

ಕೂಡಲೇ ಆಕೆ ಬೆಂಗಳೂರಿನಲ್ಲಿರುವ ತನ್ನ ಅಪ್ಪನಿಗೆ ಫೋನ್ ಮಾಡಿ "ಏನಿದೆಲ್ಲ ಡೈವೊರ್ಸ್ ಮಾತು? ನಾನು ನಾಳೆನೇ ಅಲ್ಲಿಗೆ ಬರ್ತೀನಿ. ಅಣ್ಣನಿಗೂ ಕೂಡಲೆ ಬರೋದಿಕ್ಕೆ ಹೇಳ್ತೀನಿ. ನಾನು ಅಲ್ಲಿಗೆ ಬರೋತನಕ ನೀವಿಬ್ಬರು ಏನನ್ನೂ ಮಾಡಬಾರದು ಆಯ್ತಾ? ನಾನು ಹೇಳಿದ್ದು ಕೇಳಿಸ್ತಾ?" ಎಂದು ರೇಗಿ ಫೋನನ್ನು ಇಟ್ಟಳು.

ಇತ್ತ ಕಡೆಯೂ ಫೋನ್ ಇಟ್ಟ ತಂದೆ "ಎಲ್ಲಾ ಓಕೆ ಆಯಿತು. ನಮ್ಮ ಇಬ್ಬರು ಮಕ್ಕಳೂ ನಮ್ಮ 35ನೇ ವೆಡ್ಡಿಂಗ್ ಆನಿವರ್ಸರಿಗೆ ತಮ್ಮ ಕೈಯಿಂದಲೇ ಪ್ಲೇನ್ ಟಿಕೆಟ್ ಖರೀದಿಸಿ ಹಾಜರಾಗುತಿದ್ದಾರೆ" ಎಂದು ತನ್ನ ಹೆಂಡತಿಗೆ ಹೇಳಿದರು!

ಓದುಗರಲ್ಲಿ ಒಂದು ಮನವಿ...

'ನಮಗೆ ಪತ್ರಿಕೆ ಸರಿಯಾಗಿ ಸಿಗುತ್ತಿಲ್ಲ' ಎಂಬ ಕೆಲ ಓದುಗರ ಆಕ್ಷೇಪಗಳು ಆಗಾಗ್ಗೆ ನಮ್ಮ ಕಚೇರಿತನಕ ತಲುಪುತ್ತಿದೆ. ಲಂಕೇಶ್‌ಗೆ ಎಲ್ಲಾ ಜಿಲ್ಲಾ, ತಾಲ್ಲೂಕು ಹಾಗೂ ಪುಟ್ಟ ಟೌನ್ ಸೆಂಟರ್‌ಗಳೂ ಸೇರಿದಂತೆ ಇನ್ನೂರೈವತ್ತಕ್ಕೂ ಹೆಚ್ಚು ವಿತರಣಾ ಏಜೆಂಟರಿದ್ದಾರೆ. ಅಂತಹ ಸ್ಥಳಗಳಲ್ಲಿ ಓದುಗರಿಗೆ ಪತ್ರಿಕೆ ಸುಲಭ ವಾಗಿ ಲಭ್ಯವಿದೆ. ಆದರೆ ಪೇಟೆಗಳಿಂದ ಕೊಂಚ ದೂರವಿರು ವವರಿಗೆ ಹಾಗೂ ಆಗಾಗ್ಗೆ ಪೇಟೆಯತ್ತ ಬರಲಾಗದ, ಕೊಂಚ ಇಂಟೀರಿಯರ್ ಏರಿಯಾಗಳಲ್ಲಿ ಇರುವವರಿಗೆ ನಿಯಮಿತವಾಗಿ 'ಲಂಕೇಶ್' ಪಡೆಯುವುದು ಸ್ವಲ್ಪ ಕಷ್ಟವಾಗುತ್ತಿರಲೂಬಹುದು.

ಇದಲ್ಲದೆ ಅನೇಕ ಊರುಗಳಲ್ಲಿ ಬಸ್ ಸ್ಟ್ಯಾಂಡ್ ನವೀಕರಣ, ಹೊಸ ನಿಲ್ದಾಣಗಳ ನಿರ್ಮಾಣದಿಂದಾಗಿ ಅಲ್ಲಿದ್ದ ಪತ್ರಿಕಾ ಸ್ಟಾಲ್‌ಗಳೂ ಕಾಣೆಯಾಗಿವೆ. ಇದರಿಂದಾಗಿ ಕೆಲ ಪುಟ್ಟ ಪಟ್ಟಣಗಳಲ್ಲೂ ತಾತ್ಕಾಲಿಕವಾಗಿ 'ಲಂಕೇಶ್' ವಿತರಣೆಗೆ ಅಡಚಣೆಯಾಗುತ್ತಿದೆ.

ಇದಕ್ಕಿರುವ ಸದ್ಯದ ಪರಿಹಾರವೆಂದರೆ ಪತ್ರಿಕೆಯ ಚಂದಾದಾರರಾಗುವುದು.

ಚಂದಾ ವಿವರ

ವಾರ್ಷಿಕ	ರೂ. 700
ಒಂದೂವರೆ ವರ್ಷಕ್ಕೆ	ರೂ. 1000
ಎರಡು ವರ್ಷಕ್ಕೆ	ರೂ. 1400


- ಹೀಗೆ ಚಂದಾ ಹಣವನ್ನು 'ಲಂಕೇಶ್ ಮೀಡಿಯಾ' ಹೆಸರಲ್ಲಿ ಡಿಡಿ/ಚೆಕ್/ಎಂಓ ಮೂಲಕ ಕಳುಹಿಸಿದರೆ 'ಲಂಕೇಶ್' ಅನ್ನು ನಾವೇ ಕಚೇರಿಯಿಂದ ನೇರವಾಗಿ ಓದುಗರಿಗೆ ಅಂಚೆ ಮೂಲಕ ತಲುಪಿಸುತ್ತೇವೆ. ನಿತ್ಯದ ಕೆಲಸಗಳ ಗಡಿಬಿಡಿಯಲ್ಲಿ ಮ್ಯಾಗಜಿನ್ ಸ್ಟಾಲ್ ಹುಡುಕಿಕೊಂಡು ಹೋಗಲಾಗದ ಓದುಗರೂ ಈ ಸೌಲಭ್ಯ ಬಳಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ ವ್ಯವಸ್ಥಾಪಕರು: **9880302817 080-26676427** ಅನ್ನು ಸಂಪರ್ಕಿಸಿ. ಚಂದಾ ಹಣ ಕಳುಹಿಸುವಾಗ ನಿಮ್ಮ ಹೆಸರು, ವಿಳಾಸ, ಫೋನ್ ನಂಬರ್ ಅನ್ನು ಸ್ಪಷ್ಟವಾಗಿ ಬರೆಯಿರಿ.

- ವ್ಯವಸ್ಥಾಪಕರು, ಲಂಕೇಶ್ ಮೀಡಿಯಾ



ಆಂದೋಲನದಲ್ಲಿ ಜನರ ಆಕ್ರೋಶ





ಪಾಪು ಪ್ರತಿಭಟನೆ

ಹುಬ್ಬಳ್ಳಿ

ಜಿಮ್‌ಖಾನಾ ಮೈದಾನ ಗ್ರೌಂಡ್ ಬಚಾವ್ರೋ ಆಂದೋಲನ

ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ಬಾವುಟ ಹಾರಿಸಬೇಕೆಂಬ ವಾದವನ್ನು ಮುಂದಿಟ್ಟುಕೊಂಡು ಬಿಜೆಪಿ ನಾಯಕರು ದಶಕಗಟ್ಟಲೆ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಂಡಿದ್ದು ಈಗ ಹಳೆಯ ಸುದ್ದಿ. ಇದೀಗ ಹುಬ್ಬಳ್ಳಿಯಲ್ಲಿ ಮತ್ತೊಂದು ಮೈದಾನ ಬಚಾವ್ರೋ ಚಳವಳಿ ಹುಟ್ಟಿಕೊಂಡಿದೆ. ಮೈದಾನದ ಹೆಸರಿನಲ್ಲಿ ಕೋಮು ಗಲಭೆಗಳನ್ನು ಸೃಷ್ಟಿಸಿದ ಶೆಟ್ಟರ್ ಕೂಟ ಸಾರ್ವಜನಿಕ ಮೈದಾನವೊಂದನ್ನು ನುಂಗಲು ಹೋಗಿ ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದಿರುವುದೇ ಇಂದಿನ ವಿಪರ್ಯಾಸ.

ಈ ಮೈದಾನ ಕಳ್ಳರ ನಾಯಕ ಮಾಜಿ ಸಿಎಂ ಜಗದೀಶ್ ಶೆಟ್ಟರ್ ಮನೆಮುಂದೆ ಹಿರಿಯ ಸಾಹಿತಿ ಪಾಟೀಲ ಪುಟ್ಟಪ್ಪ ನೇತೃತ್ವದಲ್ಲಿ ನೂರಾರು ಮಂದಿ ಧರಣಿ ನಡೆಸಿದ್ದಾರೆ. 'ಹುಬ್ಬಳ್ಳಿ ಸ್ಪೋರ್ಟ್ಸ್ ಮೈದಾನ ಬಚಾವ್ರೋ ಸಮಿತಿ' ಎಂಬ ಸಂಘಟನೆಯೊಂದು ಹುಟ್ಟಿಕೊಂಡಿದೆ.

ಅದು ಹುಬ್ಬಳ್ಳಿ ನಗರದ ದೇಶಪಾಂಡೆ ನಗರದಲ್ಲಿರುವ ಜಿಮ್‌ಖಾನಾ ಮೈದಾನ ಎಂಬ ಹೆಸರಿನ 8 ಎಕರೆ ವಿಶಾಲವಾದ ಮೈದಾನ. ಈ ಮೈದಾನದಲ್ಲಿಯೇ ಪ್ರತಿ ವರ್ಷವೂ ಶಾಲಾ, ಕಾಲೇಜು ಮಟ್ಟದ ಹಲವು ಕ್ರೀಡಾಕೂಟಗಳು ನಡೆಯುತ್ತವೆ. ವಲಯ ಮಟ್ಟದ ಕ್ರಿಕೆಟ್ ನಡೆಯುವುದು ಇಲ್ಲಿಯೇ. ಸುನೀಲ್ ಜೋಶಿ, ಅವಿನಾಶ್ ವೈದ್ಯ ಮೊದಲಾದ ಕ್ರೀಡಾಪಟುಗಳು ಬೆಳೆದದ್ದು ಇದೇ ಮೈದಾನದಲ್ಲೇ.

ನಗರದ ಒತ್ತಡದ ಬದುಕಿನಲ್ಲಿ ಬದುಕುತ್ತಿರುವ ಜನರು ವಾಕಿಂಗ್ ಮಾಡಲು ಇದೇ ಮೈದಾನವನ್ನು ಬಳಸುತ್ತಿದ್ದರು. ಆದರೆ ಇತ್ತೀಚೆಗೆ ಈ ಮೈದಾನಕ್ಕೆ 12 ಅಡಿ ಎತ್ತರದ ಕಾಂಪೌಂಡ್ ನಿರ್ಮಾಣ ಮಾಡಿ ಅದಕ್ಕೊಂದು ಗೇಟ್ ಹಾಕಿಸಿ, ಅದಕ್ಕೊಬ್ಬ ಸೆಕ್ಯೂರಿಟಿ ಗಾರ್ಡ್ ಇಟ್ಟು ವಾಕಿಂಗ್ ಹೋದವರನ್ನು ಮೈದಾನ ಪ್ರವೇಶಿಸದಂತೆ ನಿರ್ಬಂಧಿಸಲು ಪ್ರಾರಂಭಿಸಿದರು. ಅನಾದಿಕಾಲದಿಂದ ಇದ್ದ ತಮ್ಮ ವಾಕಿಂಗ್ ಹಕ್ಕನ್ನು ನಿರ್ಬಂಧಿಸಿದ ಕ್ಲಬ್‌ನ ಕ್ರಮದಿಂದ ಕೆರಳಿದ ಜನತೆ ಪ್ರತಿಭಟನೆಯಲ್ಲಿ ತೊಡಗಿಕೊಂಡರು. 'ಕೆರೆ ನೀರಿಗೆ ದೊಣ್ಣೆ ನಾಯಕನ ಅಪ್ಪಣೆ' ಎಂಬಂತೆ ಇದ್ದಕ್ಕಿದ್ದಂತೆ ಹುಟ್ಟಿಕೊಂಡ ಕ್ಲಬ್‌ನ ಪೂರ್ವಾಪರ ಕೆದಕಲು ಹೊರಟವರಿಗೆ ಆಘಾತ ಕಾದಿತ್ತು.

ಈ ಪುಣ್ಯಕಾರ್ಯ ಮಾಡಿದ ಖಾಸಗಿ ರಿಕ್ರಿಯೇಷನ್ ಕ್ಲಬ್‌ಗೆ ಮಾಜಿ ಸಿಎಂ ಜಗದೀಶ್ ಶೆಟ್ಟರನೇ ಗೌರವಾಧ್ಯಕ್ಷ! ಸಂಸದ ಪ್ರಹ್ಲಾದ್ ಜೋಶಿ, ಅನಂತ್‌ಕುಮಾರ್ ಸಹೋದರ ನಂದಕುಮಾರ್ ಮುಂತಾದ ಚಿಡ್ಡಿಚತುರರು ಈ ಮನೆಹಾಳು ಕ್ಲಬ್‌ನ ಅಗ್ರಪಂಕ್ತಿಯಲ್ಲಿದ್ದಾರೆ.

ವಿವಾದಗ್ರಸ್ತ ಮೈದಾನದ ಹಿಂದಿನ ಕಥೆ

ಇಲ್ಲಿಗೆ 98 ವರ್ಷಗಳ ಹಿಂದೆ 1915ರಲ್ಲಿ ಬ್ರಿಟಿಷ್ ಆಳ್ವಿಕೆಯಡಿ ಅಂದಿನ ಮುಂಬೈ ಸರ್ಕಾರ ಇಲ್ಲಿನ ನಾಗಶೆಟ್ಟಿ ಕೊಪ್ಪ ಗ್ರಾಮದ ಸರ್ವೆ ನಂ.63ರಲ್ಲಿ ಎಂಟು ಎಕರೆ ನಾಲ್ಕು ಗುಂಟೆ ಜಮೀನನ್ನು ಹುಬ್ಬಳ್ಳಿಯ ಕ್ರೀಡಾಪಟುಗಳ ಬಳಕೆಗಾಗಿ ಮಾತ್ರ ಎಂದು ಸ್ಪಷ್ಟವಾಗಿ ನಮೂದಿಸಿ ಕರ್ನಾಟಕ ಜಿಮ್‌ಖಾನಾ ಅಸೋಸಿಯೇಷನ್ ಹೆಸರಿಗೆ ಮಂಜೂರು ಮಾಡಿತ್ತು. ಜೊತೆಗೆ ಮೈದಾನವನ್ನು ಯಾವುದೇ ಟ್ರಸ್ಟ್, ವ್ಯಕ್ತಿ ಅಥವಾ ಸಂಸ್ಥೆಗಳಿಗೆ ಪರಭಾರೆ ಮಾಡಬಾರದೆಂದು ಸ್ಪಷ್ಟವಾದ ಕಟ್ಟಳೆ ವಿಧಿಸಲಾಗಿತ್ತು. ನಂತರ 1971ರಲ್ಲಿ ಮೈದಾನದ ಒಂದು ಭಾಗದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿ 'ಸವಾಯಿ ಗಂಧರ್ವ ಹಾಲ್' ನಿರ್ಮಿಸಿದ್ದರಿಂದ ಆಟದ ಮೈದಾನಕ್ಕೆ 7 ಎಕರೆ 14 ಗುಂಟೆ ಜಾಗ ಉಳಿದಿದೆ.

ಕರ್ನಾಟಕ ಜಿಮ್‌ಖಾನಾ ಅಸೋಸಿಯೇಷನ್‌ನಲ್ಲಿ ಸೇರಿದ್ದ ಮೈದಾನ ಕಳ್ಳರ ಕೂಟ ಈ ಮೈದಾನವನ್ನು ತಮ್ಮ ಖಾಸಗಿ ಮೋಜು-ಮಸ್ತಿಯ ಕ್ಲಬ್ ಆಗಿ ಪರಿವರ್ತಿಸಲು ಹೊಂಚುಹಾಕಿ ಕುಳಿತಿತ್ತು. ಯಡ್ಡಿಯ ಅಧಿಕಾರಾವಧಿಯಲ್ಲಿ, 2009ರ ಸೆಪ್ಟೆಂಬರ್ 5 ರಂದು ಧಾರವಾಡದ ಅಂದಿನ ಜಿಲ್ಲಾಧಿಕಾರಿಯಾಗಿದ್ದ ದರ್ಪಣ ಜೈನ್ ಅವರಿಗೆ ಕ್ಲಬ್‌ವೊಂದನ್ನು ನಿರ್ಮಿಸಲು ಅವಕಾಶ ಮಾಡಿಕೊಡಿ ಎಂದು ಈ ಕೂಟ ಮನವಿ ಸಲ್ಲಿಸಿತು. ಮೈದಾನದ ಬಳಕೆಗೆ ಸಂಬಂಧಿಸಿ ವಿಧಿಸಿದ್ದ ಷರತ್ತುಗಳನ್ನು ಗಾಳಿಗೆ ತೂರಿದ ಡಿಸಿ ಜಗದೀಶ್ ಶೆಟ್ಟರ್ ಲಾಬಿಗೆ ಪೂರಕವಾಗಿ 2009 ಅಕ್ಟೋಬರ್ 28ರಂದು ಕ್ಲಬ್ ಸ್ಥಾಪನೆಗೆ ಅನುಮತಿ ಕೊಟ್ಟರು.

ಈಗ ಈ ಅಂಗಳದಲ್ಲಿ 20 ಕೋಟಿ ವೆಚ್ಚದಲ್ಲಿ ಕ್ರಿಕೆಟ್ ಮೈದಾನ, ಲಾನ್ ಟೆನಿಸ್ ಕೋರ್ಟ್, ಈಜುಕೊಳ, ಬ್ಯಾಡ್ಮಿಂಟನ್ ಕೋರ್ಟ್, ಜಿಮ್ನಾಶಿಯಂ, ಬಿಲಿಯರ್ಡ್ಸ್, ಟೇಬಲ್ ಟೆನಿಸ್, ವಿಸಿಟಿಂಗ್ ಲಾಂಜ್, ಬಾರ್ ಲಾಂಜ್, ರೆಸ್ಟೋರೆಂಟ್, ಮಿನಿ ಪಾರ್ಟಿಹಾಲ್, ಸೆಮಿನಾರ್ ಹಾಲ್, ಡಿಲಕ್ಸ್ ಸ್ಯೂಟ್, ಗ್ರಂಥಾಲಯ, ಕಾಫಿ ಶಾಪ್ ನಿರ್ಮಿಸುತ್ತಾರಂತೆ. ಈಗಾಗಲೇ 75% ಕಾಮಗಾರಿ ಮುಗಿದಿದೆ. ಎಲ್ಲಾ ಪಕ್ಷಗಳ ಮುಖಂಡರು ಇದರ ಸದಸ್ಯರಾಗಿದ್ದರೂ ಕೂಡ ಮೈದಾನವನ್ನು ಮುಳುಗಿಸಿದ ಖ್ಯಾತಿ ಬಿಜೆಪಿ ಸರ್ಕಾರಕ್ಕೆ ಸಲ್ಲಬೇಕು. ರಿಕ್ರಿಯೇಷನ್ ಕ್ಲಬ್ ಅಭಿವೃದ್ಧಿ ಸಮಿತಿ ಅಧ್ಯಕ್ಷ ರಮೇಶ್ ಶೆಟ್ಟಿಯ ಮಾತೇನೆಂದರೆ '4 ಲಕ್ಷ ರೂಪಾಯಿ ಕೊಡು ಮೈದಾನದ ಒಳಗೆ ಬಾ, ಮೋಜು ಮಸ್ತಿ ಏನು ಬೇಕಾದರೂ ಸಿಗುತ್ತೆ.' ಇದು ಇಂದಿನ ನಮ್ಮ ಕ್ರೀಡಾ ಮೈದಾನದ ಕಥೆ!

ಮೈದಾನ ಕಳ್ಳರು ಧಾಂಗುಡಿಯಿಡುವ ಮೊದಲು ಕೆಜಿಎ ಸದಸ್ಯತ್ವ ಪಡೆಯಲು ಕೇವಲ 15 ರೂಪಾಯಿ ನಿಗದಿಯಾಗಿತ್ತು. ಯಾವಾಗ ಶೆಟ್ಟರ್ ಕ್ಲಬ್ ಗೌರವಾಧ್ಯಕ್ಷರಾಗಿ, ಡಾ. ಸುಭಾಷ್ ಜೋಷಿ ಅಧ್ಯಕ್ಷನಾಗಿ, ಸುನೀಲ್ ಕೊಠಾರಿ ಕಾರ್ಯದರ್ಶಿಯಾಗಿ, ಇವರ ಪಟಾಲಂನವರೇ ಪದಾಧಿಕಾರಿಗಳಾಗಿ ಪ್ರತಿಷ್ಠಾಪಿಸಲ್ಪಟ್ಟರೋ ಅಂದಿನಿಂದ ಕ್ಲಬ್‌ನ ಸದಸ್ಯತ್ವ 4 ಲಕ್ಷ ರೂಪಾಯಿಗಳಿಗೆ ಏರಿಕೆಯಾಗಿದೆ ಯೆಂದರೆ ಯಾರೂ ನಂಬಲಿಕ್ಕಿಲ್ಲ. ಹೀಗೆ ಸಾರ್ವಜನಿಕ ಮೈದಾನವೊಂದು ಶ್ರೀಮಂತರ ಮೋಜು ಮಸ್ತಿಯ ಕ್ಲಬ್ ಆಗಿ ರೂಪಾಂತರಗೊಳ್ಳಲು ರಂಗ ಸಜ್ಜಾಗಿಬಿಟ್ಟಿದೆ.

ಇತರ ಸದಸ್ಯರಲ್ಲಿ ಸಂಸದ ಅನಂತಕುಮಾರ್ ಸಹೋದರ ಎಚ್.ಎನ್. ನಂದಕುಮಾರ್, ಮಾಜಿ ಮೇಯರ್ ವೀರಣ್ಣ ಸವಡಿ, ಸಂಸದ ಜೋಶಿ ಸಹೋದರ ಗೋವಿಂದ ಜೋಶಿ, ಶೆಟ್ಟರ್ ಸಹೋದರ ಪ್ರದೀಪ ಶೆಟ್ಟರ್ ಮುಂತಾದವರಿದ್ದಾರೆ.

ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಮೇಲಿನ ಚಿಡ್ಡಿಚತುರರ ಜೊತೆಗೆ ವಿಧಾನಪರಿಷತ್ ಸದಸ್ಯ ಬಸವರಾಜ ಹೊರಟ್ಟಿ, ಅವರ ಪುತ್ರ ವಸಂತ ಹೊರಟ್ಟಿ, ಲೋಕ ಶಿಕ್ಷಣ ಟ್ರಸ್ಟ್‌ನ ಸದಸ್ಯ ರಾಜಾ ದೇಸಾಯಿ, ಕಾಂಗ್ರೆಸ್ ಮುಖಂಡ ಮಹೇಂದ್ರ ಸಿಂಘಿ (ಹೋರಾಟ ಕಾವೇರಿದ ನಂತರ ರಾಜೀನಾಮೆ ನೀಡಿದ್ದಾರೆ), ಪಾಪು ಮೊಮ್ಮಗಳಾದ ವಿಜಯ ಮಾಲಾ (ಸದ್ಯ ಅಹಮದಾಬಾದ್‌ನಲ್ಲಿದ್ದಾರೆ) ಮುಂತಾದವರು ಕ್ಲಬ್‌ನ ಸದಸ್ಯತ್ವ ಪಡೆಯುವುದನ್ನು ತಮ್ಮ ಪ್ರತಿಷ್ಠೆಯ ವಿಷಯವೆಂಬಂತೆ, ನಾ ಮುಂದು ತಾ ಮುಂದು ಎಂದು ಜಿದ್ದಿಗೆ ಬಿದ್ದು ಸದಸ್ಯತ್ವ ಪಡೆದಿದ್ದಾರೆ. ಇವರೇನು ಅನ್‌ಪಡ್‌ಗಳಲ್ಲ. ಈ ಕ್ಲಬ್‌ನ ಸದಸ್ಯತ್ವ ಪಡೆಯುವ ಮೊದಲು ಇದು ಸರಕಾರಿ ಮೈದಾನ ಎಂದು ತಿಳಿದುಕೊಳ್ಳುವ ತಾಳ್ಮೆಯಾದರೂ ಇರಬೇಕಿತ್ತಲ್ಲವೇ?

ಬೆದರಿಕೆ ತಂತ್ರ

ಸುಶಿಕ್ಷಿತರಿಂದಲೇ ಆರಿಸಿ ಬರುತ್ತಿದ್ದ ಜಗದೀಶ್ ಶೆಟ್ಟರ್ ಈ ಕಾನೂನುಬಾಹಿರ ಭೂಕಬಳಿಕೆಗೆ ಅಂಟಿಕೊಂಡು ಈಗ ಜನರ ಕೆಂಗಣ್ಣಿಗೆ ಗುರಿಯಾಗಿದ್ದಾರೆ. ಇದರ ಪರಿಣಾಮ ಮುಂಬರುವ ಲೋಕಸಭಾ ಚುನಾವಣೆಯ ಮೇಲೆ ಬೀರಲಿದೆ. ಜನರ ಪ್ರತಿಭಟನೆಯನ್ನು ತುಳಿಯಲು ನಾನಾ ರೀತಿಯ ಕಸರತ್ತು ನಡೆಸಿರುವ ಶೆಟ್ಟರ್ ಹಾಗೂ ಜೋಶಿ ಗ್ಯಾಂಗ್ ಹೈಕೋರ್ಟ್‌ನಲ್ಲಿ ಸಾರ್ವಜನಿಕರು ತಮ್ಮ ವಿರುದ್ಧ ದಾವೆ ಹೂಡಬಹುದೆಂಬ ಭಯದಿಂದ ಕೇವಿಯೆಟ್ ದಾಖಲಿಸಿದ್ದಾರೆ. ಗ್ರೌಂಡ್ ಬಚಾವ್ರೋ ಆಂದೋಲನ ಸಮಿತಿಯವರಿಗೆ ಫೋನ್ ಬೆದರಿಕೆ ಕರೆಗಳು ಆರಂಭವಾಗಿವೆ. ಪೊಲೀಸರನ್ನು ಉಪಯೋಗಿಸಿಕೊಂಡು ಧರಣಿ, ಪ್ರತಿಭಟನೆ ಹತ್ತಿಕ್ಕುವ ಪ್ರಯತ್ನಕ್ಕೂ ಕೈಹಾಕಿದ್ದಾರೆ.

ಈಗಾಗಲೇ ವಿಮಾನ ನಿಲ್ದಾಣ ಜಾಗದ ಭೂ ಮಾರಾಟ ಹಗರಣ, ಆಶ್ರಯ ಯೋಜನೆ ಜಾಗದ ಹರಾಜು ಹಗರಣ ಹೀಗೆ ನಾನಾ ಹಗರಣಗಳು ಒಂದೊಂದಾಗಿ ಹೊರಬರುತ್ತಿವೆ. ಹಿಂದೆ ಡಿಸಿಯಾಗಿದ್ದ ದರ್ಪಣ ಜೈನ್, ಜಗದೀಶ್ ಶೆಟ್ಟರ್, ಪ್ರಹ್ಲಾದ ಜೋಷಿ ಇವರುಗಳ ಜಂಟಿ ಕೈವಾಡ ಎಲ್ಲದರಲ್ಲೂ ಕೆಲಸ ಮಾಡಿದೆ ಎಂಬ ಗುಮಾನಿ ಈಗ ನಿಜವಾಗುತ್ತಿದೆ. ಜನರು ಈ ಕಳ್ಳರ ವಿರುದ್ಧ ಪ್ರತಿಭಟನೆಗೆ ಇಳಿದಿದ್ದಾರೆ. ಈ ಜಿಮ್‌ಖಾನಾ ಮೈದಾನದ ವಿವಾದ ಮತ್ತೊಂದು 'ಈದ್ಗಾ ಮೈದಾನ' ವಿವಾದ ಆಗುವ ಮೊದಲು ಸಿಎಂ ಸಿದ್ದರಾಮಯ್ಯ, ಸಚಿವ ಸಂತೋಷ್ ಲಾಡ್ ಎಚ್ಚೆತ್ತುಕೊಂಡು ಸಾರ್ವಜನಿಕ ಸ್ವತ್ತನ್ನು ಉಳಿಸಲು ಸೂಕ್ತ ಕ್ರಮ ಕೈಗೊಂಡರೆ ಒಳ್ಳೆಯದು.

● ಹುಬ್ಬಳ್ಳಿಯಾಂವ್


ಇಂದಿರಾಗೆ ಅನಂತಮೂರ್ತಿ ಮೆಚ್ಚುಗೆ

ಮೊನ್ನೆ ಇದ್ದಕ್ಕಿದ್ದಂತೆ ಹಿರಿಯ ಲೇಖಕ ಯು.ಆರ್.ಅನಂತಮೂರ್ತಿಯವರು ನಮ್ಮ ಕ್ಯಾಪ್ಟನ್ ಗೌರಿಗೆ ಫೋನ್ ಮಾಡಿ "ನಿನ್ನ ಅಮ್ಮ ಬರೆದಿರೋ ಪುಸ್ತಕಾನ ಈಗ ತಾನೇ ಓದಿ ಮುಗಿಸಿದೆ. ತುಂಬಾ ಚೆನ್ನಾಗಿ ಬರೆದಿದ್ದಾರೆ ಕಣೆ" ಎಂದರು.

ಲಂಕೇಶ್ ಬಗ್ಗೆ ಅವರ ಪತ್ನಿ ಇಂದಿರಾ ಏನು ಬರೆದಿರಬಹುದು ಎಂಬ ಕುತೂಹಲದಿಂದ ಇಂದಿರಾ ಲಂಕೇಶ್ ಅವರು ಬರೆದಿರುವ 'ಹುಳಿಮಾವು ಮತ್ತು ನಾನು' ಪುಸ್ತಕವನ್ನು ಅನಂತಮೂರ್ತಿಯವರು ಇತ್ತೀಚೆಗೆ ಮಿತ್ರರೊಬ್ಬರ ಮೂಲಕ ತರಿಸಿಕೊಂಡಿದ್ದರಂತೆ. ಅದನ್ನು ಮುಗಿಸಿದ್ದಂತೆ ಅವರು ಈ ಫೋನ್ ಕರೆ ಮಾಡಿದ್ದರು.


"ನೀವೇ ಈ ಮಾತನ್ನು ಅಮ್ಮನಿಗೆ ಹೇಳಿದರೆ ಅವರಿಗೆ ಖುಷಿ, ಸಂತೋಷವಾಗುತ್ತದೆ" ಎಂದು ಗೌರಿ ಹೇಳಿದರು. "ಅವರ ಫೋನ್ ನಂಬರ್ ಇಲ್ಲ, ಕಳುಹಿಸು. ಅವರೊಂದಿಗೆ ಮಾತನಾಡುತ್ತೇನೆ" ಎಂದರು ಅನಂತಮೂರ್ತಿ.

ಅದರಂತೆ ಅವರು ತಕ್ಷಣ ಇಂದಿರಾ ಅವರಿಗೆ ಫೋನ್ ಮಾಡಿ "ನಿಮ್ಮ ಪುಸ್ತಕ ಓದಿದೆ. ತುಂಬಾ ಚೆನ್ನಾಗಿ ಬರೆದಿದ್ದೀರಿ. ಲಂಕೇಶ ತುಂಬ ಒರಟು ಮನುಷ್ಯ ಆಗಿದ್ದರೂ ಆತ ಅಷ್ಟೇ ಸಾಫ್ಟ್ ಆಗಿದ್ದಾತ. ಆತನ ಬಗ್ಗೆ ಪ್ರೀತಿ, ಸಿಟ್ಟು, ಮರ್ಯಾದೆ ಎಲ್ಲವನ್ನೂ ಇಟ್ಟುಕೊಂಡು ಪುಸ್ತಕ ಬರೆದಿದ್ದೀರಿ. ಲಂಕೇಶ ಈಗ ಇದ್ದಿದ್ದರೆ ಅವನಿಗೆ ನೀವೇ ಸರಿಯಾದ ಹಂಡತಿ ಅಂತ ಅವನಿಗೆ ಹೇಳ್ತಿದ್ದೆ" ಎಂದು ಹೇಳಿದರು.



ಅನಂತಮೂರ್ತಿಯವರಂತಹ ಖ್ಯಾತ ಲೇಖಕರಿಂದ ಇಂತಹ ಪ್ರಶಂಸೆಯ ಮಾತುಗಳು ಬಂದಿದ್ದರಿಂದ ಸಹಜವಾಗಿಯೇ ಇಂದಿರಾ ಅವರಿಗೆ ಸಂತೋಷವೋ ಸಂತೋಷ. "ನೀವು ನನ್ನ ಬರಹವನ್ನು ಮೆಚ್ಚಿಕೊಂಡಿದ್ದೀರಿ ಎಂಬುದೇ ನನಗೆ ದೊಡ್ಡ ಬಹುಮಾನ" ಎಂದರು ಇಂದಿರಾ.

ಅಂದಹಾಗೆ ಈ ಪುಸ್ತಕವನ್ನು ಅನಂತಮೂರ್ತಿಯವರ ಪತ್ನಿ ಎಸ್ತರ್ ಕೂಡ ತುಂಬಾ ಇಷ್ಟಪಟ್ಟರಂತೆ. "ಲಂಕೇಶನ ತಾಯಿ ತೀರಿಕೊಂಡಾಗ ಅವರ ಊರಿನ ಜನ ರಾಗವಾಗಿ ಹಾಡುತ್ತಾ ಅಳುವ ಬಗ್ಗೆ ಓದಿದ ಎಸ್ತರ್‌ಗೆ ನಕ್ಕೂ ನಕ್ಕೂ ಸಾಕಾಯಿತು. ಅದರಲ್ಲೂ ಸತ್ತವರನ್ನು ಬೈಯುತ್ತಾ ಹಾಡುವುದು ತಮಾಷೆಯಾಗಿದೆ" ಎಂದರು ಅನಂತಮೂರ್ತಿ.



ಅನಂತಮೂರ್ತಿಯವರು ಇಂದಿರಾ ಅವರಿಗೆ ಅಪರಿಚಿತರೇನಲ್ಲ. 60ನೇ ದಶಕದಲ್ಲಿ ಶಿವಮೊಗ್ಗೆಯಲ್ಲಿ ಲಂಕೇಶರೊಂದಿಗೆ ಹೊಸದಾಗಿ ದಾಂಪತ್ಯ ಹೂಡಿದ್ದಾಗ ಅನಂತಮೂರ್ತಿಯವರು ಅವರ ಮನೆಗೆ ಭೇಟಿ ನೀಡಿದ್ದರು. ಅನಂತರ ಅಲ್ಲಲ್ಲಿ ಹಲವೊಮ್ಮೆ ಭೇಟಿ ಆಗಿದ್ದೂ ಉಂಟು. ಆದರೆ ಲಂಕೇಶರು ಹೋದನಂತರ ಅವರ ಸಾಹಿತ್ಯ ಲೋಕದ ಮಿತ್ರರ ವಲಯದಿಂದ ಇಂದಿರಾ ಬಹಳ ದೂರ ಉಳಿದಿದ್ದಾರೆ.

ಕೊನೆಗೆ ಅನಂತಮೂರ್ತಿ ಮತ್ತು ಇಂದಿರಾ ಪರಸ್ಪರರ ಆರೋಗ್ಯ ಕುರಿತು ವಿಚಾರಿಸಿಕೊಂಡರು. ಅನಂತಮೂರ್ತಿಯವರು ಈಗ ತಮ್ಮ ಆರೋಗ್ಯ ಅಷ್ಟು ಚೆನ್ನಾಗಿಲ್ಲವೆಂದಾಗ ಇಂದಿರಾ ಅವರು ಸಾಧ್ಯವಾದಷ್ಟು ಬೇಗ ಅವರನ್ನು ಕಾಣಲು ಬರುವುದಾಗಿ ಹೇಳಿದರು.


ಅನಂತಮೂರ್ತಿಯವರ ಫೋನ್ ಕರೆಯ ನಂತರ ಇಂದಿರಾ ಅವರು ದೊಡ್ಡ ಪುರಸ್ಕಾರವನ್ನು ಪಡೆದಷ್ಟು ಸಂಭ್ರಮಿಸುತ್ತಿದ್ದಾರೆ; ಅನಂತಮೂರ್ತಿಯವರ ವಿಶಾಲ ಮನೋಭಾವ ಕಂಡು ಸಂತಸ ವ್ಯಕ್ತಪಡಿಸುತ್ತಿದ್ದಾರೆ. ●

ಉತ್ತರ ಕನ್ನಡ:

ಆರು ಎಮ್ಮೆಲ್ಲೆಗಳ ನೂರು ದಿನದ ಸಾಧನೆ-ಸಾಹಸ!!

ಉತ್ತರ ಕನ್ನಡಕ್ಕೆ ಆದರ ಶಾಸಕ-ಸಂಸದ-ಮಂತ್ರಿ ಮಾನ್ಯರೇ ಮಹಾಶಾಪವೆಂಬ ಮಾತೊಂದಿದೆ! ಕೆನರಾದಿಂದ ಒಮ್ಮೆ ಸಂಸದರಾಗಿದ್ದ ಬೆವರಿನ ವರ್ಗದ ಧ್ವನಿಯಾಗಿದ್ದ ಕವಿ-ದಾರ್ಶನಿಕ ದಿನಕರ ದೇಸಾಯಿ ಒಬ್ಬರು ಮಾತ್ರ ಈ ಅಭಿಪ್ರಾಯಕ್ಕೆ ಅಪವಾದ. ಉಳಿದವರೆಲ್ಲರೂ ಒಣಪ್ರತಿಷ್ಠೆಯಿಂದ ಆಳ್ವಿಕೆ ನಡೆಸಿ ಮೆರೆದವರೇ. ಉತ್ತರ ಕನ್ನಡದ ಹಲವು ಘಟಾನುಘಟಿಗಳು ಎಂಪಿ-ಎಮ್ಮೆಲ್ಲೆಯಾಗಿ ಆಳಿ ಅಳಿದಿದ್ದಾರೆ; ಮಹಾಮಂತ್ರಿ-ಮುಖ್ಯಮಂತ್ರಿಯೂ ಈ ಜಿಲ್ಲೆಯವರಾಗಿದ್ದಾರೆ. ಇವರ್‍ಯಾರೂ ಸ್ಥಳೀಯ ಸಮಸ್ಯೆ-ಸಂಕಷ್ಟ ಗಂಭೀರವಾಗಿ-ಪ್ರಾಮಾಣಿಕವಾಗಿ ಪರಿಗಣಿಸಿ ಪರಿಹಾರ-ಅಭಿವೃದ್ಧಿಯ ಬಗ್ಗೆ ಚಿಂತಿಸಿದ್ದೇ ಇಲ್ಲ!

ಮೂರು ತಿಂಗಳ ಹಿಂದೆ ಅಸೆಂಬ್ಲಿಗೆ ಚುನಾವಣೆ ನಡೆದಾಗ ಜನ ಹೊಸ ಆಸೆ-ಭರವಸೆ ಇಟ್ಟುಕೊಂಡಿದ್ದರು. ಆಯ್ಕೆಯಾಗುವ ಶಾಸಕರು ಈ ನತದೃಷ್ಟ ಜಿಲ್ಲೆಯ ದಿಕ್ಕು ದೆಸೆ ಬದಲಿಸಬಹುದೆಂದು ಭಾವಿಸಿದ್ದರು. ಕನಿಷ್ಠ ತಂತಮ್ಮ ಕ್ಷೇತ್ರದ ಒಳಿತಿಗಾಗಿಯಾದರೂ ನಿಯತ್ತು-ನಿಷ್ಠೆ-ಋಣಭಾರದ ಮುಲಾಜಲ್ಲಿ ಕರ್ತವ್ಯ ನಿಭಾಯಿಸಬಹುದೆಂದು ನಿರೀಕ್ಷಿಸಿದ್ದರು. ಆದರೆ ಈ ನೂರು ದಿನದಲ್ಲಿ ಜಿಲ್ಲೆಯ ಆರು ಶಾಸಕರು ಮೂರು ಬಿಲ್ಲಿ ಪ್ರಯೋಜನಕಾರಿ ಕೆಲಸ-ಕಾರ್ಯವೂ ಮಾಡಿಲ್ಲ, ಬರೀ ಬೋಗಸ್ ಸನ್ಮಾನ-ಬಂಡಲ್ ಬಡಾಯಿಯಲ್ಲೇ ಈ ಮೂರು ತಿಂಗಳು ಕಳೆದಿದ್ದಾರೆ. ಮತ್ತದೇ ಆಘಾತಕಾರಿ-ನಿರಾಶಾದಾಯಕ ವಾತಾವರಣ ಜಿಲ್ಲೆಯಲ್ಲಿ ಹೆಪ್ಪುಗಟ್ಟುತ್ತಿದೆ. ಒಂದು ಸಮಾಧಾನದ ಸಂಗತಿಯೆಂದರೆ, ಹಿಂದಿನ ದೋಖಾಬಾಜಿ ಬಿಜೆಪಿಗಳ ಗಂಡಾಗುಂಡಿ ಸರ್ಕಾರಕ್ಕೆ ಹೋಲಿಸಿದರೆ ಹೊಸ ಆಡಳಿತ ಏನೋ ಒಂಥರಾ ಬದಲಾವಣೆಯ ಗಾಳಿ ಎಬ್ಬಿಸಿದೆ.



ಉತ್ತರ ಕನ್ನಡ ಇವತ್ತಿಗೂ ಹಿಂದುಳಿದ ಗುಡ್ಡಗಾಡು ಜಿಲ್ಲೆಯಾಗೇ ಮುಂದುವರಿಯುತ್ತಿದೆ. ಇಲ್ಲಿಂದ ಸಂಸದ-ಶಾಸಕರಾದವರ ಅಯೋಗ್ಯತೆಯ ಸಂಕೇತವಿದು. ಅಕ್ಕ-ಪಕ್ಕದ ಬೆಳಗಾವಿ-ಧಾರವಾಡ-ಉಡುಪಿ-ದಕ್ಷಿಣಕನ್ನಡ ಜಿಲ್ಲೆಯ ಪ್ರಗತಿಗೆ ಹೋಲಿಸಿದರೆ ಉತ್ತರ ಕನ್ನಡ ಶತಮಾನಗಳಷ್ಟು ಹಿಂದುಳಿದಿದೆ. ಜಿಲ್ಲೆಯ ಬೇಕುಬೇಡಗಳ ಬಗ್ಗೆ ಇಲ್ಲಿಯ ಜನಪ್ರತಿನಿಧಿಗಳು ಒಟ್ಟಾಗಿ ಕುಳಿತು ಚರ್ಚಿಸಿದ್ದೇ ಇಲ್ಲ. ಅಭಿವೃದ್ಧಿಯ ದೂರದೃಷ್ಟಿ ಇಲ್ಲದ ನಾಲಾಯಕರೇ ಗೆದ್ದು ಹೋಗಿದ್ದರ ದುಷ್ಪರಿಣಾಮವಿದು. ಜಿಲ್ಲೆಯ ಮಂತ್ರಿ-ಸಂಸದ-ಶಾಸಕರು ಒಂದಾಗಿ ರಾಜಕೀಯ ಇಚ್ಛಾಶಕ್ತಿ ಪ್ರದರ್ಶಿಸಿದ್ದರೆ ಸೀಬರ್ಡ್ ನೌಕಾನೆಲೆ ನಿರಾಶ್ರಿತರ ಸಮಸ್ಯೆಯಾಗಲಿ, ಅಂಕೋಲಾ-ಹುಬ್ಬಳ್ಳಿ ರೈಲು ಹಳಿ ಪ್ರಕರಣವಾಗಲಿ, ಸಾವಿರಾರು ಕುಟುಂಬಗಳ ಜೀವನಾಧಾರ ಗೇಣು ಭೂಮಿ ಸಕ್ರಮ ಸಂಕಷ್ಟವಾಗಲಿ, ಔದ್ಯೋಗೀಕರಣದ ಸವಾಲಾಗಲಿ ಇಷ್ಟೊತ್ತಿಗೆ ಪರಿಹಾರವಾಗುತ್ತಿದ್ದವು; ಕನಿಷ್ಟ ಅಭಿವೃದ್ಧಿಶೀಲ ಜಿಲ್ಲೆ ಎಂದಾದರೂ ಅನ್ನಿಸಿಕೊಳ್ಳುತ್ತಿತ್ತು.

ಕಾಡು-ಕಡಲು-ಬಯಲುಸೀಮೆಯನ್ನು ಒಳಗೊಂಡಿರುವ ರಾಜ್ಯದ ಏಕೈಕ ವಿಶಿಷ್ಟ-ವೈವಿಧ್ಯಮಯ ಜಿಲ್ಲೆ ಉತ್ತರ ಕನ್ನಡ. ಸ್ಥಳೀಯ ನೈಸರ್ಗಿಕ ಸಂಪತ್ತು-ಅರಣ್ಯ-ಸಮುದ್ರ ಬಳಸಿಕೊಳ್ಳುವ ಯೋಜನೆಗಳಿಗೆ ಸ್ಕೆಚ್ ಹಾಕಿದರೆ ಜಿಲ್ಲೆಯ ಅಭಿವೃದ್ಧಿ ಅಂಥ ಕ್ಲಿಷ್ಟಕರವೇನೂ ಅಲ್ಲ. ಸರ್ಕಾರವೇ ರಚಿಸಿದ್ದ ಪ್ರಾದೇಶಿಕ ಅಸಮತೋಲನ ಕುರಿತ ಡಾ. ನಂಜುಂಡಪ್ಪ ಸಮಿತಿ ವರದಿ, ಗಡಿ ಅಭಿವೃದ್ಧಿ ಬಗೆಗಿನ ಬರಗೂರು ರಾಮಚಂದ್ರಪ್ಪ ವರದಿ, ನೀರಾವರಿ ಕುರಿತ ಪರಮಶಿವಯ್ಯ ವರದಿಗಳು ಉತ್ತರ ಕನ್ನಡದ ಕಷ್ಟಗಳನ್ನು ಎತ್ತಿ ತೋರಿಸಿದೆ. ಈ ವರದಿಗಳನ್ನು ಸಂಸದ-ಶಾಸಕ-ಮಂತ್ರಿಗಳು ಏಕಾಗ್ರತೆ ಯಿಂದ ಓದಿ ಸಮಸ್ಯೆ ಪರಿಹಾರಕ್ಕೆ ಚಿಂತಿಸಬೇಕಾಗಿದೆ. ಇದು ಶಾಸಕರೆಲ್ಲ ಒಟ್ಟಾಗಿ ಕುಳಿತು ಯೋಚಿಸಿದರಷ್ಟೇ ಸಾಧ್ಯ.

ಅರಣ್ಯವಾಸಿ ಬುಡಕಟ್ಟು ಜನಸಮುದಾಯವಾದ ಗೌಳಿ-ಸಿದ್ಧಿ, ಕುಣಬಿ, ಹಾಲಕ್ಕಿ ಒಕ್ಕಲಿಗರು, ಗೊಂಡರು ಇರುವ ಉತ್ತರ ಕನ್ನಡದ ಸಂಸ್ಕೃತಿ ಹೇಗೆ ವೈವಿಧ್ಯಮಯವೋ, ಹಾಗೆಯೇ ಇಲ್ಲಿಯ ಸಮಸ್ಯೆಗಳೂ ಅಭಿವೃದ್ಧಿಯ ಸವಾಲುಗಳೂ ಭಿನ್ನ-ವಿಭಿನ್ನ. ಜಿಲ್ಲೆಯ ಆರು ಶಾಸಕರು-ಸಂಸದರು ತಮ್ಮ ಈಗೋ, ಹಪಾಹಪಿ ಬಿಟ್ಟು ಅಭಿವೃದ್ಧಿ ಬದ್ಧತೆ ತೋರಿಸಿದರೆ ಮಾತ್ರ ಪ್ರಗತಿ ಕನಸು ನನಸಾಗಲು ಸಾಧ್ಯ. ಇದನ್ನು ಮೊದಲು ಜನಪ್ರತಿನಿಧಿಗಳು ಅರ್ಥ ಮಾಡಿಕೊಳ್ಳಬೇಕಾಗಿದೆ. ಜಿದ್ದಿನ ಗುದ್ದಾಟದ ರಾಜಕೀಯದಲ್ಲಿ ಹೆಡ್ ಮಾಸ್ತರಿಕೆ ತೋರಿಸುವ ದೇಶಪಾಂಡೆ ತನ್ನ ತಾಕತ್ತು ಜಿಲ್ಲೆಯ ಎಲ್ಲ ಶಾಸಕರು, ಸಂಸದರನ್ನು ಒಂದೆಡೆ ಸೇರಿಸಿ ಕಟ್ಟುವ ರಾಜಕೀಯ ಮಾಡಬೇಕಾಗಿದೆ. ಪಾಳೇಗಾರಿ ಸಾಮ್ರಾಟನೆಂಬ ಇಮೇಜಿಂದ ಹೊರಬರಲು ದೇಶಪಾಂಡೆಗಿದೊಂದು ಅವಕಾಶ. ಜಿಲ್ಲೆಯ ಎಲ್ಲ ಜನಪ್ರತಿನಿಧಿಗಳನ್ನು ಒಂದಾಗಿಸಿ ಪ್ರಗತಿಯ ಪಥದಲ್ಲಿ ಹೆಜ್ಜೆ ಹಾಕಿಸಿದರೆ ಮಾತ್ರ ಆತನಿಗೆ ಉತ್ತರ ಕನ್ನಡದ ನಿಜ ನಾಯಕತ್ವ ಸಿಗಬಹುದು. ಈಗಾತ ಪ್ರದರ್ಶಿಸುತ್ತಿರುವುದು ಅಧಿಕಾರ ದರ್ಪದ ರಿಂಗ್ ಮಾಸ್ಟರಿಕೆಯೇ ವಿನಃ ಪ್ರಜಾಪ್ರಭುತ್ವದ ನಾಯಕತ್ವ ಅಲ್ಲ.

ಜಿಲ್ಲೆಯಲ್ಲಿ ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ. ಇದಕ್ಕೆ ಮೂಲ ಕಾರಣ ಇಲ್ಲಿಗೆ ಸಾಲಾಗಿ ವಕ್ಕರಿಸಿದ ಅವೈಜ್ಞಾನಿಕ ಸರ್ಕಾರಿ ಯೋಜನೆಗಳು. ಹಲವು ಜಲವಿದ್ಯುತ್ ಯೋಜನೆ, ಅಣು ವಿದ್ಯುತ್ ಯೋಜನೆ, ನೌಕಾನೆಲೆ, ರೈಲು ರಸ್ತೆ ಯೋಜನೆ, ಬಂದರು... ಮುಂತಾದ 'ಒಣ ಅಭಿವೃದ್ಧಿ'ಗಾಗಿ ಜನ ತಮ್ಮ ಬದುಕಿಗಾಧಾರವಾದ ಜಮೀನು ಬಿಟ್ಟುಕೊಟ್ಟಿದ್ದಾರೆ. ಮತ್ತೆ ಜನರನ್ನು ಒಕ್ಕಲೆಬ್ಬಿಸಲು ರಾಷ್ಟ್ರೀಯ ವನ್ಯಧಾಮ, ಹುಲಿ ಸಂರಕ್ಷಿತ ಪ್ರದೇಶ, ಹೆದ್ದಾರಿ ಚತುಷ್ಪಥ ಯೋಜನೆಗಳು ಬಾಯ್ತೆರೆದು ಕೂತಿವೆ. ಈ ಯೋಜನೆಗಳಿಂದ ಜನರಿಗೆ ಲಾಭವಾಗುವುದಿರಲಿ, ಭೀಕರ ಹಾನಿಯಾಗಿದೆ; ಬಿಕಾರಿಗಳನ್ನಾಗಿಸಿದೆ. ಮೂಲ ಸೌಕರ್ಯ ಕಲ್ಪಿಸದೆ, ಕಾನೂನುಬದ್ಧ ಪರಿಹಾರವೂ ಕೊಡದೆ ಜನರನ್ನು ಎತ್ತಂಗಡಿ ಮಾಡಿ ಬೀದಿಗೆ ಎಸೆಯಲಾಗಿದೆ. ಜಿಲ್ಲೆಯ ಭೌಗೋಳಿಕ ಪರಿಸರ ವೈಜ್ಞಾನಿಕವಾಗಿ ಬಳಸಿ ಯೋಜನೆ ತರಲಾಗಿಲ್ಲ; ಕೊಳ್ಳುವ ಸಾಮರ್ಥ್ಯ ಹೆಚ್ಚಿಸುವ ಮತ್ತು ದುಡಿವ ಕೈಗೆ ಕೆಲಸ ಕೊಡುವ ಯೋಜನೆಗಾಗಿ ಯಾರೂ ಚಿಂತಿಸಿಲ್ಲ.

ಉತ್ತರ ಕನ್ನಡದ ಕೈಗಾರಿಕೆಗಳು ಒಂದೊಂದಾಗಿ ಅವಸಾನಗೊಳ್ಳುತ್ತಿವೆ. ಕೈಗಾರಿಕಾ ಕೇಂದ್ರವೆಂದು ಹೆಸರಾಗಿದ್ದ ದಾಂಡೇಲಿಯ ಉದ್ಯಮಗಳು ಮುಚ್ಚಿವೆ; ಹಂಚು ಉದ್ದಿಮೆ ಕಣ್ಮುಚ್ಚುತ್ತಿದೆ. ಅಭಿವೃದ್ಧಿಗೆ ಪೂರಕ ಶಿಕ್ಷಣವಂತೂ ಜಿಲ್ಲೆಯಲ್ಲಿ ಕೊಡಲಾಗುತ್ತಿಲ್ಲ. ಔದ್ಯೋಗೀಕರಣಕ್ಕೆ ಯಾವ ಆದ್ಯತೆಯೂ ಕೊಡಲಾಗಿಲ್ಲ. ಧೋಂಗಿ ಪರಿಸರ ವಾದ ಮತ್ತು ಸಾರಿಗೆ ಸಂಪರ್ಕದ ತೊಡಕು ಮುಂದಿಟ್ಟು ಉದ್ಯಮಬಾರದಂತೆ ತಡೆಯಲಾಗುತ್ತಿದೆ. ಇದನ್ನು ಸಮರ್ಥವಾಗಿ ಎದುರಿಸುವ ನೈತಿಕಸ್ಥೈರ್ಯ ಆಳುವವರಲ್ಲಿಲ್ಲ.


ಯುವಜನತೆಗೆ ಉದ್ಯೋಗಮುಖಿಯಾದ ಪ್ರವಾಸೋದ್ಯಮ ಬೆಳೆಸುವ ವಿಪುಲ ಅವಕಾಶ ಜಿಲ್ಲೆಯಲ್ಲಿದೆ. ಆದರೆ ಇದನ್ನು ಜಾರಿಗೊಳಿಸುವ ರಾಜಕೀಯ ಇಚ್ಛಾಶಕ್ತಿಯ ಕೊರತೆ ಆಳುವವರಲ್ಲಿದೆ. ಎತ್ತಿಂದೆತ್ತ ನೋಡಿದರೂ ಉತ್ತರ ಕನ್ನಡ ಪ್ರವಾಸೋದ್ಯಮಕ್ಕೆ ಹೇಳಿಮಾಡಿಸಿದ ಜಿಲ್ಲೆ, ಇಲ್ಲಿಯ ಕಾಡು, ಕಡಲು, ನದಿ, ಜಲಪಾತ, ಹಚ್ಚಹಸಿರಿನ ಕೃಷಿ-ತೋಟಗಾರಿಕೆ-ಜಮೀನು, ವಿವಿಧ-ವಿಶಿಷ್ಟ ಸಂಸ್ಕೃತಿಗಳೆಲ್ಲ ಪ್ರವಾಸೋದ್ಯಮಕ್ಕೆ ಹೇಳಿಮಾಡಿಸಿದಂತಿದೆ. ಇದೆಲ್ಲ ಬಳಸಿಕೊಂಡು ಜನೋಪಯೋಗಿ ಪ್ರವಾಸೋದ್ಯಮ ಬೆಳೆಸಬೇಕಾಗಿದೆ. ಜಿಲ್ಲೆಯ ರೈತ-ತೋಟಿಗ-ಮೀನುಗಾರ ಎದುಸಿರು ಬಿಡುತ್ತಿದ್ದಾನೆ. ಪರಂಪರಾಗತವಾಗಿ ಮೀನುಗಾರಿಕೆಯನ್ನೇ ಅವಲಂಬಿಸಿರುವವರ ಬದುಕು ಹುಚ್ಚು ಸರ್ಕಾರಿ ಯೋಜನೆಗಳಿಂದ ಮೂರಾಬಟ್ಟೆಯಾಗಿದೆ. ಈ ಸಮುದಾಯಕ್ಕೆ ಕಾಯಂ ಉದ್ಯೋಗ ಒದಗಿಸಬೇಕಿದೆ. ಸಮುದ್ರ ತೀರದಲ್ಲಿ ಸಕಲ ಸೌಲಭ್ಯ ಒದಗಿಸಬೇಕಾಗಿದೆ. ರೈತರಿಗೆ ಬೇಕಾದ ನೀರಾವರಿ ಅನುಷ್ಠಾನ ಆಗಬೇಕಿದೆ. ಅಡಿಕೆ-ತೋಟಿಗರ ಸಮಸ್ಯೆಗೆ ಸ್ಪಂದಿಸಬೇಕಿದೆ. ಇದೆಲ್ಲಾ ಜನಪ್ರತಿನಿಧಿಗಳಿಗೆ ಅರ್ಥವಾದರಷ್ಟೇ ಅವರು ಎಂಪಿ-ಎಮ್ಮೆಲ್ಲೆ ಆಗಿದ್ದು ಸಾರ್ಥಕ; ಇಲ್ಲದಿದ್ದರೆ ವ್ಯರ್ಥ!!

ಕಾಡುವಾಸಿಗಳಾದ ಗೌಳಿ-ಕಣಬಿ-ಹಾಲಕ್ಕಿ ಒಕ್ಕಲುಗಳು ದಯನೀಯ ಸ್ಥಿತಿಯಲ್ಲಿದ್ದಾರೆ. ಎಲೆಕ್ಷನ್ ಬಂದಾಗಷ್ಟೇ ಇವರತ್ತ ಪುಢಾರಿಗಳು ಹೋಗುತ್ತಾರೆ. ಓಟ್‌ಬ್ಯಾಂಕ್ ರಾಜಕೀಯಕ್ಕೆ ಬಲಿಯಾಗಿರುವ ಈ ಬುಡಕಟ್ಟು ಮಂದಿ ಸಂವಿಧಾನಬದ್ಧ ಹಕ್ಕಿನಿಂದ ವಂಚಿತರಾಗಿದ್ದಾರೆ. ಬದುಕಲು ಭೂಮಿ ಇಲ್ಲದಿರುವುದು, ನಿರಕ್ಷರತೆ, ಬಡತನ, ಅರಣ್ಯ ಉತ್ಪನ್ನ ಬಳಕೆಗೆ ನಿಷೇಧ ಈ ಜನರನ್ನು ಬಾಧಿಸುತ್ತಿವೆ. ಈ ಜನಸಮುದಾಯದ ಆಹಾರ-ವೇಷಭೂಷಣ-ಕಾಡಿನ ನಂಟು, ಜಾನಪದೀಯ-ಸಾಂಸ್ಕೃತಿಕ ಚಹರೆಗಳೆಲ್ಲ ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಆಧಾರವಾಗಿದೆ. ಇತ್ತ ಇದುವರೆಗಿನ ಮಂತ್ರಿ-ಶಾಸಕರು ಗಂಭೀರವಾಗಿ ಯೋಚಿಸಿಲ್ಲ!

ಇಷ್ಟೆಲ್ಲ ಸಮಸ್ಯೆ-ಸಂಕಷ್ಟ ಒಂದೆಡೆಯಾದರೆ, ಇದಕ್ಕೆ ಪರಿಹಾರೋಪಾಯ-ಅಭಿವೃದ್ಧಿಗೆ ಅವಕಾಶವೂ ಇನ್ನೊಂದೆಡೆ ಇದೆ. ಆದರೆ ಜಿಲ್ಲಾ ಮಂತ್ರಿ ದೇಶಪಾಂಡೆ ಮತ್ತು ಆತನ ಹಿಂದೆ ಸುತ್ತುವ ನಾಲ್ಕು ಶಾಸಕರು, ರಾತ್ರಿಯಷ್ಟೇ ಸಂಧಿಸುವ ಬಿಜೆಪಿಯ ಕಾಗೇರಿ ಮಾಣಿಗೆ ಇದ್ಯಾಕೋ ಬೇಡದ ಉಸಾಬರಿ! ಹೀಗಾಗಿ ಈ ನೂರು ದಿನ ಸದ್ರಿ ಆರು ಶಾಸಕರು ವ್ಯರ್ಥವಾಗಿ ಕಳೆದಿದ್ದಾರೆ. ಈ ಮೂರು ತಿಂಗಳು ಮಂತ್ರಿ ದೇಶಪಾಂಡೆ ಮತ್ತು ಆತನ ಕಾಂಗ್ರೆಸ್‌ನ ಮತ್ತಿಬ್ಬರು ಶಾಸಕರು, ಬಿಜೆಪಿಯ ಚಡ್ಡಿ ಚತುರ ಕಾಗೇರಿ, ಪಕ್ಷೇತರರಾಗಿ ಗೆದ್ದಿರುವ ಗೋಲ್‌ಮಾಲ್ ಗಿರಾಕಿಗಳಾದ ಭಟ್ಕಳ ಹಾಗು ಕಾರವಾರದ ಎಮ್ಮೆಲ್ಲೆ ಸಾಹೇಬರು ಮಾಡಿರುವ ಸಾಧನೆ-ಸಾಹಸದ ಅವಲೋಕನ ಇಲ್ಲಿದೆ.

ಹುಲಿ ದೇಶಪಾಂಡೆ

ಜಿಲ್ಲಾ ಉಸ್ತುವಾರಿ ಮಂತ್ರಿ ಆರ್.ವಿ. ದೇಶಪಾಂಡೆ ಹಳೆ ಹುಲಿ. ಅಧಿಕಾರ ಇರಲಿ, ಇಲ್ಲದಿರಲಿ ಗುಟುರು ಹಾಕಿಯೇ ಕಾರ್ಯಸಾಧಿಸುವ ಭಯೋತ್ಪಾದಕ! ಮೂವತ್ತು ವರ್ಷದ ರಾಜಕಾರಣದಲ್ಲಿ ಈ ಬಿಳಿಕೂದಲ ಹುಲಿ ಜಬರ್ದಸ್ತಾಗಿ ಬೆಳೆದಿದೆ. ಸರ್ಕಾರಿ ಮಟ್ಟದಲ್ಲಿ, ರಾಜ್ಯ-ರಾಷ್ಟ್ರ ಕಾಂಗ್ರೆಸ್‌ನಲ್ಲಿ, ಅಷ್ಟೇ ಅಲ್ಲ ವಿರೋಧ ಪಕ್ಷದ ಒಳಗೂ ದೇಶಪಾಂಡೆ ಬೇರುಗಳು ಆಳಕ್ಕೆ ಇಳಿದಿವೆ. ಅಪ್ಪಟ ಸಮಯಸಾಧಕತನವೇ ದೇಶಪಾಂಡೆ ಸಿದ್ಧಾಂತ.



ರಾಜಕಾರಣ ಆರಂಭಿಸಿದಂದಿನಿಂದ ಸತತ ಅಧಿಕಾರ ಅನುಭವಿಸಿದ ದೇಶಪಾಂಡೆ ಕಳೆದ ಐದು ವರ್ಷ 'ಖಾಲಿ' ಇದ್ದರು. ತಾನೇ ಸಾಕಿ ಬೆಳೆಸಿದ ಸ್ವ-ಜಾತಿ ಪೋರ ಸುನಿಲ್ ಹೆಗಡೆ ಎದುರು ಸೋತು ಮಾಜಿ ಶಾಸಕನಾಗಿದ್ದರು. ಇಂಥ ದೇಶಪಾಂಡೆ ಈಗ ಬರೋಬ್ಬರಿ ಏಳೂವರೆ ವರ್ಷದ ಬಳಿಕ ಮಂತ್ರಿಯಾಗಿದ್ದಾರೆ; 5 ವರ್ಷದ ಗ್ಯಾಪ್ ನಂತರ ಎಮ್ಮೆಲ್ಲೆಯಾಗಿದ್ದಾರೆ. ಮತ್ತದೇ ಧಡಪ್‌ಶಾಹಿ ಆಡಳಿತ ಶುರು ಹಚ್ಚಿಕೊಂಡಿರುವ ದೇಶಪಾಂಡೆ ಸುತ್ತ ಸ್ವ-ಜಾತಿ ಕೊಂಕಣಿ ಕಂಟ್ರಾಕ್ಟರ್‌ಗಳು ಗಿರಕಿ ಹೊಡೆಯಲಾರಂಭಿಸಿದ್ದಾರೆ. ಆತನ ಜನತಾ ಪರಿವಾರದ ಟೀಮು ಸುತ್ತುವರಿದಿದೆ. ಹೊರಗೆ ಜನಪರ-ಬಡವರ ಪಕ್ಷಪಾತಿ ಪೋಸು ಕೊಡುತ್ತಲೇ ಒಳಗೊಳಗೇ ಲೂಟಿ ಹೊಡೆಯುವ-ಹಿಂದುಳಿದವರ ತುಳಿವ ಕಲೆ ದೇಶಪಾಂಡೆಗೆ ಕರತಲಾಮಲಕವಾಗಿದೆ.

ದೇಶಪಾಂಡೆ ಎಂದೂ ಜಿಲ್ಲಾ ನಾಯಕನಾಗಿದ್ದೇ ಇಲ್ಲ, ಇಂದೂ ಆತನಿಂದ ಜಿಲ್ಲೆಗೊಂದು ಸಮರ್ಥ ನಾಯಕತ್ವ ಕೊಡಲಾಗುತ್ತಿಲ್ಲ. ಇದಕ್ಕೆ ಕಾರಣ ಆತನ ಪಾಳೆಗಾರಿಕೆ ಪ್ರೊಗರು. ಆತ ಪ್ಯೂಡಲ್ ಕೆಲಸಗಾರನೇ ಹೊರತು ಸಮಷ್ಟಿಯ ಹಿತದ ಪ್ರಜಾಪ್ರಭುತ್ವದ ಕರ್ತೃತ್ವಶಾಲಿಯಲ್ಲ! ಹಳಿಯಾಳದಲ್ಲಿ ಆತ ರೈತರಿಗೆ ಅನುಕೂಲವಾಗುವ ಸಹಕಾರಿ ಸಕ್ಕರೆ ಕಾರ್ಖಾನೆಯಾಗಲಿ, ನೀರಾವರಿ ಯೋಜನೆಯಾಗಲಿ ಮಾಡಲಿಲ್ಲ. ಇದರಿಂದ ಬಡವರು-ಹಿಂದುಳಿದವರು ಸಬಲರಾಗುತ್ತಾರೆ. ತನ್ನ ಏಕಸಾಮ್ಯಕ್ಕೆ ಸವಾಲಾಗುತ್ತಾರೆಂಬ ಭಯ ಆತನದು. ಇದನ್ನರಿತ ಹಳಿಯಾಳದ ಜನ ಆತನ ಸೋಲಿಸಿ ಪಾಠ ಕಲಿಸಿದ್ದರು. ಅನಂತರ ಜನರ ನಡುವೆ ಬೆರೆಯಲು ಪ್ರಾರಂಭಿಸಿದ ದೇಶಪಾಂಡೆ ರಾಜಕಾರಣದ ಶೈಲಿ ಬದಲಿಸಿದ್ದರು. ಅಪಾರ ಹಣವೂ ಹರಿಸಿ ಈ ಸಲ ಆತ ಗೆದ್ದಿದ್ದೂ ಆಗಿದೆ.


ಈ ನೂರು ದಿನದಲ್ಲಿ ದೇಶಪಾಂಡೆ ಸಾಧನೆಗಿಂತ ಸದ್ದೇ ಹೆಚ್ಚು ಮಾಡಿದ್ದಾರೆ. ಕಾಳಿ ನೀರಾವರಿ ಯೋಜನೆಯ ಕ್ರೆಡಿಟ್ ಸುನಿಲ್‌ಗೆ ಹೋಗುವ ಭಯದಲ್ಲಿ ಅನಿವಾರ್ಯವಾಗಿ ಬಜೆಟ್‌ಗೆ ಸೇರಿಸಿದ್ದಾರೆ. ಎಲ್ಲೋ ಒಂದು ಕಾಲೇಜು ಆರಂಭಿಸಿದ್ದೇ ಈ ಉನ್ನತ ಶಿಕ್ಷಣ ಮಂತ್ರಿ ತನ್ನ ಮಹಾಸಾಧನೆ ಎಂಬಂತೆ ಬೀಗುತ್ತಿದ್ದಾರೆ. ಅಧಿಕಾರಿಗಳನ್ನು ಹೆದರಿಸಿ ಪಳಗಿಸಿಕೊಳ್ಳುವುದರಲ್ಲಿ ನಿಸ್ಸೀಮರಾದ ದೇಶಪಾಂಡೆ ಸರ್ವಾಧಿಕಾರಿಯ ಧರತಿಯಲ್ಲಿ ಕ್ಷೇತ್ರ-ಜಿಲ್ಲೆಯಲ್ಲಿ ಓಡಾಡುತ್ತಿದ್ದಾರೆ. ಆತ ಜಿಲ್ಲಾ ಮಂತ್ರಿಯಾಗಿ ಮಾಡಿದ ಸಾಧನೆಯೂ ಅಷ್ಟಕಷ್ಟೇ. ಜಲ್ಲಿಕಲ್ಲಿನ ಸಮಸ್ಯೆ-ಮರಳು ಮಾಫಿಯಾ ಲಾಬಿ ನಿಭಾಯಿಸಲು ದೇಶಪಾಂಡೆ ವಿಫಲರಾಗಿದ್ದಾರೆ. ಒಂದೇ ಸಮನೆ ಆಶ್ವಾಸನೆ ಕೊಡುತ್ತಲೇ ಹೋಗುತ್ತಿರುವ ದೇಶಪಾಂಡೆ ಪ್ರವಾಸೋದ್ಯಮ ಮಂತ್ರಿಯಾಗಿಯೂ ಜಿಲ್ಲೆಯ ಮಟ್ಟಿಗೆ ಪ್ರಯೋಜನಕ್ಕೆ ಬಂದಿಲ್ಲ.

ಪ್ರವಾಸೋದ್ಯಮಕ್ಕೆ ಹಲವು ಅವಕಾಶ ಇರುವ ಪ್ರಾಕೃತಿಕ ಸಂಪತ್ತು-ಸೌಂದರ್ಯದ ಉತ್ತರ ಕನ್ನಡದಲ್ಲಿ ಒಂದೇ ಒಂದು ಪ್ರವಾಸೋದ್ಯಮ ದೇಶಪಾಂಡೆಯಿಂದ ಬಜೆಟ್ ಮೂಲಕ ತರಲಾಗಿಲ್ಲ, ಮುಚ್ಚುತ್ತಿರುವ ದೇಶಪಾಂಡೆಯ ದಾಂಡೇಲಿಯಲ್ಲಿನ ಕೈಗಾರಿಕೆಗಳು, ಗುಳೆ ಹೋಗುತ್ತಿರುವ ಕಾರ್ಮಿಕರು ಪ್ರವಾಸೋದ್ಯಮದಿಂದಾದರೂ ನಿಟ್ಟುಸಿರು ಬಿಡುತ್ತಿದ್ದರೇನೋ?! ದಾಂಡೇಲಿ-ಉತ್ತರ ಕನ್ನಡದ ಕರಾವಳಿಗೆ ಪ್ರವಾಸೋದ್ಯಮ ಪರ್ಯಾಯ ವ್ಯವಸ್ಥೆಯಾಗುತ್ತಿತ್ತು. ಇದು 'ಮುತ್ಸದ್ದಿ' ದೇಶಪಾಂಡೆಗೆ ಹೊಳೆಯದಿರುವುದು ನಾಚಿಕೆಗೇಡು!

ಮಗನನ್ನು ಎಂಪಿ ಮಾಡುವ ಹಿಡನ್ ಅಜೆಂಡಾದ ಪ್ರೇರಣೆಯಿಂದ ದೇಶಪಾಂಡೆ ಕ್ರಿಯಾಶೀಲ-ಜನಪರನಂತೆ ಈ ಬಾರಿ ಭಾರೀ ಚಟುವಟಿಕೆಯಿಂದ ಜಿಲ್ಲೆಯಾದ್ಯಂತ ಕಾಣಿಸಿಕೊಳ್ಳುತ್ತಿದ್ದಾರೆ. ಆದರೆ ಆತನ ದೊಡ್ಡ ದೋಷ ದೂರದೃಷ್ಟಿಯ ಕೊರತೆ; ಜಿಲ್ಲೆಯ ಜನ-ಜೀವನದ ಬಗೆಗಿನ ಅಜ್ಞಾನ. ಇವತ್ತಿಗೂ ಕನ್ನಡ ಸರಿಯಾಗಿ ಮಾತಾಡಲಾಗದ ದೇಶಪಾಂಡೆ ಜಿಲ್ಲೆಯ ಹಾಲಕ್ಕಿ ಒಕ್ಕಲಿಗರನ್ನು 'ಹಲ್ಲಕ್ಕಿ' ಎಂದೇ ಹೇಳುತ್ತಾರೆ! ಮೊದಲಿನ ದೇಶಪಾಂಡೆ ವನವಾಸದ ನಂತರ ಬದಲಾದಂತೆ ಕಂಡರೂ ಆತನಲ್ಲಿ ಜಿಲ್ಲೆಯ ಅಭಿವೃದ್ಧಿಯ ನೀಲನಕ್ಷೆ ಇರುವ ಸಾಧ್ಯತೆಯೇನೂ ಈವರೆಗೆ ಗೋಚರಿಸಿಲ್ಲ.

ನಾಜೂಕಯ್ಯ ಕಾಗೇರಿಯ ವಂಚನೆ-ಮೋಸದ ಜಿಲ್ಲಾ ಉಸ್ತುವಾರಿಕೆಗೆ ಹೋಲಿಸಿದರೆ ರಫ್ ಅಂಡ್ ಟಫ್ ದೇಶಪಾಂಡೆ ಬೆಟರ್ ಎಂದು ಕಾಣಿಸುವುದು ಉತ್ತರ ಕನ್ನಡದ ದುರಂತ. ಕಾಗೇರಿ-ದೇಶಪಾಂಡೆ ಒಂದೇ ನಾಣ್ಯದ ಎರಡು ಮುಖ ಅಷ್ಟೇ! ಎರಡೂ ನಂಬಿಕೆಗೆ ಅನರ್ಹವೇ!!

ಸೋಗಲಾಡಿ ಸೈಲ್




ಕಳ್ಳ ಅದಿರು ಉದ್ಯಮಿ ಸತೀಶ್ ಸೈಲ್ ತನ್ನ ಆಜನ್ಮ ಶತ್ರು ಆನಂದ್ ಅಸ್ನೋಟಿಕರ್ ಎಂಬ ಅಧಿಕಪ್ರಸಂಗಿಯನ್ನು ಸೋಲಿಸಿದ ಸಂತೋಷದ ಹ್ಯಾಂಗೋವರ್‌ನಿಂದ ಇನ್ನೂ ಹೊರಬಂದಿಲ್ಲ. ಸೀಬರ್ಡ್ ನಿರಾಶ್ರಿತರ ಪರಿಹಾರದ ಸಮಸ್ಯೆ ಒಂದು ಬಿಟ್ಟರೆ ಕಾರವಾರ-ಅಂಕೋಲಾ ಕ್ಷೇತ್ರದಲ್ಲಿ ಮತ್ಯಾವುದೇ ತೊಂದರೆ-ತೊಡಕುಗಳಿಲ್ಲ ಎಂಬಂತೆ ಸೈಲ್ ಆಡುತ್ತಿದ್ದಾರೆ. ಬೇಲೇಕೇರಿ ಬಂದರಿನಲ್ಲಾದ ಅದಿರು ಕಳ್ಳತನ ಕೇಸ್‌ನಲ್ಲಿ ಸಿಬಿಐ ತನ್ನನ್ನು ಹೆಡೆಮುರಿ ಕಟ್ಟಿ ಒಯ್ಯುವ ಒಳ ಆತಂಕದಲ್ಲಿರುವ ಈತ ಶಾಸಕನಾದ ಸಾಹಸಕ್ಕೆ ಇನ್ನೂ ಸನ್ಮಾನ ಮಾಡಿಸಿಕೊಳ್ಳುತ್ತಲೇ ಇದ್ದಾರೆ. ತನ್ನ ಅಡ್ನಾಡಿ ಚೇಲಾಗಳು-ಸಲಹೆಗಾರರಿಂದ ಸದಾ ಸುತ್ತುವರಿದಿರುವ ಸೈಲ್‌ಗೆ ಒಮ್ಮೊಮ್ಮೆ ಜನರೇ ಕಾಣಿಸದಂತಾಗುತ್ತಿದೆ. ಮೂಲಭೂತವಾಗಿ ಕಳ್ಳ ಅದಿರಿನ ಉದ್ಯಮಿಯಾದ ಸೈಲ್‌ಗೆ ಕ್ಷೇತ್ರವಾಸಿಗಳ ಕಷ್ಟ-ಸುಖ ಸುಲಭಕ್ಕೆ ಅರ್ಥವಾಗುತ್ತಿಲ್ಲ.

ರಾಷ್ಟ್ರೀಯ ಹೆದ್ದಾರಿ ಅಗಲೀಕರಣ, ಜಲ್ಲಿಕಲ್ಲಿನ ಕ್ವಾರಿ, ರಿಯಲ್ ಎಸ್ಟೇಟ್ ಮಾಫಿಯಾ, ಸರ್ಕಾರಿ ಮೆಡಿಕಲ್ ಕಾಲೇಜು ಸ್ಥಾಪನೆ, ಕಾಳಿ ನದಿ ದಂಡೆಯ ರೈತರ ಬಂಜರು ಭೂಮಿ, ಅಂಕೋಲಾ ಬಸ್ ಸ್ಟ್ಯಾಂಡ್... ಹೀಗೆ ಹಲವು ಸಮಸ್ಯೆಗಳಲ್ಲಿ ಸೈಲ್ ಎಡಬಿಡಂಗಿಯಂತೆ ಕಂಗೊಳಿಸಿದ್ದಾರೆ.

...ರಿ ಕಾಗೇರಿ!

...ರಸಿ-ಸಿದ್ದಾಪುರದ ಶಾಸಕ ವಿಶ್ವೇಶ್ವರ ... ಕಾಗೇರಿ ಆಡಳಿತ ಪಕ್ಷದಲ್ಲಿರಲಿ ... ವಿರೋಧ ಪಕ್ಷದಲ್ಲಿರಲಿ ಪಕ್ಕಾ ...ಣ್ಣ. ಮೋಸ-ವಂಚನೆಯ ...ರನೆ. ನಯ-ನಾಜೂಕಿನಲ್ಲೇ ಸ್ವಾರ್ಥ ...ವ ನಾಜೂಕಯ್ಯ. ಆತ ವಿರೋಧ ...ಶಾಸಕನಾಗಿದ್ದಾಗ ಅಂದು ಆಡಳಿತ ...ರ ಪ್ರಭಾವಿ ಮಂತ್ರಿ ...ಂಡೆಯವರೊಂದಿಗೆ ಒಳಒಪ್ಪಂದದ ...ಾರಣ ಮಾಡಿ ಕೆಲಸ ...ಕೊಳ್ಳುತ್ತಿದ್ದರು. ದೇಶಪಾಂಡೆಗೋ ...ದ ಶಾಸಕರಿಗಿಂತ ಈ ಕಾಗೇರಿ ...ಲೇನೇ ಪ್ರೀತಿ-ವಾತ್ಸಲ್ಯ ಸದಾ ಜಾಸ್ತಿ. ಕಾಗೇರಿ ...ಯವರಾದರೂ ಆತ ಸೋಲಲಿ ಎಂದು ದೇಶಪಾಂಡೆ ... ಪ್ರಯತ್ನ ಮಾಡಿದ್ದಿಲ್ಲ. ವೀಕ್ ಕ್ಯಾಂಡಿಡೇಟ್ ...ಎದುರು ಹಾಕಿ ಹೆಲ್ಪ್ ಮಾಡುವ ದೋಸ್ತ್.

...ಂಥ ಕಾಗೇರಿ ಬಿಜೆಪಿ ಸರ್ಕಾರದಲ್ಲಿ ಜಿಲ್ಲಾ ಉಸ್ತುವಾರಿ ...ಯಾಗಿದ್ದರು. ಆಗಾತ ತನ್ನ ಕ್ಷೇತ್ರ ಬಿಟ್ಟು ಉಳಿದ ಕ್ಷೇತ್ರ ಕಡೆಗಣಿಸಿದ್ದೇ ಹೆಚ್ಚು. ಆತ ಶಿರಸಿ ಮಂತ್ರಿ ... ಅಂದು ಕುಖ್ಯಾತರಾಗಿದ್ದರು. ಕಾಗೇರಿ ಕ್ಷೇತ್ರಕ್ಕೆ ... ಬಂದ ಅನುದಾನ ಕೋಟಿ-ಕೋಟಿ. ಆದರೂ ...ದೊಡ್ಡ ಉದ್ಧಾರವೇನೂ ಕ್ಷೇತ್ರದಲ್ಲಾಗಲಿಲ್ಲ. ಆದರೆ ... ಬಳಗ ಭರ್ಜರಿ ಅಭಿವೃದ್ಧಿಯಾಯ್ತು. ಅನುದಾನದ ...ಕೇಜ್ ಕೋಟಿಗಳ ಲೆಕ್ಕದಲ್ಲಿ ಕಾಗೇರಿ ಪರಿವಾರದ ...ಗೆ ಬಿತ್ತು, ಜನ ಮಾತ್ರ ಪರದಾಡುವುದು ತಪ್ಪಲಿಲ್ಲ. ... ಕಾಗೇರಿ ತಿಣುಕಾಡಿ ಗೆಲ್ಲಬೇಕಾಯ್ತು, ಬರೀ ... ಸಾವಿರ ಓಟಿಂದ ಕಾಗೇರಿ ಗೆದ್ದಾಗ ಕ್ಷೇತ್ರಕ್ಕೆ



ಮಾಡಿದ ಮೋಸ ಸಾಬೀತಾಗಿತ್ತು!

ಈಗ ಕಾಗೇರಿ ವಿರೋಧ ಪಕ್ಷದ ಎಮ್ಮೆಲ್ಲೆ. ಆತ ದೇಶಪಾಂಡೆ ಕಂಡಾಗೆಲ್ಲಾ "... ನಾನೊಬ್ಬನೇ ಜಿಲ್ಲೆಯಲ್ಲಿ ಬಿಜೆಪಿಯಿಂದ ಗೆದ್ದೋನು... ಉಳಿದವರೆಲ್ಲ ನಿಮ್ಮೋರು... ಹಾಗಂತ ನನ್ನ ಕ್ಷೇತ್ರ ಕಡೆಗಣಿಸಬೇಡಿ..." ಎಂದು ಅಲವತ್ತುಕೊಳ್ಳುತ್ತಾರೆ. ಯಾಕೆ ಕಾಗೇರಿ ಹಾಗೆ ಹೇಳುತ್ತಾರೆ? ತಾನು ಮಂತ್ರಿಯಾಗಿದ್ದಾಗ ಮಾಡಿದ 'ಪಾಪ'ವೇ ಮರುಕಳಿಸಬಹುದೆಂದಾ? ಆದರೆ ದೇಶಪಾಂಡೆ ಗೆಳೆಯ ಕಾಗೇರಿಯ 'ಕೈ' ಬಿಡುತ್ತಿಲ್ಲ! "ಕಾಗೇರಿಯವ್ರೇ ನೀವೂ ನಮ್ಮೋರೆ... ಹೆದರಬೇಡಿ..." ಎಂದು ಅಭಯ ಬಹಿರಂಗವಾಗೇ ಕೊಟ್ಟಿದ್ದಾರೆ. ಮಗನ ಎಂಪಿ ಮಾಡಲು ಕಾಗೇರಿ ಬಳಗದ ಬ್ರಾಹ್ಮಣರ ಓಟು ದೇಶಪಾಂಡೆಗೆ ಬೇಕು, ಬಿಡಿ.

ಕಾಗೇರಿ ಕ್ಷೇತ್ರದಲ್ಲಿ ಈ ನೂರು ದಿನದಲ್ಲಿ ಮಾಡಿದ್ದು ಬರೀ ಒಣ ಭಾಷಣ. ಸ್ವ-ಪಕ್ಷದ ಹಿತಶತ್ರು, ಸಂಸದ ಅನಂತ್ಮಾಣಿ ಮಣಿಸಿ ಬಿಜೆಪಿ ಮೇಲೆ ಹಿಡಿತ ಸಾಧಿಸುವ ಹಿಕಮತ್ತು, ಅಡಿಕೆ ಬೆಳೆಗೆ ಕೊಳೆರೋಗ ಬಂದು ತೋಟಿಗರು ಒದ್ದಾಡಿದರೂ ಕಾಗೇರಿಗೆ ಎಚ್ಚರಾಗಿದ್ದು ರೈತರು ಬೀದಿಗಿಳಿದಾಗಲೇ! ಮಂತ್ರಿಯಾಗಿದ್ದ ಕಾಗೇರಿ ಕ್ಷೇತ್ರದಲ್ಲಿದ್ದ ಸಮಸ್ಯೆಗಳು ಹಾಗೇ ಇದೆ. ರಸ್ತೆ-ವಿದ್ಯುತ್ ಇಲ್ಲದ ಊರು-ಕೇರಿಗಳು ಆತನ ಕ್ಷೇತ್ರದಲ್ಲಿದೆ. ಸಿದ್ದಾಪುರದಲ್ಲಿ ಸರಿಯಾದ ಬಸ್‌ನಿಲ್ದಾಣವೇ ಇಲ್ಲ! ಕೆರೆಗಳು ಹೂಳಿನಿಂದ ನಿಷ್ಪ್ರಯೋಜಕವಾಗಿವೆ. ಮೂಲಭೂತ ಸೌಕರ್ಯಗಳೇ ಇಲ್ಲದ ಅದೆಷ್ಟೋ ಹಳ್ಳಿಗಳು ಶಿರಸಿ-ಸಿದ್ದಾಪುರ ಎರಡೂ ತಾಲ್ಲೂಕಲ್ಲಿವೆ. ಕಾಗೇರಿ ಮಾತ್ರ ತಾನು ಅಭಿವೃದ್ಧಿಯ ಹರಿಕಾರನೆಂದು ಹುಸಿಪೋಸು ಕೊಡುತ್ತ ನೂರು ದಿನ ಕಳೆದಿದ್ದಾರೆ!

...ಅತೀ ಜರೂರಾಗಿ ಬೇಕಾಗಿರುವ ಪ್ರವಾಸೋದ್ಯಮ, ...ಕೆ, ಜಿಲ್ಲಾ ಕೇಂದ್ರ ಅಭಿವೃದ್ಧಿ, ಉನ್ನತ ಶಿಕ್ಷಣ ...ನ ಅವಶ್ಯಕತೆ, ಚತುಷ್ಪಥ ಸಮಸ್ಯೆಗಳ ಬಗ್ಗೆ ಸೈಲ್ ...ಗಂಭೀರವಾಗಿ-ಪ್ರಾಮಾಣಿಕವಾಗಿ ಯೋಚಿಸಿದಂತಿಲ್ಲ. ... ಬಂದೇ ಗುರಿ- ಹೇಗಾದರೂ ಮಾಡಿ ಕಾಂಗ್ರೆಸ್ ...ದು. ಹಾಗಾಗಿ ಅತ್ತ ಮ್ಯಾಗಿ ಪಾದಕ್ಕೂ ಡೈ ...ಯುತ್ತಾರೆ. ಇತ್ತ ದೇಶಪಾಂಡೆಗೂ ಉದ್ದಂಡ ...ಸುತ್ತಾರೆ. ವೈರಿ ಆನಂದ್ ಅಸ್ನೋಟಿಕರ್ ಕಾಂಗ್ರೆಸ್ ... ಮೊದಲೇ ಈ ಪಕ್ಷೇತರ ಶಾಸಕನಿಗೆ ತಾನು ... ಅವಸರ. ಒಣಪ್ರತಿಷ್ಠೆಯ ರಾಜಕಾರಣದಲ್ಲಿ ...ರಿ ಕರ್ತವ್ಯ ಸೈಲ್‌ಗೆ ಅರ್ಥವೇ ಆಗುತ್ತಿಲ್ಲ. ಸೈಲ್‌ಗೆ ...ಳಿ ಅಸ್ನೋಟಿಕರ್‌ನ ಹೀನಾಯ ಸೋಲು ...ಗದಿರುವುದು ಕಾರವಾರ-ಅಂಕೋಲೆಯ ದುರಂತ. ... ಶಾಸಕತ್ವದ ನೂರು ದಿನದ ನೂರಾರು ವೇಷ ...ಸುವ ಜನ ಆತ ಬದಲಾಗಲೆಂದು ಹಾರೈಸುತ್ತಿದ್ದಾರೆ. ...ರವಾರಕ್ಕೆ ಮೆಡಿಕಲ್ ಕಾಲೇಜು ಬರದಂತೆ ...ಟಿಕರ್ ಕಲ್ಲು ಹಾಕಿದ್ದರು. ಈಗದು ಸಿದ್ದು ಬಜೆಟ್‌ನಲ್ಲಿ ... ಆಗಿದೆ. ಆ ಕ್ರೆಡಿಟ್ ತನ್ನದೆಂದು ಸೈಲ್ ಕ್ಲೇಮು ...ತ್ತಿದ್ದಾರೆ. ಇನ್ನೊಂದೆಡೆ ಆತನ ಬಾಸ್ ದೇಶಪಾಂಡೆ ...ಮೆಡಿಕಲ್ ಕಾಲೇಜು ರುವಾರಿ ಎಂದು ಪೋಸು ...ತ್ತಿದ್ದಾರೆ. ವಾಸ್ತವವೆಂದರೆ ಈ ಮೆಡಿಕಲ್ ಕಾಲೇಜು ...ಕಾದರೆ ಇನ್ನೂ ಹಲವು ಕ್ಲಿಷ್ಟ ಪ್ರಕ್ರಿಯೆ ...ಬೇಕಿದೆ. ಇಲ್ಲದಿದ್ದರೆ ಅದು ಪಲ್ಟಿ ಹೊಡೆಯಲಿದೆ. ... ಸಂಪೂರ್ಣ ಆಗದ ಕೆಲಸಕ್ಕೆ ಸೈಲ್ ತಾನೇ ...ಮಹಾನ್ ಸಾಧಕನೆಂಬಂತೆ ಹಾರಾಡುತ್ತಿರುವುದು ...ಗಿದೆ. ಯಾಕೋ ನೂರೇ ದಿನದಲ್ಲಿ ಸೈಲ್ ಹಳಿ ...ದೆ.

ಮಗನೇ ಎಮ್ಮೆಲ್ಲೆ

...ಮಟಾ ಕ್ಷೇತ್ರಕ್ಕೆ ಕಾಂಗ್ರೆಸ್‌ನ ಶಾರದಾ ಶೆಟ್ಟಿ ಶಾಸಕಿ. ...ದು ಶಾಸಕನಾಗಿದ್ದ ಗಂಡ ಮೋಹನಶೆಟ್ಟಿ ನಿಧನದ ...ಪ ಮತ್ತು ಮಗ ಹರಿಸಿದ ಹಣದಿಂದ ...ದಾಕೆ. ಮನೆಯಲ್ಲಿ ಅಡಿಗೆ, ಗಂಡ-ಮಕ್ಕಳ ಲಾಲನೆ- ... ಮಾಡಿಕೊಂಡಿದ್ದ ಶಾರದಕ್ಕ ಶಾಸಕಿಯಾಗಿದ್ದೇ ...ಶ್ಚರ್ಯವಾಗಿ ಬಿಟ್ಟಿದ್ದಾರೆ. ಪಾಪ! ಜನರಿಗೆ ...ಯೋದು ಬಿಟ್ಟರೆ ಆಕೆಗೆ ಮತ್ತೇನೂ ಬಾರದು. ... ಆಕೆಯ ಹಿರಿಯ ಮಗ ರವಿಕುಮಾರ ಶೆಟ್ಟಿಯೇ ... ಎಮ್ಮೆಲ್ಲೆ! ರವಿಕುಮಾರ್‌ನ ಅಂಧಾ ದರ್ಬಾರು ...ಗಿ ಬರ್ಫೋಬ್ಬರಿ ನೂರು ದಿನಗಳು ಕಳೆದಿದೆ!! ... ಪಕ್ಕಾ ಅಧಿಕ ಪ್ರಸಂಗಿ ಹುಡುಗ. ಆತನಿಗೆ ...ನ್ನ ಜನಪರ ಬದ್ಧತೆಯಿಲ್ಲ, ಜನರೆಂದರೆ ಒಂಥರಾ ... ಅಷ್ಟ-ಅಷ್ಟ ಮಾಡಿಟ್ಟ ಹಣದಿಂದ ಜನರನ್ನು ...ನೆಂಬ ಅಹಂಕಾರ. ಹೀಗಾಗಿ ಆತನಿಗೆ ಕ್ಷೇತ್ರದ ...ಯು ಅರ್ಥವಾಗದು. ಅಮ್ಮ ಎಲ್ಲೇ ಹೋಗಲಿ ... ಹಾಜರ್. ಯಾರೇ ಮನವಿ ಕೊಡಲಿ, ದೂರು ... ಸಮಸ್ಯೆ ನಿವೇದಿಸಲಿ, ಅಧಿಕಾರಿಗಳು ಮೀಟಿಂಗ್ ...... ಎಲ್ಲದಕ್ಕೂ ರವಿಯೇ ಕೈ-ಬಾಯಿ ಹಾಕುತ್ತಾನೆ.

ತನ್ನ ರಾಜಕೀಯ ವಿರೋಧಿಗಳ ಸೊಂಟ ಮುರಿಯಲು ಆತ ಅಮ್ಮನ ಎಮ್ಮೆಲ್ಲೆಗಿರಿ ಬಳಸುತ್ತಿದ್ದಾನೆ. ಜತೆಗೆ ಹಣ ಮಾಡಲು, ವರ್ಗಾವರ್ಗಿ ಮಾಡಲು, ಅಧಿಕಾರದ ಮೋಜು ಅನುಭವಿಸಲು ಶಾಸಕತ್ವ ಬಳಸುತ್ತಿದ್ದಾನೆ.

ಶಾಸಕಿಯ ಕಾಣಲು ಬರುವವರಿಗೆ ಮೊದಲು ದುರ್ದರ್ಶನ ಆಗುವುದೇ ರವಿ ಸಾಹೇಬರದು. "... ಇಲ್ಲ... ಮೇಡಮ್ ಇಲ್ಲ... ಈಗವರು ಸಿಗೋದಿಲ್ಲಾ... ರೆಸ್ಟ್‌ನಲ್ಲಿದ್ದಾರೆ... ಏನಾಗಬೇಕು...? ನಾನೇ ಮಾಡ್ತೇನೆ ಹೇಳಿ..." ಎಂದು ರವಿ ಜನರಿಗೆ ಒರಟಾಗಿ ಮಾತಾಡಿಸುತ್ತಾನೆ. ಕ್ಷೇತ್ರದ ಉದ್ದಗಲ-ಇತಿಹಾಸ-ಭೂಗೋಳವೇ ಗೊತ್ತಿಲ್ಲದ ಈ ತಾಯಿ-ಮಗನಿಂದಾಗಿ ಕುಮಟಾ-ಹೊನ್ನಾವರದ ಶಾಸಕಿಯಿದ್ದೂ ಇಲ್ಲದ ಸ್ಥಿತಿಯಲ್ಲಿದೆ. ಈ ಕೆಟ್ಟ ಅನುಭವ ಕ್ಷೇತ್ರವಾಸಿಗಳಿಗೆ ಈ ಮೂರು ತಿಂಗಳಲ್ಲಿ ಪಕ್ಕಾ ಆಗಿದೆ! ಕಾಮಗಾರಿಗಳಲ್ಲಿ




ಶಾರದಾ ಶೆಟ್ಟಿ

ಪರ್ಸೆಂಟೇಜು-ಅಧಿಕಾರಿಗಳಿಂದ ಮಾಮೂಲು ರವಿ ಫಿಕ್ಸ್ ಮಾಡಿಸಿಕೊಂಡಿರುವ ಘಾಟು ವಾಸನೆ ಕ್ಷೇತ್ರದಲ್ಲಿ ಹಬ್ಬಿದೆ. ಮ್ಯಾಗಿ ಶಿಷ್ಯೆಯಾದ ಶಾಸಕಿ ಶಾರದಾರ ಹೆಸರು ಹೀಗೇ ಹಾಳಾಗಲೆಂದು ದೇಶಪಾಂಡೆ ಹಾರೈಸುತ್ತಿದ್ದಾರೆ. ಒಟ್ಟಿನಲ್ಲಿ ಶಾರದಾ ಶೆಟ್ಟಿಯನ್ನು ಗೆಲ್ಲಿಸಿದ ಜನರು ಸೋತಿದ್ದಾರೆ!

ಮಂಕಾಳ ಮಳ್ಳಾಟ

ದೊಡ್ಡ ಧ್ವನಿ-ಒರಟು ನುಡಿಯ ಮೀನುಗಾರ ತರುಣ ಮಂಕಾಳ ವೈದ್ಯ ಭಟ್ಕಳ ಕ್ಷೇತ್ರದ ಪಕ್ಷೇತರ ಶಾಸಕ. ಈ ಕ್ಷೇತ್ರದ ದೀವರು-ದೀವರೇತರರೆಂಬ ಕೊಳಕು ಜಾತಿ ರಾಜಕಾರಣದ ಜಿದ್ದಾಜಿದ್ದಿಯಲ್ಲಿ ವೈದ್ಯ ಗೆದ್ದಾಗ ಸ್ವತಃ ಆತನೇ ಅಚ್ಚರಿ ಪಟ್ಟಿದ್ದ. ಡೀಸೆಲ್ ಕಳ್ಳತನ, ರಿಯಲ್ ಎಸ್ಟೇಟ್‌ನಂಥ ಕಪ್ಪು ವ್ಯವಹಾರದಲ್ಲಿ ಕೂಡಿಸಿದ ಹಣ ನೀರಿನಂತೆ ಚೆಲ್ಲಿದ್ದ ವೈದ್ಯ ಶಾಸಕನಾಗಿ ಕಳೆದ ಈ ನೂರು ದಿನದಲ್ಲಿ ಆವಾಜ್ ಮಾಡದ ಒಂದೇ ಒಂದು ದಿನವಿಲ್ಲ! ಆದರೆ ಇದೆಲ್ಲವೂ ವ್ಯರ್ಥ ಆಲಾಪವೇ ಜನರ ಮಟ್ಟಿಗೆ. ಆತನ ಪಾಲಿಗದು ತಾಕತ್ತು ತೋರಿಸುವ-ಅಧಿಕಾರಿಗಳ



ಮಂಕಾಳ ವೈದ್ಯ

ಪಳಗಿಸುವ ಅನಿವಾರ್ಯ ಕರ್ಮ!


ಹೊನ್ನಾವರ ತಾಲ್ಲೂಕು ಮುಕ್ಕಾಲು ಪಾಲು, ಇಡೀ ಭಟ್ಕಳ ತಾಲ್ಲೂಕು ಸೇರಿ ಆಗಿರುವ ಕ್ಷೇತ್ರದಲ್ಲಿನ ಸಮಸ್ಯೆಗಳು ಒಂದೆರಡಲ್ಲ! ಇದೆಲ್ಲಾ ಯಾವುದೇ ಜನಪರ ಬದ್ಧತೆ-ಹೋರಾಟಗಳ ಸಂಸ್ಕಾರವಿಲ್ಲದೆ ಹಠಾತ್ ಶಾಸಕನಾದ ವೈದ್ಯನಿಗೆ ಅಷ್ಟು ಸುಲಭಕ್ಕೆ ಅರ್ಥವಾಗುವಂಥದ್ದಲ್ಲ; ಒಂದು ಕಡೆ ಕ್ಷೇತ್ರದ ಉದ್ದಕ್ಕೆ ಹಬ್ಬಿರುವ ಅರಬ್ಬೀ ಸಮುದ್ರ. ಮತ್ತೊಂದೆಡೆ ಶರಾವತಿ, ಶರಾಬಿ ನದಿಗಳ ಪಾತ್ರ ಪ್ರದೇಶ. ಮಗದೊಂದೆಡೆ ಸಾರಿಗೆ, ಮತ್ತಿತರ ಸಂಪರ್ಕ ಸೌಲಭ್ಯವೇ ಇಲ್ಲದ ಗುಡ್ಡಗಾಡಿನ ಒಳನಾಡು. ಮೀನುಗಾರರ ಸಮಸ್ಯೆ ಅಳಿವೆ ಹೂಳಿಂದ ಭೀಭತ್ಸವಾಗಿದೆ. ನೀರಾವರಿ ಸೌಲಭ್ಯ ಇಲ್ಲದ ಶರಾವತಿ-ಶರಾಬಿ ನದಿ ದಂಡೆಯ ಜನರು ಹಾಹಾಕಾರ ಹಾಕುತ್ತಿದ್ದಾರೆ. ಒಳನಾಡಲ್ಲಿ ರಸ್ತೆ-ಪೂಟ್ ಬ್ರಿಡ್ಜ್ ವೈದ್ಯಕೀಯ ಸವಲತ್ತುಗಳೇ ಇಲ್ಲ. ರೋಗಿಗಳು, ಗರ್ಭಿಣಿಯರನ್ನು ಹತ್ತಾರು ಕಿ.ಮೀ. ದೂರ ಹೊತ್ತೊಯ್ಯಬೇಕು. ಶರಾವತಿ ನದಿಯಲ್ಲಿ ಎಂಟ್ಹತ್ತು ದ್ವೀಪಗಳಿವೆ. ಇವುಗಳಿಗೆ ನಾಗರಿಕ ಪ್ರಪಂಚದ ಸಂಪರ್ಕವೇ ದುಃಸ್ಸಾಧ್ಯ!

ಇದೆಲ್ಲಾ ಶಾಸಕ ವೈದ್ಯರಿಗೆ ಗೊತ್ತಿಲ್ಲವೆಂದೇನಲ್ಲ. ಆದರೆ ಅದರ ಪರಿಹಾರಕ್ಕೆ ಆತ ಇನ್ನೂ ರೋಡ್‌ಮ್ಯಾಪ್ ಹಾಕಿಕೊಂಡಿಲ್ಲ. ಕಂಡ-ಕಂಡಲ್ಲಿ ಸನ್ಮಾನ ಸ್ವೀಕರಿಸುತ್ತ ಅಭಿವೃದ್ಧಿಯ ನಂದನವನವೇ ಧರೆಗಿಳಿಸುವ ಭೋಂಗು ಬಿಡುತ್ತಿದ್ದಾರೆ. ಅಧಿಕಾರಿಗಳ ಮೀಟಿಂಗ್ ಮೇಲೆ ಮೀಟಿಂಗ್ ಕರೆದು ಜನಪರ ಪೋಸು ಕೊಡುತ್ತಿದ್ದಾರೆ. ಆದರೆ ಪರಿಣಾಮ ಮಾತ್ರ ಶೂನ್ಯ. ತಾನು ಅಸಲೀ ಕಾಂಗ್ರೆಸಿಗ ಎಂದು ಅಲವತ್ತುಕೊಳ್ಳುತ್ತಿರುವ ವೈದ್ಯ ಪಕ್ಷೇತರನಾದರೂ ಕಾಂಗ್ರೆಸ್ ಸಭೆಗಳಿಗೆ ನುಗ್ಗುವ ಪರಿ ಹಾರರ್ ಶೋನಂತಿರುತ್ತದೆ! ದೇಶಪಾಂಡೆಗೆ ವೈದ್ಯನಂಥ ಶಾಸಕರು ಮಗನ ಎಂಪಿ ಮಾಡಲು ಬೇಕಾಗಿದ್ದಾರೆ. ಇದೇ ಪಕ್ಷೇತರ ಶಾಸಕನ ಬಲ. ಈ ಮಂತ್ರಿ ಸಖ್ಯಾ ಆತ ಕ್ಷೇತ್ರದ ಅಭಿವೃದ್ಧಿಗೆ ಬಳಸಿಕೊಳ್ಳಲಿ ಎಂಬುದು ಭಟ್ಕಳ-ಹೊನ್ನಾವರದ ಜನರ ಅಳಲು. ಎಲೆಕ್ಷನ್‌ಗೆ ಹಾಕಿದ ಕೋಟ್ಯಂತರ ರೂ. ರಿಕವರಿಗೆ ವೈದ್ಯ ಅಧಿಕಾರಿಗಳಿಗೆ-ಗುತ್ತಿಗೆದಾರರಿಗೆ 'ಚಿಕಿತ್ಸೆ' ಶುರು ಮಾಡಿರುವ ಸುದ್ದಿಗಳು ಹಾರಾಡುತ್ತಿದೆ!

ಹೆಬ್ಬಾರ್ ಖದರ್

ಯಲ್ಲಾಪುರ-ಮುಂಡಗೋಡದ ಕಾಂಗ್ರೆಸ್ ಶಾಸಕ ಶಿವರಾಮ ಹೆಬ್ಬಾರ್ ಹೇಳಿಕೇಳಿ ಕಬ್ಬಿಣದ ಅದಿರು ವ್ಯವಹಾರಸ್ಥ. ಈ ಕಪ್ಪು ಉದ್ಯಮದಲ್ಲಿ ಕೊಪ್ಪರಿಗೆ ಕಾಸು ಮಾಡಿದ್ದ ಹೆಬ್ಬಾರ್ ಜೀವನದಲ್ಲೊಮ್ಮೆ ಶಾಸಕನಾಗಬೇಕೆಂದು ಕನಸು ಕಂಡದ್ದು ಬಿಜೆಪಿಯಲ್ಲಿದ್ದಾಗಲೇ. ಅಲ್ಲಿಂದ ಆತ ಹೊರಬೀಳುವಾಗ ಹರಾಮಿ ಸಂಸದ ಅನಂತ್ಮಾಣಿಯಿಂದ ಕೆನ್ನೆಗೆ ಬಾರಿಸಿಕೊಂಡಿದ್ದ. ಅದೇ ಬಿಜೆಪಿ ಅನಂತ್ಮಾಣಿ ಈ ಬಾರಿ ಜಾತಿಬಾಂಧವ ಹೆಬ್ಬಾರ್‌ಗೆ ಒಳ ಸಪೋರ್ಟ್ ಮಾಡಿ ತನ್ನ ಪಕ್ಷದ ಶಾಸಕನಾಗಿದ್ದ ವಿ.ಎಸ್.ಪಾಟೀಲನ ಸೋಲಿಸಿ ಸಂತೋಷ ಪಟ್ಟಿದ್ದಾನೆ.

ಹೆಬ್ಬಾರ್ ಅಂಥ ಹೋಪ್‌ಲೆಸ್ ಆದ್ಮಿಯೇನಲ್ಲ. ಎಪಿಎಂಸಿಯಿಂದ ವಿವಿಧ ಸಂಘ-ಸಂಸ್ಥೆ ಹೋರಾಟದಲ್ಲಿದ್ದ ಹೆಬ್ಬಾರ್‌ಗೆ ಮಲೆನಾಡು-ಅರೆಬಯಲು ಸೀಮೆ-ಕನ್ನಡದ ಪ್ರಥಮ ರಾಜಧಾನಿ ಬನವಾಸಿ ಸೀಮೆ ಒಳಗೊಂಡ ತನ್ನ ಕ್ಷೇತ್ರದ ಉದ್ದಗಲವೇ ಸರಿಯಾಗಿ ಅರ್ಥವಾದಂತಿಲ್ಲ. ತನ್ನ ಕಪ್ಪು ಹಣ ವೈಯಕ್ತಿಕ ಕಷ್ಟ-ನಷ್ಟಗಳಿಗೆ, ಪಡ್ಡೆ ಹುಡುಗರ ಕ್ರೀಡೆ-ಸಾಂಸ್ಕೃತಿಕ-ಟೀಮುಗಳಿಗೆ ಕೊಡುವ ಮೂಲಕ 'ಜನಪ್ರಿಯ'ನಾದ ಹೆಬ್ಬಾರ್‌ಗೆ ಕ್ಷೇತ್ರದ ಬೇಕು-ಬೇಡವೇ ಇನ್ನೂ ಅರ್ಥವಾದಂತಿಲ್ಲ. ಕ್ಷೇತ್ರದಲ್ಲಿರುವ ಕುಣಬಿ-ಗೌಳಿ-ಸಿದ್ದಿ ಬುಡಕಟ್ಟು ಜನರ ಸಮಸ್ಯೆಗೆ ಪರಿಹಾರೋಪಾಯ ಆತನಲ್ಲಿಲ್ಲ. ಹಿಂದುಳಿದ ಬಡ-ಮಧ್ಯಮ ವರ್ಗದವರೇ ಕ್ಷೇತ್ರದ ತುಂಬಿದ್ದಾರೆ. ಕೃಷಿ-ತೋಟಗಾರಿಕೆ ಅವಲಂಬಿತ ಕುಟುಂಬಗಳೇ ಜಾಸ್ತಿ. ಇವರ ಆರ್ಥಿಕ ಸ್ವಾವಲಂಬನೆಗೆ ಸ್ಕೆಚ್ ಹೆಬ್ಬಾರ್ ಹಾಕಿದಂತಿಲ್ಲ.



ಶಿವರಾಮ ಹೆಬ್ಬಾರ್

ಸಣ್ಣ ಗುಡಿ ಕೈಗಾರಿಕೆ-ಉದ್ಯೋಗ ಸೃಷ್ಟಿ, ಪರಿಸರ ಸ್ನೇಹಿ ಉದ್ಯಮ, ತೋಟಿಗರ ಉತ್ಪನ್ನಕ್ಕೆ ಯೋಗ್ಯ ಬೆಲೆ, ಕೃಷಿ-ತೋಟಗಾರಿಕೆಗೆ ಪ್ರೋತ್ಸಾಹ, ಅಡಿಕೆಗೆ ಕೊಳೆರೋಗ-ಹಳ ರೋಗ ತಡೆ ಅಧ್ಯಯನ, ಹನಿ ನೀರಾವರಿ... ಸಮಸ್ಯೆ ಯಲ್ಲಾಪುರ ಭಾಗದಲ್ಲಿದೆ. ಮುಂಡಗೋಡಿನ ಭತ್ತ ಬೆಳೆವ ರೈತರಿಗೆ ಅಂತರ್ಜಲ ಹೆಚ್ಚಾಗಬೇಕಿದೆ. ಅದಕ್ಕೆ ಕೆರೆಗಳ ಹೂಳೆತ್ತಬೇಕಿದೆ. ಬಸ್‌ನಿಲ್ದಾಣ, ಬಸ್ ಡಿಪೋ ಬೇಕಾಗಿದೆ. ಜಲಾಶಯಗಳ ಅಭಿವೃದ್ಧಿ ಆಗಬೇಕಿದೆ. ಹಾಗೆಯೇ ಬನವಾಸಿ ಅಭಿವೃದ್ಧಿ ಪ್ರಾಧಿಕಾರ ರಚನೆ, ಬನವಾಸಿ ತಾಲ್ಲೂಕು ರಚನೆ ಬಗ್ಗೆ ಹೆಬ್ಬಾರ್ ಯೋಚಿಸಬೇಕಿದೆ. ಇದೆಲ್ಲ ಆತ ಸದ್ಯಕ್ಕಂತೂ ಕಂಡೂ-ಕಾಣದಂತೆ ಬರೀ ಸನ್ಮಾನ, ಸಿಬಿಐ ಭಯ (ಅದಿರು ಅವ್ಯವಹಾರ)ದಲ್ಲೇ ಕಾಲ ಕಳೆಯುತ್ತಿದ್ದಾರೆ. ಮ್ಯಾಗಿ-ದೇಶಪಾಂಡೆಯ ಒಣರಾಜಕಾರಣದಲ್ಲಿ ಬಸವಳಿದಿದ್ದಾರೆ.

ಹೆಬ್ಬಾರ್ ಸ್ವ-ಜಾತಿ ಬ್ರಾಹ್ಮಣ ವ್ಯಾಮೋಹಿ ಎಂಬ ಭಾವನೆ ಆತನ ನಡೆ-ನುಡಿಯಿಂದ ಸಾಬೀತಾಗುತ್ತಿದೆ. ಬ್ರಾಹ್ಮಣಿಕೆ ಗತ್ತು ಬಿಟ್ಟು ತಾನು ಎಲ್ಲಾ ಜಾತಿ-ಧರ್ಮದ ಶಾಸಕನೆಂಬುದು ಅರ್ಥಮಾಡಿಕೊಳ್ಳಬೇಕಿದೆ. ಈ ನೂರು ದಿನದಲ್ಲಿ ಹೆಬ್ಬಾರ್ ಹಾರವರ ಪಕ್ಷಪಾತಿ ಎಂಬುದಷ್ಟೇ ರುಜುವಾತಾಗಿದೆಯೇ ಹೊರತು ಕೆಲಸಗಾರ ಶಾಸಕ-ಜನಪರ ಶಾಸಕನಾಗುವ ಲಕ್ಷಣಗಳೇನೂ ಕಾಣಿಸಿಲ್ಲ!

• ಶುದ್ದೋದನ

ಪುಸ್ತಕ ವಿಮರ್ಶೆ ಬಗ್ಗೆ...

'ಲಂಕೇಶ್'ನಲ್ಲಿ ಪುಸ್ತಕ ವಿಮರ್ಶೆ ವಿಭಾಗಕ್ಕೆ ಲೇಖಕರು/ಪ್ರಕಾಶಕರು ತಮ್ಮ ಪುಸ್ತಕಗಳನ್ನು ಕಳುಹಿಸುವಾಗ ದಯಮಾಡಿ ಪುಸ್ತಕದ ಎರಡು ಪ್ರತಿಗಳನ್ನು ಕಳುಹಿಸಲು ಕೋರಿದೆ.





ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸಬೇಕಾದ ವಿಳಾಸ

'ಲಂಕೇಶ್', ಪುಸ್ತಕ ವಿಮರ್ಶೆ ವಿಭಾಗ, ನಂ. 9, ಇ.ಎ.ಟಿ. ರಸ್ತೆ, ಬಸವನಗುಡಿ, ಬೆಂಗಳೂರು-4


ಛೋಟಾ ಶಕೀಲ್


ದಾವೂದ್


ಇಕ್ಬಾಲ್ ಮಿರ್ಚಿ


ಹಫೀಜ್ ಸೈಯದ್


ಮೌಲಾನ ಮಸೂದ್


ಟೈಗರ್ ಮೆಮೂನ್


ಅಯೂಬ್ ಮೆಮೂನ್

ತುಂಡಾ: ಕ್ಷುದ್ರ ಜಿಹಾದಿ

* ಆತ ತನ್ನ ಹನ್ನೆರಡನೇ ವಯಸ್ಸಿಗೇ ಬಾಂಬ್ ತಯಾರಿಸಿದ್ದ!
* ಸಾಧ್ಯವಾದಷ್ಟು ಮಂದಿ ಭಾರತೀಯರನ್ನು ಕೊಲ್ಲುವುದನ್ನೇ ತನ್ನ ಬದುಕಿನ ಉದ್ದೇಶವಾಗಿಸಿಕೊಂಡಿದ್ದ!
* ಬಾಂಬ್ ತಯಾರಿಸುತ್ತಲೇ ತನ್ನ ಒಂದು ಕೈಯನ್ನು ಕಳೆಕೊಂಡ!
* ಇದ್ದ ಒಂದೇ ಕೈಯಿಂದ ಜನರನ್ನು ಕೊಲ್ಲುತ್ತಲೇ ಬಂದ!
* ಕೊಲ್ಲುವುದಕ್ಕೆಂದೇ ಕಟ್ಟಿಕೊಂಡ ಮಡದಿ, ಹುಟ್ಟಿದ ದೇಶವನ್ನೂ ತೊರೆದು ಪಾಕಿಸ್ತಾನ ಸೇರಿಕೊಂಡ!
* ವಿಧ್ವಂಸಕ್ಕಾಗಿ ತನ್ನ ಮಗನನ್ನೇ ಬಲಿಕೊಟ್ಟ!
* ಅಂತಿಮವಾಗಿ ಭಾರತದಲ್ಲಿ ನಲವತ್ತಕ್ಕೂ ಅಧಿಕ ಬಾಂಬ್ ಸ್ಫೋಟಗಳನ್ನು ನಡೆಸಿ ನೂರಾರು ಮಂದಿಯನ್ನು ಕೊಂದೂ ಬಿಟ್ಟ!

ಹೀಗೆ ಒಂದರಮೇಲೊಂದು ಆಘಾತಕಾರಿ ಅನಾಹುತಗಳಿಗೆ ಕಾರಣನಾಗುತ್ತಲೇ ಅಂತಿಮವಾಗಿ ದೆಹಲಿ ಪೊಲೀಸರ ಕೈಗೆ ಸೆರೆ ಸಿಕ್ಕಿ ಜೈಲು ಪಾಲಾದ. ಹೆಸರು ಅಬ್ದುಲ್ ಕರೀಮ್ ತುಂಡಾ ಅಲಿಯಾಸ್ ಅಬ್ದುಲ್ ಖುದ್ದೂಸ್. ವಯಸ್ಸು ಎಪ್ಪತ್ತಾಗಿದೆ. ಹಣ್ಣು ಮುದುಕ. ಒಂದಲ್ಲ ಎರಡಲ್ಲ, ಮೂರು ಬಾರಿ ಮದುವೆಯಾಗಿದ್ದಾನೆ. ತನ್ನ ಮೊಮ್ಮಗಳಿಗಿಂತಲೂ ಕಮ್ಮಿ ವಯಸ್ಸಿನ ಹುಡುಗಿಯನ್ನು ಮದುವೆಯಾಗಿದ್ದಾನೆ. ಅದೂ ಒಂದಲ್ಲ, ಇಬ್ಬರು ಪತ್ನಿಯರಿದ್ದೂ ಬಾಲಕಿಯನ್ನು ಮದುವೆಯಾಗುತ್ತಾನೆ. ಸಿಕ್ಕವರಿಗೆಲ್ಲ ಬಾಂಬ್ ತಯಾರಿಸುವುದನ್ನು ಹೇಳಿಕೊಡುತ್ತಾನೆ. ಕೊಂದವರು ಯಾರು? ಕೊಂದಿದ್ದು ಏಕೆ? ಕೊಂದು ಗಳಿಸಿದ್ದು ಏನು? ಹರಿಸಿದ ರಕ್ತ ಎಷ್ಟು? ಉರುಳಿದ ತಲೆಗಳೆಷ್ಟು? ಇತ್ಯಾದಿ ಯಾವುದನ್ನೂ ವಿವೇಚಿಸದೇ ಬಾಂಬ್ ಇಡುವುದು, ಜನರನ್ನು ಕೊಲ್ಲುವುದು ಇಷ್ಟನ್ನೇ ತನ್ನ ಬದುಕಿನ ಧ್ಯೇಯವಾಗಿಸಿಕೊಂಡವನ ಹೆಸರು ತುಂಡಾ!

ದಾವೂದ್ ಇಬ್ರಾಹಿಂ, ಹಫೀಜ್ ಸಯೀದ್, ಮೌಲಾನಾ ಮಸೂದ್ ಅಜ್ಹರ್, ಛೋಟಾ ಶಕೀಲ್, ಮೆಮೋನ್ ಬ್ರದರ್ಸ್- ಹೀಗೆ ಭಾರತದ ಮೋಸ್ಟ್ ವಾಂಟೆಡ್ ಭಯೋತ್ಪಾದಕರೆಂದು ಯಾರೆಲ್ಲರ ಹೆಸರನ್ನು ಇಂಟರ್‌ಪೋಲ್ ತನ್ನ ಹಿಟ್‌ಲಿಸ್ಟ್‌ನಲ್ಲಿ ನಮೂದಿಸಿದೆಯೋ ಅಂಥದ್ದೇ ಹೆಸರುಗಳ ಪೈಕಿ ಒಂದು ಅಬ್ದುಲ್ ಕರೀಮ್ ತುಂಡಾ!

1993ರಲ್ಲಿ ನಡೆದ ಮುಂಬಯಿ ಸರಣಿ ಸ್ಫೋಟ, 1996ರಲ್ಲಿ ನಡೆದ ದೆಹಲಿ ಸೀರಿಯಲ್ ಬಾಂಬ್ ದಾಳಿ, 1997ರಲ್ಲಿ ದೆಹಲಿಯ ಪಂಜಾಬಿ ಭಾಗದಲ್ಲಿ ನಡೆದ ನಗರ ಸಾರಿಗೆ ಬಸ್ ಸ್ಫೋಟ ಮತ್ತು ಅದರಲ್ಲಿ ನಾಲ್ವರು ಸತ್ತು 24 ಮಂದಿ ಗಾಯಗೊಂಡ ದುರಂತ, ಕರ್ನಾಟಕದ ಗುಲ್ಬರ್ಗ ಸೇರಿದಂತೆ ಹೈದರಾಬಾದ್, ಸೂರತ್, ಲಕ್ನೋಗಳಲ್ಲಿ ನಡೆದ ಸ್ಫೋಟಗಳು, 1997ರಲ್ಲಿ ದೆಹಲಿಯ ಪೊಲೀಸ್ ಕೇಂದ್ರ ಕಚೇರಿಯ ಮೇಲೆ ನಡೆದ ಬಾಂಬ್ ದಾಳಿ, ಮುಂಬೈನ ಸರಣಿ ರೈಲು ಸ್ಫೋಟ, ಪಾಣಿಪತ್ ಸೋನೇಪತ್ ಮತ್ತು ಲೂಧಿಯಾನಾಗಳಲ್ಲಿ ನಡೆದ ಭೀಕರ ಬಾಂಬ್ ಸ್ಫೋಟಗಳು- ಹೀಗೆ 1993ರಿಂದ 1998ರ ವರೆಗೆ ದೇಶದ ವಿವಿಧೆಡೆ ನಡೆದ 40ಕ್ಕೂ ಅಧಿಕ ಬಾಂಬ್ ಸ್ಫೋಟಗಳ ಹಿಂದಿದ್ದವನು ಇದೇ ತುಂಡಾ.

ಸದ್ಯ ದೆಹಲಿ ಪೊಲೀಸರಿಂದ ನೇಪಾಳದ ಗಡಿಯಲ್ಲಿ ಬಂಧಿತನಾಗಿ ಒಂದೊಂದೇ ಸತ್ಯವನ್ನು ಬಾಯಿ ಬಿಡುತ್ತಿರುವ ತುಂಡಾನ ಅಂತಾರಾಷ್ಟ್ರೀಯ ನೆಟ್‌ವರ್ಕ್. ಆತನ ಜಿಹಾದಿ ಜಾಲ, ಸುತ್ತಾಡಿದ ದೇಶಗಳು, ಭೇಟಿಯಾದ ವ್ಯಕ್ತಿಗಳು, ಮಾಡಿದ ಅನಾಹುತ ಇತ್ಯಾದಿಗಳೆಲ್ಲ ಅಂತಾರಾಷ್ಟ್ರೀಯವಾಗಿ ಅನೇಕ ಸತ್ಯಗಳನ್ನು ಹೊರಗೆಡುಹಿದೆ.

ದೆಹಲಿಯಲ್ಲಿ ಜನಿಸಿ ತದನಂತರ ಘಾಜಿಯಾಬಾದ್‌ನ ಹಳ್ಳಿಯೊಂದರಲ್ಲಿ ತಂದೆ ಜೊತೆ ಕಮ್ಮಾರಿಕೆಗಿಳಿದ ತುಂಡಾ ತನ್ನ 12ನೇ ವಯಸ್ಸಿಗೇ ಬಾಂಬ್ ತಯಾರಿಸುವುದನ್ನು ಕಲಿತುಬಿಟ್ಟ. ಈತನ ತಂದೆ ಕಾರ್ಪೆಂಟರ್ ಕೂಡ ಆಗಿದ್ದ. ಸ್ಥಳೀಯವಾಗಿ ಸಿಗುತ್ತಿದ್ದ ತಾಮ್ರ, ಸತು, ಅಲ್ಯೂಮಿನಿಯಂ ಅನ್ನು ಬಳಸಿ ಹೇಗೆ ಬಾಂಬ್ ತಯಾರಿಸಬೇಕು ಎಂಬುದನ್ನು ಈತನ ತಂದೆಯೇ ಕಲಿಸಿಕೊಟ್ಟಿದ್ದನಂತೆ. ಏಕೆಂದರೆ ಈತನ ತಂದೆಯ ತಮ್ಮನೊಬ್ಬನನ್ನು 1980ರಲ್ಲಿ ಮಹಾರಾಷ್ಟ್ರದ ಬಾಳಾಠಾಕ್ರೆಯ ಬೆಂಬಲಿಗರು ನಡುರಸ್ತೆಯಲ್ಲೇ ಇರಿದು ಕೊಂದಿದ್ದರು. ಅದು 1980ರ ಭಯಾನಕ ಭೀವಂಡಿ ಗಲಭೆಯ ಪರಿಣಾಮವಾಗಿತ್ತು.

ಆಗ ಮುಂಬಯಿಯನ್ನು ಅಕ್ಷರಶಃ ಆಳುತ್ತಿದ್ದ ಬಾಳಾಠಾಕ್ರೆಯ ಪ್ರಚೋದನೆಯಿಂದಾಗಿ ನಡೆದ ಭೀವಂಡಿ ಗಲಭೆಯ ಫಲವಾಗಿ ಕೋಮು ದಳ್ಳುರಿ ಭುಗಿಲೆದ್ದಿತು. ತುಂಡಾನ ಚಿಕಪ್ಪ ಅಂದರೆ ತಂದೆಯ ತಮ್ಮನನ್ನು ನಡುರಸ್ತೆಯಲ್ಲಿ ಇರಿದು ಕೊಲ್ಲುತ್ತಿದ್ದುದನ್ನು ತುಂಡಾ ಕಣ್ಣಾರೆ ಕಂಡಿದ್ದ. ಇದಾದನಂತರ ದಾವೂದ್ ಮತ್ತು ಮೆಮೋನ್ ಬ್ರದರ್ಸ್ ಸೇರಿಕೊಂಡು ಮುಂಬಯಿಯಲ್ಲಿ ನಡೆಸಿದ ಸರಣಿ ಸ್ಫೋಟದಲ್ಲೂ ಸಕ್ರಿಯವಾಗಿದ್ದ. ಮುಂದೆ ಬಾಬರಿ ಮಸೀದಿ ಧ್ವಂಸವಾದ ಮೇಲಂತೂ ಪಕ್ಕಾ ಜಿಹಾದಿಯಾದ. ಭಾರತವನ್ನಷ್ಟೇ ಅಲ್ಲ, ಹಿಂದೂಗಳನ್ನೂ ದ್ವೇಷಿಸತೊಡಗಿದ್ದ.

ಇದರ ಜೊತೆಜೊತೆಗೇ ಸ್ಕ್ರ್ಯಾಪ್ ಡೀಲಿಂಗ್, ಬಟ್ಟೆ ವ್ಯಾಪಾರ, ಸುಗಂಧ ದ್ರವ್ಯಗಳ ವಹಿವಾಟಗಿಳಿದ ತುಂಡಾ ಸದ್ದಿಲ್ಲದೆ ಬಾಂಗ್ಲಾದೇಶಕ್ಕೆ ಹೋಗಿ, ಆನಂತರ ಅಲ್ಲಿಂದ ಪಾಕಿಸ್ತಾನಕ್ಕೆ ಹೋದ. ಅಲ್ಲಿ ಐಎಸ್‌ಐ ಮುಖ್ಯಸ್ಥ ಹಮೀದ್ ಗುಲ್‌ನೊಂದಿಗೆ ಸಂಪರ್ಕ, ಆ ಮೂಲಕ ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದನೆಗಿಳಿದಿದ್ದ ಲಷ್ಕರ್-ಇ-ತೊಯ್ಬಾ ಸಂಘಟನೆಯ ಸಂಪರ್ಕ, ಎಲ್‌ಇಟಿ ಮುಖ್ಯಸ್ಥ ಹಫೀಜ್ ಸಯೀದ್ ಜೊತೆ ಗೆಳೆತನ, ಜೊತೆಗೆ ಜೈಷ್-ಎ-ಮೊಹಮ್ಮದ್ ಸಂಘಟನೆಯ ನಾಯಕ ಮೌಲಾನಾ ಮಸೂದ್ ಅಜರ್‌ನ ಜೊತೆಗೂ ಸಂಪರ್ಕ ಸಾಧಿಸಿದ್ದ.



ಇದೆಲ್ಲದರ ಪ್ರತಿಫಲವೆಂಬಂತೆ ಎಲ್ಲೆಂದರಲ್ಲಿ ಬಾಂಬ್ ಸ್ಫೋಟಗಳು ನಡೆಯುತ್ತಲೇ ಇದ್ದವು. ಮೊದಮೊದಲು ಇದೆಲ್ಲ ದಾವೂದ್ ಗ್ಯಾಂಗಿನದ್ದೇ ಕೆಲಸ ಎಂದು ಭಾವಿಸಿದ್ದ ಪೊಲೀಸರಿಗೆ ಒಂದೆಡೆ ಬಾಂಬ್ ಸ್ಫೋಟಿಸಿ ವಿಧ್ವಂಸಕ ನಡೆಸುತ್ತಲೇ ಭಯೋತ್ಪಾದನೆಗಿಳಿದಿದ್ದ ತುಂಡಾ ಮತ್ತೊಂದೆಡೆ ಇಸ್ಲಾಮಿಕ್ ಚಳವಳಿಯಲ್ಲೂ ಗುರುತಿಸಿಕೊಂಡಿದ್ದ. ಪ್ರಾರಂಭದಲ್ಲಿ 'ತಂಜೀಮ್' ಎಂಬ ಇಸ್ಲಾಂ ಪ್ರಚಾರದ ಸಂಸ್ಥೆಯೊಂದನ್ನು ಆರಂಭಿಸಿದ. ಅಲ್ಲಿ ಮುಂಬಯಿಯ ವ್ಯಾಪಾರಿ ಜಹೀರ್ ಅನ್ಸಾರಿ ಎಂಬಾತನ ಪರಿಚಯವಾಗಿ ಆತನ ಜೊತೆ ಸೇರಿದ್ದೇ ತಂಜೀಮ್-ಇಸ್ಲಾಮ್-ಉಲ್-ಮುಸ್ಲಿಮೀನ್ ಎಂಬ ಮತ್ತೊಂದು ಸಂಘಟನೆಯನ್ನು ಪ್ರಾರಂಭಿಸಿದ. ಈ ರೀತಿ ಮುಸ್ಲಿಂ ಧರ್ಮದ ಪ್ರಚಾರದ ಸೋಗು ಧರಿಸಿಯೇ ಬಾಂಗ್ಲಾದೇಶದ ಇಸ್ಲಾಮಿಕ್ ಉಗ್ರರ ಜೊತೆಗೂ ಸಂಪರ್ಕ ಸಾಧಿಸಿಬಿಟ್ಟ. ಅನ್ಸಾರಿ ಮತ್ತು ತುಂಡಾ ಸೇರಿಕೊಂಡು ಬಾಂಬೆ, ಹೈದರಾಬಾದ್‌ಗಳ ವಿವಿಧ ರೈಲುಬೋಗಿಗಳಲ್ಲಿ ಬಾಂಬ್ ಇರಿಸಿದ್ದೇ ಏಳು ಪ್ರಮುಖ ಬಾಂಬ್ ಸ್ಫೋಟಗಳಿಗೆ ಕಾರಣವಾದರು.

1994 ರಲ್ಲಿ ಅನ್ಸಾರಿ ಮುಂಬಯಿ ಪೊಲೀಸರಿಗೆ ಸಿಕ್ಕುಬಿದ್ದ. ಆತ ಬಾಯಿಬಿಟ್ಟದ್ದೇ ಅಬ್ದುಲ್ ಕರೀಮ್ ಅಲಿಯಾಸ್ ಅಬ್ದುಲ್ ಖುದ್ದೂಸ್ ಎಂಬ ಹೆಸರನ್ನು. ಆ ಹೊತ್ತಿಗಾಗಲೇ ಪೈಪ್ ಬಾಂಬ್ ತಯಾರಿಸಲೆತ್ನಿಸಿ ತನ್ನ ಎಡಗೈಯನ್ನು ಕಳೆಕೊಂಡಿದ್ದ ಅಬ್ದುಲ್ ಕರೀಮ್‌ಗೆ ಮುಂದೆ ಅದೇ ಗುರುತಿನ ಚಿಹ್ನೆಯಾಗಿ ಪರಿಣಮಿಸಿತ್ತು. ಉರ್ದುವಿನಲ್ಲಿ ತುಂಡಾ ಎಂದರೆ ಒಂದು ಕೈ ಐಬಾದವನು. ಅನ್ಸಾರಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದು ಗೊತ್ತಾಗಿದ್ದೇ ತನ್ನ ಸ್ವಂತ ಊರು ಘಾಜಿಯಾಬಾದ್‌ಗೆ ಪರಾರಿಯಾದವನು ಅಲ್ಲಿಂದಲೇ ಬಾಂಗ್ಲಾದೇಶ್ ಸೇರಿಕೊಂಡ. ಅಲ್ಲಿಂದ ಪಾಕಿಸ್ತಾನಕ್ಕೆ ಹೋದ.

ಹಾಗೇ ಪಾಕ್ ಹೋದವನು ಅಲ್ಲಿ ದಾವೂದ್ ಇಬ್ರಾಹಿಂನನ್ನು ಭೇಟಿಯಾದ. ಪಾಕ್‌ನಲ್ಲಿ ಆ ಹೊತ್ತಿಗಾಗಲೇ ಹಫೀಜ್ ಸಯೀದ್, ಮೌಲಾನಾ ಅಜರ್ ಮಸೂದ್, ಛೋಟಾ ಶಕೀಲ್, ಮೆಮೋನ್ ಇತ್ಯಾದಿ ಭಯೋತ್ಪಾದಕರ ಹಿಂಡೇ ಜಮೆಯಾಗಿತ್ತು. ಇವರೆಲ್ಲರ ಸಂಪರ್ಕದ ಮೂಲಕವೇ ಬಾಂಗ್ಲಾದ ಇಸ್ಲಾಮಿಕ್ ಉಗ್ರರನ್ನು ಬಳಸಿಕೊಂಡು ಮತ್ತೆ 1996 ರಲ್ಲಿ ಭಾರತಕ್ಕೆ ಬಂದವನು 1998 ರ ಮಧ್ಯೆ ಸರಿಸುಮಾರು 20 ಭಯಾನಕ ಸ್ಫೋಟಗಳಿಗೆ ಕಾರಣನಾದ. ಕೆಲವೆಡೆ ಪಾಕ್‌ನಿಂದ ಕರೆಸಿದ್ದ ಉಗ್ರರಿಂದಲೂ ಬಾಂಬ್ ಇರಿಸಿದ್ದ. ತುಂಡಾನ ಚಾಕಚಕ್ಯತೆ ಮತ್ತು ಕ್ರೌರ್ಯವನ್ನು ಕಂಡು ಖುದ್ದು ದಾವೂದ್‌ನೇ ಥರಗುಟ್ಟಿ ಹೋಗಿದ್ದ. ನೂರಕ್ಕೂ ಅಧಿಕ ಅಮಾಯಕರನ್ನು ತುಂಡಾ ಬಲಿ ತೆಗೆದುಕೊಂಡಿದ್ದ.

ಈ ಮಧ್ಯೆ ತನ್ನ ಮಗ ಅಬ್ದುಲ್ ವಾರಿಸ್ ಎಂಬಾತನನ್ನು ಕಾಶ್ಮೀರದಲ್ಲಿ ಲಷ್ಕರ್-ಏ-ತೋಯ್ಬಾ ಸಂಘಟನೆಗೆ ಸೇರಿಸಿ ಪಾಕ್‌ನಿಂದ ಹಫೀಜ್ ಸಯೀದ್ ಕೊಡುತ್ತಿದ್ದ ಆದೇಶಗಳನ್ನು ಕಾಶ್ಮೀರದಲ್ಲಿ ಯಥಾವತ್ತಾಗಿ ಪಾಲಿಸುವಂತೆ ನೋಡಿಕೊಂಡ. ಅಬ್ದುಲ್ ವಾರಿಸ್ ತುಂಡಾನ ಎರಡನೇ ಪತ್ನಿ ಮಮ್ತಾಜ್ ಮಗ. 1999 ರ ಹೊತ್ತಿಗೆ ಇಬ್ಬರು ಪತ್ನಿಯರಿಂದ ಆತನಿಗೆ 6 ಮಂದಿ ಮಕ್ಕಳಿದ್ದರು. ಮಗನನ್ನು ಜಮ್ಮು-ಕಾಶ್ಮೀರದಲ್ಲಿ ವಿಧ್ವಂಸಕ್ಕಿಳಿಸಿದವನು ಹುಷಾರಾಗಿ ಪಾಕಿಸ್ತಾನದ ಲಾಹೋರ್ ಸೇರಿಕೊಂಡ. ಅದಕ್ಕೂ ಮುನ್ನ ತುಂಡಾ ಮತ್ತೊಂದು ವಿಕೃತಿಗೆ ಕೈಯಿಟ್ಟಿದ್ದ. ಅದು 18ರ ಬಾಂಗ್ಲಾದೇಶಿ ಯುವತಿ ಆಸ್ಮಾನ್ ಎಂಬಾಕೆಯನ್ನು ತನ್ನ ಮೂರನೇ ಹೆಂಡತಿಯನ್ನಾಗಿ ಮದುವೆಯಾಗಿದ್ದ. ಆಕೆಗೊಂದು ಗಂಡು ಮಗುವನ್ನೂ ದಯಪಾಲಿಸಿದ್ದ. ಈತ 62ರ ಮುದುಕ. ಆಕೆ 18ರ ಬಾಲಕಿ. ನೆಟ್ಟಗೊಂದು ಮನೆಯಿಲ್ಲ, ಇರಲೊಂದು ದೇಶವಿಲ್ಲ, ಒಂದು ಕೈಯಂತೂ ಇಲ್ಲವೇ ಇಲ್ಲ, ಇಂಥಾದ್ದರಲ್ಲಿ ತನ್ನ ಮೊಮ್ಮಗಳ ವಯಸ್ಸಿ[...] ಬಾಲಕಿಯನ್ನು ಅದೇನೆಂದು ಮದುವೆಯಾದನೋ ಗೊತ್ತಿ[...]

ಪಾಕಿಸ್ತಾನದ ಐಎಸ್‌ಐ, ದಾವೂದ[...] ಲಷ್ಕರ್-ಇ-ತೋಯ್ಬಾ ಇತ್ಯಾದಿಗಳೆಲ್ಲರ ಸಹಾಯ ಮ[...] ಶ್ಲಾಘನೆಯ ಫಲವಾಗಿ ಕರಾಚಿ ಮತ್ತು ಲಾಹೋರ್‌ಗಳ[...] ತುಂಡಾ ಬಟ್ಟೆ ಫ್ಯಾಕ್ಟರಿಯನ್ನು ಪ್ರಾರಂಭಿಸಿದ. ಜೊತ[...] ಸುಗಂಧ ದ್ರವ್ಯಗಳ ವ್ಯಾಪಾರವನ್ನೂ ಶುರುಹಚ್ಚಿಕೊಂ[...] ಎಲ್ಲೆಲ್ಲಿಂದಲೋ ದುಡ್ಡು ಬರಲಾರಂಭಿಸಿತ್ತು. ಪದೇಪ[...] ದುಬೈಗೆ ಹೋಗಿಬರುತ್ತಿದ್ದ. ಇಸವಿ 2000 ರ ಹೊತ್ತ[...] ಇಂಟರ್‌ಪೋಲ್ ಸೇರಿದಂತೆ ಎಫ್‌ಬಿಐ ಇತ್ಯಾದಿ ಅನೇ[...] ವಲಯಗಳಲ್ಲಿ ತುಂಡಾನ ಕುಖ್ಯಾತಿ ದಾಖಲಾಗಿತ್ತು. ಅದ[...] ಹೊತ್ತಿಗೆ ತುಂಡಾನ ಕೊಲೆಯಾಯಿತೆಂಬ ವದಂತಿ ಬ[...] ಹಬ್ಬಿತ್ತು. ಭಾರತ ಸರ್ಕಾರದ ರಾ ಸೇರಿದಂತೆ ಬಹುತೇ[...] ಇಂಟಲಿಜೆನ್ಸ್ ಏಜೆನ್ಸಿಗಳೆಲ್ಲ ತುಂಡಾ ಕೊಲೆಯಾಗಿದ್ದಾನೆಂ[...] ಭಾವಿಸಿದ್ದು ಹುಸಿಯಾಗಿದ್ದು 2005 ರಲ್ಲಿ.

ದುಬೈನ ವಿಶೇಷ ಸೆಲ್‌ನ ಪೊಲೀಸರ[...] ಲಷ್ಕರ್-ಇ-ತೊಯ್ಬಾ (LET) ಸಂಘಟನೆಯ ಚೀ[...] ಕೋ-ಆರ್ಡಿನೇಟರ್ ಅಬ್ದುಲ್ ರಜಾಕ್ ಮಸೂ[...] ಎಂಬಾತನನ್ನು ಬಂಧಿಸಿದ್ದರು. ಹಾಗೆ ದುಬೈ ಪೊಲೀಸರಿಂ[...] ಬಂಧಿತನಾದ ಎಲ್‌ಇಟಿ ಉಗ್ರ ಮಸೂದ್ ಬಾಯಿಬಿ[...] ಮಹತ್ವದ ಮಾಹಿತಿಯೇ ತುಂಡಾ ಬದುಕಿದ್ದಾನೆ ಮ[...] ಪಾಕಿಸ್ತಾನದಲ್ಲಿದ್ದಾನೆ!

2003 ರ ಡಿಸೆಂಬರ್‌ನಲ್ಲಿ ತಾನು ಲಾಹೋರ್‌ನ[...] ತುಂಡಾನನ್ನು ಖುದ್ದು ಭೇಟಿಯಾಗಿದ್ದೇನೆಂದು ಮಸೂ[...] ನೀಡಿದ ಹೇಳಿಕೆಯಿಂದಾಗಿ ಭಾರತದ ತುಂಡಾನ ಬೇ[...] ಪ್ರಕ್ರಿಯೆಗೆ ಜೀವ ಬಂದಂತಾಗಿತ್ತು. ಇದಾಗಿ ಮತ್ತೆ ಮೂ[...] ವರ್ಷಕ್ಕೆ ಅಂದರೆ 2006 ರಲ್ಲಿ ಕೀನ್ಯಾದಿಂದ ಮತ್ತೊಂ[...] ಸುದ್ದಿ ಹೊರಬಿತ್ತು. ತುಂಡಾನನ್ನು ಕೀನ್ಯಾ ಪೊಲೀಸ[...] ಬಂಧಿಸಿದ್ದಾರೆಂದೇ ಸುದ್ದಿಯಾಗಿತ್ತು. ಆದರೆ ಕೀನ[...] ಪೊಲೀಸರು ಬಂಧಿಸಿದ್ದು ಯಾರೋ ಬ್ರಿಟನ್ನಿನ ಮು[...] ಮೌಲ್ವಿಯೊಬ್ಬನನ್ನು ಎಂಬುದು ಕ್ರಮೇಣ ಗೊತ್ತಾಗಿತ[...] ಇದೇ ಹೊತ್ತಿಗೆ ಲಷ್ಕರ್-ಎ-ತೋಯ್ಬಾದ ಕಮಾಂಡ[...] ಆಗಿದ್ದ ತುಂಡಾನ ಮಗ ಅಬ್ದುಲ್ ವಾರಿಸ್ ಕಾಶ್ಮೀರದ[...] ಬಂಧಿಸಲ್ಪಟ್ಟ. ಎಂಟು ವರ್ಷಗಳ ಜೈಲು ಶಿಕ್ಷೆಯ[...] ಆಗಿತ್ತು. ಇದರಿಂದಾಗಿ ತುಂಡಾನ-ಕೀರ್ತಿ, ಕುಖ್ಯಾತಿ ಅಂತ[...] ರಾಷ್ಟ್ರೀಯವಾಗಿ ಮುಸ್ಲಿಂ ಉಗ್ರ ಸಂಘಟನೆಗಳ ಮ[...] ವಿಜೃಂಭಿಸುತ್ತಿತ್ತು.

ಭಾರತದಲ್ಲಿ ನಿಷೇಧಿಸಲ್ಪಟ್ಟಿದ್ದ ಸಿಮಿ ಸಂಘಟನ[...] ಇಂಡಿಯನ್ ಮುಜಾಹಿದ್ದೀನ್ ಎಂಬ ಹೊಸ ಹೆಸ[...] ಕೊಟ್ಟು ಭಯೋತ್ಪಾದನೆಗಿಳಿಸುವಲ್ಲಿ ತುಂಡಾನ ಪಾತ್ರ[...] ಮುಖ್ಯವಾಗಿತ್ತು. ಬರ್ಮಾದಲ್ಲಿ ಬೌದ್ಧರ ವಿರು[...] ಭಯೋತ್ಪಾದನೆಗಿಳಿದಿದ್ದ ರೋಹಿಂಗ್ಯಾ ಇಸ್ಲಾಮಿ[...] ಉಗ್ರರಿಗೂ ತುಂಡಾನೇ ಆಯುಧ ಮತ್ತು ಆರ್ಥಿ[...] ಅನುಕೂಲಗಳನ್ನು ಕಲ್ಪಿಸಿಕೊಟ್ಟಿದ್ದ. 2010 ರಲ್ಲಿ ದೆಹಲಿಯ[...] ಕಾಮನ್‌ವೆಲ್ತ್ ಕ್ರೀಡಾಕೂಟ ನಡೆಯುವ ವೇ[...] ದೊಡ್ಡಮಟ್ಟದ ಸರಣಿ ಸ್ಫೋಟವನ್ನು ತುಂಡಾ ಆಯೋಜಿಸಿ[...] ಆದರೆ ಪೊಲೀಸರಿಗಿದು ಮೊದಲೇ ಗೊತ್ತಾಗಿ ಆತ[...] ಸಹಚರರನ್ನು ಬಂಧಿಸಿದ್ದರಿಂದಾಗಿ ಅನಾಹುತ ತಪ್ಪಿತ್ತು.

ತುಂಡಾ ನೇಪಾಳದಲ್ಲಿ ಬಂಧನಕ್ಕೊಳಗಾಗುವುದಕ[...] 10 ದಿನಗಳ ಮುನ್ನವೇ ಪಾಕಿಸ್ತಾನವನ್ನು ಬಿಟ್ಟವನು ದುಬ[...] ಮೂಲಕ ನೇಪಾಳಕ್ಕೆ ಬಂದಿದ್ದಾನೆ. ಆದರೆ ದುಬೈನಿಂದ[...] ಭಾರತೀಯ ಇಂಟಲಿಜೆನ್ಸ್ ಅಧಿಕಾರಿಗಳು ಆತನ[...] ಹಿಂಬಾಲಿಸಿ ಬಂದಿದ್ದಾರೆ. ಭಾರತ-ನೇಪಾಳ ಗಡಿಯ[...] ಆತನನ್ನು ಹಿಡಿದರೋ ಅಥವಾ ದುಬೈನಿಂದಲೇ ಬಂಧಿ[...] ತಂದರೋ ಗೊತ್ತಿಲ್ಲ. ದಾವೂದ್, ಎಲ್‌ಇ[...] ಜೈಷ್-ಎ-ಮೊಹ್ಮದ್, ಬಾಂಗ್ಲಾ ಉಗ್ರರು, ಪಾಕಿಸ್ತಾನ[...] ಐಎಸ್‌ಐಗಳ ಮಧ್ಯೆ ಭಾರತದ ಪಾಲಿನ ಅಪಶಕುನದಂ[...] ಕೊಂಡಿಯಾಗಿದ್ದ ತುಂಡಾ ಬಂಧಿತನಾಗಿರುವುದು ಸ[...] ಸಂಗತಿಯೇನಲ್ಲ.

ಹಾಗೆಂದು ಯಾಮಾರುವಂತಿಲ್ಲ. ಹೇಗೆ ಕಂದಹಾರ[...] ವಿಮಾನವನ್ನು ಹೊತ್ತೊಯ್ದು ಜೈಲಿನಲ್ಲಿದ್ದ ಉ[...] ಭಯಾನಕರನ್ನು ಇದೇ ತಂಡ ಭಾರತದಿಂ[...] ಬಿಡಿಸಿಕೊಂಡಿತೋ ಅದೇರೀತಿ ಜೈಲಿನಲ್ಲಿದ್ದ ತುಂಡಾನ[...] ಹಫೀಜ್, ಮಸೂದ್‌ರಂಥ ಪಾಕ್ ಉಗ್ರ[...] ಬಿಡಿಸಿಕೊಳ್ಳಲಾರರು ಎಂಬುದಕ್ಕೆ ಏನು ಗ್ಯಾರಂಟಿ?

ಏಕೆಂದರೆ ಜೈಲಿಂದ ಬಿಡುಗಡೆಯಾದ ತುಂಡಾ[...] ಮಗ ಮತ್ತು ಎಲ್‌ಇಟಿ ಉಗ್ರ ಅಬ್ದುಲ್ ವಾರಿ[...] ಈಗಾಗಲೇ ಸದ್ದಿಲ್ಲದೆ ಪಾಕಿಸ್ತಾನವನ್ನು ಸೇರಿಕೊಂಡಿದ್ದಾ[...]


1993 ಮುಂಬೈ ಸ್ಫೋಟ...


● ರಾ.ಸೋಮನಾಥ[...]

ಬಚ್ಚೇಗೌಡನ ಗೂಂಡಾ ಬಂಟರಿಗೆ ಒದೆ ಬಿತ್ತು











ರಕ್ತದಾಹಿ ಬಚ್ಚೇಗೌಡನಿಗೆ ಮಣ್ಣು ಮುಕ್ಕಿಸಿ ಎಂಟಿಬಿ ಗರಾಜ್ ಎಂಬ ರೊಕ್ಕಸ್ಥನನ್ನು ಗೆಲ್ಲಿಸಿದ ಹೊಸಕೋಟೆಯ ನಕ್ಕೆ ಪೀಡೆ ತೊಲಗಿದ ಖುಷಿಗೂ ಅವಕಾಶವಿಲ್ಲದಂತೆ ತ್ತೆ ಹಿಂಸೆ ತಲೆ ಎತ್ತಿದೆ. ಹಿಂದೆಲ್ಲಾ ಬಚ್ಚೇಗೌಡನ ಜೆಪಿ ಗ್ಯಾಂಗ್ ರಕ್ತ ಹರಿಸುತ್ತಿದ್ದರೆ ಈಗ ಕಾಂಗ್ರೆಸ್ ಧಿಕಾರದಲ್ಲಿರುವುದರಿಂದ ಪುಂಡಾಟಿಕೆ ತಮ್ಮ ಆಜನ್ಮಸಿದ್ಧ ಕ್ಕು ಎಂದು ಕಾಂಗ್ರೆಸ್ ಪಟಾಲಮ್ಮು ಭಾವಿಸಿದಂತಿದೆ!

ಇಲ್ಲದಿದ್ದರೆ ಮೊನ್ನೆ 2013 ರ ಆಗಸ್ಟ್ 18 ರ ಾನುವಾರ ಮಟಮಟ ಮಧ್ಯಾಹ್ನ ನಂದಗುಡಿ ಪೊಲೀಸರಿಗೂ ಬೈಲುನರಸಾಪುರದ ದುಷ್ಕರ್ಮಿಗಳಿಗೂ ೀದಿಕಾಳಗ ನಡೆಯುತ್ತಿರಲಿಲ್ಲ.

ಕಾಂಗ್ರೆಸ್ ಅಧಿಕಾರಕ್ಕೆ ಬಂದು ಬಚ್ಚೇಗೌಡನ ್ರೈಹಾಸಕ್ಕೆ ತೆರೆ ಬೀಳುತ್ತಿದ್ದಂತೆಯೇ ಬೆಂದು ಸವಳಿದಿದ್ದವರೆಲ್ಲ ಪ್ರತೀಕಾರಕ್ಕಿಳಿಯುತ್ತಿರುವುದೇ ಸದ್ಯ ೊಸಕೋಟೆಯ ಸದ್ಯದ ವೈಶಿಷ್ಟ್ಯ ಮತ್ತು ರೂಢಿಗತ ವೃತ್ತಿಯೂ ಹೌದು. ಒದೆ ತಿಂದವರು ಬಿಜೆಪಿ ರ್ಯಕರ್ತರು ಮತ್ತು ಬಚ್ಚೇಗೌಡ ಅಧಿಕಾರದಲ್ಲಿದ್ದಷ್ಟೂ ಬ ಹಾವಳಿ ಮಾಡುತ್ತಿದ್ದವರೆಂಬುದು ಎಷ್ಟು ನಿಜವೋ ಗೇ ಒದೆ ಕೊಟ್ಟವರು ಕಾಂಗ್ರೆಸ್ ಬೆಂಬಲಿಗರು ಮತ್ತು ಜೆಪಿ ಅಧಿಕಾರದಲ್ಲಿದ್ದಷ್ಟೂ ದಿನ ಹಿಂಸೆ, ಕಿರುಕುಳದಲ್ಲೇ ಂದು ಬೆಂದವರು.

ಬಚ್ಚೇಗೌಡನ ಬಿಹಾರವೆಂದೇ ಕುಖ್ಯಾತಿ ಪಡೆದಿರುವ ೊಸಕೋಟೆಯ ರಾಜಕಾರಣ ಹೇಗೆ ರಕ್ತಸಿಕ್ತವೋ ಹಾಗೇ ್ಲಿನ ತರಹೇವಾರಿ ಗ್ಯಾಂಗ್‌ಗಳೂ, ದಂಧೆಗಳೂ, ಜಿದ್ದಾಜಿದ್ದಿ ಡಿದಾಟ ಎಲ್ಲವೂ ಭಯಾನಕ. ಹೊಸಕೋಟೆಯ ಬೇರೆಲ್ಲ ಮ, ಹೋಬಳಿಗಳದ್ದೇ ಒಂದು ಕತೆಯಾದರೆ ಲುನರಸಾಪುರವೆಂಬ ಕೊಂಪೆಯದ್ದೇ ಮತ್ತೊಂದು ಕತೆ.

ಹೊಸಕೋಟೆ-ಚಿಂತಾಮಣಿ ರಸ್ತೆಯಲ್ಲಿ 17 ಕಿ.ಮೀ. ಗುತ್ತಿದ್ದಂತೆಯೇ ಎದುರಾಗುವ ಬೈಲುನರಸಾಪುರದ ಖ್ಯಾತಿ ಕಮ್ಮಿಯದೇನಲ್ಲ. ಗುಂಡೂರಾವ್ ುಖ್ಯಮಂತ್ರಿಯಾಗಿದ್ದಾಗ ನಡೆದ ಕಳ್ಳಭಟ್ಟಿ ದುರಂತದಲ್ಲಿ ನೂರಾರು ಮಂದಿಯನ್ನು ಬಲಿ ತೆಗೆದುಕೊಂಡಿದ್ದೇ ಬೈಲುನರಸಾಪುರ. ಬಹುತೇಕ ಮುಸ್ಲಿಮರೇ ಬಿರುವ ಬೈಲುನರಸಾಪುರ, ಮೇಡಿ ಮಲ್ಲಸಂದ್ರ ಇತ್ಯಾದಿ ೊಸಕೋಟೆಯ ಕೊಂಪೆಗಳಿಂದಲೇ ಬೆಂಗಳೂರು ುತ್ತಮುತ್ತಲ ಏರಿಯಾಗಳಿಗೆ ಪ್ರತಿನಿತ್ಯ ಕಳ್ಳಭಟ್ಟಿ ಸರಬರಾಜು ಡುವ ಕಳ್ಳಭಟ್ಟಿ ಸಾಮ್ರಾಜ್ಯವೇ ಅನಾದಿಕಾಲದಿಂದಲೂ ದುನಿಂತಿದೆ. ಪೊಲೀಸು, ಅಬಕಾರಿ, ಕೋರ್ಟು, ಕಾಯ್ದೆ ಾವುದೂ ಇಲ್ಲಿನ ಕಳ್ಳಭಟ್ಟಿ ದೊರೆಗಳಿಗೆ ಲೆಕ್ಕಕ್ಕಿಲ್ಲ. ರ್ಕಾರ ಯಾವುದೇ ಬಂದರೂ ದಂಧೆ ನಿಲ್ಲುವುದಿಲ್ಲ.

ಹೀಗೆ ಕಳ್ಳಭಟ್ಟಿ ಅಡ್ಡೆಯಾಗಿ ಬೆಳೆದು ನಿಂತಿದ್ದ ಲುನರಸಾಪುರ ಈಗ ಕೇವಲ ಸಾರಾಯಿ ಸಾಮ್ರಾಜ್ಯವಷ್ಟೇ ಲ್ಲ, ಮರಳು ಫಿಲ್ಟರ್ ದಂಧೆ, ಗಂಧದ ಕಳ್ಳಸಾಗಾಣಿಕೆ, ಲಿ ಲಿಕ್ಕರ್ ದಂಧೆ, ಖೋಟಾನೋಟು, ಕಾರುಗಳ್ಳತನ, ಲಿ ಬಿಡಿಭಾಗಗಳ ತಯಾರಿಕೆ- ಹೀಗೆ ಅನೇಕಾನೇಕ ಸುಗಳಿಗೂ ಅನಾಚಾರದ ಉಗಮಸ್ಥಾನವಾಗಿ ದುನಿಂತಿದೆ ಬೈಲು ನರಸಾಪುರ. ತೀರ ಇತ್ತೀಚೆಗೆ ಗಳೂರು ಸುತ್ತಮುತ್ತಲ ನಿರ್ಜನ ತೋಟಗಳ ಮಧ್ಯೆ ಕ ಹೊಂಡಗಳನ್ನು ಸೃಷ್ಟಿಸಿ ನಿಷೇಧಿತ ಆಫ್ರಿಕನ್ ಕ್ಯಾಟ್‌ಫಿಷ್ ಎಂಬ ಮಾಂಸಭಕ್ಷಕ ಮೀನುಗಳನ್ನು ಬೆಳೆಸುತ್ತಿದ್ದುದರ ವಿರುದ್ಧ ಸರ್ಕಾರ ಕಾರ್ಯಾಚರಣೆಗಿಳಿಯಿತಲ್ಲವೆ?

ಹಾಗೇ ಫಿಲ್ಟರ್ ಮರಳುಗಾರಿಕೆ ವಿರುದ್ಧವೂ ರಾಜ್ಯಾದ್ಯಂತ ಸರ್ಕಾರ ಕಾರ್ಯಾಚರಣೆಗಿಳಿದು ಮರಳು ಫಿಲ್ಟರ್‌ಗಳನ್ನು ಜಪ್ತಿ ಮಾಡಿಕೊಳ್ಳುತ್ತಿದೆ ಮತ್ತು ಮರಳು ಮಾಫಿಯಾ ವಿರುದ್ಧ ಸಮರ ಸಾರಿದೆ. ಆದರೆ ಬೈಲುನರಸಾಪುರದ ವಿಷಯದಲ್ಲಿ ಮಾತ್ರ ಫಿಲ್ಟರ್ ಮರಳುಗಾರಿಕೆಯನ್ನಾಗಲಿ, ನಿಷೇಧಿತ ಆಫ್ರಿಕನ್ ಕ್ಯಾಟ್‌ಫಿಷ್ ದಂಧೆಯನ್ನಾಗಲಿ ನಿಲ್ಲಿಸಲಾಗದೆ ಸರ್ಕಾರವೇ ಶರಣಾಗುವಂತಾಯ್ತು. ಹಿಂದಿದ್ದ ಕಳ್ಳಭಟ್ಟಿ, ಸ್ಯಾಂಡಲ್‌ವುಡ್, ಖೋಟಾನೋಟು, ಕಾರುಗಳ್ಳತನ, ನಕಲಿ ಬಿಡಿಭಾಗಗಳ ದಂಧೆಗಳಲ್ಲದೆ ಇತ್ತೀಚೆಗೆ ಭರದಿಂದ ಸಾಗುತ್ತಿರುವ ಫಿಲ್ಟರ್ ಮರಳುಗಾರಿಕೆ ಮತ್ತು ಆಫ್ರಿಕನ್ ಕ್ಯಾಟ್‌ಫಿಷ್‌ಗಳಿಂದಾಗಿ ಬೇಕಾಬಿಟ್ಟಿ ದುಡ್ಡು ಹರಿದುಬರುತ್ತಲೇ ಇದೆ. ಈ ಮೂಲಕ ಬೈಲುನರಸಾಪುರದ ಆರ್ಥಿಕತೆಯೂ ಸಿಕ್ಕಾಪಟ್ಟೆ ಲಾಭದಾಯಕವಾಗಿದೆ.

ಸರಿಸುಮಾರು ಆರು ಸಾವಿರ ಜನಸಂಖ್ಯೆಯ ಬೈಲುನರಸಾಪುರ ಒಳಪಡುವುದು ಇದೇ ಹೊಸಕೋಟೆಯ ನಂದಗುಡಿ ಪೊಲೀಸ್ ಠಾಣೆ ವ್ಯಾಪ್ತಿಗೆ. ನಂದಗುಡಿ ಪೊಲೀಸ್ ಠಾಣೆಯಿಂದ ಐದು ಕಿ.ಮೀ. ದೂರದ ಅನೇಕಾನೇಕ ದಂಧೆಗಳು, ಅಸಂಖ್ಯಾತ ಅಡ್ಡೆಗಳ ಬೈಲುನರಸಾಪುರವೆಂದರೆ ಅದು ಹೊಸಕೋಟೆಯ ಪೊಲೀಸರ ಪಾಲಿಗಷ್ಟೇ ಅಲ್ಲ, ಆ ಊರಿನ ಶಾಸಕರ ಪಾಲಿಗೂ ಬೇಕಾದಾಗ ಹಣ ಎಣಿಸಿಕೊಳ್ಳುವ ಎಟಿಎಂ ಇದ್ದಂತೆ!

ನಿನ್ನೆಮೊನ್ನೆಯ ತನಕ ಬೈಲುನರಸಾಪುರಕ್ಕೆ ಅನಭಿಷಕ್ತ ದೊರೆಯಂತಿದ್ದದ್ದು ಮಾಜಿ ಮಂತ್ರಿ ಬಚ್ಚೇಗೌಡನೆ. ಬೈಲುನರಸಾಪುರದಲ್ಲೂ ಎರಡು ಎದುರಾಳಿ ಗ್ಯಾಂಗುಗಳಿವೆ. ಈ ಪೈಕಿ ಒಂದು ಗುಂಪಿಗೆ ಬಚ್ಚೇಗೌಡನ ನಂಬಿಕಸ್ಥ ಬಂಟ ಮಹಬೂಬ್ ಖಾನ್ ನಾಯಕನಾದರೆ ಆತನ ಎದುರಾಳಿ ಗ್ಯಾಂಗಿಗೆ ಲೀಡರಾಗಿರುವವನು ಕಾಂಗ್ರೆಸ್ಸಿನ ಮುನಾವರ್ ಮಿಯಾ. ಮಿಯಾನ ಗ್ಯಾಂಗಿನಲ್ಲಿ ಅಫಾಖ್‌ಖಾನ್, ಏಜಾಜ್, ಸಾಧಿಕ್ ಮುಂತಾದ ಪಂಟರುಗಳಿದ್ದರೆ ಮೆಹಬೂಬ್ ಖಾನ್ ತಂಡದಲ್ಲಿ ಆತನ ತಮ್ಮ ಅಜ್ಮತ್, ಅಕ್ರಂ, ಅಜೀಮ್ ಇತ್ಯಾದಿ ರೌಡಿ ಹಿಂಡಿದೆ. ಬಿಜೆಪಿ ಅಧಿಕಾರದಲ್ಲಿದ್ದು ಬಚ್ಚೇಗೌಡ ಮಂತ್ರಿಯಾಗಿದ್ದಷ್ಟೂ ದಿನ ನರಸಾಪುರದ ಬಹುತೇಕ ಮುಸ್ಲಿಮರೆಲ್ಲ ಬಿಜೆಪಿಯನ್ನೇ ಬೆಂಬಲಿಸುತ್ತಿದ್ದರು.

ಅದಕ್ಕೆ ಕಾರಣ ಅಕ್ರಮ ದಂಧೆಗಳ ಹಿತಾಸಕ್ತಿಯೇ ಹೊರತು ಮತ್ತೇನಲ್ಲ. ಬಚ್ಚೇಗೌಡನನ್ನು ಮುಂದಿಟ್ಟುಕೊಂಡೇ ಮೆಹಬೂಬ್ ಖಾನ್ ತನ್ನ ಎದುರಾಳಿ ಮುನಾವರ್ ಮಿಯಾನ ಮೇಲೆ ದೌರ್ಜನ್ಯವೆಸಗುತ್ತಲೇ ಬಂದ. ಮಿಯಾನ ಹುಡುಗರ ವಿರುದ್ಧ ರೈತರ ದನಕರುಗಳನ್ನು ಕದ್ದ ಕೇಸು ಬಿತ್ತು. ಬೇಕುಬೇಕಂತಲೇ ನಂದಗುಡಿ ಪೊಲೀಸರನ್ನು ಛೂಬಿಟ್ಟು ಮಿಯಾನ ಹುಡುಗರ ಫಿಲ್ಟರ್ ಮರಳು, ಕಳ್ಳಭಟ್ಟಿ ಅಡ್ಡೆಗಳನ್ನು ಮುಚ್ಚಿಸಿದ್ದೂ ಅಲ್ಲದೆ ಕೇಸುಗಳನ್ನೂ ಹಾಕಿಸಲಾಯ್ತು. ಸಾಲದ್ದಕ್ಕೆ ಕಾಂಗ್ರೆಸ್ ಬೆಂಬಲಿಗರು ನಡೆಸುತ್ತಿದ್ದ ದಂಧೆಗಳಿಗೆಲ್ಲ ಪೊಲೀಸ್ ಕಿರುಕುಳ ಹೆಚ್ಚಾಯಿತು. ಬಿಜೆಪಿ ಸರ್ಕಾರವಿದ್ದಷ್ಟೂ ದಿನ ಸೊಲ್ಲೆತ್ತದೆ ಇದೆಲ್ಲವನ್ನೂ ಸಹಿಸಿಕೊಂಡಿದ್ದ ಕಾಂಗ್ರೆಸ್ ಬೆಂಬಲಿಗರ ಗುಂಪಿನ ನಾಯಕ ಮುನಾವರ್ ಮಿಯಾ ಚುನಾವಣೆ ಘೋಷಣೆಯಾಗಿ ಇನ್ನೇನು ಎಲೆಕ್ಷನ್ನಿಗೆ 15 ದಿನ ಬಾಕಿಯಿದೆ ಎನ್ನುವಾಗಲೇ ವೈರಿಯ ಮೇಲೆ ದಾಳಿ ನಡೆಸಿಬಿಟ್ಟ.

ತನ್ನ ಕ್ಯಾಟ್‌ಫಿಷ್ ಹೊಂಡಕ್ಕೆ ರಾತ್ರಿ ಹೊತ್ತು ಮೀನುಗಳಿಗೆ ಆಹಾರ ಹಾಕಲು ಬಂದಿದ್ದ ಮೆಹಬೂಬ್ ಖಾನ್‌ನ ಮೇಲೆ ಮಿಯಾ ಗ್ಯಾಂಗ್ ಭಯಾನಕವಾಗೇ ಅಟಕಾಯಿಸಿಕೊಂಡಿತ್ತು. ಮಚ್ಚು, ಲಾಂಗು, ದೊಣ್ಣೆಗಳಿಂದ ನಡೆದ ದಾಳಿಯಲ್ಲಿ 25ಕ್ಕೂ ಅಧಿಕ ಇರಿತಕ್ಕೊಳಗಾಗಿದ್ದ ಮೆಹಬೂಬ್ ಖಾನ್ ಸತ್ತೇ ಹೋದನೆಂದು ಭಾವಿಸಿ ಮಿಯಾ ಗ್ಯಾಂಗ್ ಬಿಟ್ಟುಹೋದರೆ ಮೆಹಬೂಬ್ ಖಾನ್ ಅಚಾನಕ್ಕಾಗಿ ಬದುಕುಳಿದುಬಿಟ್ಟ. ಬಹುಶಃ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಓಟು ಹಾಕದಂತೆ ಮುಸ್ಲಿಮರನ್ನು ಎಲ್ಲಿ ಮೆಹಬೂಬ್ ಗ್ಯಾಂಗ್ ಪೀಡಿಸುತ್ತೋ ಎಂದೇ ಮಿಯಾ ಗ್ಯಾಂಗ್ ಅಟ್ಯಾಕ್ ಮಾಡಿತ್ತು.

ಮೆಹಬೂಬ್ ಖಾನ್ ಆಸ್ಪತ್ರೆಯಿಂದ ಹೊರಬೀಳುವ ಹೊತ್ತಿಗೆ ಚುನಾವಣೆಯೇ ಮುಗಿದು ಬಚ್ಚೇಗೌಡ ಸೋತು ಕಾಂಗ್ರೆಸ್ಸಿನ ಎಂ.ಟಿ.ಬಿ. ನಾಗರಾಜ್ ಗೆದ್ದು ಶಾಸಕನಾಗಿದ್ದರು. ಮೆಹಬೂಬ್ ಖಾನ್‌ನನ್ನು ಕತ್ತರಿಸಿದ ಮಿಯಾ ಗ್ಯಾಂಗಿಗೆ ಕೋರ್ಟಿನಲ್ಲಿ ಒಂದೇ ದಿನಕ್ಕೆ ಜಾಮೀನು ಸಿಕ್ಕಿತ್ತು. ಹೀಗಾಗಿ ಎಲೆಕ್ಷನ್ನಿನಲ್ಲಿ ಬಚ್ಚೇಗೌಡನ ಆಟ ನಡೆಯದೇ ಮುಸ್ಲಿಮರೆಲ್ಲ ನಿರ್ಭಯವಾಗಿ ಕಾಂಗ್ರೆಸ್‌ಗೆ ಓಟು ನೀಡುವಂತಾಯ್ತು. ಆದರೆ ಬಿಜೆಪಿ ಅಧಿಕಾರದಲ್ಲಿದ್ದಷ್ಟೂ ಕಾಲ ಬಚ್ಚೇಗೌಡರನ್ನು ಮುಂದಿಟ್ಟುಕೊಂಡು ಇಲ್ಲದ ಕಾಟ-ಕಿರುಕುಳ ನೀಡಿದ್ದ ಮೆಹಬೂಬ್ ಗ್ಯಾಂಗನ್ನು ಮಿಯಾ ಗ್ಯಾಂಗ್ ಸುಮ್ಮನೇ ಬಿಡುವುದುಂಟಾ?

ಹೇಗೂ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ತಾವೇ ಬೆಂಬಲಿಸಿದ ಎಂಟಿಬಿ ಬೇರೆ ಗೆದ್ದು ಶಾಸಕರಾಗಿದ್ದಾರೆ. ಬಚ್ಚೇಗೌಡನ ಮಂತ್ರಿಗಿರಿಯುದ್ದಕ್ಕೂ ಹೇಗೆ ಕಾಂಗ್ರೆಸ್ ಬೆಂಬಲಿಗರೆಂದು ತಮಗೆ ಇಲ್ಲಸಲ್ಲದ ಕಾಟಕೊಟ್ಟರೋ ಹಾಗೇ ಬಿಜೆಪಿ ಬೆಂಬಲಿಗರನ್ನು ಮಟ್ಟಾ ಹಾಕಲೇಬೇಕೆಂದು ಹೊಂಚು ಹಾಕುತ್ತಿದ್ದ ಮಿಯಾ ಪಟಾಲಮ್ಮಿಗೆ ಮುಹೂರ್ತ ಒದಗಿಬಂದದ್ದು ಮೊನ್ನೆ ಆಗಸ್ಟ್ 18ರ ಭಾನುವಾರದಂದು.

ತೌಸೀಫ್ ಎಂಬಾತನೊಬ್ಬ ಇದೇ ಬೈಲುನರಸಾಪುರದಲ್ಲಿ ಚಿಲ್ಲರೆ ಅಂಗಡಿ ಇಟ್ಟು ಕೊಂಡಿದ್ದಾನೆ. ಆತ ಯಾವುದೋ ಕಾಲಕ್ಕೆ ಮೆಹಬೂಬ್‌ನಿಂದ 5 ಸಾವಿರ ಸಾಲ ಪಡೆದಿದ್ದ. ಕೊಟ್ಟ ಸಾಲದ ವಸೂಲಿಗೆಂದು ಮೆಹಬೂಬ್‌ನ ತಮ್ಮ ಅಜ್ಮತ್ ಆಗಸ್ಟ್ 18ರ ಭಾನುವಾರ ತೌಸೀಫ್‌ನ ಅಂಗಡಿಗೆ ಬಂದಿದ್ದಾನೆ. ತೌಸೀಫ್‌ನ ಅಂಗಡಿಯಿರುವುದು ಕಾಂಗ್ರೆಸ್ ಬೆಂಬಲಿಗರಿಗೆ ಸೇರಿದ ಬೀದಿಯಲ್ಲಿ. ಯಾವತ್ತು ಅಜ್ಮತ್ ತೌಸೀಫ್‌ನ ಅಂಗಡಿಗೆ ಸಾಲದ ವಸೂಲಿಗೆಂದು ಬಂದ ಸುದ್ದಿ ಗೊತ್ತಾಯಿತೋ ಮಿಯಾ ಗ್ಯಾಂಗಿನ ಅಫಾಕ್, ಏಜಾಜ್, ಸಾಧಿಕ್ ಮುಂತಾದವರೆಲ್ಲ ಸೇರಿಕೊಂಡು ಅಜ್ಮತ್‌ನ ಮೇಲೆ ದಾಳಿ ನಡೆಸಿದ್ದಾರೆ. ಅಜ್ಮತ್‌ನನ್ನು ಬಿಡಿಸಲು ಬಂದ ಅಜೀಂ, ಅಕ್ರಂ ಇತ್ಯಾದಿ ಬೆಂಬಲಿಗರಿಗೂ ತೀವ್ರವಾದ ಇರಿತದ ಗಾಯವಾಗಿದೆ. ಚಾಕು, ಲಾಂಗು, ರಾಡುಗಳನ್ನು ಹಿಡಿದು ಕಾಂಗ್ರೆಸ್ ಗ್ಯಾಂಗ್ ಬಚ್ಚೇಗೌಡನ ಮುಸ್ಲಿಂ ಚೇಲಾಗಳನ್ನು ಹಿಡಿದು ಅಟ್ಟಾಡಿಸುತ್ತಿದ್ದರೆ ತಪ್ಪಿಸಿಕೊಂಡು ಓಡಿ ತಮ್ಮ ಬೀದಿ ಹೊಕ್ಕ ಬಿಜೆಪಿ ಗ್ಯಾಂಗನ್ನು ಮಿಯಾ ಗ್ಯಾಂಗ್ ಬೆನ್ನಟ್ಟಿದೆ. ಅವರದ್ದೇ ಬೀದಿಗೆ ನುಗ್ಗಿ ಕಲ್ಲು ಬಾಟಲಿಗಳನ್ನು ತೂರಿದೆ. ಬಚ್ಚೇಗೌಡರ ಬೆಂಬಲಿಗರ ಮನೆಗಳು, ಬೀದಿಗಳ ಮೇಲೂ ಕಾಂಗ್ರೆಸ್ ಬೆಂಬಲಿಗರಿಂದ ದಾಳಿಯಾಗಿದೆ. ಇಷ್ಟೇ ಆಗಿದ್ದರೆ ಗಲಾಟೆ ಅಲ್ಲಿಗೇ ನಿಲ್ಲುತ್ತಿತ್ತೇನೋ. ಈ ಮಧ್ಯೆ ಫೈರೋಜ್ ಎಂಬ ಪೊಲೀಸ್ ಪೇದೆಯೊಬ್ಬ ಗಲಾಟೆಯನ್ನು ನಿಯಂತ್ರಿಸಲು ನುಗ್ಗಿ ಬಂದಿದ್ದೇ ತಡ, ದುಷ್ಕರ್ಮಿಗಳು ಆತನನ್ನೂ ಹಿಡಿದು ಬಡಿದಿದ್ದಾರೆ. ಬಿದ್ದ ಕಲ್ಲೇಟಿಗೆ ಪೇದೆ ಫೈರೋಜ್‌ನ ತಲೆಯೇ ತೂತಾಗಿದೆ.

ಇಷ್ಟಾಗುತ್ತಿದ್ದಂತೆ ಬೆಂಗಳೂರು ಗ್ರಾಮಾಂತರ ಎಸ್.ಪಿ. ರಮೇಶ್ ಮತ್ತು ಡಿವೈಎಸ್‌ಪಿ ಕುಮಾರಸ್ವಾಮಿ ವ್ಯಾನುಗಟ್ಟಲೇ ಬಂಧೂಕುದಾರಿ ಪೊಲೀಸರ ಸಮೇತ ಬೈಲುನರಸಾಪುರಕ್ಕೆ ನುಗ್ಗಿ ಗಲಭೆಯನ್ನು ನಿಯಂತ್ರಿಸಿದರಾದರೂ ಆ ಹೊತ್ತಿಗೆ ಸರಿಸುಮಾರು 50ಕ್ಕೂ ಅಧಿಕ ಅಂಗಡಿಗಳು, ಲಾರಿ, ಕಾರು, ಮನೆಗಳಿಗೆಲ್ಲ ಬೆಂಕಿ ಬಿದ್ದಿತ್ತು. ಕೆಲ ಮನೆಗಳನ್ನು ದೋಚಲಾಗಿತ್ತು. ಸಿಕ್ಕಸಿಕ್ಕವರಿಗೆ ಪೆಟ್ಟು ಬಿದ್ದಿತ್ತು. ಪೊಲೀಸರು ಮತ್ತು ಬಚ್ಚೇಗೌಡರ ವಿರೋಧಿಗಳ ಮಧ್ಯೆ ಬೀದಿಕಾಳಗವೇ ನಡೆಯಿತು. ಸದ್ಯಕ್ಕೇನೋ ಬೈಲುನರಸಾಪುರ ಶಾಂತವಾಗಿದೆ ನಿಜ. ಆದರೆ ಬೂದಿ ಮುಚ್ಚಿದ ಕೆಂಡದಂತೆ ಯಾವತ್ತು ಏನಾಗುತ್ತೋ ಗೊತ್ತಿಲ್ಲ.

ಬಚ್ಚೇಗೌಡನ ರಕ್ತದಾಹಿ ರಾಜಕಾರಣದ ವಿರುದ್ಧದ ಜನಾಕ್ರೋಶ ಈಗ ಗ್ಯಾಂಗ್‌ವಾರ್ ರೂಪತಾಳಿದೆ. ಮುಂದೆ ಅದು ಇನ್ನೆಂಥಾ ಅನಾಹುತ ಮಾಡುತ್ತೋ, ಏನೆಲ್ಲಾ ಯಡವಟ್ಟಾಗುತ್ತೋ ಬಲ್ಲವರ್‍ಯಾರು?

● ರಾ.ಸೋಮನಾಥ್

ಹೊಸಕೋಟೆಯ ದೌರ್ಭಾಗ್ಯವೋ ದುರಂತವೋ ಗೊತ್ತಿಲ್ಲ. ನಿನ್ನೆ ಮೊನ್ನೆಯ ತನಕ ಈ ಕ್ಷೇತ್ರದ ಮಟ್ಟಿಗೆ ನಿರಂಕುಶ ದೊರೆಯಂತಿದ್ದ ಬಚ್ಚೇಗೌಡ ಸ್ವಭಾವಿತ ಕ್ರಿಮಿನಲ್ ಮತ್ತು ಕೊಲೆಗಡುಕ. ಈತನನ್ನು ಸೋಲಿಸಿಬಿಟ್ಟರೆ ಕನಿಷ್ಠ ನೆಮ್ಮದಿಯಾದರೂ ಸಿಗಬಹುದೆಂದರೆ ಗೆದ್ದು ಬಂದ ಎಂಟಿಬಿ ನಾಗರಾಜ್ ಅನಕ್ಷರಸ್ಥ ಮತ್ತು ಅನಾಗರಿಕ.


ಬಚ್ಚೇಗೌಡ ಎಮ್ಮೆಲ್ಲೆಯಾಗಿದ್ದಷ್ಟೂ ದಿನ ತನ್ನ ವಿರೋಧಿ ಕಾಂಗ್ರೆಸ್ ಬೆಂಬಲಿಗರ ಜೀವ ಹಿಂಡುತ್ತಲೇ ಬಂದ. ಅನ್ಯಾಯವಾಗಿ ಎಂಟಿಬಿ ಬೆಂಬಲಿಗರ ಮೇಲೆ ಪೊಲೀಸ್ ಕೇಸುಗಳು ದಾಖಲಾದವು. ಕಾಂಗ್ರೆಸ್ ಬೆಂಬಲಿಗರೆಂಬ ಒಂದೇ ಕಾರಣಕ್ಕೆ ಅಂಥವರ ಆಸ್ತಿಪಾಸ್ತಿ ದೋಚಲಾಯ್ತು, ತೋಟಕ್ಕೆ ರೌಡಿಗಳನ್ನು ನುಗ್ಗಿಸಿ ನೂರಾರು ಮರಗಳನ್ನು ನೆಲಕ್ಕುರುಳಿಸಲಾಯ್ತು, ಈಗ ಕಾಂಗ್ರೆಸ್ ಬೆಂಬಲಿಗರು ಸುಮ್ಮನಿರುತ್ತಾರಾ? ಯಾರೆಲ್ಲ ಬಚ್ಚೇಗೌಡನನ್ನು ಮುಂದಿಟ್ಟುಕೊಂಡು ಕಿರುಕುಳ ಕೊಟ್ಟರೋ ಅಂಥವರ ವಿರುದ್ಧ ಈಗ ಜಿದ್ದಿಗೆ ಬಿದ್ದಿದ್ದಾರೆ. ಹೀಗೆ ಹಳೇ ಸೇಡಿಗೆಂದು ಯಾರೇ ಕಾಂಗ್ರೆಸ್ ಬೆಂಬಲಿಗರು ಬಡಿದಾಟಕ್ಕಿಳಿದಿದ್ದಾರೋ ಅಂಥವರ ಅಪರಾಧಗಳನ್ನೇ ಎಂಟಿಬಿ ಬೆಂಬಲಿಸುತ್ತಿದ್ದಾರೆ.

ಬಚ್ಚೇಗೌಡ ಮಾಡಿದ್ದನ್ನೇ ಎಂಟಿಬಿ ಕೂಡ ಮಾಡಹೊರಟರೆ ಬಚ್ಚೇಗೌಡನಿಗೂ ಎಂಟಿಬಿಗೂ ಏನು ವ್ಯತ್ಯಾಸ ಬಂದಂತಾಯ್ತು?


ಬಚ್ಚೇಗೌಡ ರಕ್ತ ಕುಡಿಯುತ್ತಿದ್ದನೆಂದು ತಾನೂ ರಕ್ತ ಕುಡಿಯುವ ಮಟ್ಟಿಗೆ ಇಳಿಯದಂತೆ ಎಂಟಿಬಿಗೆ ವಿವೇಕ ಹೇಳುವವರ್‍ಯಾರು?

ಫಿಲ್ಟರ್ ಮರಳು ಮಾಫಿಯಾ

ಬೈಲುನರಸಾಪುರದಲ್ಲಿ ಪೊಲೀಸ್ ಗಸ್ತು




ಕ್ಯಾಟ್ ಫಿಶ್ ಹೊಂಡ





ಸಮಾನತೆಯ ಕನಸು ಕಂಡಿದ್ದ ಕವಿ ಮಖ್ದೂಂ


ಮಖ್ದೂಂ

ಇತ್ತೀಚಿನ ದಿನಗಳಲ್ಲಿ ತೆಲಂಗಾಣದ ಪ್ರಸ್ತಾಪ ಅಲ್ಲಿ ಪ್ರತ್ಯೇಕ ರಾಜ್ಯಕ್ಕಾಗಿ ನಡೆದ ಚಳವಳಿ ಮತ್ತು ಈಗ ಆಂಧ್ರದ ಇತರ ಪ್ರದೇಶಗಳಲ್ಲಿ ನಡೆಯುತ್ತಿರುವ ಸಮೈಕ್ಯಾಂಧ್ರ ಚಳವಳಿಗಳ ಹಿನ್ನೆಲೆಯಲ್ಲಿ ಹೆಚ್ಚಾಗಿ ಕೇಳಿಬರುತ್ತಿದೆ. ಆದರೆ ಕಳೆದ ಶತಮಾನದ ನಲವತ್ತರ ದಶಕದ ಕೊನೆಯ ಭಾಗದಲ್ಲಿ ತೆಲಂಗಾಣದಲ್ಲಿ ಒಂದು ವಿಭಿನ್ನ ರೀತಿಯ ಮತ್ತು ಬೇರುಮಟ್ಟದ ಹೋರಾಟ ನಡೆದಿತ್ತು, ಅದು ಜನರ ವಿಮೋಚನೆಗಾಗಿ ನಡೆದಿದ್ದು ಈ ದೇಶದ ಇತಿಹಾಸದಲ್ಲಿ ಒಂದು ಪ್ರಮುಖ ಅಧ್ಯಾಯವಾಗಿದೆ. ಆ ಹೋರಾಟವು ಅಂದಿನ ಕಮ್ಯೂನಿಸ್ಟ್ ಪಕ್ಷದ ಮುಂದಾಳತ್ವದಲ್ಲಿ ಹೈದರಾಬಾದ್ ನಿಜಾಮನ ನಿರಂಕುಶಾಧಿಕಾರ ಮತ್ತು ಅಲ್ಲಿನ ಊಳಿಗಮಾನ್ಯ ವ್ಯವಸ್ಥೆಯ ವಿರುದ್ಧ ನಡೆಯಿತು. 1947 ಆಗಸ್ಟ್ 15ರಂದು ಬ್ರಿಟಿಷರು ಈ ದೇಶದ ಮೇಲಿನ ಅಧಿಕಾರವನ್ನು ಇಲ್ಲಿನ ನಾಯಕರಿಗೆ ಹಸ್ತಾಂತರಿಸಿ ಹೊರನಡೆದರೂ ಹಲವು ಸಂಸ್ಥಾನಗಳ ಜನತೆಗೆ ಆಸೀಮಿತ ಸ್ವಾತಂತ್ರ್ಯವೂ ಸಿಕ್ಕಿರಲಿಲ್ಲ. ಅಂದಿನ ರಾಜರು, ನವಾಬರು ತಮ್ಮ ಅಧಿಕಾರವನ್ನು ಬಿಟ್ಟುಕೊಡಲು ಸಿದ್ಧರಿರಲಿಲ್ಲ. ಹೈದರಾಬಾದ್ ಸಂಸ್ಥಾನದ (ಕರ್ನಾಟಕದ ಹೈದರಾಬಾದ್ ಕರ್ನಾಟಕ ಪ್ರಾಂತ್ಯವೂ ಸೇರಿದಂತೆ) ನಿಜಾಮನ ಸರ್ಕಾರವು ತನ್ನ ಸರ್ವಾಧಿಕಾರವನ್ನು ಗಟ್ಟಿಗೊಳಿಸಲು ರಜಾಕಾರರ ಪಡೆಗೆ ಬೆಂಬಲ ನೀಡುವುದರ ಮೂಲಕ ಜನವಿರೋಧಿಯಾಗಿತ್ತು. ಆ ಪ್ರದೇಶದ ದೇಶಮುಖರು, ಪಟ್ವಾರಿಗಳು ಭೂಮಾಲೀಕರು ನಿಜಾಮನಿಗೆ ಅಧೀನರಾಗಿ, ಜನಸಾಮಾನ್ಯರನ್ನು ಶೋಷಿಸುತ್ತಾ ವಿಲಾಸಿಜೀವನ ನಡೆಸುತ್ತಿದ್ದರು. ಊಳಿಗಮಾನ್ಯ ಸಂಸ್ಕೃತಿಯೇ ರಾಜ್ಯವಾಳುತ್ತಿದ್ದ ಆ ಕಾಲಘಟ್ಟದಲ್ಲಿ ಸಾಮಾನ್ಯ ಜನರು ಈ ಜಗತ್ತಿನಲ್ಲಿಯೇ ನರಕವಾಸದ ಅನುಭವವನ್ನು ಪಡೆಯುತ್ತಿದ್ದರು.

ಇಂಥ ಸನ್ನಿವೇಶದಲ್ಲಿ ತೆಲಂಗಾಣದಲ್ಲಿ ಮೊದಲಿಗೆ ತೆಲುಗಿನ ಬಳಕೆಯ ಸ್ವಾತಂತ್ರ್ಯಕ್ಕಾಗಿ ಶುರುವಾದ ಭಾಷಾ ಚಳವಳಿಯು ನಿಧಾನವಾಗಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಡಿಯಲ್ಲಿ ಒಂದು ಸಾಮಾಜಿಕ, ರಾಜಕೀಯ ಆಯಾಮವನ್ನೇ ಪಡೆಯಿತು. ಊಳಿಗಮಾನ್ಯ ವ್ಯವಸ್ಥೆಯಿಂದ ಬಿಡುಗಡೆ ಈ ಹೋರಾಟದ ಪ್ರಮುಖ ಗುರಿಯಾಗಿತ್ತು. ಅದಕ್ಕಾಗಿ ಅಲ್ಲಿನ ರೈತರು ದೊಡ್ಡ ಪ್ರಮಾಣದಲ್ಲಿ ಭೂಹೋರಾಟವನ್ನು ಕೈಗೆತ್ತಿಕೊಂಡರು. ಪರಿಣಾಮವಾಗಿ ಜಮೀನುದಾರರು ಹಳ್ಳಿಗಳನ್ನು ತೊರೆದು ಹೈದರಾಬಾದ್ ಸೇರಿದರು. ಹಿಂದೂ ಮತ್ತು ಮುಸ್ಲಿಂ ಎರಡೂ ಸಮುದಾಯಗಳಿಗೆ ಸೇರಿದ ಜನಸಾಮಾನ್ಯರ ನಡುವೆ ಲಕ್ಷಾಂತರ ಎಕರೆಯ ಭೂಮಿಯ ಹಂಚಿಕೆಯೂ ಆಯಿತು. ಆದರೆ ಸಂಸ್ಥಾನವನ್ನು ನಿಜಾಮನಿಂದ ವಿಮೋಚನೆ ಮಾಡುವುದಕ್ಕಾಗಿ 'ಬಂದ ಭಾರತ ಸರ್ಕಾರದ ಸೈನ್ಯವು ಈ ಜನರನ್ನೂ ಬಗ್ಗು ಬಡಿದು ಅವರು ಆಕ್ರಮಿಸಿಕೊಂಡಿದ್ದ ಭೂಮಿಯನ್ನು ಮತ್ತೆ ಭೂಮಾಲೀಕರಿಗೆ ಹಿಂದಿರುಗಿಸುವಲ್ಲಿ ಯಶಸ್ವಿಯಾಯಿತು. ಅಂದರೆ, ನವಾಬನು ಇಲ್ಲದಿದ್ದರೂ ಊಳಿಗಮಾನ್ಯ ವ್ಯವಸ್ಥೆಯಂತೂ ಮುಂದುವರಿಯಿತು. ಅಂದಿನ ಕಮ್ಯೂನಿಸ್ಟ್ ಪಕ್ಷವು ಜಮೀನುದಾರರು, ರಜಾಕಾರರು ಮತ್ತು ಭಾರತ ಸೈನ್ಯದ ವಿರುದ್ಧ ಹೋರಾಡಬೇಕಾಗಿತ್ತು. ಕೊನೆಗೆ ಈ ಉಜ್ವಲ ಹೋರಾಟವು ಪಕ್ಷವು ಚಳವಳಿಯನ್ನು ಹಿಂದೆಗೆದುಕೊಳ್ಳುವುದರೊಂದಿಗೆ ಮುಕ್ತಾಯವಾಯಿತು.


ಈ ಹೋರಾಟ ನಡೆಯುತ್ತಿದ್ದ ಕಾಲದಲ್ಲಿ ಹಲವರು ಕಮ್ಯೂನಿಸ್ಟ್ ನಾಯಕರು ಅದರ ಮುಂಚೂಣಿಯಲ್ಲಿದ್ದು, ನೀತಿನಿರೂಪಕರೂ ಆಗಿದ್ದರು. ಈ ಎರಡೂ ಕೆಲಸಗಳಲ್ಲಿ ತೊಡಗಿಕೊಂಡವರಲ್ಲಿ ಅನೇಕರು ಉತ್ತಮ ಬರಹಗಾರರು, ಕವಿಗಳು ಆಗಿದ್ದರು. ಅಂಥವರಲ್ಲಿ ಮಖ್ದೂಂ ಮೊಹಿಯುದ್ದಿನ್ ಪ್ರಮುಖ.


1908, ಫೆಬ್ರುವರಿ 4ರಂದು ತೆಲಂಗಾಣದ ಮೆದಕ್ ಜಿಲ್ಲೆಯ ಆಂದೋಲ್‌ನಲ್ಲಿ ಒಂದು ಸಂಪ್ರದಾಯವಾದಿ ಮುಸ್ಲಿಂ ಕುಟುಂಬದಲ್ಲಿ ಹುಟ್ಟಿದ ಮಖ್ದೂಂ ಚಿಕ್ಕಂದಿನಲ್ಲಿಯೇ ತಂದೆಯನ್ನು ಕಳೆದುಕೊಂಡು, ಚಿಕ್ಕಪ್ಪನ ಆರೈಕೆಯಲ್ಲಿ ಬೆಳೆದನು. ಚಿಕ್ಕಪ್ಪ ಬಷೀರುದ್ದಿನ್ (ನಿಜಾಮನ) ಸರ್ಕಾರದಲ್ಲಿ ಅತಿಸಾಮಾನ್ಯ ಉದ್ಯೋಗಿ. ಧಾರ್ಮಿಕ ವ್ಯಕ್ತಿಯಾಗಿದ್ದರೂ ಆಧುನಿಕತೆಗೆ ತೆರೆದುಕೊಂಡಂಥವನು. ಆ ಸಮಯದಲ್ಲಿ ಜಗತ್ತನ್ನೇ ಅಲುಗಾಡಿಸಿದ ರಷ್ಯಾ ಕ್ರಾಂತಿಯ ಬಗ್ಗೆ ಸಹಾನುಭೂತಿಯನ್ನಿಟ್ಟುಕೊಂಡವನು. ಆತನ ಮಾತುಗಳು ಆಗಲೇ ಮಖ್ದೂಂ ಮೇಲೆ ಸ್ವಲ್ಪ ಮಟ್ಟಿಗಿನ ಪ್ರಭಾವವನ್ನುಂಟು ಮಾಡಿದ್ದವು. ಆರ್ಥಿಕವಾಗಿ ಅನುಕೂಲವಿಲ್ಲದಿದ್ದರೂ ಮಖ್ದೂಂ ತನ್ನ ಓದನ್ನು ಮುಂದುವರೆಸಿ ಉಸ್ಮಾನಿಯಾ ವಿಶ್ವವಿದ್ಯಾಲಯದಿಂದ ಉರ್ದುವಿನಲ್ಲಿ ಎಂ.ಎ ಪದವಿಯನ್ನು ಪಡೆದನು. ವಿದ್ಯಾರ್ಥಿ ದೆಸೆಯಲ್ಲಿಯೇ ಕಮ್ಯೂನಿಸ್ಟ್ ಚಿಂತನೆಯೆಡೆಗೆ ಆಕರ್ಷಿತನಾದನು.


ಆ ಹೊತ್ತಿಗಾಗಲೇ ದೇಶದ ಹಲವು ಭಾಗಗಳಲ್ಲಿ ಎಡಪಂಥೀಯ ಆಲೋಚನೆಗಳುಳ್ಳ ಯುವಕರು ಸೇರಿ ನಡೆಸುತ್ತಿದ್ದ ಹಲವು ಸಂಘಟನೆಗಳ ನಂಟು ಬೆಳೆಸಿಕೊಂಡನು. ಹೈದರಾಬಾದ್‌ನಲ್ಲಿ ಪ್ರಗತಿಪರ ಬರಹಗಾರರ ಸಂಘಟನೆಯನ್ನು ಸ್ಥಾಪಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದನು. ಆ ಸಮಯದಲ್ಲಿ ನಿಯಾಜ್ ಫತೇಪುರಿ ಎಂಬುವವರು ನಡೆಸುತ್ತಿದ್ದ ನಿಗಾರ್ ಎಂಬ ಪತ್ರಿಕೆಯ ಕಾಯಂ ಓದುಗನೂ ಆಗಿದ್ದ ಮಖ್ದೂಂ ಆ ಪತ್ರಿಕೆಯಲ್ಲಿನ ವೈಚಾರಿಕತೆ ಮತ್ತು ಸಮಾಜಮುಖಿ ಚಿಂತನೆಯ ಕಡೆಗೆ ಆಕರ್ಷಿತನಾದನು. ಈ ರೀತಿಯ ಪ್ರಭಾವಗಳಿಂದಾಗಿ ಆತ ಒಬ್ಬ ಕಮ್ಯೂನಿಸ್ಟನಾಗಿ ಮತ್ತು ಧಾರ್ಮಿಕ ಮೂಲಭೂತವಾದದ ವಿರೋಧಿಯಾಗಿ ರೂಪುಗೊಂಡನು.

1933-34ರ ನಡುವೆ ಕವನಗಳನ್ನು ಬರೆಯುವುದನ್ನು ಶುರುಮಾಡಿದ ಮಖ್ದೂಂ ಕಾವ್ಯದಲ್ಲಿ ಸಾಮಾಜಿಕ ಆಶಯಗಳಿಗೆ ಒತ್ತು ಕೊಟ್ಟಿರುವುದು ಸ್ಪಷ್ಟ. ಕೇವಲ ಬರಹದಲ್ಲಿ ಮಾತ್ರ ತೊಡಗಿಕೊಳ್ಳದೆ ತನ್ನ ಕೆಲವರು ಗೆಳೆಯರ ಸಹಕಾರದೊಂದಿಗೆ ಹೈದರಾಬಾದಿನಲ್ಲಿ ಕಾಮ್ರೇಡ್ಸ್ ಅಸೋಸಿಯೇಷನ್‌ಅನ್ನು ಆರಂಭಿಸಿದನು. ಒಂದು ಸ್ಪಷ್ಟ ರಾಜಕೀಯ ನಿಲುವು, ಬದ್ಧತೆ ಆತನ ಎಲ್ಲ ಬರಹಗಳಲ್ಲಿ ಕಾಣುತ್ತದೆ. ಕೆಲವು ಕಾಲದಮಟ್ಟಿಗೆ ಕಾಲೇಜೊಂದರಲ್ಲಿ ಉರ್ದು ಅಧ್ಯಾಪಕನಾಗಿಯೂ ಕೆಲಸ ಮಾಡಿದನು. ಆದರೆ ಆ ಕೆಲಸ ತನ್ನ ರಾಜಕೀಯ ಚಟುವಟಿಕೆಗಳಿಗೆ ಅಡ್ಡಿಯಾಯಿತೆಂದು ಕೆಲಸಕ್ಕೆ ರಾಜೀನಾಮೆ ನೀಡಿ ಪೂರ್ಣಾವಧಿ ಕಮ್ಯೂನಿಸ್ಟ್ ಕಾರ್ಯಕರ್ತನಾದನು.

ಮಖ್ದೂಂ ಕೇವಲ ಕಮ್ಯೂನಿಸ್ಟ್ ಹೋರಾಟಗಾರನಾಗಿರಲಿಲ್ಲ, ಸಾಮಾಜಿಕ ಕನಸುಗಳು ತುಂಬಿದ್ದ ಕವಿಯಾಗಿದ್ದ. ಹೋರಾಟದ ಹುರುಪು ಮತ್ತು ಎಲ್ಲ ಜನರಿಗೂ ಸಮಪಾಲು ಸಿಗುವಂಥ ಜಗತ್ತನ್ನು ನಿರ್ಮಿಸುವ ಆದರ್ಶ ಆತನ ಕವಿತೆಯ ಜೀವಾಳ. ಆಧುನಿಕ ಉರ್ದು ಕಾವ್ಯಕ್ಕೆ ಫೈಜ್ ಅಹಮದ್ ಫೈಜ್ ರೀತಿಯಲ್ಲಿ ಹೊಸ ತಿರುವು ಕೊಟ್ಟವನು ಮಖ್ದೂಂ. ಆತನ ಕವಿತೆಯು ಸಮಕಾಲೀನ ಸಮಾಜದ ದುಸ್ಥಿತಿಯನ್ನು ಪರಿಣಾಮಕಾರಿ ರೂಪಕಗಳನ್ನು, ಪ್ರತಿಮೆಗಳನ್ನು ಬಳಸಿ ಓದುಗರಿಗೆ ಒಂದು ಸ್ಪಷ್ಟ ಚಿತ್ರಣವನ್ನು ನೀಡುತ್ತದೆ. ಅದೇ ಸಮಯದಲ್ಲಿ ಉರ್ದು ಕಾವ್ಯದ - ಮುಖ್ಯವಾಗಿ ಗಜಲ್‌ಗಳ - ಲಯವನ್ನು ಹಿಡಿಯುವುದರ ಮೂಲಕ ಮಖ್ದೂಂ ತನ್ನ ಕಾವ್ಯಕ್ಕೆ ಮಾಧುರ್ಯವನ್ನೂ ಒದಗಿಸಿದನು. ತನ್ನ ರಾಜಕೀಯ ಪಕ್ಷದ ಕಾರ್ಯಕರ್ತನಾಗಿ ಜವಾಬ್ದಾರಿಗಳನ್ನು ನಿರ್ವಹಿಸುವಾಗ, ಮುಖ್ಯವಾಗಿ ತೆಲಂಗಾಣ ಹೋರಾಟದ ಸಮಯದಲ್ಲಿ ಕಾವ್ಯ ಸೃಷ್ಟಿಯ ಕಡೆ ಗಮನ ಹರಿಸಲು ಸಾಧ್ಯವಾಗದಿದ್ದರೂ ಸೃಜನಶೀಲತೆ ಮಾತ್ರ ಆತನನ್ನು ಬಿಡಲಿಲ್ಲ. ಆತನ ರಾಜಕೀಯ ಸಿದ್ಧಾಂತಗಳನ್ನು ಒಪ್ಪದವರೂ ಸಹ ಆತನ ಕಾವ್ಯದ ಸೊಬಗನ್ನೂ, ಆತನ ಬದ್ಧತೆಯನ್ನೂ ಪ್ರಶಂಸಿಸಿದ್ದಾರೆ. ಅಂಧೇರಾ, ಖಮರ್, ಖೈದ್, ಸಿಪಾಹಿ, ಧುವಾ, ಚಾಂದ್ ತಾರೋಂ ಕಾ ಬನ್, ಸಾಗರ್ ಕೆ ಕಿನಾರೆ, ತೆಲಂಗಾಣ, ಆಜಾದಿ ವತನ್, ಗರೀಬ್ ಲಡ್‌ಕಿಯಾ, ಮುಸಾಫಿರ್, ಸಿತಾರೆ, ಜಂಗ್ ಎ ಆಜಾದಿ, ಇಂತಜಾರ್, ಹವೇಲಿ ಮುಂತಾದವು ಮಖ್ದೂಂನ ಕೆಲವು ಪ್ರಖ್ಯಾತ ಕವನಗಳು.



ಊಳಿಗಮಾನ್ಯ ವ್ಯವಸ್ಥೆಯನ್ನು ಕಾಪಾಡಿಕೊಂಡ ನಿಜಾಮ್, ನೆಹರೂ ಮತ್ತು ಪಟೇಲ್


ನಿಜಾಮನ ರಜಾಕಾರರ ಸೈನ್ಯ



ಮಖ್ದೂಂನ 99ನೇ ಹುಟ್ಟುಹಬ್ಬದಂದು ಸಿಪಿಐ ಪಕ್ಷದಿಂದ ಮೆರವಣಿಗೆ

ಅಂದಿನ ತೆಲಂಗಾಣದ ಬಗ್ಗೆ ಆತನ ಕವಿತೆ:

ಭಾರತಕ್ಕೆ ಹೊಸದಿಕ್ಕನು ತೋರಿದೆ ತೆಲಂಗಾಣ
ಹೊಸಬೆಳಗನ್ನೇ ಸೃಷ್ಟಿಸಿದೆ ನನ್ನ ತೆಲಂಗಾಣ :
ಬಾ ಎನುತಿದೆ ಹೊಸ ವಿಶ್ವಕೆ
ಕ್ರಾಂತಿಗಳ ಪ್ರವಾದಿ ನನ್ನ ತೆಲಂಗಾಣ.
ಕತ್ತಲ ರಾತ್ರಿಯ ಎದೆಯಲಿ ಪಂಜುಗಳ ಮೆರವಣಿಗೆ
ಈ ಪೀಡಿತ ಜನರೇ ನನ್ನ ಪ್ರಾಣಕೆ ಇಂಬು
ದಂಗೆ ಎದ್ದ ನಾಯಕರೇ ಇದೋ ನನ್ನ ವಂದನೆ
ವಿಮೋಚನೆಯ ಚಂದ್ರರಿಗೆ ಎಲ್ಲರ ಅಭಿನಂದನೆ.
ಕತ್ತಿಗಳು, ಭರ್ಜಿಗಳು, ಕೊಡಲಿ ಸುತ್ತಿಗೆಗಳು
ರೈತ ಕಾರ್ಮಿಕ ಜನರ
ಆ ದೊಡ್ಡ ಸೇನೆಗಳು
ಉಳ್ಳವರ ವಾಡೆಗಳವು ಒಂದೊಂದೇ ಕುಸಿಯುವವು.
ನಯವಂಚಕರ, ದಗಲ್ಬಾಜಿಗಳ
ಈ ಬಾಳಿಗೆ ವಿದಾಯ
ಉಕ್ಕುತ್ತದೆ ನವನವೀನ ಪ್ರಪಂಚದ ಹೊಸ ದೃಶ್ಯ
ಹೊಸ ಬಾಳಿನ ಹೊಸಕ್ರಾಂತಿಯ ಹೊಸ ತತ್ವ
ಯುವಶಕ್ತಿಯ, ಹೊಸ ಬಣ್ಣದ ಮುಂದಾಳತ್ವ.

ನಗರಗೆರೆ ರಮೇಶ್

ರಾಜಕೀಯದಲ್ಲಿ ಅನೈತಿಕ ಸಂಬಂಧಗಳು ಜಾಸ್ತಿ ಆಗುತ್ತಿರುವುದಕ್ಕೆ ಕಾರಣವೇನು?



- ☛ ಈಗ ಹುಡುಗರು ಜಡೆ ಬಿಡೋದು ಫ್ಯಾಶನ್ ನಿಜ. ಆದರೆ ಜಡೆಗೆ ಮಲ್ಲಿಗೆ ಮುಡಿಯೋದಿಲ್ಲವಲ್ಲ ಯಾಕೆ?


ಕೀಟಲೆ
- ಹಿಂದಿನಿಂದ ಯಾರಾದರೂ ಚೆನ್ನುಹತ್ತಿಯಾರು ಎಂಬ ಭಯ.
- ☛ ಸಿದ್ದರಾಮಯ್ಯನವರನ್ನು ಅಂಬರೀಷ್ ಮೋದಿಗೆ ಹೋಲಿಸಿದ್ದಾರಲ್ಲ?

ನಾಗರಾಜ್, ಮಂಡ್ಯ
- ಚುನಾವಣೆ ಕಾವಿನಲ್ಲಿ ಬುದ್ಧಿಗೆ ಮಂಕುಬಡಿದಿದ್ದರಿಂದ.
- ☛ ಕಣ್ಣು ಇದೆ ಆದರೆ ಕಣ್ಣೀರು ಬರಲ್ಲ, ಮನಸ್ಸು ಇದೆ ಆದರೆ ಅದಕ್ಕೆ ನೋವಾಗೊಲ್ಲ, ಹೃದಯ ಇದೆ ಆದರಲ್ಲಿ ಪ್ರೀತಿ ಇಲ್ಲ, ಜೀವ ಇದೆ ಆದರೆ ಸ್ನೇಹ ಇಲ್ಲ, ಇವರು ಯಾರು ಹೇಳಿ?

ಓಂಕಾರ್, ಸುರಹೊನ್ನೆ
- ಚೆಡ್ಡಿಗಳು!
- ☛ ತನ್ನ ಅಪ್ಪ ಯೋಗೀಶ್ವರರಿಂದಲೇ ನಟನೆಗೆ ಸ್ಫೂರ್ತಿ ಪಡೆದಿದ್ದೇನೆ ಎಂದಿದ್ದಾಳಲ್ಲ ಮಗಳು ನಿಶಾ?

ಯೋಗಿ, ಚಾಮರಾಜನಗರ
- ಮಕ್ಕಳಿಗೆ ಹೆತ್ತರವರೇ ಚೆಂದ ಎಂದು ಈಗ ಅರ್ಥವಾಯಿತಾ?
- ☛ ರಾಜಕೀಯದಲ್ಲಿ ಅನೈತಿಕ ಸಂಬಂಧಗಳು ಜಾಸ್ತಿ ಆಗುತ್ತಿರುವುದಕ್ಕೆ ಕಾರಣವೇನು?

ಓದುಗ
- ಉತ್ತರ ದೇವೇಗೌಡರೇ ಬಲ್ಲರು!



- ☛ ಹುಡುಗರಿಗೆ ಹುಡುಗಿಯರ ಮನಸ್ಸು ಯಾಕೆ ಬೇಗ ಅರ್ಥವಾಗಲ್ಲ?

ಮಲ್ಲು, ಬಿಜಾಪುರ
- ತಮ್ಮ ರಕ್ಷಣೆಗೆ ಅರ್ಥವಾದರೂ ಅರ್ಥವಾಗದಂತೆ ನಟಿಸುತ್ತಾರೆ ಮಾರಾಯ.
- ☛ ತ್ರೇತಾಯುಗದ ಆ 'ಲಂಕೇಶ್'ಗೂ, ಕಲಿಯುಗದ ಈ 'ಲಂಕೇಶ್'ಗೂ ವ್ಯತ್ಯಾಸ ಹೇಳಿ ಗುರು?

ಹರೀಶ್, ಕೊಡಗು
- ಆತನ ಕೈಯಲ್ಲಿ ಪತ್ರಿಕೆ ಎಂಬ ಅಸ್ತ್ರ ಇರಲಿಲ್ಲ!
- ☛ ಪ್ರೀತಿಲಿ ಸೋತವರು ಹುಚ್ಚರು ಅಥವಾ ಕವಿಗಳು ಆಗುತ್ತಾರಂತೆ ನಿಜಾನಾ?

ಪ್ರಕಾಶ್, ಬೇಡಸೂರ್
- ಸೋತು ನೋಡು.
- ☛ ಭೂಮಿ ಮೇಲೆ ಪ್ರೀತಿ ಇಲ್ಲದಿದ್ದರೆ ಏನಾಗುತ್ತಿತ್ತು?

ಸುಧೀರ್, ಕೊಪ್ಪ
- ಸುಂದರ ಕೊಪ್ಪ ಕೂಡ ಕತ್ತಲೆ ಕೂಪದಂತೆ ಕಾಣಿಸುತ್ತಿತ್ತು.
- ☛ ಜೈಲಿನಿಂದ ಹೊರಬಂದ ಮೇಲೆ 'ಮಾಜಿ ಕೈದಿ ಅನ್ನಬಹುದಾ?

ಸಮೀಮಾ ಪೆರುವಾಜೆ
- ಪಾಪ ಆಗಲೂ ಯಾಕ್ರಿ ಅವರಿಗೆ ಶಿಕ್ಷೆ ಕೊಡ್ತೀರಿ?
- ☛ ಸಂಸಾರದಲ್ಲಿ ಸುಖ ಸಿಗುತ್ತೋ ಅಥವಾ ಸನ್ಯಾಸತ್ವದಲ್ಲಿ ಸುಖ ಸಿಗುತ್ತೋ?

ರಾಜು, ಕೆಂಗೇರಿ
- ಸಂಸಾರಕ್ಕೂ, ಸುಖಕ್ಕೂ ಸಂಬಂಧ ಇದೆ ಅಂತ ಹೇಳಿದವರ್‍ಯಾರು.
- ☛ ರಾಜಕಾರಣಿಗಳು ಮಠಾಧೀಶರ ಹಿಂದೆ ಬೀಳಲು ಕಾರಣವೇನು?

ಗಣೇಶ್, ಹಾವೇರಿ
- ಕಪಟ ವಿದ್ಯೆ ಕರಗತ ಮಾಡಿಕೊಳ್ಳಲು.
- ☛ ನನ್ನ ಸ್ನೇಹಿತನೊಬ್ಬ ಮುಂದಿನ ಜನ್ಮದಲ್ಲಿ ಹುಡುಗಿಯಾಗಿ ಹುಟ್ಟುತ್ತೇನೆ ಎನ್ನುತ್ತಾನಲ್ಲಾ, ಯಾಕಿರಬಹುದು?

ಚಂದ್ರ, ಬಳ್ಳಾರಿ
- ಈ ಜನ್ಮದಲ್ಲಿ ಹುಡುಗಿಗಾಗಿ ಬೀದಿಬೀದಿ ಅಲೆದು ಸುಸ್ತಾಗಿರುವುದರಿಂದ.
- ☛ ಶಂಕರ್ ಬಿದರಿ ಕಾಂಗ್ರೆಸ್ ತೊರೆದು ಸಮಾಜವಾದಿ ಪಕ್ಷ ಸೇರಿದ್ದು ಯಾತಕ್ಕೆ?

ಸಿಂಧು, ಶಿವಮೊಗ್ಗ
- ಕಾಂಗ್ರೆಸ್‌ನಲ್ಲಿ ಪೆಡಲ್‌ಅನ್ನೂ ಕೊಡಲಿಲ್ಲ, ಅದಕ್ಕೆ.
- ☛ ಚೆಡ್ಡಿಗಳು ಮತ್ತೆ ಅಯೋಧ್ಯೆಯ ರಾಮನಿಗೆ ಗಂಟು ಬಿದ್ದಿದ್ದಾರಲ್ಲ?

ಶಿವಕುಮಾರ್, ಹಾಸನ
- ಮೋದಿ ಎಂಬ ಬರೀ ಗಾಳಿ ಬಿಜೆಪಿ ರಥವನ್ನು ದೆಹಲಿತನಕ ತೆಗೆದುಕೊಂಡು ಹೋಗುವುದಿಲ್ಲ ಎಂಬ ಅರಿವು ಮೂಡಿದ್ದಕ್ಕೆ.

(ಸೂಚನೆ: ಕಣ್ಣಾಮುಚ್ಚಾಲೆಗೆ ಪ್ರಶ್ನೆ ಕಳುಹಿಸುವವರು ಅಂಚೆ ಮೂಲಕ, ಮೊಬೈಲ್ ನಂ. 9980331427ಗೆ SMS ಮತ್ತು kannamucchale@gmail.com ಗೆ ಇ-ಮೇಲ್ ಮೂಲಕವೂ ಕಳುಹಿಸಬಹುದು. ನಿಮ್ಮ ಹೆಸರು, ಊರು ತಪ್ಪದೆ ಬರೆಯಿರಿ)

ರಾಯಭಾಗದ ಕಡು ಭ್ರಷ್ಟ ಶಾಸಕ ದುರ್ಯೋಧನ
ಹೊಳೆಯ ಬಗ್ಗೆ ಆಗಸ್ಟ್ 13ರಂದು ಪಬ್ಲಿಕ್ ಟಿವಿಯಲ್ಲಿ
ಗಗೊಂಡ ವೀಡಿಯೊ ಕ್ಲಿಪ್‌ನಲ್ಲಿನ ಲಂಚದ ವ್ಯವಹಾರ
ಜನರಿಗೆ ವಿಶೇಷವೂ ಅಲ್ಲ, ಹೊಸದೂ ಅಲ್ಲ.

ಏಕೆಂದರೆ ಈ ಐಹೊಳೆಯ ಹೀನ ಪ್ರವೃತ್ತಿ, ಅವನು
ಮುಬಂದ ರೀತಿ, ಅವನಿಗಿರುವ ಧನದಾಹ ಎಲ್ಲವೂ
ಜನರಿಗೆ ಚಿರಪರಿಚಿತ.


ಮೂಲತಃ ರಾಯಭಾಗ ತಾಲೂಕಿನ ನಿಡಗುಂದಿ
ಯ ಮಹಾಲಿಂಗಪ್ಪ ಐಹೊಳೆ ಎಂಬ ಕೇವಲ ಮೂರು
ಜಮೀನಿದ್ದ ಸಣ್ಣ ರೈತನ ಆರು ಜನ ಮಕ್ಕಳಲ್ಲಿ
ಮೊದಲಿನವನು. ಅಪ್ಪನೊಂದಿಗೆ ವ್ಯವಸಾಯ
ಮುವುದರೊಂದಿಗೆ ತನ್ನ ಹಳ್ಳಿ ಮಟ್ಟದ ರಾಜಕಾರಣದಲ್ಲಿ
ಮತ್ತ 1987 ರಿಂದ 1992ರವರೆಗೆ ನಿಡಗುಂದಿಯ
ವಲ ಪಂಚಾಯ್ತಿಗೂ ನಂತರ 1992ರಿಂದ
7ರವರೆಗೆ ಬದಲಾದ ಗ್ರಾಮ ಪಂಚಾಯ್ತಿಗೂ
ನಾಗಿದ್ದ. ಅಷ್ಟರಲ್ಲಿ ಕುಡಚಿಯ ಮಾಜಿ ಶಾಸಕ
ಸ್‌ವ ಶಾಮ ಘಾಟಗೆ ಸಂಪರ್ಕಕ್ಕೆ ಬಂದಿದ್ದ. ಆಗಲೇ
ಯ್ತಿ ಮಟ್ಟದಲ್ಲಿ ಅಧಿಕಾರ ಹಾಗೂ ಹರಾಮಿ ರೊಕ್ಕದ
ಕಂಡಿದ್ದ ಐಹೊಳೆ ನಂತರ ಘಾಟಗೆಗೆ ಬೆನ್ನು ಬಿದ್ದು
ರಿಂದ 2004ರವರೆಗೆ ಕುಡಚಿ ಎಪಿಎಂಸಿಗೆ
ಶಕನಾದ ಮತ್ತು ಕ್ಲಾಸ್-1 ಗುತ್ತಿಗೆದಾರನೂ ಆದ.

ಈತ ಗುತ್ತಿಗೆದಾರನಾದ ನಂತರ ಮಾಡಿದ್ದೆಲ್ಲ ಕಾಮಗಾರಿ
ನಲ್ಲಿ ಬರೀ ಹಗಲು ದರೋಡೆ. ಹಿಂದುಳಿದಿರುವ
ಚಿ-ರಾಯಭಾಗ ಮತಕ್ಷೇತ್ರದ ಕಾಮಗಾರಿಗಳು ಈತನ
ಸಿಕ್ಕು ಅಕ್ಷರಶಃ ಲೂಟಿಗೊಳಗಾದವು. ಅತ್ಯಂತ ಕಳಪೆ
ಮಟ್ಟದಲ್ಲಿ ಕಾಮಗಾರಿಗಳನ್ನು ಮಾಡಿ ಕೆಲವೇ
ಗಳಲ್ಲಿ ಅವು ಹಳ್ಳ ಹಿಡಿದು ಎರಡೂ ಮತ ಕ್ಷೇತ್ರಗಳ
ತಿ ಮತ್ತಷ್ಟು ಕುಲಗೆಟ್ಟುಹೋಯಿತು. ನಂತರ
ವರ್ಷ ಅಂದರೆ 2005ರಲ್ಲಿ ಘಾಟಗೆ ಬೆಂಬಲದಿಂದ
ಹೆಂಡತಿ ಸುಶೀಲಾ ಬಾಯಿಯನ್ನು ಜಿಲ್ಲಾ ಪಂಚಾಯ್ತಿಗೆ
ಲೆಕ್ಟ್ ಮಾಡಿದ. ಅಲ್ಲಿಂದ ಈತನ ಲೂಟಿಯ ಸ್ಟೈಲೇ
ನಾಯಿತು. ಅಲ್ಲಿನವರೆಗೂ ಶಾಸಕನಿಂದ ಹಿಡಿದು
ಕಾರಿಗಳವರೆಗೂ ಎಲ್ಲರಿಗೂ ಕಮಿಷನ್ ಕೊಟ್ಟು
ಗಾರಿಯ ಬಹುಪಾಲು ದುಡ್ಡನ್ನು ಎತ್ತಿ ಹಾಕುತ್ತಿದ್ದ
ಹೆಂಡತಿ ಜಿಲ್ಲಾ ಪಂಚಾಯ್ತಿಗೆ ಸದಸ್ಯಳಾದ ನಂತರ
ಕ ಅಡೆತಡೆಯೂ ಇಲ್ಲದಂತೆ ಹೆಂಡತಿಯ ಜಿಲ್ಲಾ
ಯ್ತಿ ಕ್ಷೇತ್ರದ ಬಹುಪಾಲು ಅಭಿವೃದ್ಧಿ ಕೆಲಸಗಳನ್ನು
ಗುತ್ತಿಗೆ ಪಡೆದು ದುಡ್ಡನ್ನೆಲ್ಲ ನುಂಗಿ ಹಾಕತೊಡಗಿದ.
ರ ವಿಧಾನಸಭಾ ಚುನಾವಣೆ ಬರುವ ಹೊತ್ತಿಗೆ
ತನ್ನ ರಾಜಕೀಯ ಗುರು ಘಾಟಗೆಗೆ ಸೆಡ್ಡು
ಯುವ ಮಟ್ಟಕ್ಕೆ ಬೆಳೆದು ನಿಂತಿದ್ದ. ಜೊತೆಗೆ ಆಗ
ಡಿಯ ಸಂಸದರಾಗಿದ್ದ ರಮೇಶ್ ಜಿಗಜಿಣಗಿಯ
ಲಿಗನಾಗಿ ಬದಲಾಗಿದ್ದ.

ಜಿಗಜಿಣಗಿಗೆ ಮೊದಲಿನಿಂದ ಆಪ್ತನಾಗಿದ್ದವನು ಈತನ
ು ಅಂದರೆ ಹೆಂಡತಿ ಸುಶೀಲಾಳ ಅಣ್ಣ ಬಸವರಾಜ
ಈತ ಜಿಗಜಿಣಗಿಯ ಕೈಕಾಲು ಹಿಡಿದು ಮಾವ
ಳಿಗೆ 2008ರ ರಾಯಭಾಗ ವಿಧಾನಸಭಾ
ವಣೆಗೆ ಬಿಜೆಪಿ ಟಿಕೆಟ್ ಸಿಗುವಂತೆ ಮಾಡಿದ.
ನಾಗಿಗೂ ಘಾಟಗೆ ವಿರುದ್ಧ ತನ್ನದೇ ಜಾತಿಯ ನಾಯಕ
ನನ್ನು ಬೆಳೆಸಬೇಕಿತ್ತು. ಜಿಲ್ಲೆಯ ಪ್ರಭಾವಿ ಲಿಂಗಾಯತ
ಕರಾದ ಪ್ರಭಾಕರ ಕೋರೆ, ಉಮೇಶ್ ಕತ್ತಿ ಬೆಂಬಲದ
ಗೆ ರಾಜ್ಯದಲ್ಲಿ ಯಡಿಯೂರಪ್ಪನ ನಾಟಕದ ಅಬ್ಬರದ
ಕೂಡ ಇತ್ತು. ಇದೆಲ್ಲವೂ ಸೇರಿ ಲೂಟಿಕೋರ
ರ್ಯೋಧನ ಐಹೊಳೆ ಅತ್ಯಂತ ಹಿಂದುಳಿದ ರಾಯಭಾಗ
ಬಿಜೆಪಿ ಶಾಸಕನಾಗಿ ಒಕ್ಕರಿಸಿಬಿಟ್ಟ.

ಈತ ಶಾಸಕನಾದ ಮೇಲೆ ಮಾಡಿದ ಮೊದಲ
ಎಂದರೆ ತನ್ನ ಅಳಿಯ ಸನದಿ, ಮಗ ಅರುಣ
ಬಿಗರಾದ ಅಣ್ಣಾ ಸಾಬ್ ಖೇಮಲಾಪುರೆ, ಗೋಪಾಲ
ಕರ್, ಅನಿಲಗಾಡಿ ಒಡ್ಡರ, ಸದಾಶಿವ ಘೋರ್ಪಡೆ
ಾದವರನ್ನು ಸೇರಿಸಿಕೊಂಡು ಸಿಕ್ಕಸಿಕ್ಕವರ ಹೆಸರಿನಲ್ಲಿ
ಲೈಸೆನ್ಸ್‌ಗಳನ್ನು ಮಾಡಿಸಿದ್ದು ನಂತರ ತನ್ನ ಮತಕ್ಷೇತ್ರಕ್ಕೆ
ದ ಅಭಿವೃದ್ಧಿ ಕಾಮಗಾರಿಗಳಲ್ಲಿ ಬಹುಪಾಲು
ನ್ನು ತಾನೇ ಮಾಡಿಸಿರುವ ಗುತ್ತಿಗೆ ಲೈಸೆನ್ಸ್‌ದಾರರಿಗೆ
ೂರು ಮಾಡಿಸಿ ಹಿಂಬಾಲಕರ ಮೂಲಕ ಅತ್ಯಂತ
ಮಟ್ಟದಲ್ಲಿ ಕೆಲಸ ಮಾಡಿಸಿ ಬಿಲ್ ಎತ್ತಿ
ೊಡಗಿದ. ಮೊದಲೇ ಈ ಭಾಗದ ಜನ ಮುಗ್ಧರು
ಯಾವ ಉಸಾಬರಿಗೂ ಹೋಗದೇ ತಮ್ಮಷ್ಟಕ್ಕೆ
ಇರುವವರು. ಇದೂ ಕೂಡ ಈತನಿಗೆ ವರವಾಗಿ
ಮಾಡಿದ್ದೇ ಅಂತಿಮ ಎನ್ನುವಂತಾಗಿ ಹೋಯಿತು.

ದುರಂತವೆಂದರೆ ದುಡ್ಡು ಬಂದಷ್ಟು ಈತನ
ದಾಹ ಏರುತ್ತಲೇ ಹೋಯಿತೇ ಹೊರತು
ಮೆಯಾಗಲಿಲ್ಲ. ಗಳಿಸಿದಷ್ಟು ಇನ್ನಷ್ಟು ಬೇಕು ಎಂಬ
ದುರಾಸೆ. ಈತನನ್ನು ಯಾವ ಮಟ್ಟಕ್ಕೆ ತಂದು
ದೆ ಎಂದರೆ ಯಾವುದಾದರೂ ಶಿಫಾರಸಿಸ ಪತ್ರ,
ಕೊಂಡರೂ ಯಾವ ಸಂಕೋಚವೂ ಇಲ್ಲದೇ ಈತ
ಲ್ ಕೊಡ್ಬೇಕಾಗ್ತದ, ಅಗತ್ಯಕ್ಕೆ ಕೊಡ್ರೀ' ಅಂತ
ಸು ರೂಪಾಯಿಗೂ ಕೈಚಾಚುತ್ತಾನೆ.



ರಾಯಭಾಗದ ಕಂಟಕ

ಶಾಸಕ ದುರ್ಯೋಧನನ ಮತ್ತಷ್ಟು ಇತಿಹಾಸ

ಈತನ ನುಂಗಾಟ ಇದಕಷ್ಟೇ ಸೀಮಿತವಲ್ಲ, ಸರಕಾರದಿಂದ ಬರುವ ಪ್ರತಿ ಸೌಲಭ್ಯಗಳು ಇಲ್ಲಿ ಮಾರಾಟಕ್ಕಿವೆ. ಪ್ರತಿಯೊಂದಕ್ಕೂ ಒಂದೊಂದು ರೇಟ್ ಫಿಕ್ಸ್ ಮಾಡಲಾಗಿದೆ. ಫಲಾನುಭವಿಗಳು ಯಾರು ಎಂಬುದರ ಮೇಲೆ ದರ ಸ್ವಲ್ಪ ಹೆಚ್ಚು ಕಡಿಮೆಯಾಗಬಹುದೇ ಹೊರತು ಯಾವ ಕಾರ್ಯವೂ ಉಚಿತವಾಗಿ ಆಗುವುದಿಲ್ಲ. ಉದಾಹರಣೆಗೆ ಗಂಗಾ ಕಲ್ಯಾಣ ಯೋಜನೆಯಡಿ ಜಮೀನಿಗೆ ನೀರಾವರಿ ಸೌಲಭ್ಯ ಬೇಕಾದವರು 10,000 ರೂಪಾಯಿ ಕೊಡಬೇಕು. ಕೆ.ಇ.ಬಿ.ಯಿಂದ ಟ್ರಾನ್ಸ್‌ಫಾರ್ಮರ್ ಬೇಕಾದ ರೈತರು 25,000 ರೂಪಾಯಿಯಿಂದ 30,000 ರೂಪಾಯಿ ಕೊಡಬೇಕು. ಅಂಗನವಾಡಿ ಕಾರ್ಯಕರ್ತರ ಹುದ್ದೆಗೆ ಒಂದು ಲಕ್ಷ, ಸಹಾಯಕಿಯ ಹುದ್ದೆಗೆ 50,000 ರೂಪಾಯಿ. ಹೀಗೆ ನೀವು ಈ ಶಾಸಕನ ಬಳಿ ಯಾವುದೇ ಕೆಲಸಕ್ಕೆ ಹೋದರೂ ಅದಕ್ಕೊಂದು ರೇಟ್ ಇದೆ. ಅದು ಸಂದಾಯವಾದರೆ ಮಾತ್ರ ಕೆಲಸ. ಇದರಲ್ಲಿ ಯಾವುದೇ ಮುಚ್ಚುಮರೆಯಾಗಲಿ ಸಂಕೋಚವಾಗಲಿ ಯಾಕೆ ಇರಬೇಕು ಎಂಬುದು ಐಹೊಳೆಯ ನಂಬಿಕೆ.

ಇದು ಸಾರ್ವಜನಿಕರ ಪಾಡಾದರೆ ಇನ್ನು ಇಲ್ಲಿನ ಸರಕಾರಿ ನೌಕರರದ್ದೇ ಒಂದು ವಿಚಿತ್ರ ತೊಳಲಾಟ. ಜಿಲ್ಲಾ ಪಂಚಾಯ್ತಿ, ತಾಲ್ಲೂಕ್ ಪಂಚಾಯ್ತಿ, GLBC, PWD, CDPO ಇಲಾಖೆ, ಅರಣ್ಯ, ತೋಟಗಾರಿಕೆ, ಕೃಷಿ ಇಲಾಖೆ ಅಧಿಕಾರಿಗಳು, ತಹಶೀಲ್ದಾರ್, ಬಿ.ಇ.ಓ ಮುಂತಾದ ಅಧಿಕಾರಿಗಳು ಪ್ರತಿ ತಿಂಗಳು ಅಪ್ಪಿತಪ್ಪಿ ತಮ್ಮ ಮನೆಗಳಿಗೆ ಕಿರಾಣಿ ಸಾಮಾನು ಒಯ್ಯುವುದನ್ನು ಮರೆಯಬಹುದು. ಆದರೆ ಈ ಐಹೊಳೆಗೆ ಅಮದನಿ ಸಲ್ಲಿಸುವುದನ್ನು ಮಾತ್ರ ಮರೆಯುವಂತಿಲ್ಲ. ಆಕಸ್ಮಾತ್ ಯಾವುದಾದರೂ ಇಲಾಖೆಯಿಂದ ಹಫ್ತಾ ಬರುವುದು ನಿಂತಿತು ಅಂದರೆ ಆ ಇಲಾಖೆ ಅಧಿಕಾರಿಯ ವರ್ಗಾವಣೆಗೆ ಈತನ ಶಿಫಾರಸ್ಸು ಪತ್ರ ತಯಾರಿದೆ ಅಂತಾನೆ ಅರ್ಥ. ನಂತರ ಆ ಅಧಿಕಾರಿಯ ಗೋಳು ಹೇಳತೀರದು. ಎದ್ದು ಬಿದ್ದು ಓಡಿಹೋಗಿ ಐಹೊಳೆಯ ಕೈಕಾಲು ಹಿಡಿದು ವಿನಂತಿಸಿಕೊಂಡು ಅವನು ಅಂದದ್ದನ್ನು ಅನ್ನಿಸಿಕೊಂಡು ಕೇಳಿದಷ್ಟು ಲಕ್ಷಗಳನ್ನು ಕೈಗಿಟ್ಟು ಬಂದರೆ ಮಾತ್ರ ಉಳಿಗಾಲ. ಇಲ್ಲದಿದ್ದರೆ ಗುಲಬರ್ಗಾ ಜಿಲ್ಲೆಯೋ, ರಾಯಚೂರು ಜಿಲ್ಲೆಯೋ ಗತಿ.

ಇನ್ನು ಕೆಲವೊಮ್ಮೆ ಯಾವುದಾದರೂ ಇಲಾಖೆ ಅಧಿಕಾರಿಯ ಹಡಬೆ ಆದಾಯ ಹೆಚ್ಚು ಎಂದು ಗೊತ್ತಾಗಿ ತನಗೆ ಆತ ಕೊಡುತ್ತಿರುವುದು ಕಡಿಮೆ ಅನ್ನಿಸಿದರೂ ಸಾಕು ಅಂತಹವರ ವರ್ಗಾವಣೆಗೆ ಒಂದು ಪತ್ರ ಹೋಗಿರುತ್ತದೆ. ಇದರರ್ಥ ಆ ಅಧಿಕಾರಿ ಬಂದು ಮುಂದಿನ ವ್ಯವಹಾರ ಕುದುರಿಸಿಕೊಂಡು ಹೋಗಬೇಕು. ಇಲ್ಲದಿದ್ದರೆ ಈತನಿಂದ ನಿರಂತರ ಕಿರುಕುಳ ಅನುಭವಿಸಬೇಕು. ಹೀಗೆ ಪ್ರತಿ ಇಲಾಖೆಯಿಂದ ರಕ್ತ ಹೀರಿದಂತೆ ದುಡ್ಡು ಹೀರುವ ಈತ ಸಾರ್ವಜನಿಕವಾಗಿ ಯಾವುದೇ ಕಾರ್ಯಕ್ರಮ ಇರಲಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಳ್ಳುವುದು, ಪ್ರಾಮಾಣಿಕವಾಗಿ ಕೆಲಸ ಮಾಡಿ ಎಂದು ಹೇಳುವುದು, ಭ್ರಷ್ಟಾಚಾರದ ವಿರುದ್ಧ ಬೊಗಳೆ ಬಿಡುವುದು ಈತನ ಅಸಹಜ ಸ್ವಭಾವಗಳು. ಆದರೆ ತದನಂತರ ಅಧಿಕಾರಿಗಳೆಲ್ಲ ಎಲ್ಲಿ ತನ್ನ ಮಾತನ್ನು ನಂಬಿ ಪಾಲಿಸಿಬಿಡುತ್ತಾರೇನೋ ಎಂಬ ಭಯದಲ್ಲಿ ಆಗಾಗ ಕರೆಸಿ ನೀವು ಕಚೇರಿಯಲ್ಲಿ ಏನಾದರೂ ಮಾಡ್ಕೊಳ್ಳಿ ನನಗೆ ಕೊಡಬೇಕಾದುದನ್ನು ಮಾತ್ರ ಸರಿಯಾಗಿ ಕೊಡಿ ಎಂದು ಹೇಳುವುದನ್ನು ಮರೆಯುವುದಿಲ್ಲ.

ಇಂತಹ ಹೀನ ಸುಳಿಯ ಶಾಸಕ ದುರ್ಯೋಧನ ಐಹೊಳೆ ಕಳೆದ ಯಡ್ಡಿ ಸರಕಾರದ ಅವಧಿಯಲ್ಲಿ ಮಾಡಿಕೊಂಡ ಹಣ, ಗಳಿಸಿದ ಆಸ್ತಿ-ಪಾಸ್ತಿಯ ಮೊತ್ತವೇ ನೂರಾರು ಕೋಟಿ. ಹೆಂಡತಿ ಸುಶೀಲಾಳ ಅಕ್ಕತಂಗಿಯರು, ಅವರ ಗಂಡಂದಿರು, ಅಳಿಯರಾದ ಸುರೇಶ್ ಸನದಿ, ಬಸವರಾಜ ಸನದಿ ಮಗ ಅರುಣ ಮುಂತಾದವರ ಹೆಸರಲ್ಲಿ ಜಮೀನು, ಫ್ಲಾಟು, ಮನೆಗಳು, ಪೆಟ್ರೋಲ್ ಬಂಕ್‌ಗಳು ಹೀಗೆ ಸಿಕ್ಕಸಿಕ್ಕಲ್ಲೆಲ್ಲ ಆಸ್ತಿ ಖರೀದಿಸಿದ್ದಾನೆ.

ಈ ಕಡುಭ್ರಷ್ಟ ಐಹೊಳೆ 2013ರ ಚುನಾವಣೆಯಲ್ಲಿ ಸೋತು ಮನೆ ಸೇರಬೇಕಿತ್ತು, ಜನರು ಕೂಡ ಈ ಪೀಡೆಯನ್ನು ತೊಲಗಿಸಲೇಬೇಕು ಅಂದುಕೊಂಡಿದ್ದರು.

ಆದರೆ ಈತನ ವಿರುದ್ಧ ಪ್ರಬಲ ಅಭ್ಯರ್ಥಿಯೊಬ್ಬನನ್ನು ಹುಡುಕಿ ಕಣಕ್ಕಿಳಿಸಲು ಕಾಂಗ್ರೆಸ್ ಪಕ್ಷಕ್ಕೆ ಸಾಧ್ಯವಾಗಲಿಲ್ಲ. ಸುಖಮಾರ್ ಕಿರಣಗಿ ಎಂಬ ಮತ್ತೊಬ್ಬ ಗುತ್ತಿಗೆದಾರನನ್ನು ನಿಲ್ಲಿಸಿತಾದರೂ ಆತನ ಪ್ರಭಾವ ಅಷ್ಟಕಷ್ಟೇ! ಇತ್ತ ಇನ್ನೊಂದು ಕಡೆ ಜೆಡಿಎಸ್‌ನಿಂದ ಟಿಕೆಟ್ ವಂಚಿತ ಪ್ರದೀಪ್ ಮಾಳಗಿ ಎಂಬ ಪ್ರಭಾವಿ ಮುಖಂಡ ಇಲ್ಲಿ ಸಾಕಷ್ಟು ಹಿಡಿತವಿರುವ ವಿ.ಎಲ್. ಪಾಟೀಲ ಕುಟುಂಬದ ಬೆಂಬಲ ಪಡೆದು ಪಕ್ಷೇತರರಾಗಿ ಕಣಕ್ಕಿಳಿದುಬಿಟ್ಟ. ಇದು ಐಹೊಳೆಗೆ ವರವಾಗಿ ಪರಿಣಮಿಸಿದ್ದರೂ ಗೆಲ್ಲುವ ಖಾತ್ರಿ ಮಾತ್ರ ಇರಲಿಲ್ಲ, ಏಕೆಂದರೆ ವಿ.ಎಲ್. ಪಾಟೀಲ ಕುಟುಂಬದ ಬೆಂಬಲದಿಂದ ಮಾಳಗಿ ಗೆದ್ದೇ ಬಿಟ್ಟ ಎಂಬ ವಾತಾವರಣ ನಿರ್ಮಾಣವಾಗಿತ್ತು, ಆಗ ಕಂಗಾಲಾದ ಐಹೊಳೆ ಕೊನೆಯ ಗಳಿಗೆಯಲ್ಲಿ ಹಣ-ಹೆಂಡದ ಹೊಳೆಯನ್ನೇ ಹರಿಸಿದ. ಅದೇ ಹರಿವಿನಲ್ಲಿ ಗೆದ್ದು ಬಂದ. ಆದರೆ ಅಂತರ 829 ಮಾತ್ರ. ಹೀಗೆ ಸೋಲಿನ ಬಾಗಿಲು ಬಡಿದು ಕೂದಲೆಳೆ ಅಂತರದಲ್ಲಿ ಗೆದ್ದು ಬಂದ ನಂತರವಾದರೂ ಈತ ಸುಧಾರಿಸಬಹುದೆಂದು ಜನ ಭಾವಿಸಿದ್ದರು. ಆದರೆ ಈತನ ಹಣದ ಹಸಿವು ಮಾತ್ರ ಸ್ವಲ್ಪ ಕೂಡ ಕಡಿಮೆಯಾಗಲಿಲ್ಲ. ಈತನ ಈ ಧನದಾಹದಿಂದಾಗಿ ಇಡೀ ಮತಕ್ಷೇತ್ರದಾದ್ಯಂತ ಅಭಿವೃದ್ಧಿ ಹಾಳಾಗಿಹೋಗಲಿ ಇದ್ದ ಸಮಸ್ಯೆಗಳು ಬೃಹದಾಕಾರವಾಗಿ ಬೆಳೆದುನಿಂತಿವೆ. ಪ್ರತಿ ವರ್ಷ ಬೇಸಿಗೆ ಬಂತೆಂದರೆ ಸಾಕು, ಮತಕ್ಷೇತ್ರದಲ್ಲಿರುವ 67 ಹಳ್ಳಿಗಳಲ್ಲಿ ಕನಿಷ್ಠ 30 ಹಳ್ಳಿಗಳಲ್ಲಾದರೂ ಕುಡಿಯುವ ನೀರಿಗೂ ಜನ ಪರದಾಡುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆ ಪರಿಸ್ಥಿತಿ ಎಷ್ಟು ಭಯಾನಕವಾಗಿರುತ್ತದೆಂದರೆ ಹಲವಾರು ಹಳ್ಳಿಗಳಲ್ಲಿ ದನಕರುಗಳಿಗೆ ಮೇವು ಮತ್ತು ನೀರು ಸಿಗದೇ ತಮ್ಮ ಸಂಬಂಧಿಕರ ಊರುಗಳಿಗೆ ತೆಗೆದುಕೊಂಡು ಹೋಗಿ ಬಿಟ್ಟು ಬರುತ್ತಾರೆ. ಈತ ಕನಿಷ್ಠ ಕ್ಷೇತ್ರದ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನೂ ಮಾಡಲಿಲ್ಲ. ಇನ್ನೂ ಇಲ್ಲಿನ ಬಸ್ ನಿಲ್ದಾಣ, ನಗರದ ಚರಂಡಿ ಯೋಜನೆ, ಶೌಚಾಲಯಗಳು, ವಿದ್ಯಾರ್ಥಿಗಳ ವಸತಿನಿಲಯಗಳು, ಆಸ್ಪತ್ರೆಗಳು, ಗ್ರಾಮೀಣ ರಸ್ತೆಗಳು ಯಾವುದೆಂದರೆ ಯಾವುದೂ ವ್ಯವಸ್ಥಿತವಾಗಿಲ್ಲ. ಈ ಯಾವ ಸಮಸ್ಯೆಗಳ ಬಗೆಗೂ ಯೋಚಿಸುವಷ್ಟು ವ್ಯವಧಾನವಿಲ್ಲದ ಈ ಐಹೊಳೆ ಮೊನ್ನೆ ಪಬ್ಲಿಕ್ ಟಿವಿಯಲ್ಲಿ 'ಲಂಚಾವತಾರ' ಪ್ರಸಾರವಾಗುತ್ತಿದ್ದಂತೆಯೇ ಇಡೀ ತಾಲ್ಲೂಕಿನಾದ್ಯಂತ ಕರೆಂಟ್ ತೆಗೆಸಿ ಅದನ್ನು ಮತದಾರರು ನೋಡದಂತೆ ಮಾಡಿದ್ದಾನೆ. ಆದರೆ ಅದೇ ದಿನ ಕ್ಷೇತ್ರದ ತುಂಬ ಅದು ಸುದ್ದಿಯಾಗಿತ್ತು, ಆದರೆ ಯಾರಿಗೂ ಅದರ ಬಗ್ಗೆ ಕುತೂಹಲವಾಗಲಿ, ಆಶ್ಚರ್ಯವಾಗಲಿ ಇರಲಿಲ್ಲ, ಎಲ್ಲರೂ ಅದನ್ನು ಸಹಜವೆಂಬಂತಿದ್ದರು. ಏಕೆಂದರೆ ಈ ಐಹೊಳೆಯ ತಿಕ್ಕಲುತನಗಳು, ಕಡು ಭ್ರಷ್ಟತನ, ಖಯ್ಯಾಲಿಗಳು, ಉಡಾಫೆತನ, ನಿರ್ಲಜ್ಜತನದ ವರ್ತನೆಗಳು ಈ ಯಾವುವು ಇಲ್ಲಿನ ಜನರಿಗೆ ಹೊಸದೂ ಅಲ್ಲ, ವಿಶೇಷವೂ ಅಲ್ಲ, ಅವು ಮನೆ ಮಾತಾಗಿದೆ. ಆದರೆ ಅವುಗಳಿಗೆ ಒಂದು ಅಂತ್ಯ ಹಾಡಲು ಮುಂದಿನ ಚುನಾವಣೆವರೆಗೂ ಕಾಯದೇ ಜನ ಸಂಘಟಿತರಾಗಿ, ಕ್ಯಾಕರಿಸಿ ಉಗಿದು ಸರಿದಾರಿಗೆ ತರಬೇಕಿದೆ. ಏಕೆಂದರೆ ಚುನಾವಣೆ ಇನ್ನೂ ಬಹಳ ದೂರ ಇದೆ.

■ ಮಹಾಲಿಂಗಪ್ಪ ಆಲಬಾಳ

ಅಂಬಿಯ 'ಮೋದಿ' ಎಡವಟ್ಟು




ನಟ ಮತ್ತು ಸಚಿವ ಅಂಬರೀಶ್ ಎಂದೂ ಜನಪರ ಹೋರಾಟಗಳಲ್ಲಿ ಭಾಗವಹಿಸಿದವರಲ್ಲ, ಎಂದೂ ಬೀದಿಗಿಳಿದು ಜನರ ಸಮಸ್ಯೆಗಳನ್ನು ಬಗೆಹರಿಸುವಂತೆ ಪ್ರತಿಭಟಿಸಿದವರಲ್ಲ, ಇನ್ನು ಸಿದ್ಧಾಂತ, ರಾಜಕೀಯ ನೀತಿ-ನಿಲುವುಗಳ ಬಗ್ಗೆ ಕಿಂಚಿತ್ತೂ ಅರಿತವರಲ್ಲ, ತನ್ನ ಮೂಲ ಮಂಡ್ಯ, ಜಾತಿಯಲ್ಲಿ ಒಕ್ಕಲಿಗ ಮತ್ತು ಸಿನಿಮಾ ನಟನಾಗಿ ಸಿಕ್ಕ ಜನಪ್ರಿಯತೆ - ಈ ಮೂರು ಅಂಶಗಳನ್ನೇ ಬಂಡವಾಳ ಮಾಡಿಕೊಂಡು 'ಜನನಾಯಕ' ಎನಿಸಿಕೊಂಡವರು.

ಹೋಗಲಿ, ಅದು ಹೇಗೋ ರಾಜಕೀಯಕ್ಕೆ ಬಂದಿದ್ದಾಯಿತು. ಬಂದ ನಂತರವಾದರೂ ತನ್ನ ಪಕ್ಷದ ಇತಿಹಾಸ, ರಾಜಕೀಯ ಸಿದ್ಧಾಂತ, ತನ್ನ ಪಕ್ಷದ ನಾಯಕರ ವಿರುದ್ಧ ವಿರೋಧ ಪಕ್ಷದವರು ಮಾಡುತ್ತಿರುವ ಟೀಕೆ - ಇವುಗಳನ್ನಾದರೂ ಕಲಿಯಬೇಕಲ್ಲವೇ. ಸದಾ ಇಸ್ಪೀಟು, ಕುದುರೆ ಜೂಜಿನಲ್ಲೇ ಸಮಯ ಕಳೆಯುವ ಅಂಬಿಗೆ ಆ ವ್ಯವಧಾನವಾದರೂ ಎಲ್ಲಿಂದ ಬಂದೀತು. ಬಂದಿದ್ದರೆ ಅಂಬಿ ಎಂದೂ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಗುಜರಾತಿನ ಮುಖ್ಯಮಂತ್ರಿ ನರಹಂತಕ ನರೇಂದ್ರ ಮೋದಿಗೆ ಹೋಲಿಸಿ ಎಡವಟ್ಟು ಮಾಡಿಕೊಳ್ಳುತ್ತಿರಲಿಲ್ಲ!

ಸಿದ್ದರಾಮಯ್ಯನವರು ಸಮಾಜವಾದಿ ಹಿನ್ನೆಲೆಯಿಂದ ಬಂದಿರುವವರು. ಮೋದಿ ಕಟ್ಟರ್ ಕೋಮುವಾದಿ ಆರೆಸ್ಸೆಸ್ ಮೂಲದವನು. ಸಿದ್ದು ಅಹಿಂದ ವರ್ಗಗಳ ಬಗ್ಗೆ ಕಾಳಜಿ ಹೊಂದಿರುವವರು. ಮೋದಿ ಟಾಟಾ, ಅಂಬಾನಿ, ವೇದಾಂತ ತರಹದ ಲೂಟಿ ಕೋರ ಕಂಪನಿಗಳ ಹಿತೈಷಿ. ಎಲ್ಲಕ್ಕಿಂತ ಮುಖ್ಯವಾಗಿ ಸಾವಿರಾರು ಅಮಾಯಕ ಅಲ್ಪಸಂಖ್ಯಾತರ ಸಾವಿಗೆ ಕಾರಣನಾದ ಪಾಪಿ ಮೋದಿ.

ಎಲ್ಲಿಯ ಸಿದ್ದು, ಎಲ್ಲಿಯ ಮೋದಿ? ಆದರೂ ಸಿದ್ದರಾಮಯ್ಯನವರನ್ನು ಮೋದಿಗೆ - ಅದೂ ಮೋದಿ ಓರ್ವ ಮಹಾನ್ ನಾಯಕ ಎಂಬಂತೆ - ಅಂಬಿ ಹೋಲಿಸುತ್ತಾರೆಂದರೆ ಅವರ ಅಜ್ಞಾನ ಇನ್ನೆಷ್ಟಿರಬೇಡ?

ಬೇರೆ ಏನೂ ಬೇಡ, ಇತ್ತೀಚೆಗೆ ವಿಧಾನಸಭೆಗೆ




ಚುನಾವಣೆಗಳು ನಡೆದಾಗ ರಾಜ್ಯದಲ್ಲಿ ಬಿಜೆಪಿ ಪರ ಪ್ರಚಾರ ಮಾಡಲಿಕ್ಕೆಂದು ಮೋದಿ ಬಂದಿದ್ದಾಗ ಅತ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಮತ್ತು ಆಕೆಯ ಪುತ್ರ ರಾಹುಲ್ ವಿರುದ್ಧ ಕೆಂಡ ಕಾರಿದ್ದ, ವ್ಯಂಗ್ಯವಾಡಿದ್ದ. ಅವರಿಬ್ಬರಿಗೂ ಅತಿಯಾದ ಕೊಬ್ಬು ಎಂದು ಲೇವಡಿ ಮಾಡಿದ್ದ; ರಾಹುಲ್ 'ಚಿನ್ನದ ಚಮಚದೊಂದಿಗೆ ಹುಟ್ಟಿರುವವನು' ಎಂದು ಟೀಕಿಸಿದ್ದ. ಅದೂ ಅಂಬಿಗೆ ಗೊತ್ತಿಲ್ಲ ಎಂದರೆ ಏನನ್ನಬೇಕು?

ಇತ್ತೀಚೆಗೆ ಬಿಹಾರದಲ್ಲಿ ಸಾಧು ಯಾದವ್ ಎಂಬಾತ ಮೋದಿಯನ್ನು ಹೊಗಳಿದ್ದಕ್ಕೆ ಆತನನ್ನು ಕಾಂಗ್ರೆಸ್ ಪಕ್ಷದಿಂದಲೇ ಉಚ್ಚಾಟಿಸಲಾಗಿದೆ. ಈಗ ಅಂಬಿ ವಿರುದ್ಧವೂ ಇಂತಹ ಕ್ರಮ ಕೈಗೊಳ್ಳಲಾಗುವುದೇ ಎಂದು ಎಸ್.ಎಂ.ಕೃಷ್ಣ ಮತ್ತು ಆತ್ಮಾನಂದರ ಹಿಂಬಾಲಕರು ಕಾಯುತ್ತಿರುವುದು ಸುಳ್ಳಲ್ಲ! ■

ದಾಬೋಲ್ಕರ್ ಕೊಲೆ ನಮ್ಮ ಶ್ರದ್ಧೆಯನ್ನು ಗಟ್ಟಿಗೊಳಿಸಬೇಕು:

■ ನರೇಂದ್ರ ನಾಯಕ್

ಸುದ್ದಿಗನ್ನಡಿ
ಸಾಹಿತಿ-ಕಲಾವಿದ-ಚಿಂತಕರ ಸಂದರ್ಶನ



ಖ್ಯಾತ ವಿಚಾರವಾದಿ ನರೇಂದ್ರ ದಾಬೋಲ್ಕರ್ ಅವರನ್ನು ದುಷ್ಕರ್ಮಿಗಳು ಮಂಗಳವಾರ ಮುಂಜಾನೆ ಪೂಣೆಯಲ್ಲಿ ಕೊಲೆ ಮಾಡಿದರು. ಈ ಹಿನ್ನೆಲೆಯಲ್ಲಿ ಕರ್ನಾಟಕದವರೇ ಆದ ಖ್ಯಾತ ವಿಚಾರವಾದಿ ನರೇಂದ್ರ ನಾಯಕ್ ಅವರ ಸಂದರ್ಶನ ಇಲ್ಲಿದೆ.

ಪ್ರಶ್ನೆ: ನರೇಂದ್ರ ದಾಬೋಲ್ಕರ್ ಮತ್ತು ನೀವು ಹಲವಾರು ವರ್ಷಗಳಿಂದ ಮೂಢನಂಬಿಕೆ ಮತ್ತು ಕಳ್ಳ ಸ್ವಾಮಿಗಳ ವಿರುದ್ಧ ಜನಪರವಾಗಿ ಹೋರಾಡುತ್ತಾ ಬಂದಿದ್ದೀರಿ. ದಾಬೋಲ್ಕರ್ ಅವರ ಬಗ್ಗೆ ಸ್ವಲ್ಪ ಹೇಳಿ.

ಉತ್ತರ: ದಾಬೋಲ್ಕರ್ ಅವರನ್ನು ನಾನು ಮೂವತ್ತು ವರ್ಷಗಳಿಂದ ಬಲ್ಲೆ. ಅವರು ವಿಚಾರವಾದವನ್ನು ಹಬ್ಬಿಸಲು, ಜನರಲ್ಲಿರುವ ಅಂಧಶ್ರದ್ಧೆಯನ್ನು ಅಳಿಸಿಹಾಕಲು ತಮ್ಮ ಇಡೀ ಬದುಕನ್ನೇ ಮೀಸಲಾಗಿಟ್ಟದ್ದರು. ಅವರು ವೈದ್ಯರಾಗಿದ್ದರೂ ಕೇವಲ ಜನರಿಗೆ ಅಂಟಿಕೊಂಡಿರುವ ಕಾಯಿಲೆಗಳನ್ನು ಹೋಗಲಾಡಿಸುವ ಬದಲು ಸಮಾಜಕ್ಕೇ ಅಂಟಿಕೊಂಡಿರುವ ಮೂಢನಂಬಿಕೆ ಎಂಬ ರೋಗವನ್ನು ನಿರ್ಮೂಲನೆ ಮಾಡಲು ಶ್ರಮಿಸಿದ್ದರು. ಆ ನಿಟ್ಟಿನಲ್ಲಿ ಅವರು ಮಹಾರಾಷ್ಟ್ರದಲ್ಲಿ ಕೆಲಸ ಮಾಡುತ್ತಾ ಒಂದು ದೊಡ್ಡ ಸಂಘಟನೆಯನ್ನೇ ಕಟ್ಟಿದ್ದರು. ಅವರ ಕೊಲೆ ನಮಗೆಲ್ಲ ಆಘಾತವನ್ನುಂಟುಮಾಡಿದೆ. ಆದರೆ ಇದರಿಂದಾಗಿ ನಾವು ಧೃತಿಗೆಡದೆ ಧೈರ್ಯವಾಗಿ ಮುಂದೆ ಸಾಗುವಂತೆಯೂ ನಮ್ಮನ್ನೆಲ್ಲ ಪ್ರೇರೇಪಿಸಿದೆ. ದಾಬೋಲ್ಕರ್ ಅವರ ನೆನಪಿನಲ್ಲಿ ಅವರು ಜಾರಿಗೆ ತರಲು ಶ್ರಮಿಸಿದ್ದ ಮೂಢನಂಬಿಕೆ ಮತ್ತು ಬ್ಲ್ಯಾಕ್ ಮ್ಯಾಜಿಕ್ ವಿರೋಧಿ ಕಾನೂನನ್ನು ಅವರ ಹೆಸರಿನಲ್ಲೇ ಜಾರಿಗೆ ತರಬೇಕಿದೆ.

ಪ್ರಶ್ನೆ: ಮೂಢನಂಬಿಕೆ ವಿರುದ್ಧ ಹೋರಾಡುತ್ತಿದ್ದಕ್ಕೆ ಹಲವು ಸ್ವಹಿತಾಸಕ್ತಿಗಳಿಂದ ದಾಬೋಲ್ಕರ್ ಅವರಿಗೆ ಜೀವ ಬೆದರಿಕೆ ಇತ್ತು. ನಿಮ್ಮ ಅನುಭವದಲ್ಲಿಯೂ ಹಾಗೇನಾದರು ಆಗಿದೆಯೇ?

ಉತ್ತರ: ಖಂಡಿತವಾಗಿಯೂ ಆಗಿದೆ. ಈಗಿನಂತೆ ಮೊಬೈಲ್ ಮತ್ತು ಕಾಲ್ ರೆಕಾರ್ಡರ್‌ಗಳು ಇಲ್ಲದಿದ್ದಾಗ ಲ್ಯಾಂಡ್ ಲೈನಿಗೆ ಜೀವ ಬೆದರಿಕೆ ಕರೆಗಳು ಬರುತ್ತಿದ್ದವು. ಅಷ್ಟೇ ಅಲ್ಲ, ಮೂರು ನಾಲ್ಕು ಬಾರಿ ನನ್ನ ಸ್ಕೂಟರ್‌ನ ಬ್ರೇಕ್ ಕೇಬಲ್ ಕಾರಣವಿಲ್ಲದೆ ಕಟ್ ಆಗಿತ್ತು. ಅದನ್ನು ನೋಡಿ ಮೆಕ್ಯಾನಿಕ್ 'ಇದು ಯಾರೋ ಬೇಕಂತಲೇ ಮಾಡಿರುವ ಕೆಲಸ' ಎಂದಿದ್ದರು. ಇದರ ಅರ್ಥ ನನ್ನನ್ನು ಮುಗಿಸಲು ಪ್ರಯತ್ನಿಸಲಾಗಿತ್ತು ಎಂಬುದೇ ಆಗಿದೆ. ಗಣಪತಿ ಹಾಲು 'ಕುಡಿದ' ಸಂದರ್ಭದಲ್ಲೂ ಅದನ್ನು ವೈಜ್ಞಾನಿಕವಾಗಿ ವಿವರಿಸಲು ನಾನು ಪ್ರಯತ್ನಿಸಿದಾಗ ನನ್ನ ಮೇಲೆ ಕಲ್ಲುಗಳನ್ನು ತೂರಿದ್ದರು.

ಇನ್ನು ನಾನು ಆಗ ಕೆಲಸ ಮಾಡುತ್ತಿದ್ದ ಮಂಗಳೂರಿನ ...ನಬಾ ಕಾಲೇಜಿನ ಆಡಳಿತ ಮಂಡಳಿ ಕೂಡ ನನ್ನ ವಿ...ಗಳನ್ನು ವಿರೋಧಿಸಿತ್ತು, ನಾನು ನನ್ನ ನಂಬಿಕೆಗಳಿಗೆ ಅಂ... ಂಡಿದ್ದರಿಂದ ನನ್ನನ್ನು ಬೇಕಂತಲೇ ಕಾಲೇಜ್ ಮಂಡ... ಡಿಮೋಟ್ ಮಾಡಿತ್ತು, ಅಸಿಸ್ಟೆಂಟ್ ಪ್ರೊಫೆಸರ್ ಆಗಿಬೇಕಿದ್ದ ನನ್ನನ್ನು ಬಯೋಕೆಮಿಸ್ಟ್ ಆಗಿ ನೇಮಿಸಿತ್ತು. ಅದರ ವಿರುದ್ಧ ನಾನು ಕಾನೂನು ಸಮರ ಮಾಡಿದೆ. ನ್ಯಾಯಾಲಯ ಕೂಡ ನನ್ನ ವಾದವನ್ನು ಎತ್ತಿಹಿಡಿದಿತ್ತು, ಅನಂತರವೇ ಮಣಿಪಾಲದ ಪೈಗಳು ನನ್ನ ತಂಟೆಗೆ ಬರದೆ ಸುಮ್ಮನಾದರು. ನಾನು 2006ರಲ್ಲಿ ನನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟು ಸಂಪೂರ್ಣವಾಗಿ ವಿಚಾರವಾದಿ ಹೋರಾಟದಲ್ಲಿ ತೊಡಗಿಸಿಕೊಂಡಿದ್ದೇನೆ.

ವಿಚಾರವಾದಿಗಳಿಗೆ ಸ್ವಹಿತಾಸಕ್ತಿಗಳಿಂದ ಕಿರುಕುಳ ಹಿಂದಿನಿಂದಲೂ ಇದ್ದದ್ದೇ. ಆದರೆ ಈಗ ದಾಬೋಲ್ಕರ್ ಅವರ ಕೊಲೆ ಏನನ್ನು ತೋರಿಸುತ್ತಿದೆ ಎಂದರೆ ಈಗ ಅವರು ಕೇವಲ ಬೆದರಿಕೆ ಹಾಕಿ ಸುಮ್ಮನಾಗುವುದಿಲ್ಲ, ಬದಲಾಗಿ ಪ್ರಾಣವನ್ನೇ ತೆಗೆದುಹಾಕಲೂ ಸಿದ್ಧರಿದ್ದಾರೆ ಎಂಬುದು. ಇದು ತುಂಬಾ ಕೆಟ್ಟ ಬೆಳವಣಿಗೆ.

ಪ್ರಶ್ನೆ: ಈಗ ಎಲ್ಲೆಡೆ ಜ್ಯೋತಿಷ್ಯ, ವಾಸ್ತು, ನ್ಯೂಮೆರಾಲಜಿ ಇತ್ಯಾದಿಗಳು ಹಬ್ಬಿರುವುದನ್ನು ನೋಡಿದರೆ ಇಲ್ಲಿ ವಿಚಾರವಾದಿಗಳ ಹೋರಾಟ ಅಷ್ಟು ಯಶಸ್ವಿಯಾಗಿಲ್ಲ ಮಾತ್ರವಲ್ಲ ಮೂಢನಂಬಿಕೆ ಹೆಚ್ಚಾಗಿದೆ ಅನ್ನಿಸುತ್ತಿದೆ. ನಿಮ್ಮ ಅಭಿಪ್ರಾಯ?

ಉತ್ತರ: ಮೇಲುನೋಟಕ್ಕೆ ಹಾಗನಿಸುತ್ತದೆ ಆದರೆ ವಾಸ್ತವ ಹಾಗಿಲ್ಲ. ವಿಚಾರವಾದಿಗಳ ಸಂಖ್ಯೆ ಸಾಕಷ್ಟಿದೆ. ಈಗ ಕರ್ನಾಟಕದಲ್ಲಿ ನಾಸ್ತಿಕರ ಒಕ್ಕೂಟವನ್ನು ರಚಿಸಿದ್ದೇವೆ. ಅದರಲ್ಲಿ ಸಾಕಷ್ಟು ಜನರಿದ್ದಾರೆ. ಯುವಕರಿಗಾಗಿ 'ಫ್ರೀ ಥಿಂಕಿಂಗ್ ಗ್ರೂಪ್ಸ್' ಅಂತ ಮಾಡಿದ್ದೇವೆ. ಇಂತಹ ಗುಂಪುಗಳಲ್ಲಿ ನೂರಾರು ಜನ ಸದಸ್ಯರಿದ್ದು ಇಂತಹ ಗುಂಪುಗಳು ದೇಶದಾದ್ಯಂತ ಇವೆ.

ಒಂದೇ ಒಂದು ಮಿತಿ ಯಾವುದೆಂದರೆ ನಮ್ಮ ವಿರೋಧಿ ಬಣದಲ್ಲಿ ಜೋರು ದನಿಯಲ್ಲಿ ಮಾತನಾಡುವವರ ಸಂಖ್ಯೆ ಜಾಸ್ತಿಯಾಗಿದ್ದು ನಮ್ಮ ಬಣದಲ್ಲಿ ಸೈಲೆಂಟಾಗಿ ಕೆಲಸ ಮಾಡುವವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆ ಕಾರಣಕ್ಕೇ ನಾನು ನಮ್ಮ ಸದಸ್ಯರಿಗೆ ಅವಕಾಶ ಸಿಕ್ಕಾಗಲೆಲ್ಲ ನಿಮ್ಮ ದನಿ ಎತ್ತಿ ಆಗ ನಮ್ಮ ವಿಚಾರವೂ ಸಮಾಜದಲ್ಲಿ ಹರಡುತ್ತದೆ ಎಂದು ಹೇಳುತ್ತಿರುತ್ತೇನೆ.

ನಮ್ಮಂತಹವರ ಸಂಘಟನೆಗಳು ಹೆಚ್ಚಾಗುತ್ತಿರುವುದರಿಂದಲೇ ಮೂಢನಂಬಿಕೆಯನ್ನೇ ಬಂಡವಾಳ ಮಾಡಿಕೊಂಡು ಬಡವರನ್ನು ಸುಲಿಯುತ್ತಿರುವ, ಶೋಷಿಸುತ್ತಿರುವ ಶಕ್ತಿಗಳು ಈಗ ದಾಬೋಲ್ಕರ್ ಅವರನ್ನು ಕೊಲೆ ಮಾಡುವ ಹಂತಕ್ಕೂ ಹೋಗಿವೆ. ನಮ್ಮ ಸಂಖ್ಯೆ ಕಮ್ಮಿ ಇದ್ದಿದ್ದರೆ ಅವರು ಬೆದರುತ್ತಿರಲಿಲ್ಲ. ನಮ್ಮಂತವರ ಶ್ರಮದಿಂದಾಗಿ ಅವರಿಗೆ ಕಷ್ಟವಾಗುತ್ತಿರುವುದರಿಂದ ಅವರೀಗ ಕೊಲೆ ಮಾಡುವಂತಹ ಕೃತ್ಯಕ್ಕೂ ಕೈಹಾಕಿರುವುದು.

ಪ್ರಶ್ನೆ: ನಿಮ್ಮ ಕುಟುಂಬದ ಸದಸ್ಯರಿಗೂ ಕಿರುಕುಳಗಳು ಆಗಿರಬೇಕಲ್ಲವೇ?

ಉತ್ತರ: (ನಗು) ಕಿರುಕುಳ ಕೊಡುವ ಪ್ರಯತ್ನಗಳು ನಡೆದಿವೆ. ಆದರೆ ನನ್ನ ಕುಟುಂಬ ಅದಕ್ಕೆಲ್ಲ ಬಗ್ಗುವಂತಹದ್ದಲ್ಲ. ಯಾರಾದರೂ ನನ್ನ ಹೆಂಡತಿಗೆ ಧಮಕಿ ಹಾಕಿದರೆ ಆಕೆ 'ನೀನು ನಿನ್ನ ಅಪ್ಪನಿಗೆ ಹುಟ್ಟಿದ್ದರೆ ಬಾರೋ' ಎಂದು ಪ್ರತಿ ಧಮಕಿ ಹಾಕುವ ಪೈಕಿ. ಹೇಳಿ ಕೇಳಿ ಆಕೆ ಕ್ರಿಮಿನಲ್ ಲಾಯರ್. ಆದ್ದರಿಂದ ಯಾರೂ ಆಕೆಯ ತಂಟೆಗೆ ಬರುವುದಿಲ್ಲ!

ಪ್ರಶ್ನೆ: ಧರ್ಮಕ್ಕೂ, ಮೂಢನಂಬಿಕೆಗೂ ಇರುವ ನಂಟಿನ ಬಗ್ಗೆ ಹೇಳಿ.

ಉತ್ತರ: ಮೂಢನಂಬಿಕೆಗಳು ಹುಟ್ಟಿರುವುದೇ ಧಾರ್ಮಿಕ ನಂಬಿಕೆಗಳ ಆಧಾರದ ಮೇಲೆ. ಮಾತ್ರವಲ್ಲ ಧರ್ಮಗಳೇ ಮೂಢನಂಬಿಕೆಗಳು. ಆದ್ದರಿಂದ ಅವೆರಡರ ನಡುವೆ ಗಾಢ ನಂಟಿದೆ. ಆದರೆ ಕೆಲವು ಮೂಢನಂಬಿಕೆಗಳು ಅಪಾಯಕಾರಿ ಅಲ್ಲ. ಉದಾಹರಣೆಗೆ ಯಾವುದೇ ಕಾರ್ಯಕ್ರಮದ ಆರಂಭದಲ್ಲಿ ದೀಪ ಬೆಳಗುವುದು. ಅದು ಈಗ ಒಂದು ಧಾರ್ಮಿಕ ಆಚರಣೆಯಾಗದೆ ಒಂದು ಸಂಸ್ಕೃತಿಯಾಗಿದೆ. ಅದು ಅಷ್ಟು ಅಪಾಯಕಾರಿ ಅಲ್ಲ. ಆದರೆ ಯಾರನ್ನೋ ಬಲಿಕೊಟ್ಟರೆ ನಿಧಿ ಸಿಗುತ್ತದೆ ತರಹದ ಮೂಢನಂಬಿಕೆಗಳಿವೆಯಲ್ಲ, ಅವು ತುಂಬಾ ಅಪಾಯಕಾರಿ. ಅವುಗಳನ್ನು ತೊಡೆದುಹಾಕಬೇಕಲ್ಲದೆ ಅವನ್ನು ತಡೆಯಲು ಸೂಕ್ತ ಕಾನೂನುಗಳನ್ನು ಜಾರಿಗೆ ತರಬೇಕು. ಅಂತಹ ಕಾನೂನಿಗಾಗಿಯೇ ನರೇಂದ್ರ ದಾಬೋಲ್ಕರ್ ಅವರು ಶ್ರಮಿಸುತ್ತಿದ್ದದ್ದು.

ಪ್ರಶ್ನೆ: ನೀವು ನಾಸ್ತಿಕರು. ನೀವು ರಿಜಿಸ್ಟರ್ ಮದುವೆಯಾದಾಗ ಮತ್ತು ಕೆಲವೊಮ್ಮೆ ನ್ಯಾಯಾಲಯದ ಮುಂದೆ ಸಾಕ್ಷಿ ಕೊಡುವಾಗಲೂ ದೇವರ ಹೆಸರಲ್ಲಿ ಪ್ರಮಾಣ ಸ್ವೀಕರಿಸಲು ನಿರಾಕರಿಸಿದ್ದೀರಿ. ನೀವು ನಾಸ್ತಿಕರಾಗಿದ್ದು ಯಾವಾಗ?

ಉತ್ತರ: ಅದೊಂದು ದೊಡ್ಡ ಕತೆ. ನಾನು ನನ್ನನ್ನು ಎರಡು ಬಾರಿ ಜನಿಸಿದ ನಾಸ್ತಿಕ ಎಂದು ಕರೆದುಕೊಳ್ಳುತ್ತೇನೆ. ಯಾಕೆಂದರೆ ಯಾವ ಮಗುವೂ ಹುಟ್ಟಿದಾಗ ಅದು ನಾಸ್ತಿಕನಾಗಿಯೇ ಇರುತ್ತದೆ. ಆದರೆ ಆನಂತರ ಅದರ ತಲೆಯಲ್ಲಿ ಎಂತೆಂತಹದ್ದೋ ವಿಚಾರಗಳನ್ನು ಬಿತ್ತಿರುವುದರಿಂದ ಅದು ಆಸ್ತಿಕನಾಗಿ ಬೆಳೆಯುತ್ತದೆ. ನಾನೂ ಕೂಡ ಹುಟ್ಟಿನಿಂದ ನಾಸ್ತಿಕನಾಗಿದ್ದೆ. ಆದರೆ ಅನಂತರ ನಾನು ಜನಿಸಿದ್ದ ಗೌಡ ಸಾರಸ್ವತ ಬ್ರಾಹ್ಮಣ ಕುಟುಂಬ ನನ್ನಲ್ಲೂ ತನ್ನ ವಿಚಾರಧಾರೆಯನ್ನು ಬಿತ್ತಲು ಪ್ರಯತ್ನಿಸಿತ್ತು. ಆದರೆ ನಾನು ಮೂಲಭೂತವಾಗಿ ಎಲ್ಲವನ್ನೂ ಪ್ರಶ್ನಿಸುತ್ತಿದ್ದರಿಂದ ಅದ್ಯಾವುದೂ ನನ್ನ ಮನಸ್ಸಿನಲ್ಲಿ ನಾಟದೆ ನಾನು ನಾಸ್ತಿಕನಾಗೆ ಬೆಳೆದೆ.


ಪ್ರಶ್ನೆ: ಕಪಟ ಸ್ವಾಮಿಗಳ ವಿರುದ್ಧ ನಿಮ್ಮ ಹೋರಾಟ ಎಲ್ಲಿಯ ತನಕ ಬಂದಿದೆ?


ಉತ್ತರ: ಕಳೆದ ದಶಕದವರೆಗೆ ಜನರನ್ನು ವಂಚಿಸಲು ಕಳ್ಳ ಸ್ವಾಮಿಗಳು ಬೂದಿಯನ್ನು, ಮಾಲೆಗಳನ್ನು, ಚಿನ್ನದ ಸರಗಳನ್ನು 'ಶೂನ್ಯ'ದಿಂದ ತಂದು ಹಂಚುತ್ತಿದ್ದರು. ಅವರನ್ನೆಲ್ಲ ಬಟಾಬಯಲು ಮಾಡಿದ್ದಾಯಿತು. ಆದರೆ ಈಗಿನ ಸ್ವಾಮಿಗಳು ತಮ್ಮ ಶೈಲಿಯನ್ನು ಬದಲಾಯಿಸಿದ್ದಾರೆ. ಅವರೀಗ ಉಸಿರಾಟವನ್ನೋ, ಔಷಧಿ ಶಕ್ತಿ ಇದೆ ಎಂದು ಅದೆಂತಹದ್ದೋ ಪದಾರ್ಥಗಳನ್ನೋ ಮಾರಾಟ ಮಾಡುತ್ತಿದ್ದಾರೆ. ಅದೆಲ್ಲ ಮೋಸ, ಅವುಗಳಿಂದ ಪ್ರಯೋಜನ ಇಲ್ಲ ಎಂಬುದನ್ನು ಜನರಿಗೆ ಅರ್ಥಮಾಡಿಕೊಡುತ್ತಿದ್ದೇವೆ.

ಪ್ರಶ್ನೆ: ಎಲ್ಲಿಯತನಕ ನಿಮ್ಮ ಈ ಹೋರಾಟ?

ಉತ್ತರ: (ನಗು) ಎಲ್ಲಿಯತನಕ ಅಂದರೆ ನಾನು ಸಾಯುವ ತನಕ!

ನರೇಂದ್ರ ನಾಯಕ್ ಅವರನ್ನು
nirmukta.com ಮತ್ತು *facebook*
ಮೂಲಕ ಸಂಪರ್ಕಿಸಬಹುದು.


ಅಬ್ರಹಾಮ್ ಕುವ್ರುರ್ ಜೊತೆ ನಾಯಕ್


ದಾಬೋಲ್ಕರ್ ಅವರ ಕೊಲೆ ಖಂಡಿಸಿ ಪ್ರತಿಭಟನೆ


ನಾಸ್ತಿಕರ ವಿಚಾರಗೋಷ್ಠಿಯಲ್ಲಿ ದಾಬೋಲ್ಕರ್ ಮತ್ತು ನಾಯಕ್

ಬಾಪು ನೀರಿಗೆ ಬಹಿಷ್ಕಾರಹಚ್ಚಿ
ನಡೆವ ಹಾದಿಗೆ ಬೇಲಿಗೂಟವ ನೆಟ್ಟಿರಿ..
ಗುಡಿಸಲಿಗೆ ಕೊಳ್ಳಿ ಇಟ್ಟು ಕುಣಿದಾಡಿದಿರಿ..
ಊರ ಅಗಸಿ ಬಾಗಿಲ ಕಂಬಕ್ಕೆ ಕಟ್ಟಿ
ನಿಮ್ಮ ಕೈಗಳ ಬಿಸಿ ಆರಿಸಿಕೊಂಡಿರಿ
ನಾಲಿಗೆ ಸೀಳಿ ಕಿವಿಗೆ ಕಾದ
ಸೀಸವ ಸುರಿದಿರಿ
ಕನಸುಗಳಿಗೆ ಘೋರಿಯ ಕಟ್ಟಿದಿರಿ
ನಮ್ಮ ಕೊಂದಿರಿ.
ನೋಡಿ..
ನನ್ನ ಪೂರ್ವಿಕರ
ಘೋರಿಗಳ ತುಂಬೆಲ್ಲಾ
ತುಂಬೆ ಹೂವುಗಳು ತಲೆ ಎತ್ತಿ ನಗುತ್ತಿವೆ.

*****

ನಿಮ್ಮ ಪಟ್ಟ-ಪಲ್ಲಂಗಗಳಿಗೆ
ನಮ್ಮ ಮೂಳೆ-ಚಕ್ಕಳಗಳದ್ದೆ ಮೆಟ್ಟಿಲುಗಳು
ಒಡ್ಡೋಲಗದ ಮೆರವಣಿಗೆಗೆ
ರಕ್ತ-ಮಾಂಸದ ಎಡೆ.



ಜಾತಿ ಕಟ್ಟಿದಿರಿ.
ಧರ್ಮ ಕೆಡಿಸಿದಿರಿ
ಕೆಡವಿದ ಮಂದಿರ-ಮಸೀದಿಗಳ
ಮಣ್ಣಿನಡಿಯಿಂದ ಬೆಳೆದು ನಿಂತ
ಹೆಮ್ಮರಕೆ ನಿಮ್ಮ ಹಾಗೆಲ್ಲಿದೆ ನೋಡಿ.

*****


ಜಾತಿ-ಮತ ಅಂತಸ್ತು-ಅಧಿಕಾರಗಳ
ಗೋಡೆ ಎಬ್ಬಿಸದಿರಿ
ತಾಳಿ ಕತ್ತರಿಸಿದು
ಪ್ರೀತಿ ಹಕ್ಕಿಗಳ ಕಟಕಟೆಗೆ
ಎಳೆದು ತಂದಿರಿ
ಜಾತಿಗೆ ಜೋತು ಹಾಕಿದಿರಿ
ಜೀವಂತ ಸಮಾಧಿ ಕಟ್ಟಿ
'ಮರ್ಯಾದೆ' ಮುಚ್ಚಿಕೊಂಡಿರಿ..?!
ಗೆದ್ದೆವೆಂದು ರಣ ಕೇಕೆ ಹಾಕಿದಿರಿ.
ಮತ್ತೆ ಮತ್ತೆ ಚಿಲಿಪಿಲಿಗುಟ್ಟುತ್ತಿವೆ
ಪ್ರೀತಿಯ ಹಾಡು ಹುಟ್ಟುತ್ತಲಿವೆ
ಗೂಡು ಕಟ್ಟುತ್ತಲಿವೆ.......


*****

ಹಸಿರ ತುಂಬೆಲ್ಲಾ ಕೆಂಪು ಹರಿಯಿತು
ಕಾಡು ಹೂಗಳ ಘಮಲಿಗೆಲ್ಲಾ
ರಕ್ತದ ಘಾಟು ಹರಡಿತು..
ಕಾಡತೋಪುಗಳ ನಿರ್ಮಾಣುಪ ಮೊರೆತಕ್ಕೆ
ನನ್ನ ಕವಿಯ ಕಾಜಾಣ, ಗೀಜಗ, ಬೆಳ್ಳಕ್ಕಿಗಳ
ಕೊರಳು ಹರಿದವು
ಜೇನು ವಿಷವಾಯಿತು,
ಸ್ವಚ್ಛಂದ ತೊರೆ-ಝರಿಗಳು
ಬೂಟು-ಬಂದೂಕು
ತೊಳೆದು ಮಲಿನಗೊಂಡವು
ನಿಷ್ಪಾಪಿ ಕಾಡು ಮಕ್ಕಳ ಹೆಣದ ಮೇಲೆ
ಪದಕ-ಪುರಸ್ಕಾರಗಳ ಬುಯಿಲಿಕ್ಕಿದರೂ
ಹಸಿರು ಛಲದಿಂದ ಬೆಳೆಯುತ್ತಿದೆ.
ಕವಿಯ ಹಾಡು ಮೊಳಗುತ್ತಿದೆ.

- ಎನ್. ರವಿಕುಮಾರ್
ಶಿವಮೊ...

ನಂ.1 ಮಂತ್ರಿಗಳು ಮಕ್ಕಳ ಅಪೌಷ್ಟಿಕತೆ ಕಡಿಮೆ ಮಾಡುವರೇ?





ಮೂರು ದಿನದ ಹಿಂದೆ ಖಾಸಗಿ ಟಿವಿ ...ಯೊಂದು 100 ದಿನಗಳ ಕಾಂಗ್ರೆಸ್ ಸರ್ಕಾರದಲ್ಲಿ ...ರ ಕಾರ್ಯದಕ್ಷತೆಗನುಸಾರವಾಗಿ ಮಂತ್ರಿಗಳಿಗೆ ರ್‍ಯಾಂಕ್ ...ಿ. ಅದರಲ್ಲಿ ಆರೋಗ್ಯ ಮಂತ್ರಿ ಯು.ಟಿ.ಖಾದರ್ ...ರ್ 1 ಆಗಿದ್ದಾರೆ. ಎಲ್ಲಾ ರಾಜಕಾರಣಿಗಳಂತೆ ...ಟಿ.ಖಾದರ್ ಅವರೂ ಚುನಾವಣಾ ರಾಜಕಾರಣದ ...ಪುವೇ. ಆದರೆ ತನ್ನ ಸಜ್ಜನಿಕೆ, ಕ್ರಿಯಾಶೀಲತೆ ... ಸರಳತೆಗಳ ಕಾರಣಕ್ಕೆ ಭಿನ್ನ ಎನಿಸಿಕೊಂಡಿರುವವರು. ... ಸರ್ಕಾರದಲ್ಲಿ ಮಂತ್ರಿಯಾದಂದಿನಿಂದ ಚುರುಕಾಗಿ ... ಮಾಡುತ್ತಿರುವವರು. ಅದಕ್ಕಾಗಿ ಅವರಿಗೆ ...ಂದನೆಗಳನ್ನು ಹೇಳೋಣ.

...ತ್ತು ಹಲವು ಕಾರಣಗಳಿಂದ ಹೆಸರು ಮಾಡುವ, ...ರುವ ರಾಜಕಾರಣಿಗಳು ಈ ದೇಶದಲ್ಲಿ ...ದ್ದಿದ್ದಾರೆ. ಜನಪ್ರಿಯ ಎಂದು ಹೆಸರು ಮಾಡಿದ ...ಜನೆಗಳನ್ನು ತಂದ ದೊಡ್ಡ ರಾಜಕಾರಣಿಗಳೂ ...ಹೋಗಿದ್ದಾರೆ. ಆದರೆ ಈ ನಾಡಿನ ಸಮಸ್ಯೆಗಳ ...ಲಭೂತ ಪರಿಹಾರಕ್ಕೆ ಕೆಲಸ ಮಾಡಿದವರು ಹೆಚ್ಚು ...ನೆನಪಿನಲ್ಲುಳಿಯಬೇಕು. ಇಲ್ಲದಿದ್ದರೆ ಎಲ್ಲವೂ ...ಾರಿಕೆ ಮಾತ್ರವೇ ಆಗುತ್ತದೆ. ಹೊಸದೊಂದು ...ಜವಾದಿ ಸಮಾಜ ನಿರ್ಮಾಣದ ಮಾತನ್ನು ...ದೇ ಇಡೋಣ. ಆದರೆ ನಾಗರಿಕ ಸಮಾಜದಲ್ಲಿ ...ನ ಎಂದು ಪರಿಗಣಿಸಬಹುದಾದ ಕೆಲವು ...ಗಳಿಗಾದರೂ ಮೂಲಭೂತ ಪರಿಹಾರ ಕಂಡು ...ಯುವ ಕೆಲಸವನ್ನು ಸರ್ಕಾರವೊಂದು ಮಾಡದಿದ್ದರೆ ... ಕಳೆದ ಬಿಜೆಪಿ ಸರ್ಕಾರದಂತೆ ಎಂದುಕೊಂಡು ... ಕೆಲಸ ನಾವು ಮಾಡಬೇಕು. ಆ ರೀತಿ ...ಲಭೂತ ಪರಿಹಾರಗಳಾವುವನ್ನೂ ಹುಡುಕದೇ, ...ದ, ಮಾಡದ ಮತ್ತು ಮಾಡಬಾರದ ಕೆಲಸಗಳನ್ನೇ ...ಟ್ಟಿಸಿ ಅದಕ್ಕೆ ಸಿಂಗಾರ ಮಾಡಿದರೆ ಅದನ್ನು ಮೋದಿ ...ವ ಎನ್ನಬೇಕು.

...ದ್ದರಾಮಯ್ಯನವರ ಕಾಂಗ್ರೆಸ್ ಸರ್ಕಾರ ಅದಕ್ಕಿಂತ ...ನಿಸಿಕೊಳ್ಳುವುದೇ ಎಂಬ ಪ್ರಶ್ನೆಗೆ ಉತ್ತರವನ್ನು ... ನೀಡುತ್ತದೆ. ಆದರೆ ಕೆಲವು ಪ್ರಶ್ನೆಗಳನ್ನು ಮಾತ್ರ ... ಕೇಳುತ್ತಲೇ ಇರಬೇಕು. ನಾಗರಿಕ ಸಮಾಜ ಬೇರೆ ... ಮಾಡುತ್ತದೋ ಬಿಡುತ್ತದೋ, ಕನಿಷ್ಠ ಮಕ್ಕಳಲ್ಲಿ ...ಷ್ಟಿಕತೆ ಇಲ್ಲದಂತೆ ಮಾಡಬೇಕು ಅಲ್ಲವೇ? ಎಂಬ ...ನ್ನು ಕೇಳಲು ಈ ಲೇಖನ. ರಾಜಧಾನಿಯ ...ಹಳ್ಳಿಯ ವ್ಯಾಪ್ತಿಯೊಂದರಲ್ಲೇ ಐವತ್ತಕ್ಕೂ ಹೆಚ್ಚು ...ಳು ಅಪೌಷ್ಟಿಕತೆ ಹೊಂದಿದ್ದಾರೆ ಎಂದು ...ಯಿತು. ಮಂತ್ರಿಗಳೂ ಭೇಟಿ ಕೊಟ್ಟಿದ್ದರು. ಆದರ ...ಜನಾರೋಗ್ಯ ಆಂದೋಲನ'ದ ಒಂದು ನಿಯೋಗವೂ ...ರ್ ಅವರನ್ನು ಭೇಟಿ ಮಾಡಿದ್ದರು. ಎಲ್ಲರ ಜೊತೆ ...ಮಾಡುವಂತೆಯೇ ಸೌಜನ್ಯದಿಂದ ಮಾತನಾಡಿ ತಾನು ...ಬಹುದಾದ್ದನ್ನು ಮಾಡುವ ಭರವಸೆ ನೀಡಿ ಕಳಿಸಿದರು. ...ಖನ ಬರೆಯುವ ಸಮಯದಲ್ಲಿ ಡಿ.ಜೆ.ಹಳ್ಳಿಯಲ್ಲಿ ... ಆರೋಗ್ಯ ಶಿಬಿರವೂ ನಡೆಯುತ್ತಿದೆ.

...ಕ್ಕಳ ಅಪೌಷ್ಟಿಕತೆ ಈಗ (ಇದಕ್ಕೆ ಕುಪೋಷಣೆ ... ಹೊಸ ಪದವನ್ನು ಅಮೀರ್ ಖಾನ್‌ನ ...ಕಾರ್ಯಕ್ರಮದಲ್ಲಿ ಬಳಸಲಾಗುತ್ತಿದೆ) ಸಾಕಷ್ಟು ...ಚರ್ಚೆಯಾಗುತ್ತಿರುವ ವಿಷಯ. ಅದನ್ನು ಕಡಿಮೆ ...ಮಾಡುವುದನ್ನೂ ಒಂದು ಆಶಯವನ್ನಾಗಿಟ್ಟುಕೊಂಡು ...ಊಟ ಯೋಜನೆ ಜಾರಿಯಾಗಿದೆ. ಕರ್ನಾಟಕ ...ಷ್ಟು ಆರಂಭಿಸಿರುವ ಶಾಲಾಮಕ್ಕಳಿಗೆ ಹಾಲು ನೀಡುವ ...ಕ್ರಮವೂ ಅದನ್ನೇ ಗಮನದಲ್ಲಿಟ್ಟುಕೊಂಡಿದೆ. ಕೇಂದ್ರ ಸರ್ಕಾರವು ಶುರು ಮಾಡಿರುವ ಮಕ್ಕಳಿಗೆ ಕಬ್ಬಿಣಾಂಶ ಇರುವ ಮಾತ್ರೆಗಳನ್ನು ನೀಡುವ ಕಾರ್ಯಕ್ರಮವನ್ನೂ ರಾಜ್ಯದಲ್ಲಿ ಉದ್ಘಾಟಿಸಲಾಗಿದೆ. ನಗುಮುಖದ ಆರೋಗ್ಯ ಮಂತ್ರಿಗಳು ಮಕ್ಕಳ ಬಾಯಿಗೆ ಮಾತ್ರೆ ಹಾಕಿದ್ದು ಪತ್ರಿಕೆಗಳಲ್ಲಿ ವರದಿಯಾಗಿದೆ. ಮಧ್ಯಾಹ್ನದೂಟವನ್ನು ಶಾಲೆಯಲ್ಲಿ ಅಥವಾ ಅಂಗನವಾಡಿಗಳಲ್ಲಿ ಮಾಡುವ ಮಕ್ಕಳು, ಮನೆಯಲ್ಲಿ ಅನ್ನಭಾಗ್ಯದ ಅಕ್ಕಿಯಲ್ಲಿ ಊಟ ಮಾಡುತ್ತಾರೆ. ಇನ್ನು ಕಬ್ಬಿಣಾಂಶ ಕಡಿಮೆ ಇದ್ದರೆ ಅದೂ ಸಿಕ್ಕುತ್ತದೆ. ಇನ್ನೇನು ಸಮಸ್ಯೆ? ಇಷ್ಟಕ್ಕೂ ಮೀರಿ ಒಂದು ವೇಳೆ ಈ ರಾಜ್ಯದಲ್ಲಿ ಅಪೌಷ್ಟಿಕ ಮಕ್ಕಳು ಇದ್ದರೆ, ಅದಕ್ಕೆ ಅವರೇ ಕಾರಣ ಎಂದು ಸರ್ಕಾರ ಹೇಳಬಹುದು.

ಈ ಯೋಜನೆಗಳನ್ನು ಜಾರಿ ಮಾಡುತ್ತಿರುವ ಸರ್ಕಾರ ಮತ್ತು ಮಂತ್ರಿಗಳ ಕೆಲಸದ ಪರವಾಗಿ ವಕಾಲತ್ತು ವಹಿಸಲು ನಾವೇನೂ ಹಿಂಜರಿಯಬೇಕಿಲ್ಲ, ಏಕೆಂದರೆ ಎಲ್ಲಾ ಮಿತಿಗಳಾಚೆ ಈ ರಾಜ್ಯದ ಜನರು ಅಪೌಷ್ಟಿಕತೆಯಿಂದ ಮುಕ್ತವಾದರೆ ಅದು ಒಳ್ಳೆಯದೇ. ಆದರೆ ಅಪೌಷ್ಟಿಕತೆಯ ರಾಜಕಾರಣದ ಕುರಿತು ಕೇಳಬೇಕಾದ ಪ್ರಶ್ನೆಗಳನ್ನು ನಾವು ಕೇಳದೇ ಹೋಗಿಬಿಟ್ಟರೆ, ಅಪೌಷ್ಟಿಕತೆ ಕಡಿಮೆಯಾಗುವುದೇ ಇಲ್ಲ, ಏಕೆಂಬುದನ್ನು ನೋಡೋಣ.

ವಿಶ್ವ ಆರೋಗ್ಯ ಸಂಸ್ಥೆಯ ಮಾನದಂಡಗಳ ಪ್ರಕಾರ ಈಗ ಭಾರತದಲ್ಲಿನ ಮಕ್ಕಳ ಅಪೌಷ್ಟಿಕತೆಯು ಸಹಾರಾ ಮರುಭೂಮಿಯ ಕೆಳಗಿನ ಆಫ್ರಿಕಾದ ದೇಶಗಳಿಗಿಂತ ಹೆಚ್ಚಾಗಿದೆ. ಆದರೆ ನಮ್ಮ ಆರ್ಥಿಕ ಅಭಿವೃದ್ಧಿಯ ದರವು ಅವಕ್ಕಿಂತ ಹೆಚ್ಚಾಗಿದೆ ಹಾಗೂ ಮಕ್ಕಳ ಸಾವಿನ ಪ್ರಮಾಣವು ಕಡಿಮೆಯಿದೆ. ಈ ಸಂದರ್ಭದಲ್ಲಿ ಕೆಲವರು ಭಾರತದಲ್ಲಿ ಅಪೌಷ್ಟಿಕತೆಯ ಪ್ರಮಾಣವು ಮಕ್ಕಳಲ್ಲಿ ಅಷ್ಟೊಂದಿಲ್ಲ; ಮಕ್ಕಳ ಸಾವಿನ ದರ ಕಡಿಮೆಯಾಗಿರುವುದರಿಂದ ವಿಶ್ವ ಆರೋಗ್ಯ ಸಂಸ್ಥೆಯ ಮಾನದಂಡಗಳಲ್ಲೇ ಸಮಸ್ಯೆಯಿದ್ದು ಮಾನದಂಡಗಳನ್ನೇ ಬದಲಿಸಬೇಕು ಎಂತಲೂ ಹೇಳುತ್ತಿದ್ದಾರೆ. ಅರವಿಂದ್ ಪನಗಾರಿಯಾ ಎಂಬ ಒಬ್ಬ ಆರ್ಥಿಕ ತಜ್ಞರು



ಈ ಕುರಿತು ಲೇಖನಗಳನ್ನೂ ಬರೆದಿದ್ದಾರೆ. ಬಹುಶಃ ಬಡವರು ಯಾರೆಂದು ಹೇಳಲು ಹೊಸ ಮಾನದಂಡಗಳನ್ನೇ ಸೃಷ್ಟಿಸಿದ ಯೋಜನಾ ಆಯೋಗದ ಉಪಾಧ್ಯಕ್ಷ ಮಾಂಟೆಕ್‌ಸಿಂಗ್ ಅಹ್ಲುವಾಲಿಯಾ ಅವರಿಂದ ಇವರು ಸ್ಫೂರ್ತಿ ಪಡೆದಿರಬೇಕು.

ಮಕ್ಕಳಲ್ಲಿ ಅಪೌಷ್ಟಿಕತೆಗೆ ಕಾರಣ ತಾಯಂದಿರು ಸಿನೆಮಾ ತಾರೆಯರ ರೀತಿ ಸುಂದರವಾಗಿರಬೇಕೆಂದು ಡಯಟ್ ಮಾಡುತ್ತಾರೆ ಮತ್ತು ಮಕ್ಕಳಿಗೆ ಎದೆ ಹಾಲು ನೀಡುವುದಿಲ್ಲ ಎಂಬ ಮಾತೂ ಚಾಲ್ತಿಯಲ್ಲಿದೆ. ಈ ಮಾತುಗಳನ್ನು ಬೇರಾರೂ ಅಲ್ಲ, ಈಗಾಗಲೇ ಭಾರತದ ಪ್ರಧಾನಮಂತ್ರಿ ಆಗಿಬಿಟ್ಟಿದ್ದೇನೆಂದು ಭಾವಿಸಿಕೊಂಡಿರುವ ನರೇಂದ್ರ ಮೋದಿಯೇ ಹೇಳಿದ್ದಾನೆ. ಗುಜರಾತ್‌ನಲ್ಲಿ ಮಕ್ಕಳ ಅಪೌಷ್ಟಿಕತೆಯು ದೇಶದ ಬಡರಾಜ್ಯಗಳಿಗಿಂತಲೂ ಹೆಚ್ಚಿದೆ ಎಂಬ ಮಾತಿಗೆ ಇದು ಮೋದಿಯ ತಿರುಗೇಟು.

ಅಪೌಷ್ಟಿಕತೆಗೆ ಇರುವ ಕಾರಣಗಳು ಇಂತಹವಲ್ಲ ಎಂಬುದು ಸ್ಪಷ್ಟ. ಕಾರಣಗಳು ಈ ದೇಶದ ಸಾಮಾಜಿಕ ಮತ್ತು ಆರ್ಥಿಕ ರಚನೆಯಲ್ಲೇ ಸೇರಿಕೊಂಡಿವೆ. ಬಡತನ, ಮಹಿಳೆಯರ ಸ್ಥಾನಮಾನ ಕೆಳಗಿರುವುದು, ಅಗತ್ಯವಿರುವ ಪ್ರಮಾಣದ ಮತ್ತು ಗುಣಮಟ್ಟದ ಆಹಾರವನ್ನು ಕೊಂಡುಕೊಳ್ಳಲು ಸಾಧ್ಯವಿಲ್ಲದೇ ಇರುವುದು, ಅಥವಾ ಆ ವಿಚಾರದಲ್ಲಿನ ಸರ್ಕಾರೀ ಯೋಜನೆಗಳು ಸರಿಯಾಗಿ ತಲುಪದೇ ಇರುವುದು, ಮಕ್ಕಳಿಗೆ ದಿನಕ್ಕೆ ಎಷ್ಟು ಸಾರಿ (ಪ್ರಮಾಣದಲ್ಲಿ, ಸಂಖ್ಯೆ) ಆಹಾರ ಉಣಿಸಬೇಕೋ ಅಷ್ಟು ಸಾರಿ ಉಣಿಸದೇ ಇರುವುದು ಇತ್ಯಾದಿ ಹಲವು ಕಾರಣಗಳಿವೆ.

ಭಾರತದಲ್ಲಿ ಶೇ.30ರಷ್ಟು ಕಡಿಮೆ ತೂಕದ ಮಕ್ಕಳ ಜನನವಾಗುವುದಕ್ಕೆ ಗರ್ಭಿಣಿಯಾಗಿದ್ದಾಗ ತಾಯಂದಿರು ಆರೋಗ್ಯದಿಂದ ಇರದೇ ಇರುವುದು ಕಾರಣ. ಪದೇ ಪದೇ ಸೋಂಕು ತಗುಲುವುದು, ಶುದ್ಧ ಕುಡಿಯುವ ನೀರು ಸಿಗದೇ ಇರುವುದು, ಶೌಚಾಲಯದ ವ್ಯವಸ್ಥೆ ಇರದೇ ಇರುವುದು ಇವೆಲ್ಲಾ ಸೇರಿಕೊಂಡು ಅಪೌಷ್ಟಿಕತೆಯ ವಿಷವೃತ್ತವನ್ನು ಚಾಲ್ತಿಯಲ್ಲಿಡುತ್ತವೆ. ಈ ರೀತಿ ಇದ್ದಾಗಲೇ ಅತ್ಯಂತ ದಾರುಣಾವಸ್ಥೆಗೆ ತಲುಪಿದ ಮಕ್ಕಳು ಮತ್ತು ತಾಯಂದಿರು ಹಿಂದಿಗಿಂತ ಹೆಚ್ಚು ವೈದ್ಯಕೀಯ ಸೌಲಭ್ಯವನ್ನು ಪಡೆದುಕೊಳ್ಳುವ ಸಾಧ್ಯತೆ ಇಂದು ದೇಶದಲ್ಲಿದೆ. ಹಾಗಾಗಿ ಆ ಮಕ್ಕಳು ಸಾಯುವುದಿಲ್ಲ, ಇದರ ಜೊತೆಗೆ ಮೇಲೆ ಹೇಳಲಾದ ಸರ್ಕಾರೀ ಯೋಜನೆಗಳೂ ಸಹಾ ಮಕ್ಕಳು ಸಾಯದಂತೆ ತಡೆಗಟ್ಟಿವೆ.

ಇದರರ್ಥ ನಮ್ಮ ಮಕ್ಕಳು ಅಪೌಷ್ಟಿಕತೆಯಿಂದ ಸಾಯುವುದಿಲ್ಲ; ಆದರೆ ಅಪೌಷ್ಟಿಕತೆಯು ಕಡಿಮೆಯಾಗುತ್ತಿಲ್ಲ, ಇನ್ನೂ ಒಂದು ಸಂಗತಿಯನ್ನು ಹೇಳಬೇಕೆಂದರೆ, ಅಪೌಷ್ಟಿಕತೆಯು ಹೆಚ್ಚಾಗುತ್ತಿದೆ. ಈ ವಿರೋಧಾಭಾಸದ ಮೂಲ ದೇಶದಲ್ಲಿ ಹೆಚ್ಚಾಗುತ್ತಿರುವ ಅಸಮಾನತೆಯಲ್ಲಿದೆ. ಭಾರತವನ್ನು ಸೂಪರ್ ಪವರ್ ಆಗಿಸಲು ಕಾಂಗ್ರೆಸ್, ಬಿಜೆಪಿ ಎಲ್ಲಾ ಪಕ್ಷಗಳೂ ಪ್ರಯತ್ನಿಸುತ್ತಿರುವುದು ಇಂತಹ ಹಲವು ವೈರುಧ್ಯಗಳಿಗೆ ಕಾರಣವಾಗಿದೆ.

ಅಪೌಷ್ಟಿಕತೆಯ ಉದಾಹರಣೆಯನ್ನೇ ತೆಗೆದುಕೊಳ್ಳಿ. ಇದರಲ್ಲಿ ಎರಡು ವಿಧ. ಪ್ರೋಟೀನ್ ಮತ್ತು ಕ್ಯಾಲರಿ ಅಪೌಷ್ಟಿಕತೆ ಮತ್ತು ಕಿರು ಪೌಷ್ಟಿಕಾಂಶಗಳ (micronutrient) ಕೊರತೆಯ ಅಪೌಷ್ಟಿಕತೆ. ಬಡತನದ ಕಾರಣದಿಂದಾಗಿ ಕ್ಯಾಲರಿ (ಶಕ್ತಿ – ಅಕ್ಕಿ, ಗೋಧಿ, ರಾಗಿಗಳಿಂದ ಪಡೆದುಕೊಳ್ಳಬಹುದಾದ್ದು) ಇರುವ ಊಟ ಮಾಡಲೇ ಸಮಸ್ಯೆಯಿರುವ ಕುಟುಂಬಗಳು ಕೋಟಿಗಟ್ಟಲೆ ಇವೆ. ಜೊತೆಗೆ ಕೇವಲ ಪಿಷ್ಟವಿರುವ ಆಹಾರವನ್ನು ಮಾತ್ರ ತಿಂದರೆ ಸಾಕಾಗುವುದಿಲ್ಲ, ಅದರ ಜೊತೆಗೆ ವಿವಿಧ ಬಗೆಯ ಪ್ರೋಟೀನ್‌ಗಳನ್ನು ಹೊಂದಿರುವ ಬೇಳೆಕಾಳುಗಳು ಅಥವಾ ಮೊಟ್ಟೆ, ಮಾಂಸ ಇತ್ಯಾದಿಗಳನ್ನು ತಿನ್ನಬೇಕು. ಅಥವಾ ಒಂದಕ್ಕಿಂತ ಹೆಚ್ಚು ಬಗೆಯ ಆಹಾರ ಧಾನ್ಯಗಳನ್ನಾದರೂ ತಿನ್ನಬೇಕು. ಇದರ ಕೊರತೆಯುಂಟಾದರೆ ಎತ್ತರ ಮತ್ತು ತೂಕದಲ್ಲೂ ಇಳಿತವಾಗಿ ಅಪೌಷ್ಟಿಕತೆ ಎದ್ದು ಕಾಣುತ್ತದೆ. ಕಿರು ಪೌಷ್ಟಿಕಾಂಶಗಳ (ಕಬ್ಬಿಣ, ಕ್ಯಾಲ್ಸಿಯಂ, ಅಯೋಡಿನ್, ವಿಟಮಿನ್‌ಗಳು ಇತ್ಯಾದಿ) ಕೊರತೆ ಉಂಟಾದರೆ ರಕ್ತಹೀನತೆ, ಗಳಗಂಡ, ಮೂಳೆಗಳ ಕಾಯಿಲೆ, ರಾತ್ರಿಗುರುಡು ಇತ್ಯಾದಿಗಳು ಆವರಿಸುತ್ತವೆ.

ನಮ್ಮ ದೇಶದಲ್ಲಿ (ಎನ್‌ಎಫ್‌ಎಚ್‌ಎಸ್‌ನ ಸರ್ವೆ 2005ರ ಪ್ರಕಾರ) ಶೇ.70ರಷ್ಟು ಮಕ್ಕಳಿಗೆ ರಕ್ತಹೀನತೆ ಇದೆ. ಶೇ.50ರಿಂದ 60 ಮಕ್ಕಳಿಗೆ ವಿಟಮಿನ್ ಎ ಇರಬೇಕಾದ ಪ್ರಮಾಣಕ್ಕಿಂತ (20 ಯುನಿಟ್/ಡಿಎಲ್) ಬಹಳ ಕಡಿಮೆ ಇದೆ. ವಿಟಮಿನ್ ಬಿ ಕಾಂಪ್ಲೆಕ್ಸ್‌ನ ಕೊರತೆ ಬೇರೆ ಬೇರೆ ರೀತಿಯಲ್ಲಿದೆ. ಇದನ್ನು ಪರಿಹರಿಸಲಿಕ್ಕೆ ಸಮಗ್ರ ಆಹಾರ ಪದ್ಧತಿಯಲ್ಲಿ ಬದಲಾವಣೆ ಬರಬೇಕು. ಅಂದರೆ ಆಹಾರದಲ್ಲಿ ವೈವಿಧ್ಯತೆ ಹೆಚ್ಚಾಗಬೇಕು ಮತ್ತು ಅದನ್ನು ತಿನ್ನಬೇಕಾದಷ್ಟು ಪ್ರಮಾಣದಲ್ಲಿ ತಿನ್ನಬೇಕು. ಆ ರೀತಿ ತಿನ್ನಬೇಕೆಂದರೆ ಕುಟುಂಬದ ಆರ್ಥಿಕ ಸ್ಥಿತಿಯೇ ಸದೃಢವಾಗಬೇಕು. ಇಲ್ಲದಿದ್ದರೆ ಏನಾಗುತ್ತದೆ? ಹಸಿವಿನ ಔಷಧೀಕರಣ ಮತ್ತು ಸರ್ಕಾರೀ ಯೋಜನೆಗಳ ವಾಣಿಜ್ಯೀಕರಣವಾಗುತ್ತದೆ.


ಅದು ಹೇಗೆಂದರೆ, ಕಬ್ಬಿಣದ ಅಂಶ ಕಡಿಮೆಯಿದೆಯೇ? ಕಬ್ಬಿಣಾಂಶದ ಮಾತ್ರೆ ಕೊಡಿ. ವಿಟಮಿನ್ ಎ ಕೊರತೆಯಿದೆಯೇ? ಅದನ್ನು ಇಂಜೆಕ್ಷನ್ ರೂಪದಲ್ಲಿ ಆರು ತಿಂಗಳಿಗೊಮ್ಮೆ ಕೊಡಿ. ಅದಕ್ಕಾಗಿ ಕೇಂದ್ರೀಕೃತ ಸರಬರಾಜು ಮಾಡಿ, ಟೆಂಡರ್ ಕರೆಯಿರಿ. ಕಡಿಮೆ ಹಣಕ್ಕೆ ಸರಬರಾಜು ಮಾಡುವವರಿಗೇ ಟೆಂಡರ್ ಕೊಡಿ. ಟೆಂಡರ್ ನಿಮ್ಮದಾಗಲು ಲಂಚ ಕೊಡಿ.

ಈ ಸಮಸ್ಯೆಯನ್ನು ಔಷಧಗಳ ಮೂಲಕ ಬಗೆಹರಿಸಲು ಹೋದರೆ ಉಂಟಾಗುವ ಅಡ್ಡ ಪರಿಣಾಮಗಳು ಇನ್ನೂ ಬೇರೆ ಬೇರೆ ಇವೆ. ಸರಿಯಾಗಿ ಊಟ ಮಾಡದೇ ಇಂತಹ ಕಿರು ಪೌಷ್ಟಿಕಾಂಶಗಳನ್ನೆ ತೆಗೆದುಕೊಂಡರೆ ಅವು ದೇಹಕ್ಕೆ ಒಳ್ಳೆಯದು ಮಾಡುವ ಬದಲು ತೊಂದರೆ ಕೊಡುತ್ತವೆ. ವಾಸ್ತವದಲ್ಲಿ ಮಕ್ಕಳ ಒಟ್ಟು ಕ್ಯಾಲರಿ ಅವಶ್ಯಕತೆಯಲ್ಲಿ ಶೇ.40ರಿಂದ 50ರಷ್ಟು ವೈವಿಧ್ಯಪೂರ್ಣವಾದ ಮೂಲಗಳಿಂದ (ಹಾಲು, ಮೊಟ್ಟೆ, ಕಾಳುಗಳು, ಹಣ್ಣುಗಳು, ತರಕಾರಿಗಳು) ಬರಬೇಕು. ಇದೂ ವಿಶ್ವ ಆರೋಗ್ಯ ಸಂಸ್ಥೆಯ ಶಿಫಾರಸ್ಸೇ. ಇಂದು ಅಪೌಷ್ಟಿಕತೆಯ ಕುರಿತು ಇಷ್ಟೆಲ್ಲಾ ಮಾತುಗಳು ನಡೆಯುತ್ತಿರಬೇಕಾದರೆ, ಅದರ ಸುತ್ತ ಎಲ್ಲೋ ಯಾವುದೋ ಲಾಬಿ ಕೆಲಸ ಮಾಡುತ್ತಿರಬಹುದು ಎಂಬ ಗುಮಾನಿ ಬರುವುದು ಇದೇ ಕಾರಣಕ್ಕೆ.

ಇಲ್ಲದಿದ್ದರೆ ಸರ್ಕಾರ ಏನೆಲ್ಲಾ ಮಾಡುತ್ತಿದೆ, ಆದರೂ ಈ ಬಡವರು ಉದ್ಧಾರವಾಗಲ್ಲ ಎಂಬ ನಿಲುವಿಗೆ ದೇಶದ ಶ್ರೀಮಂತರು ಮತ್ತು ಮೇಲ್ಮಧ್ಯಮ ವರ್ಗದವರು ಕೂಗಾಡುವುದು ಮಾತ್ರ ನಡೆಯುತ್ತದೆ. ನಿಜವಾದ ಅಭಿವೃದ್ಧಿಗೆ ಬೇಕಾದ ಕ್ರಮಗಳನ್ನು ಎಷ್ಟರಮಟ್ಟಿಗೆ ಈ ಸರ್ಕಾರ ಮತ್ತು ಅದರ ಮಂತ್ರಿಗಳು ತೆಗೆದುಕೊಳ್ಳುತ್ತಾರೆಂಬುದರ ಮೇಲೆ ಮಾತ್ರ ನಾವು ಅದರ ಜನಪರತೆಯ ಬಗ್ಗೆ ನಿರ್ಣಯಕ್ಕೆ ಬರಬಹುದು.

ಕಳೆದ ಸರ್ಕಾರವು ಈ ರಾಜ್ಯದ 77 ಅನುಸೂಚಿತ ಉದ್ದಿಮೆಗಳ ಕಾರ್ಮಿಕರಿಗೆ ನಿಗದಿಪಡಿಸಿದ ಕನಿಷ್ಠ ವೇತನವು 4,500ರಿಂದ 6,000 ರೂ.ಗಳಿದ್ದು, ಅದನ್ನು ಈ ಸರ್ಕಾರವೂ ಬದಲಾಯಿಸಲಿಲ್ಲ, ಅನ್ನಭಾಗ್ಯ ಕೊಟ್ಟ ಒಂದು ವಾರದಲ್ಲಿ ಪ್ರಯಾಣಭಾಗ್ಯವನ್ನು ಕಿತ್ತುಕೊಳ್ಳಲು ಬಸ್‌ಚಾರ್ಜ್‌ಅನ್ನು ಸಿಕ್ಕಾಪಟ್ಟೆ ಏರಿಸಿದರು. ಯಾವ ಪ್ರಮಾಣಕ್ಕೆಂದರೆ ಕೂಲಿ ಮಾಡಲು ಬಸ್‌ನಲ್ಲಿ ಕನಿಷ್ಠ 10 ಕಿ.ಮೀ ಪ್ರಯಾಣಿಸುವವರು ಪಾವತಿಸಬೇಕಾದ ಹೆಚ್ಚುವರಿ ಟಿಕೆಟ್ ಹಣವು ಅನ್ನಭಾಗ್ಯದಿಂದ ಉಳಿಯುವಷ್ಟಾಗುತ್ತದೆ. ಹೀಗೆ ಮಾಡುವುದರಿಂದ ಆ ಕುಟುಂಬದ 'ಕೊಳ್ಳುವ ಸಾಮರ್ಥ್ಯ' ಇಳಿಯುತ್ತಾ ಹೋಗುತ್ತದೆ. ಸರ್ಕಾರ ಇದಕ್ಕೇನು ಮಾಡುತ್ತದೋ ಗೊತ್ತಿಲ್ಲ, ಆದರೆ ನಂ.1 ಮಂತ್ರಿಯವರು ಏನನ್ನಾದರೂ ಮಾಡಬೇಕು. ಇಲ್ಲವಾದಲ್ಲಿ ಅಪೌಷ್ಟಿಕತೆ ಕಡಿಮೆಯಾಗುವುದಿಲ್ಲ.

ಬೇರೆ ಇನ್ನೇನು ಇಲ್ಲದಿದ್ದರೂ, ಈ ರಾಜ್ಯದ ಎಲ್ಲಾ ಜನಸಾಮಾನ್ಯರು ತಮ್ಮ ಆರೋಗ್ಯಕ್ಕಾಗಿ ಮಾಡುವ ವೆಚ್ಚ ಕಡಿಮೆಯಾಗುವಂತೆ ಮಾಡಲು ಆರೋಗ್ಯ ಮಂತ್ರಿಗಳಿಗೆ ಸಾಧ್ಯ. ಸರ್ಕಾರೀ ಆಸ್ಪತ್ರೆಗಳ ಸುಧಾರಣೆ ಆಮೂಲಾಗ್ರವಾಗಿ ಆಗಬೇಕು. ಈಗಾಗಲೇ ದೇಶದ ಮೂರು (ಅವುಗಳಲ್ಲಿ ಎರಡು ಹಿಂದುಳಿದ ರಾಜ್ಯಗಳು!) ನೀಡುತ್ತಿರುವಂತೆ ಸಂಪೂರ್ಣವಾಗಿ ಉಚಿತ ಔಷಧಿಗಳನ್ನು ನೀಡಬೇಕು. ಸರ್ಕಾರೀ ಆಸ್ಪತ್ರೆಗಳಲ್ಲಿ ಅತ್ಯುತ್ತಮ ಗುಣಮಟ್ಟದ ಚಿಕಿತ್ಸೆ ಸಂಪೂರ್ಣವಾಗಿ ಉಚಿತವಾಗಿ ನೀಡಬೇಕು. ಕಾಂಗ್ರೆಸ್‌ನ ಪ್ರಣಾಳಿಕೆಯಲ್ಲಿ ಇರುವ ಆರೋಗ್ಯ ಕ್ಷೇತ್ರದ ಎಲ್ಲಾ ಭರವಸೆಗಳನ್ನು ಕಾರ್ಯರೂಪಕ್ಕೆ ತರುವುದರೊಂದಿಗೆ, ಜನಾರೋಗ್ಯಕ್ಕಾಗಿ ಕೆಲಸ ಮಾಡುತ್ತಿರುವ ಆಂದೋಲನದ ಒತ್ತಾಯಗಳ ಬಗ್ಗೆ ಗಂಭೀರವಾಗಿ ಗಮನ ಹರಿಸಬೇಕು. [illegible] [illegible] ನಂ.1 [illegible]ತ್ತಾರೆ? ■



ಉಪ್ಪು ತಿಂದ ಮೇಲೆ..

ಒಬ್ಬ ವ್ಯಕ್ತಿ ಜೀವನದಲ್ಲಿ ಮದುವೆ ಆಗಬೇಕು ಎಂದು ನಿರ್ಧರಿಸಿದಾಗ, ಆತ ಪ್ರೀತಿಸಿ ಮದುವೆ ಆದನೋ, ಇಲ್ಲ ಹಿರಿಯರು ತೋರಿಸಿದ ಹುಡುಗಿಯನ್ನು ಒಪ್ಪಿ ಮದುವೆ ಆದನೋ ಎಂಬುದರ ಮೇಲೆ ಅವನ ಭವಿಷ್ಯ ನಿರ್ಧಾರವಾಗುತ್ತದೆ ಎಂದು ಬಹಳ ಜನ ವಾದಿಸುತ್ತಾರೆ. ಅವರಲ್ಲಿ ಕೆಲವರು ಪ್ರೀತಿಸಿ ಮದುವೆ ಆದರೆ ಗೋಳು ತಪ್ಪಿದ್ದಲ್ಲ ಎಂದರೆ, ಇನ್ನು ಕೆಲವರು ಹಿರಿಯರು ತೋರಿಸಿದ ಸಂಬಂಧ ಒಪ್ಪಿ ಅರೆಮನಸ್ಸಿನಿಂದ ಮದುವೆ ಆದರೆ ಸಂತೋಷದಿಂದ ಇರಲು ಸಾಧ್ಯವಿಲ್ಲ ಎನ್ನುತ್ತಾರೆ. ಅವರವರ ತರ್ಕದ ಹಿನ್ನೆಲೆಯಿಂದ ಅವರು ಸರಿಯೇ ಇದ್ದಾರೆ ಎಂದುಕೊಳ್ಳೋಣ. ಆದರೆ ಒತ್ತಾಯದಿಂದ, ಜನರ ಎದುರು ಕುಟುಂಬದ ಮರ್ಯಾದೆ ಹೋಗುತ್ತದೆ ಎಂಬ ಭಯದಿಂದ ಬಲವಂತದ ಮದುವೆ ಆದರೆ ಹೇಗಿರುತ್ತದೆ? ಉತ್ತರ ಮಹೇಶನ ಕತೆ.

ಮಹೇಶನ ಕುಟುಂಬದ ಹಿನ್ನೆಲೆ, ಅವನ ಸಾಮಾಜಿಕ ಸ್ಥಾನಮಾನ, ವಾಸ ಎಲ್ಲ ನೋಡಿದರೆ ಆತ ಅನುಭವಿಸುತ್ತಿರುವ ಚಿತ್ರವಿಚಿತ್ರ ಹಿಂಸೆಗಳ ಬಗ್ಗೆ ಬಹಳ ಜನರಿಗೆ ನಂಬಿಕೆ ಬರುವುದಿಲ್ಲ, ಆದರೆ ಅವನ ಕೇಸ್ ಮಾಡಲು ಶುರುಮಾಡಿದ ಕೆಲವೇ ದಿನಗಳಲ್ಲಿ ನನಗೆ ಅವನು ಹೆಂಡತಿಯ ಕೈಯಲ್ಲಿ ಅನುಭವಿಸುತ್ತಿರುವ ಕಿರುಕುಳದ ಆಳ ಅಗಲ ತಿಳಿಯಿತು.

ಮಹೇಶ ಓದಿದ್ದು ಕೇವಲ ಪಿಯುಸಿ. ಅವನ ತಂದೆ ಆಟೋ ಡ್ರೈವರ್, ಒಬ್ಬ ಅಕ್ಕ ಮದುವೆ ಆಗಿ ಪಕ್ಕದ ರಾಜ್ಯದಲ್ಲಿ ಗಂಡನ ಮನೆಯಲ್ಲಿ ಆರಾಮವಾಗಿದ್ದಾಳೆ. ಮಹೇಶ ಹೆಚ್ಚಿಗೆ ಓದದಿದ್ದರೂ ಕೆಲಸದಲ್ಲಿ ಎಂದೂ ಸೋಮಾರಿತನ ಮಾಡಿದವನಲ್ಲ. ತಾನು ಕೆಲಸ ಮಾಡುತ್ತಿರುವ ಶೋ ರೂಂನಲ್ಲಿ ತನ್ನ ಕೆಲಸದಿಂದ ಮಾಲೀಕರ ಮೆಚ್ಚುಗೆ ಪಡೆದು ಅದೇ ಜಾಗದಲ್ಲಿ ಮೇನೇಜರ್ ಹುದ್ದೆ ಮುಟ್ಟಿದ್ದಾನೆ. ಅವನ ಸಂಬಂಧಿಗಳಲ್ಲೇ ಅವನು ಒಂದು ಗೌರವಯುತ ಸ್ಥಾನಮಾನ ಹೊಂದಿದ ವ್ಯಕ್ತಿ ಎನ್ನಬಹುದು. ಹಾಗಂತ ಅವನ ಸಂಬಳವೇನೂ ಬಹಳ ಇಲ್ಲ, ಕೇವಲ ಹತ್ತು, ಹನ್ನೊಂದು ಸಾವಿರ. ಆದರೆ ಸಂತೋಷದಿಂದ ಇದ್ದಾನೆ ಅಥವಾ ಇದ್ದ ಎಂದು ಹೇಳಬಹುದು, ಮದುವೆ ಆಗುವವರೆಗೂ.

ಐದು ವರ್ಷಗಳ ಹಿಂದೆ ಹೃದಯಾಘಾತದಿಂದ ಅವನ ತಾಯಿ ತೀರಿಕೊಂಡಾಗ, ವರ್ಷದಲ್ಲೇ ಮನೆಯಲ್ಲಿ ಒಂದು ಶುಭಕಾರ್ಯ ಮಾಡಬೇಕು ಎಂದು ತಂದೆ, ಅಕ್ಕ ಹಾಗೂ ಸಂಬಂಧಿಗಳು ತೀರ್ಮಾನಿಸಿ ಮಹೇಶನಿಗೆ ಹೆಣ್ಣು ನೋಡಲು ಪ್ರಾರಂಭಿಸಿದರು. ಆಗ ತಮಿಳುನಾಡಿನ ಮೀನಾಕ್ಷಿಯ ಸಂಬಂಧ ಬಂತು. ಹುಡುಗಿಯ ತಂದೆಯೂ ಆಟೋಡ್ರೈವರ್, ಹುಡುಗಿ ಡಿಗ್ರಿ ಓದಿದ್ದಾಳೆ ಹಾಗೂ ಕಂಪ್ಯೂಟರ್ ನಾಲೆಡ್ಜ್ ಇದೆ. ಕೆಲಸ ಮಾಡಿ ಗಂಡನಿಗೆ ಸಹಾಯವಾಗುತ್ತಾಳೆ ಎಂದು ಸಂಬಂಧ ತಂದ ಮಧ್ಯಸ್ಥರು ಹೇಳಿದರು. ಸಂಬಂಧ ಎಲ್ಲರಿಗೂ ಒಪ್ಪಿಗೆ ಆಗಿ ತಿಂಗಳಲ್ಲೇ ಅವರಿಬ್ಬರ ನಿಶ್ಚಿತಾರ್ಥವೂ ಆಗಿಹೋಯಿತು.

ತಮಿಳುನಾಡಿನ ಹುಡುಗಿಯ ಮನೆಯಲ್ಲಿ ನಿಶ್ಚಿತಾರ್ಥ ಮುಗಿಸಿ ಮನೆಗೆ ಬಂದ ಮಹೇಶ್‌ನಿಗೆ ಒಂದು ವಿಚಿತ್ರ ಕಾದಿತ್ತು. ಮೀನಾಕ್ಷಿಯಿಂದ ಅವನಿಗೆ ಎಸ್‌ಎಂಎಸ್ ಬಂದಿತ್ತು, ಅದೇನು ವೈಯಕ್ತಿಕ ಎಸ್‌ಎಂಎಸ್ ಆಗಿರಲಿಲ್ಲ, ಯಾರೋ ಕಳಿಸಿದ ಮೆಸೇಜನ್ನು ಅವನಿಗೆ ಫಾರ್ವರ್ಡ್ ಮಾಡಿದ್ದಳು. ಆದರೆ ಅದು ಖಂಡಿತ ಮದುವೆ ಆಗುವ ಹುಡುಗನಿಗೆ ಕಳಿಸುವಂತಹದ್ದಾಗಿರಲಿಲ್ಲ, ಮಹೇಶನಿಗೆ ಏನೋ ವಿಚಿತ್ರವೆನಿಸಿತು. ಅವನು ಅವಳನ್ನು ಭೇಟಿ ಆಗಿದ್ದೇ 2 ಬಾರಿ. ಒಮ್ಮೆ ನೋಡಲು ಹೋದಾಗ, ಇನ್ನೊಮ್ಮೆ ನಿಶ್ಚಿತಾರ್ಥದಲ್ಲಿ, ಸರಿಯಾಗಿ ಮಾತೂ ಆಡಿಲ್ಲ, ಏನೋ ತಪ್ಪಿ ಬಂದಿರಬಹುದು ಎಂದು ಸುಮ್ಮನಾದ. ಆದರೆ ಅಂದಿನಿಂದ ದಿನಾಲೂ 10 ರಿಂದ 15 ಅಶ್ಲೀಲ ಎಸ್‌ಎಂಎಸ್‌ಗಳು ಬರತೊಡಗಿದವು. ಮಹೇಶನಿಗೆ ಕಸಿವಿಸಿ ಆಗತೊಡಗಿತು. ತನ್ನ ಅಕ್ಕನೊಂದಿಗೆ ಮಾತಾಡಿ 'ಯಾಕೋ ಸರಿ ಅನಿಸುತ್ತಿಲ್ಲ, ಈ ಮದುವೆ ಬೇಡ' ಎಂದು ಮದುವೆಯಿಂದ ಹಿಂದೆ ಸರಿದ. ಕೂಡಲೇ ಊರಿಂದ ಬಂದ ಹುಡುಗಿಯ ತಂದೆ "ದಯವಿಟ್ಟು ಕ್ಷಮಿಸಿ. ನಮ್ಮ ಮಗಳಿಗೆ ಸ್ವಲ್ಪ ಚೆಲ್ಲಾಟ ಜಾಸ್ತಿ ಆದರೆ ಅವಳು ಆ ಥರದ ಹುಡುಗಿ ಅಲ್ಲ, ನಿಮ್ಮ ನಿರ್ಧಾರ ಬದಲಾಯಿಸಿ, ದಯವಿಟ್ಟು ಮದುವೆ ಆಗಿ" ಎಂದು ಗೋಗರೆದರು. ಮಹೇಶ ಒಪ್ಪದಿದ್ದರೂ ಅವನ ತಂದೆ "ಪಾಪ ಏನೋ ತಿಳಿಯದೆ ಮಾಡಿದಳು ಒಪ್ಪಿಕೋ" ಎಂದು ಒಲಿಸಿ ಮಹೇಶನನ್ನು ಒಪ್ಪಿಸಿದರು.

ಆಶ್ಚರ್ಯವೆಂದರೆ ಹುಡುಗಿ ಎಸ್‌ಎಂಎಸ್ ಮಾಡುವುದನ್ನು ನಿಲ್ಲಿಸುವ ಬದಲು ದುಪ್ಪಟ್ಟು ಮಾಡಿದಳು. ಈ ಬಾರಿ ವೈಯಕ್ತಿಕ ಸಂದೇಶ ಕಳಿಸತೊಡಗಿದಳು. ಅವು ಯಾವ ಮಟ್ಟಿಗೆ ಅಶ್ಲೀಲವಾಗಿದ್ದವೆಂದರೆ, ಅವುಗಳ ಬಗ್ಗೆ ಚರ್ಚಿಸಲೂ ಮಹೇಶನಿಗೆ ಮುಜುಗರವಾಗತೊಡಗಿತು. ಆದರೆ ಸ್ವಲ್ಪ ದಿನದಲ್ಲೇ ಅವು ಹದ್ದು ಮೀರಿ ಮೀನಾಕ್ಷಿ ಅವನನ್ನು ಮದುವೆಗೆ ಮೊದಲೇ ದೈಹಿಕ ಸಂಬಂಧಕ್ಕೆ ಕರೆಯತೊಡಗಿದಳು. "ನಮ್ಮ ತಂದೆ ತಾಯಿ ಇಲ್ಲದಾಗ ಮನೆಗೆ ಬಾ, ನಾನು ನಿನಗೆ ಸ್ವರ್ಗ ತೋರಿಸ್ತಿನಿ" ಎಂದೂ, ಯಾವ ಯಾವ ಬಗೆಯಲ್ಲಿ ಸೆಕ್ಸ್ ಮಾಡುತ್ತೇನೆ ಎಂದೂ ಹೇಳಿದಳು. ಅವಳು ಕಳಿಸಿದ ಎಸ್‌ಎಂಎಸ್ ನೋಡಿದಾಗಲಂತೂ ಇನ್ನು ಸುಮ್ಮನಿದ್ದರೆ ಆಗುವುದಿಲ್ಲ ಎಂದುಕೊಂಡು ತನ್ನ ಮನೆಯವರಿಗೆ ಹೇಳಿ ಖಂಡಿತವಾಗಿಯೂ ಈ ಸಂಬಂಧ ಬೇಡ ಎಂದು ಮದುವೆ ಮುರಿದುಕೊಂಡ. ನಂತರ ಒಂದು ಒಂದೂವರೆ ವರ್ಷಗಳಷ್ಟು ಸಮಯ ಎಲ್ಲ ಸರಿಯಾಗಿದ್ದು ಮಹೇಶನಿಗೆ ಬೇರೆ ಕಡೆ ಸಂಬಂಧ ನೋಡಲು ಶುರುಮಾಡಿದಾಗ ಮತ್ತು ಮೀನಾಕ್ಷಿಯಿಂದ ಅನಿರೀಕ್ಷಿತವಾಗಿ ಫೋನ್ ಬರಲು ಶುರುವಾದವು. ಅವಳು ದಿನಾಲೂ ಫೋನ್ ಮಾಡಿ ಗೋಗರೆಯುತ್ತಿದ್ದಳು. "ನನಗೆ ನಿನ್ನನ್ನು ಮರೆಯಲು ಆಗುತ್ತಿಲ್ಲ, ಬದುಕಿದರೆ ನಿನ್ನ ಜೊತೆಗೆ ಬದುಕುತ್ತೇನೆ" ಎಂದು ಏನೇನೋ ಬಡಬಡಿಸತೊಡಗಿದಳು. ಒಮ್ಮೆಯಂತೂ "ನಿನಗೊಂದು ಶಾಕ್ ಕೊಡುತ್ತೇನೆ ವೇಟ್ ಮಾಡು" ಎಂದು ಎಸ್‌ಎಂಎಸ್ ಕಳಿಸಿದಾಗ ಇವಳದು ನಿತ್ಯ ಇದ್ದದ್ದೇ ಎಂದು ಮಹೇಶ ಸುಮ್ಮನಾದ.

ಆದರೆ ಕೆಲ ಹೊತ್ತಿನಲ್ಲೇ ಮೀನಾಕ್ಷಿಯ ತಂದೆ ಹಾಗೂ ಸಂಬಂಧಿ ಅವನಿಗೆ ಫೋನ್ ಮಾಡಿ "ಮೀನಾಕ್ಷಿ ಮನೆ ಬಿಟ್ಟುಹೋಗಿದ್ದಾಳೆ. ನಿನ್ನ ಹತ್ತಿರ ಏನಾದ್ರೂ ಬಂದಿದ್ದಾಳಾ" ಎಂದಾಗ ಮಹೇಶ ಕಂಗಾಲಾದ. ಕೂಡಲೇ ಅವಳಿಗೆ ಫೋನ್ ಮಾಡಿ ಟ್ರೇನಿನಲ್ಲಿ ಬೆಂಗಳೂರಿಗೆ ಬರುತ್ತಿದ್ದ ಅವಳಿಗೆ ದಾರಿಯಲ್ಲೇ ಇರುವ ಅವಳ ಸಂಬಂಧಿಗಳ ಮನೆಗೆ ವಾಪಸು ಹೋಗುವಂತೆ ಮನ ಒಲಿಸಿದ. ಅಲ್ಲಿಗೆ ಬಂದ ಅವಳ ತಂದೆ ತಾಯಿ, ಮಹೇಶ್ ಹಾಗೂ ಅವನ ತಂದೆಗೆ ಬಹಳ ಬೇಡಿಕೊಂಡು ಸ್ವಲ್ಪ ಸಮಯ ಬಂದು ಹೋಗಿ ಮಾತಾಡೋಣ ಎಲ್ಲರೂ ಕೂಡಿ ಅವಳಿಗೆ ತಿಳಿಸಿ ಹೇಳೋಣ ಎಂದು ಕೇಳಿಕೊಂಡರು. ಅಲ್ಲಿಗೆ ಹೋದ ಮಹೇಶನಿಗೆ ಆಘಾತ ಕಾದಿತ್ತು, ಮೊದಮೊದಲು "ನಮ್ಮ ಮಗಳು ನಿಮ್ಮ ಮೇಲೆ ಪ್ರಾಣ ಇಟ್ಕೊಂಡಿದ್ದಾಳೆ. ದಯವಿಟ್ಟು ಅವಳನ್ನು ಮದುವೆ ಆಗಿ" ಎಂದು ಗೋಗರೆದ ಮೀನಾಕ್ಷಿ ತಂದೆ ತಾಯಿ, ಮಹೇಶ ಒಪ್ಪದೆ ಇದ್ದಾಗ "ನೀವು ಮದುವೆ ಆಗದಿದ್ದರೆ ನೀವೇ ನಂಬಿಸಿ ನಮ್ಮ ಹುಡುಗಿಗೆ ಮೋಸ ಮಾಡಿದ್ದೀರಿ ಎಂದು ಎಲ್ಲ ಟಿವಿ ಚಾನಲ್‌ಗಳಿಗೆ ಹೋಗಿ ಸುದ್ದಿ ಕೊಡುತ್ತೇವೆ. ನಮ್ಮ ಮಗಳಿಗೆ ಬೆಂಗಳೂರಿಗೆ ಬರಲು ಹೇಳಿ ಊರೆಲ್ಲೆಲ್ಲ ನಮ್ಮ ಮಾನ ಹೋಗುವ ಹಾಗೆ ಮಾಡಿ ಈಗ ಅವಳಿಗೆ ಅನ್ಯಾಯ ಮಾಡುತ್ತಿದ್ದೀರಿ ಎಂದು ಎಲ್ಲಾ ಟಿವಿಯಲ್ಲಿ ನಿಮ್ಮ ಕುಟುಂಬದ ಮಾನ ಕಳೀತೀವಿ" ಎಂದು ಹೆದರಿಸತೊಡಗಿದರು.

ಮೀನಾಕ್ಷಿಯಂತೂ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ "ನೀನು ಮದುವೆ ಆಗದಿದ್ದರೆ ನಿನ್ನ ಮನೆಯ ಎದುರು ವಿಷ ಕುಡಿದು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ" ಎಂದು ಹೆದರಿಸಿದಳು. ಕಂಗಾಲಾದ ಮಹೇಶನ ತಂದೆ, "ಮನೆ ಮರ್ಯಾದೆ ಹೋಗೋದು ಬೇಡ. ಒಮ್ಮೆ ಟಿವಿಯಲ್ಲಿ ಸುದ್ದಿ ಬಂದರೆ ಅದ್ಹೇಗೆ ಮುಖ ಎತ್ತಿ ತಿರುಗಾಡೋದು. ಒಮ್ಮೆ ಮದುವೆ ಅಂತ ಆದಮೇಲೆ ಎಲ್ಲಾ ಸರಿಹೋಗ್ತದೆ. ಒಪ್ಪಿಕೋ" ಎಂದು ಮಹೇಶನಿಗೆ ಹೇಳಿದರು. ಅಲ್ಲದೆ ಅವನ ಕೆಲವು ಸಂಬಂಧಿಗಳೂ ಅದನ್ನೇ ಹೇಳಿದಾಗ ಅನಿವಾರ್ಯವಾಗಿ ಒಪ್ಪಿ ಇದೇ ವರ್ಷದ ಪ್ರಾರಂಭದಲ್ಲಿ ಮೀನಾಕ್ಷಿಯ ಜೊತೆ ತನ್ನದೇ ಖರ್ಚಿನಲ್ಲಿ ಮದುವೆ ಆದ.

ಮದುವೆಯ ನಂತರ ಮಹೇಶನ ಮನೆಗೆ ಬಂದ ಮೀನಾಕ್ಷಿಯಲ್ಲಿ ವಿಚಿತ್ರ ಬದಲಾವಣೆಗಳು ಕಾಣಿಸತೊಡಗಿದವು. ಎಲ್ಲಕ್ಕಿಂತ ವಿಚಿತ್ರವೆಂದರೆ ಕಳೆದ 5 ವರ್ಷಗಳಲ್ಲಿ 2 ಬಾರಿ ಮದುವೆ ಮುರಿಯಲು ಕಾರಣವಾಗಿದ್ದ ಅವಳ ಬಲವಾದ ಲೈಂಗಿಕ ಆಸಕ್ತಿ ಅವಳಲ್ಲಿ ಕಾಣಿಸಲಿಲ್ಲ, ಮದುವೆಯ 2-3 ದಿನಗಳಲ್ಲೇ ಮೀನಾಕ್ಷಿ ಮಹೇಶನಿಗೆ "ನೋಡು ನಾನು ವ್ರತ ಮಾಡುತ್ತಿದ್ದೇನೆ. ಅದಕ್ಕೆ ನಲವತ್ತೈದು ದಿನ (ನೀನು ನನ್ನನ್ನು ಮುಟ್ಟಬೇಡ. ಸೆಕ್ಸ್‌ಗೆ ಒತ್ತಾಯ ಮಾಡಬೇಡ" ಎಂದಾಗ ಅದರ ಬಗ್ಗೆ ವಿಚಾರ ಮಾಡಲೂ ಹೆದರಿಕೊಂಡಿದ್ದ ಮಹೇಶ ಹೆಚ್ಚು ವಿಚಾರ ಮಾಡದೆ ಒಪ್ಪಿಕೊಂಡ.



ಆದರೆ ಅವಳ ನಡತೆ ಸ್ಥಿರವಾಗಿರಲಿಲ್ಲ, ಒಮ್ಮೊಮ್ಮೆ ವಿನಾಕಾರಣ ಕಿರುಚಾಡುತ್ತಿದ್ದಳು. ಇನ್ನೊಮ್ಮೆ ಜೋರಾಗಿ ಅಳುತ್ತಿದ್ದಳು. ಸೆಕ್ಸ್ ಬೇಡ ಎಂದ ಮೇಲೂ ನಿರಂತರವಾಗಿ ಮಹೇಶನೊಂದಿಗೆ ಅದರ ಬಗ್ಗೆಯೇ ಮಾತಾಡುವುದು ಮಾಡಿದಾಗ ಬಹಳ ಹಿಂಸೆ ಅನುಭವಿಸಿದ. ಆದರೆ ಅವನನ್ನು ಭೇಟಿ ಆಗಲು ಮನೆಗೆ ಬಂದ ಮಹೇಶನ ಹತ್ತಿರದ ಸಂಬಂಧಿಯ ಜೊತೆ ಮೀನಾಕ್ಷಿ ಮಾತಾಡುವುದನ್ನು ಕೇಳಿದಾಗ ಮಹೇಶನಿಗೆ ನಿಜಕ್ಕೂ ಅವಳ ಮಾನಸಿಕ ಸ್ಥಿತಿಯ ಬಗ್ಗೆ ಸಂದೇಹಗಳಾಗತೊಡಗಿದವು. ಮೀನಾಕ್ಷಿ "ನೋಡಿ ನೀವಾದ್ರೂ ಮಹೇಶನಿಗೆ ಹೇಳಿ ನನ್ನ ಹತ್ತಿರ ಸಂಬಂಧ ಇಟ್ಕೋಳ್ಳೋಕೆ. ನನ್ನನ್ನು ಮುಟ್ಟೋದೇ ಇಲ್ಲ" ಎಂದಾಗ "ಅದೇಕೆ ಹೀಗೆ ಮಾಡ್ತಿ ಇನ್ನೊಮ್ಮೆ ಯಾರ ಹತ್ತಿರವಾದರೂ ಈ ರೀತಿ ಮಾತಾಡಿದರೆ ನಾನು ಸುಮ್ಮನಿರಲ್ಲ" ಎಂದು ಸಿಟ್ಟಾದ. ಆಕೆ 'ಸ್ಸಾರಿ' ಎಂದು ಅಳುತ್ತ ಮಲಗಿದಳು. ಆದಾದ ಎರಡೇ ದಿನದಲ್ಲಿ ಅವಳನ್ನು ಭೇಟಿಯಾಗಲು ಅವಳ ತಂದೆ ತಾಯಿ ಬಂದಾಗ ಮಹೇಶ ಅವರ ಎದುರು ಎಲ್ಲ ಹೇಳಿದ. "ನಾವೆಲ್ಲ ಸರಿಮಾಡಿಯೇ ಹೋಗುತ್ತೇವೆ. ಚಿಂತೆ ಮಾಡಬೇಡಿ" ಎಂದು ಅವರು ಆಶ್ವಾಸನೆ ನೀಡಿದರು. ಯಾವುದರ ಬಗ್ಗೆಯೂ ವಿಚಾರ ಮಾಡಲು ಮಹೇಶ ಅಸಮರ್ಥನಾಗಿದ್ದ ಅವನ ಜೀವನದಲ್ಲಿ ಏನು ನಡೆಯುತ್ತಿದೆ ಎಂಬುದೇ ಅವನಿಗೆ ತಿಳಿಯದಾಗಿತ್ತು.

ಸಮಾಜದಲ್ಲಿ ಅತ್ಯಂತ ತುಳಿತಕ್ಕೊಳಗಾದ ಜನಾಂಗದಲ್ಲಿ ಹುಟ್ಟಿದ ಆತನಿಗೆ ನೇರವಾದ ಆಘಾತಗಳು ಹೊಸದಾಗಿರಲಿಲ್ಲ.

ಆದರೆ ಈ ಬಗೆಯ ಮಾನಸಿಕ ಹಿಂಸೆಗಳು ಬ[...] ಹೊಸದಾಗಿದ್ದವು. ಸರ್ಕಾರ ಇಂತಹ ಜಾತಿಯ[...] ನೆರವಿಗೆಂದು ರಚಿಸುವ ಮನೆ ಅಥವಾ ಕಾಲೋನಿಗ[...] ಒಂದು ಪ್ರತ್ಯೇಕ ಸ್ಥಾನ ನಿರ್ಮಿಸಿ ಅವರಿಗೆ ಸಹಾ[...] ಮಾಡುವುದರೊಂದಿಗೆ ಅವರನ್ನು ಅಪರೋಕ್ಷವಾಗಿ ಉ[...] ಸಮಾಜದಿಂದಲೂ ಪ್ರತ್ಯೇಕ ಮಾಡುತ್ತದೆ. ತನ್ನ ಹೆಂಡ[...] ಏನೋ ಮಾನಸಿಕ ಕಾಯಿಲೆ ಇದೆ ಎಂಬುದು ಅವ[...] ಗೊತ್ತು, ಆದರೆ ಅದನ್ನು ಹೇಗೆ ನಿಭಾಯಿಸುವುದೆಂ[...] ಗೊತ್ತಿಲ್ಲ, ಮೀನಾಕ್ಷಿಯ ತಂದೆ ತಾಯಿಗೆ ವಯಸ್[...] ಮಗಳಿಗೆ ಮದುವೆ ಮಾಡಿ ಜನರ ಎದುರು ತ[...] ಜವಾಬ್ದಾರಿ ಕಳೆದುಕೊಳ್ಳಬೇಕು ಅಷ್ಟೇ. ಅದಕ್ಕಾಗಿ ಏ[...] ಮಾಡಲೂ ಅವರು ಹೇಸಲ್ಲ, ಮೀನಾಕ್ಷಿಯ ತಂದೆತಾ[...] ಊರಿಗೆ ಬಂದ ಎರಡು ದಿನದಲ್ಲೇ ಹತ್ತಿರದ ಪೊಲೀ[...] ಠಾಣೆಯಿಂದ ಮಹೇಶನಿಗೆ ನೋಟಿಸ್ ಬಂತು. ಹೋ[...] ವಿಚಾರಿಸಿದರೆ ಮೀನಾಕ್ಷಿ ಅವನ ಮೇಲೆ "ಮನೆಯ[...] ತನ್ನ ಜೊತೆ ಕೆಟ್ಟದಾಗಿ ನಡೆದುಕೊಳ್ಳುತ್ತಾನೆ. ತೊಂ[...] ಕೊಡುತ್ತಾನೆ" ಎಂದು ಇತ್ಯಾದಿಯಾಗಿ ಕಂಪ್ಲೇಂ[...] ಕೊಟ್ಟಿದ್ದಳು. ಅದರಲ್ಲಿ ವರದಕ್ಷಿಣೆ ಕಿರುಕುಳ[...] ವಿಷಯವೇನೂ ಇರಲಿಲ್ಲ, ಆದರೆ ಅಸಂಬದ್ಧವಾ[...] ಆರೋಪಗಳಿದ್ದವು. ಅದ್ಯಾಕೆ ಮೀನಾಕ್ಷಿ ಕಂಪ್ಲೇಂ[...] ಕೊಟ್ಟಳೆಂಬುದೇ ಅವನಿಗೆ ಅರ್ಥವಾಗಲಿಲ್ಲ, ಠಾ[...] ಇಬ್ಬರನ್ನೂ ಕರೆದ ಪೊಲೀಸರು ಹೊಂದಿಕೊಂಡು ಹೋ[...] ಇಲ್ಲವೆ ಕೌಟುಂಬಿಕ ನ್ಯಾಯಾಲಯದಿಂದ ಪರಿಹಾ[...] ಪಡೆದುಕೊಳ್ಳಿ ಎಂದು ಇಬ್ಬರನ್ನೂ ಕಳಿಸಿಕೊಟ್ಟರು.

ಇಷ್ಟೆಲ್ಲ ಆದಮೇಲೆ ಮಹೇಶ ನನ್ನ ಬಳಿ ಬಂದ[...] ಸ್ಟೇಷನ್‌ದಿಂದ ಮೀನಾಕ್ಷಿ ತಮಿಳುನಾಡಿಗೆ ವಾಪ[...] ಹೋಗಿದ್ದಾಳೆ. ಆದರೆ ಹೋಗುವ ಮೊದಲು ನಿಮಗ[...] ಬುದ್ಧಿ ಕಲಿಸ್ತೀನಿ ಡೌರಿ ಕೇಸ್ ಹಾಕ್ತೀನಿ ಎಂ[...] ಹೆದರಿಸುತ್ತಿದ್ದಳು ಎಂದು ಅವನು ಹೇಳಿದ[...] ಯಾಕೋ ರಿಸ್ಕ್ ತಗೊಳ್ಳೋದು ಬೇ[...] ಎಂದುಕೊಂಡು ಮುಂಚಿತವಾಗಿಯೇ ಅವ[...] ಬೇಲ್ ತೆಗೆದುಕೊಳ್ಳಲು ವ್ಯವಸ್ಥೆ ಮಾಡಿ[...] "ಹೇಗಾದರೂ ಮಾಡಿ ಈ ಸಂಬಂಧದಿಂ[...] ಬಿಡುಗಡೆ ಕೊಡಿಸಿ ಮೇಡಂ. ಜೀವನ[...] ಸಾಕಾಗಿದೆ" ಎಂದು ಅವನು ಅಂದಾಗ ನಿಜಕ[...] ಬಹಳ ನೋವಾಯಿತು. ಅಷ್ಟರಲ್ಲಿ ಊರಿಗೆ ಬಂ[...] ಮೀನಾಕ್ಷಿ ನೇರವಾಗಿ ಸಂಬಂಧಿಗಳ ಮನೆಗೆ ಹೋ[...] ಅಲ್ಲಿಂದ ಠಾಣೆಗೆ ಹೋಗಿ ತನ್ನ ಗಂಡ ತನ್ನ[...] ಮನೆಗೆ ಸೇರಿಸುತ್ತಿಲ್ಲ ಎಂದು ಕಂಪ್ಲೇಂಟ್ ಕೊ[...] ಮಹೇಶನನ್ನು ಠಾಣೆಗೆ ಕರೆಸಿದಳು.

ಬಹಳ ಸಾರಿ ನೋಡಿದ್ದೇನೆ. ಹೀಗೆ ಮ[...] ಮತ್ತೆ ಠಾಣೆಗೆ ಬರುವ ಗಂಡ-ಹೆಂಡತಿಯ ಬ[...] ಪೊಲೀಸರಿಗೆ ಬಹಳ ಆಸಕ್ತಿ, ಯಾವಾಗ ಯ[...] ಕಡೆ ಹೆಚ್ಚಿನ ಕಾಂಚಾಣ ಹೊರಡುತ್ತದೋ[...] ದಿನ ಅವರ ಪರ ಪೊಲೀಸರು ವಕಾಲ[...] ವಹಿಸುತ್ತಾರೆ. ಎಲ್ಲರೂ ಹಾಗೇ ಎಂತಲ್ಲ, ಕೆಲವ[...] ನಿಜವಾಗಿಯೂ ಗಂಡ-ಹೆಂಡತಿಯೊನ್ನ[...] ನಿಷ್ಪಕ್ಷಪಾತದಿಂದ ನಡೆದುಕೊಳ್ತಾರೆ. ಆದ[...] ಬಹುತೇಕರಿಗೆ ತಮ್ಮೆದುರಿನ ವ್ಯಕ್ತಿಗಿಂತ ಅವ[...] ಜೇಬು ಹೆಚ್ಚಿಗೆ ಆಕರ್ಷಕ ಎನಿಸುತ್ತದೆ.

ಅದೇ ರೀತಿ ಜನರಿಗೂ ಕೂಡ ಠಾಣೆಗೆ ಮೊದ[...] ಬಾರಿ ಹೋಗುವಾಗ ಇರುವ ಅಳುಕು ಎರಡನೇ ಬಾ[...] ಇರುವುದಿಲ್ಲ, ಅದರಲ್ಲೂ ಸುಳ್ಳು ಕಂಪ್ಲೇಂಟ್ ಕೊಡುವವ[...] ಇನ್ನೂ ಹೆಚ್ಚಿನ ಭಂಡ ಧೈರ್ಯವಿರುತ್ತದೆ. ಏಕೆಂದರೆ ಅವ[...] ಪರವಾಗಿ ಸತ್ಯಕ್ಕಿಂತ ಹೆಚ್ಚಿಗೆ ಅವರು ಸುರಿಯುವ ದು[...] ಮಾತಾಡುತ್ತಿರುತ್ತದೆ.

ಮೀನಾಕ್ಷಿಯ ಮಾನಸಿಕ ಸ್ಥಿತಿ ನೋಡಿದರೆ ಅವಳೇನ[...] ಹುಚ್ಚಿಯಲ್ಲ, ಆದರೆ ಅದು ಅವಳ ಒಂದು ವ್ಯಕ್ತಿ[...] ದೋಷ ಎನ್ನಬಹುದು. ಈ ಬ[...] ಮನಶಾಸ್ತ್ರಜ್ಞರೊಬ್ಬರೊಂದಿಗೆ ನಾನು ಚರ್ಚಿಸಿದಾಗ ಅವ[...] ಹೇಳಿದ್ದೂ ಅದೇ "ನೋಡಿ ಕೆಲವೊಬ್ಬರಿಗೆ ಸೆ[...] ಮಾಡುವುದಕ್ಕಿಂತ ಅದರ ಬಗ್ಗೆ ಮಾತಾಡುವುದ[...] ಓದುವುದು, ಇಲ್ಲ ಅಂತಹ ಚಿತ್ರ ನೋಡುವುದು ಇ[...] ನೀಡುವ ಖುಷಿ, ಉನ್ಮಾದ ನಿಜವಾಗಿ ದೈಹಿ[...] ಸಂಬಂಧದಿಂದ ಸಿಗುವುದಿಲ್ಲ, ಆದರೆ ಇದನ್ನು ನೀ[...] ಸಾಬೀತು ಮಾಡುವುದು ಕಷ್ಟ. ಇದನ್ನೇ ಆಧಾರವಾಗಿಟ್ಟು ಕೊಂಡು ಕೇಸು ಮಾಡಿದರೆ ಬಹಳ ಕಷ್ಟ ಪಡಬೇಕು" ಎಂದರು. ಆಗಲೇ ಅಂದು ಕೊಂಡೆ ನನ್ನ ದಾರಿ ಸುಗಮ ವಾಗಿಲ್ಲ ಅಂತ.



(ಮುಂದುವರಿಯುವುದು)

● ರಾಜಲಕ್ಷ್ಮೀ ಅಂಕಲಗಿ

ಕರಾವಳಿಯ ವ್ಯಾಘ್ರಗಳು ಮತ್ತು ಬಲಿಪಶುಗಳು!





ಈ ಚಿತ್ರದಲ್ಲಿರುವ ಇಬ್ರಾಹಿಂ ಮತ್ತು ಉಮರ್ ತಮ್ಮ ಮನೆಗೆ ದನ ಸಾಕಲು ತೆಗೆದುಕೊಂಡು ಹೋಗುತ್ತಿದ್ದಾಗ ಅವರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಲಾಯ್ತು. (ಚಿತ್ರ ಕೃಪೆ: ವಾರ್ತಾಭಾರತಿ.)

ಘಟನೆ 1

ಜಲಜ: ಮನೆಯಲ್ಲಿ ಒಂದೆರಡು ಗಂಡು ಕರುಗಳು ...ತ್ತ ಮುದಿಯಾದ ಎರಡು ಹಸುಗಳು ಇವೆ. ಅವುಗಳನ್ನು ...ಸಲಹುವುದು ಬಹಳ ಕಷ್ಟವಾಗಿದೆ. ಏನು ಮಾಡ...ಂದು ತೋಚುತ್ತಿಲ್ಲ. ಮೊದಲೆಲ್ಲ ಮುದಿ ದನಗಳನ್ನು ...ಳಿಗಳು ಬಂದು ಕೊಂಡು ಹೋಗುತ್ತಿದ್ದರು. ಈಗ ...ನ್ನೂ ಮಾಡಲಾಗುತ್ತಿಲ್ಲ. ದುಡಿದ ದುಡ್ಡಿನಲ್ಲಿ ಮನೆ ...ಸುವುದೋ, ಮಕ್ಕಳನ್ನ ಸಾಕುವುದೋ, ಪ್ರಯೋಜನಕ್ಕೆ ...ದ ದನಗಳನ್ನು ಸಾಕುವುದೋ ಎಂದು ತಿಳಿಯುತ್ತಿಲ್ಲ. ...ಸ ದನಗಳನ್ನು ಕೊಂಡು ಸಾಕೋಣ ಅಂದರೆ ಅದಕ್ಕೂ ...ವಿಲ್ಲ.

...ವನಜ: ದನದ ಹಾಲು ಬತ್ತಿ ಹೋಗಿ ಪ್ರಯೋಜನಕ್ಕೆ ...ದಿದ್ದರೆ ಅದನ್ನು ಮತ್ತು ಗಂಡು ಕರುಗಳನ್ನು ಮಾರಾಟ ...ಡು.

ಜಲಜ: ಅದು ಹೇಗೆ ಮಾರಲು ಸಾಧ್ಯ? ರಸ್ತೆಯಲ್ಲಿ ... ಹಾಕಿ ಪೊಲೀಸರಿಗೆ ಕೊಡುತ್ತಾರಂತಲ್ಲ. ಪೇಪರ್‌ನಲ್ಲಿ ... ಸುದ್ದಿಯಾಗತ್ತೆ ಅಂತ ಎಲ್ಲ ಹೇಳ್ತಾರಲ್ಲ.

ವನಜ: ಇಲ್ಲಪ್ಪಾ, ಹಾಗೇನಿಲ್ಲ. ಆರಾಮದಲ್ಲಿ ಸುಲಭವಾಗಿ ...ಗಳನ್ನು ಮಾರಬಹುದು. ಏನೂ ಆಗಲ್ಲ. ದನ ನೇರವಾಗಿ ...ರಿಗೆ ಅಥವಾ ದಲ್ಲಾಳಿಗಳಿಗೆ ಮಾರಬಾರದು. 'ಳ'ದವರ ...ತೆ ಮೊದಲೇ ಮಾತನಾಡಿ ಅವರಿಗೆ 'ಸ್ವಲ್ಪ ಕೊಟ್ಟು' ...ಲೆ ಮಾರಿದರೆ ಅಥವಾ 'ದಳ'ದವರಿಗೆ ಹಸುಗಳನ್ನ ...ಕ್ಸ್ ಆಗಿ ಮಾರಿದರೆ ಏನೂ ತೊಂದರೆ ಆಗಲ್ಲ. ...ಟ ಮಾಡುವಾಗಲೂ ತೊಂದರೆ ಬರುವುದಿಲ್ಲ.

ಜಲಜ: ಹೌದಾ, ಹಾಗೆ ಮಾಡಬಹುದಾ?

ವನಜ: ಖಂಡಿತ ಮಾಡಬಹುದು. ನಮ್ಮ ಅಕ್ಕಪಕ್ಕದಲ್ಲಿ ...ರೂ ಹಾಗೆ ಮಾಡಿದ್ದು. ಇಲ್ಲವಾದರೆ ದನ ಸಾಕಿ ...ನ ಮಾಡುವುದು ಸಾಧ್ಯವಾ?

...ಇದು ಪೇಟೆಯಲ್ಲಿ ಇಬ್ಬರು ಹೆಂಗಸರು ಮಾತನಾಡು... ಕಿವಿ ಅತ್ತ ಕಡೆ ಹೊರಳಿತು. ಮೇಲಿನದ್ದು ಅವರಿಬ್ಬರ ...ವೆ ನಡೆದ ಮಾತುಕತೆ. ನಡುವಯಸ್ಸಿನ ಆ ...ಗಸರಿಬ್ಬರೂ ಕುಂದಾಪುರ ಕನ್ನಡದಲ್ಲಿ ಮಾತನಾಡು...ದು. ಅದನ್ನೇ ನಾನು ಇಲ್ಲಿ ನಿಮಗೆಲ್ಲ ಅರ್ಥವಾಗುವ ...ಷೆಯಲ್ಲಿ ಬರೆದಿದ್ದೇನೆ. ಅಂದಹಾಗೆ ಇಲ್ಲಿ ಬರುವ 'ದಳ' ...ವುದು ಮತ್ತು ಅವರಿಗೆ ಹೇಗೆ ನಡೆದುಕೊಳ್ಳಬೇಕು ...ಬುದು ನಿಮಗೆ ಅರ್ಥವಾಗಿದೆ ಮತ್ತು ಅದನ್ನ ಬಿಡಿಸಿ ಹೇಳಬೇಕಾಗಿಲ್ಲ ಎಂದು ಭಾವಿಸಿದ್ದೇನೆ. ಇದು ಸದ್ಯದ ನಮ್ಮ ಕರಾವಳಿಯ ಸ್ಥಿತಿಯನ್ನು ಸೂಚಿಸುವ ಮಾತುಕತೆ. 'ದಳ'ದವರು ಈಗ ದನಗಳನ್ನು ಮಾರುವ ದಲ್ಲಾಳಿಗಳಾಗಿದ್ದಾರೆ. ಇವರ ಮೂಲಕ ವ್ಯಾಪಾರವಾಗದ ಅಥವಾ ಇವರಿಗೆ 'ನಡೆದುಕೊಳ್ಳದ' ದನ ಸಾಗಾಟಗಳ ಮೇಲೆ ಇವರ ದಾಳಿ ಹೆಚ್ಚಾಗುತ್ತಿದೆ. ದನ ವ್ಯಾಪಾರದ ದಲ್ಲಾಳಿಗಳು ಹೆಚ್ಚು ಹಿಂದೂಗಳೇ ಆಗಿದ್ದರೂ ಸಹ ಕಸಾಯಿಖಾನೆಯ ಕಸುಬಿನಲ್ಲಿ ಹೆಚ್ಚಾಗಿ ಮುಸ್ಲಿಮರೇ ಇದ್ದಾರೆ. ದನ ಸಾಗಾಟ ಮಾಡುತ್ತಿದ್ದಾರೆ ಎಂದು ಈ 'ದಳ'ದವರು ದನ ಸಾಗಾಟ ಮಾಡುವ ಮುಸಲ್ಮಾನರ ಮೇಲೆ ದಾಳಿ ಮಾಡಿ ಹಲ್ಲೆ ನಡೆಸಿ ಕೈಕಾಲುಗಳು ಕಳಚಿ ಬೀಳುವ ಹಾಗೆ ಹೊಡೆದುಬಡಿದು ಅವರ ಬದುಕನ್ನೇ ನಿರ್ನಾಮ ಮಾಡುತ್ತಿದ್ದಾರೆ. ಬಹುಶಃ ಮುಂದೆ ಮುಸಲ್ಮಾನರಿಂದ ಆ ಕಸುಬನ್ನೂ ಕಿತ್ತುಕೊಂಡು ಅಲ್ಲಿಯೂ ತಮ್ಮ ಪಾರಮ್ಯ ಮೆರೆಯಲು ಇವರು ವ್ಯವಸ್ಥಿತವಾಗಿ ಈ ದಾಳಿಗಳನ್ನು ನಡೆಸುತ್ತಿದ್ದಾರೆ ಎಂಬುದು ಈಗೀಗ ಸ್ಪಷ್ಟವಾಗುತ್ತಿದೆ. ಮುಂದೊಂದು ದಿನ ಮಂಗಳೂರಿನ ಕಸಾಯಿಖಾನೆಗೆ ಈ 'ದಳ'ದವರೇ ಮಾಲಿಕರಾದರೂ ಅಚ್ಚರಿ ಇಲ್ಲ. ಆಗ ದನ ಸಾಗಾಟಕ್ಕೆ ಯಾವುದೇ ಅಡ್ಡಿಆತಂಕಗಳೂ ಇರಲಿಕ್ಕಿಲ್ಲ.

ಘಟನೆ 2

ಸ್ಥಳೀಯ ಚಾನೆಲ್ ಒಂದರಲ್ಲಿ ಸುದ್ದಿ ನೋಡುತ್ತಾ ಕೂತಿದ್ದೆ. ಉಡುಪಿಯಲ್ಲಿ 'ಗೋ ಹತ್ಯೆಯ' ವಿರುದ್ಧ ನಡೆದ ಪ್ರತಿಭಟನಾ ಸಭೆಯಲ್ಲಿ ಉಡುಪಿಯ ಬಿಜೆಪಿ ಯುವಮೋರ್ಚಾದ ನೇತಾರನೊಬ್ಬ ಭಾಷಣ ಮಾಡುತ್ತಿದ್ದ. ಮಾತಿನ ಮಧ್ಯೆ ಆತ 'ಈ ಜಿಲ್ಲೆಯಲ್ಲಿರುವ ಅರವತ್ತರಿಂದ ಎಪ್ಪತ್ತು ಶೇಕಡಾ ಹಿಂದೂಗಳು ಕೈಗೆ ಬಳೆ ಹಾಕಿ ಕೂತುಕೊಂಡಿದ್ದಾರೆ ಎಂದು ಈ ಸರಕಾರ ಭಾವಿಸಿದೆಯೆ' ಎಂದು ಜೋರಾಗಿ ಹೇಳಿದ. ಆತನ ಮಾತು ಕೇಳಿ ಚೆಡ್ಡಿ ಪಡೆ ಚಪ್ಪಾಳೆ ತಟ್ಟಿತು. ನನಗೆ ಈ ಯುವ ಮೋರ್ಚಾ ನೇತಾರನ ಮಾತು ಕೇಳಿ ಆಶ್ಚರ್ಯವಾಯಿತು. ಯಾಕೆಂದರೆ ಇದೇ ಸಭೆಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಹೆಂಗಸರೂ ಭಾಗವಹಿಸಿದ್ದರು. ತನ್ನ ಭಾಷಣದಲ್ಲಿ ಹಾಗೆ ಹೇಳುವ ಮೂಲಕ ಅಲ್ಲಿರುವ ಮತ್ತು ಒಟ್ಟಾರೆಯಾಗಿ ಎಲ್ಲ ಸ್ತ್ರೀಯರಿಗೂ ತಾನು ಅವಮಾನ ಮಾಡುತ್ತಿದ್ದೇನೆ ಎಂಬ ಕಿಂಚಿತ್ ಜ್ಞಾನವೂ ಈ ಯುವ ಮೋರ್ಚಾದ ನಾಯಕನಿಗೆ ಇಲ್ಲ. ಭಾರತೀಯ ಜನತಾ ಪಾರ್ಟಿಯವರು ಸ್ತ್ರೀಯರಿಗೆ ಕೊಡುವ ಗೌರವ ಇದೇ ಏನು?

'ಗೋಮಾತೆ'ಯ ಬಗ್ಗೆ ಹೋರಾಟ ಮಾಡುವ ಈ ಜನಗಳು ನಿಜವಾದ ಮಾತೆಯರಿಗೆ ಗೌರವ ಯಾಕೆ ಕೊಡುವುದಿಲ್ಲ? ಅಷ್ಟಕ್ಕೂ ಎಲ್ಲ ಸ್ತ್ರೀಯರು ಬಳೆ ಹಾಕಿಕೊಳ್ಳುವುದು ಭಾರತೀಯ ಸಂಸ್ಕೃತಿ ಎಂದು ಬೊಬ್ಬೆ ಹೊಡೆಯುವುದೂ ಸಹ ಇದೇ ಚೆಡ್ಡಿಗಳು. ಈ ಯುವ ಮೋರ್ಚಾ ನೇತಾರ ಅಶಿಕ್ಷಿತ ಎಂದು ನೀವು ತಿಳಿದುಕೊಳ್ಳಬೇಡಿ. ಈತ ಎಂಬಿಎ ಪದವೀಧರ! ಅಂದಹಾಗೆ ಆತ 'ಸುಶಿಕ್ಷಿತ'ನಲ್ಲ ಎಂಬುದು ಆತನ ಮಾತಿನ ಮೂಲಕವೇ ವ್ಯಕ್ತವಾಗಿದೆ ಬಿಡಿ.


ಘಟನೆ 3

ಮಂಗಳೂರಿನಲ್ಲಿ ನಡೆದ ಇಂತಹುದೇ ಪ್ರತಿಭಟನೆಯಲ್ಲಿ ಭಾಷಣ ಮಾಡುತ್ತಿದ್ದ ಒಬ್ಬ ಯುವ ಚೆಡ್ಡಿನಾಯಕ 'ಹಿಂದೂಗಳು ಮನೆಯಲ್ಲಿ ಮಾರಕಾಸ್ತ್ರಗಳನ್ನು ಇಟ್ಟುಕೊಳ್ಳಬೇಕು, ಗೋಸಾಗಾಟಗಾರರು ಮನೆಗೆ ಬಂದರೆ ಅವರ ಮೇಲೆ ದಾಳಿ ನಡೆಸಲು ಮಾರಕಾಸ್ತ್ರಗಳನ್ನು ಬಳಸಬೇಕು, ಮನೆಯಲ್ಲಿ ಹತ್ತು ಜನ ಇದ್ದರೆ ಹತ್ತು ಶಸ್ತ್ರಗಳನ್ನು ಇಟ್ಟುಕೊಳ್ಳಬೇಕು' ಎಂದು ಆದೇಶ ನೀಡಿದ್ದಾನೆ. ಈತನ ಪ್ರಕಾರ ಮನೆಯಲ್ಲಿ ಆಯುಧ ಪೂಜೆಯ ದಿನ ಫ್ರಿಜ್, ಟಿವಿ, ಮಿಕ್ಸಿಗೆ ಎಲ್ಲ ಪೂಜೆ ಮಾಡುವುದನ್ನು ಬಿಟ್ಟು ನಿಜವಾದ ಆಯುಧಗಳನ್ನು ಇಟ್ಟು ಪೂಜೆ ಮಾಡಬೇಕಂತೆ. ದನವನ್ನು ಮುಟ್ಟಿದವರ ಮೇಲೆ ದಾಳಿ ನಡೆಸಲು ಬಂದೂಕು ಇಟ್ಟುಕೊಳ್ಳಬೇಕಂತೆ. ಮುಸಲ್ಮಾನರು ಈ ದೇಶದಲ್ಲಿ ಹಿಂದೂಗಳ ಔದಾರ್ಯದಿಂದ ಬದುಕುತ್ತಿದ್ದಾರಂತೆ. ಇದೆಲ್ಲ ಆತನ ಉಗ್ರ ಭಾಷಣದಲ್ಲಿ ತೇಲಿಬಂದ ಮಾತುಗಳು. ಸರಕಾರ ಬದಲಾದರೂ ಕರಾವಳಿಯ ಪೊಲೀಸರು ಬದಲಾದ ಹಾಗಿಲ್ಲ. ಇಲ್ಲವಾದಲ್ಲಿ ಈ ರೀತಿಯ ಭಾಷಣಗಳನ್ನು ಬೀದಿಯಲ್ಲಿ ನಿಂತು ಹೇಗೆ ಮಾಡಲು ಸಾಧ್ಯ?

ತೆಂಗಿನಕಾಯಿ ಕಳ್ಳರು, ಅಡಿಕೆ ಕಳ್ಳರು, ಕುರಿ-ಕೋಳಿ ಕಳ್ಳರು, ಬೀಡಾ ಅಂಗಡಿ ಕಳ್ಳರು ಅಂತೆಯೆ ದನಗಳ್ಳರು ಲಾಗಾಯ್ತಿನಿಂದಲೂ ಕರಾವಳಿಯಲ್ಲಿ ಇದ್ದಾರೆ. ಅದೇನೂ ಹೊಸತಲ್ಲ. ದನಗಳ್ಳತನವೂ ಇವರು ಈಗ ಬೊಬ್ಬೆ ಹೊಡೆಯುತ್ತಿರುವ ಪ್ರಮಾಣದಲ್ಲಿ ಖಂಡಿತವಾಗಿಯೂ ಇಲ್ಲ. ನೀವು ಬ್ಯಾಂಕ್ ದರೋಡೆ, ಮನೆ ದರೋಡೆ, ವಾಹನ ದರೋಡೆ ಇವನ್ನೆಲ್ಲ ಮೊದಲು ಕೇಳಿರಬಹುದು. ಈ ಚೆಡ್ಡಿ ಪಡೆ ತನ್ನ ಸುಳ್ಳುಗಳನ್ನು ಇನ್ನಷ್ಟು ಸಮರ್ಥಿಸಿಕೊಳ್ಳಲು, ಮುಸಲ್ಮಾನರ ವಿರುದ್ಧ ಇನ್ನಷ್ಟು ದಾಳಿ ನಡೆಸಲು ಈಗ ಹೊಸದಾದ ವಿಚಿತ್ರ ಪದವೊಂದನ್ನು ಹುಟ್ಟುಹಾಕಿದೆ. ಅದೇನು ಗೊತ್ತಾ, 'ಗೋದರೋಡೆ'. ಈ ಚೆಡ್ಡಿಗಳ ಪ್ರಕಾರ ಗೋವುಗಳನ್ನು ದರೋಡೆ ಮಾಡಲಾಗುತ್ತಿದೆಯಂತೆ! ಕೋಮುಗಲಭೆಗಳ ವೇಳೆ ಸಾಬರ ಮನೆಮಾರುಗಳನ್ನು ದರೋಡೆ ಮಾಡುವ ರೂಢಿ ಇರುವ ಈ ಚೆಡ್ಡಿ ಪಡೆಗೆ ದರೋಡೆ ಎಂಬ ಪದವನ್ನು ಇಷ್ಟು ಸಲೀಸಾಗಿ ಬಳಸಲು ಸಾಧ್ಯವಾಗಿದ್ದರಲ್ಲಿ ಅಚ್ಚರಿ ಏನೂ ಇಲ್ಲ ಬಿಡಿ. ಇವರು ಹುಟ್ಟಿಸಿದ 'ಗೋದರೋಡೆ' ಎನ್ನುವುದು ಜಾಗತಿಕವಾಗಿಯೇ ಒಂದು ಹೊಸ ಪರಿಕಲ್ಪನೆ (concept) ಇರಬೇಕು. ಸುಮ್ಮನೆ ತಮಾಷೆಗೆಂದು 'cow robbery' ಎಂದು ಗೂಗಲ್ ಮಾಡಿದೆ. ವಿದೇಶದ ಒಂದೆರಡು ಮಕ್ಕಳ ಕಾರ್ಟೂನ್ ಚಿತ್ರಗಳು ಮಾತ್ರ ಕಂಡುಬಂದವು!

- ಶಶಿಧರ ಹೆಮ್ಮಾಡಿ, ಕುಂದಾಪುರ

ಸೇಡಿನ ಮಿತಿಗಳು



...ಇದನ್ನು ಯಾರೂ ಹೇಳಿಕೊಡಲಾಗುವುದಿಲ್ಲ; ಸೇಡು ಒಳ್ಳೆಯದಲ್ಲ, ...ಕೀಯ ಎನ್ನುವುದು ಕ್ರೂರವಾದದ್ದು, ಆತ್ತೆಯಂತೆ ಸೊಸೆ ಇರಲಿಕ್ಕಿಲ್ಲ, ...ದಿಯನ್ನು ನಿಜಲಿಂಗಪ್ಪ ಕಲಿಯಲಿಲ್ಲ. ನೂರಕ್ಕೆ ಹತ್ತಿರ ಸಾಗುತ್ತಿರುವ ...ಲಿಂಗಪ್ಪ ಇನ್ನೂ ಅಪಕ್ವ ಮನುಷ್ಯನಾಗಿರುವುದು ಮಾತ್ರ ವಿಚಿತ್ರ. ವರ್ಷಗಳು ...ನುಷ್ಯನನ್ನು ಬಗ್ಗಿಸುತ್ತವೆ, ಅಸಹಾಯಕನನ್ನಾಗಿ ಮಾಡುತ್ತವೆ, ...ಮರುಳಾಗಿಸುತ್ತವೆ; ಆದರೆ ಈ ವರ್ಷಗಳು ಉತ್ತಮ ವ್ಯಕ್ತಿಯ ಘನತೆಯನ್ನು ...ಸುತ್ತವೆ, ಇಡೀ ಬದುಕನ್ನು ಬೇರೊಂದು ರೀತಿಯಲ್ಲಿ ನೋಡುವುದನ್ನು ...ಸುತ್ತವೆ. ವರ್ಷಗಳು ಈ ಅರ್ಥದಲ್ಲಿ ವ್ಯರ್ಥವಲ್ಲ.

1969 ರಲ್ಲಿ ಕಾಂಗ್ರೆಸ್ ವಿಷಮ ಸ್ಥಿತಿಯಲ್ಲಿತ್ತು; ನೆಹರೂ ಇರಲಿಲ್ಲ. ಶಾಸ್ತ್ರಿ ...ಕೊಂಡಿದ್ದರು. ಇಂದಿರಾ ಎಂಬ ನೆಹರೂರವರ ಅರೆಬೆಂದ ಹೆಣ್ಣುಮಗಳು ...ಯಾಗಿದ್ದಳು. ಆಕೆ ಆಗ ಸಂಕೇತ; ಕಾಂಗ್ರೆಸ್ಸನ್ನು ಅಲ್ಲಿಯವರೆಗೆ ...ಬಲಿಸುತ್ತಿದ್ದ ಎಲ್ಲ ಜನರ ಕೇಂದ್ರಬಿಂದು. ಈಕೆ ಪದ್ದೆಹುಡುಗಿ ಎಂದು ...ಲಿಂಗಪ್ಪ, ಸಂಜೀವ ರೆಡ್ಡಿ, ಅತುಲ್ಯಘೋಷ್, ಕಾಮರಾಜ ಮುಂತಾದವರು ...ಭಾವಿಸಿದರು. ತಾವೆಲ್ಲ ಒಗ್ಗಟ್ಟಾಗಿ ಈ ಹುಡುಗಿಯನ್ನು ಕಿತ್ತುಹಾಕಬಹುದು ...ಮು ಭ್ರಮಿಸಿದರು. ಹಕ್ಸರ್ ಎಂಬ ಚಾಣಾಕ್ಷ ಅಧಿಕಾರಶಾಹಿಯ ...ಯುವವರು, ವ್ಯಾಪಾರಸ್ಥರು ಎಲ್ಲರೂ ಈ ನಿಜಲಿಂಗಪ್ಪನವರ ಸಿಂಡಿಕೇಟ್ ...ಡಿ ಸಕ್ಕರು. ಅದಕ್ಕೆ ತಕ್ಕಂತೆ ಇಂದಿರಾ ಸ್ಕೀಮ್‌ಗಳಲ್ಲಿ ಮುಳುಗಿದರು; ...ರಿಗಳಿಗೆ ಹಣ ನಿಲ್ಲಿಸಿದರು. ಬ್ಯಾಂಕ್ ರಾಷ್ಟ್ರೀಕರಿಸುವ ಘೋಷಿಸಿದರು. ...'ಗರೀಬಿ ಹಟಾವೋ' ಎಂದು ಚೀರಿಕೊಂಡರು. ಆಗ ನಿಜಲಿಂಗಪ್ಪನವರ ...ಗಾಟಕ್ಕೆ ಫುಲ್‌ಸ್ಟಾಪ್ ಸಿಕ್ಕಿತು.

...ಇದು ಚರಿತ್ರೆ. ಇಂದಿರಾ ಎಂಬ ಹೆಣ್ಣುಮಗಳನ್ನು ಇವರು ತಿದ್ದುವ ... ಸಹಾಯವನ್ನು ಚರ್ಚಿಸಿ ಅಕ್ಷೇಪಿಸುವ ಛಾತಿ ತೋರಲಿಲ್ಲ. ಬಂಡಾಯದಲ್ಲೂ ... ಇರುವ ಸಾಧ್ಯ, ಖಂಡನೆಯಲ್ಲೂ, ಪ್ರೌಢಿಮೆಯಲ್ಲೂ ಇರಲು ಸಾಧ್ಯ, ... ಸಾತ್ವಿಕತೆ ಇರಲು ಸಾಧ್ಯ ಎನ್ನುವ ಹೊಸ ಶೈಲಿ ಸಿಂಡಿಕೇಟ್‌ಗ... ಗೊತ್ತಾಗಲಿಲ್ಲ.

ಇಂದಿರಾ ಎಂಬ ಅರೆಬೆಂದ ಮಹಿಳೆ ಅಧಿಕಾರ ವಹಿಸಿಕೊಂಡರು; ನಿಜಲಿಂಗಪ್ಪ ಮನೆಗೆ ಬರಬೇಕಾಯಿತು.

ಈ ರೊಚ್ಚು ಇನ್ನೂ ಆರಿಲ್ಲ. ಪಟೇಲ್ ಎಂಬ ಬಣಜಿಗ ಲಿಂಗಾಯತರಿಗೆ ತೊಂದರೆಯಾದೊಡನೆ ಬೆಂಗಳೂರಿಗೆ ಓಡಿಬರುವ ಈ ವ್ಯಕ್ತಿ ಶುದ್ಧಹಸ್ತವನ್ನೇ ಸಂಜೀವಿನಿ ಎಂದು ತಿಳಿದರು. ಗಾಂಧೀಜಿಯ ಹಸ್ತದಲ್ಲಿ ಅನೇಕ ದೋಷಗಳಿದ್ದವು ಎಂಬ ಸರಳ ಸತ್ಯ ಇವರಿಗೆ ತಿಳಿಯಲಿಲ್ಲ.

ಮೊನ್ನೆ ಸೋನಿಯಾ ಬಳ್ಳಾರಿಗೆ ಹೋಗುವ ದಾರಿಯಲ್ಲಿ ಚಿತ್ರದುರ್ಗದಲ್ಲಿ ಇಳಿದು ನಿಜಲಿಂಗಪ್ಪನವರನ್ನು ನೋಡಿದರು. ಅದು ಆಕೆಯ ವಿನಯ ತೋರಿತು; ಆದರೆ ನಿಜಲಿಂಗಪ್ಪನವರ ಪ್ರೀತಿ ಬತ್ತಿಹೋಗಿತ್ತು. ಸೋನಿಯಾರನ್ನು ನಿಂತು ಸ್ವಾಗತಿಸಲು ಕೂಡ ಯತ್ನಿಸಲಿಲ್ಲ. ಆಕೆಗೆ ಸಂವಿಧಾನದ ಪ್ರತಿ ಕೊಟ್ಟರು.


ಸಂವಿಧಾನ ಕೂಡ ಗಾಂಧಿಯಂತೆ. ಅದನ್ನು ಬೆಳೆಸುತ್ತಾ ಹೋಗಬೇಕಾಗುತ್ತದೆ; ಅದು ಒಮ್ಮೆ ನಿಜಲಿಂಗಪ್ಪನವರ ಮೂತಿಗೆ ಇಕ್ಕಿದ್ದರೆ 'ಯಾಕೆ?' ಎಂದು ತಿಳಿದುಕೊಳ್ಳಲು ಆತ್ಮನಿರೀಕ್ಷೆ ಬೇಕು. ಅದು ನಿಜಲಿಂಗಪ್ಪನವರಿಗೆ ತಿಳಿಯಲಿಲ್ಲ.

ಸಜ್ಜನಿಕೆ ಮತ್ತು ಪ್ರೀತಿಗೆ ಸಮಾನವಾದದ್ದು ಇನ್ನೊಂದಿಲ್ಲ. ಪ್ರೀತಿ ನಿಜಲಿಂಗಪ್ಪನವರನ್ನು ಕಾಂಗ್ರೆಸ್‌ಗೆ ಕಟ್ಟಿಹಾಕುತ್ತಿರಲಿಲ್ಲ. ಅವರು ಎಲ್ಲ ಜೀವಂತಿಕೆಯನ್ನೂ ಪ್ರೀತಿಸುವಂತೆ ಆಗುತ್ತಿತ್ತು.

ನಿಜಲಿಂಗಪ್ಪನವರಿಂದ ಸೋನಿಯಾ ಯಾವುದೇ ನೆರವು ಬಯಸಿರಲಿಲ್ಲ. ಅಷ್ಟನ್ನು ಅರಿಯದ ಈ ವ್ಯಕ್ತಿ ತಮ್ಮ ಜೊತೆಯವರನ್ನೆಲ್ಲ ಕುಬ್ಜಗೊಳಿಸುತ್ತಾರೆ.


ಇದು ಅವರಿಗೆ ತಿಳಿಯಲಿ ಎಂದು ಈ ಟಿಪ್ಪಣಿ.

ಎರಡು ಅಂಶಗಳು



...ಇಲ್ಲಿ 'ಮರೆಯುವ ಮುನ್ನ'ದಲ್ಲಿ ಎರಡು ಪುಟ್ಟ ಅಂಶಗಳನ್ನು ಕಾಣಿಸುತ್ತೇನೆ. ನಾನು ಗೆಳೆಯರೊಂದಿಗೆ ಹರಟೆ ಕೊಚ್ಚುವಾಗ ಅರ್ಧ ತಮಾಷೆ, ಅರ್ಧ ಸೀರಿಯಸ್‌ನಲ್ಲಿ ಒಂದು ವರ್ಷದ ಹಿಂದೆಯೇ ಹೇಳಿದ್ದೆ: 'ಕ್ಲಿಂಟನ್ ಇಷ್ಟೆಲ್ಲ ಲೈಂಗಿಕ ಹಗರಣಗಳಲ್ಲಿ ಮುಳುಗಿದರೂ ಹಿಲೇರಿ ಕ್ಲಿಂಟನ್ ಹೇಗೆ ಸಹಿಸಿಕೊಂಡಿದ್ದಾಳೆ?' 'ಆಕೆ ಉದಾರಿ', 'ತನ್ನ ಕುಟುಂಬದ ಬಗ್ಗೆ ಹೆಮ್ಮೆಯುಳ್ಳವಳು', 'ಗಂಡನನ್ನು ಕಂಡರೆ ಅಪಾರ ಪ್ರೀತಿ' ಎಂದೆಲ್ಲ ಹೇಳಿದರು. ನಾನು 'ಇಲ್ಲ, ಗಂಡನನ್ನು ಕಂಡರೆ ... ಆಗಿರಲಾರದು. ಗಂಡಸು ಹೆಂಗಸು ಲೈಂಗಿಕ ವಿಷಯಗಳಲ್ಲಿ ಎಷ್ಟು ಕ್ರೂರಿಗಳು ಅಂದರೆ ಅವರು ಔದಾರ್ಯ, ಪ್ರೀತಿ, ಕುಟುಂಬ ಸೌಖ್ಯ, ... ಸುಮ್ಮನಿರುವುದಿಲ್ಲ. ಅದೆಲ್ಲಕ್ಕಿಂತಲೂ ದೊಡ್ಡ ಕಾರಣ ಇರಲೇಬೇಕು. ಹಿಲೇರಿ ಸಂತಳಲ್ಲ, ಮಹಾ ಪತಿವ್ರತೆಯಲ್ಲ' ಎಂದು ಕ್ಷಣ ಸುಮ್ಮನಾದೆ. ಆಮೇಲೆ ಹೇಳಿದೆ, 'ಆಕೆಯ ಲೈಂಗಿಕ ಸಾಹಸಗಳು ಕ್ಲಿಂಟನ್ನನ ಪ್ರಕರಣಗಳನ್ನು ಮೀರಿಸುತ್ತವೆ. ಆಕೆ ಲಿಟ್ಲರಾಕ್‌ನಲ್ಲಿ ಗೌರ್ನರ್ ಕ್ಲಿಂಟನ್ನನ ಹೆಂಡತಿಯಾಗಿದ್ದಾಗ ನಡೆಸುತ್ತಿದ್ದ ಕಾನೂನುಸಂಸ್ಥೆ, ಅಲ್ಲಿದ್ದ ಜನರು, ಆಕೆಗೆ ಹಣ ಗಳಿಸಲು ನೆರವಾದದ್ದು ಆಕಸ್ಮಿಕವಲ್ಲ. ಅದು ವೈಟ್‌ವಾಟರ್ ಪ್ರಕರಣ ಎಂದು ಪ್ರಸಿದ್ಧವಾಯಿತು. ಆಕೆ ಅಲ್ಲಿ ನಡೆಸಿದ ಲೈಂಗಿಕ ವ್ಯವಹಾರಗಳು ಕ್ಲಿಂಟನ್ ರಾಷ್ಟ್ರಾಧ್ಯಕ್ಷನಾದ ಮೇಲೆ ರಾಜಧಾನಿ ವಾಷಿಂಗ್‌ಟನ್‌ಗೂ ಬಂದವು. ಅಲ್ಲಿ ಒಂದು ದಿನ ಒಬ್ಬ ಮಂತ್ರಿ ಆತ್ಮಹತ್ಯೆ ಮಾಡಿಕೊಂಡ. ಅದಕ್ಕೆ ಕಾರಣವೇನು ಎಂದು ಸರಿಯಾಗಿ ತನಿಖೆ ಮಾಡಲಿಲ್ಲ" ಅಂದೆ.

ಇಷ್ಟನ್ನು ಹೇಳಿದ ಮೇಲೆ ನಾವೆಲ್ಲ ಬೇರೆ ವಿಷಯ ಎತ್ತಿಕೊಂಡು ಹರಟತೊಡಗಿದೆವು. ಈಚೆಗೆ ಹಿಲೇರಿ ಸುದ್ದಿಗೆ ಬಂದಿರುವುದು ಎಲ್ಲರಿಗೆ ಗೊತ್ತಿತ್ತು. ಸಣ್ಣ ಚುನಾವಣೆಯೊಂದರಲ್ಲಿ ಗೆದ್ದು ಆಕೆ ಸೆನೆಟರ್



ಆಗಿದ್ದಾಳೆ. ಡೆಮಾಕ್ರಾಟಿಕ್ ಪಕ್ಷದ ಉಪಾಧ್ಯಕ್ಷ ಅಲ್‌ಗೋರ್ ಅಧ್ಯಕ್ಷನಾಗಿ ಗೆಲ್ಲುವ ಸಂಭವ ಯಾವುದೇ ಕಾರಣಕ್ಕೆ ಕಡಿಮೆಯಾದರೆ ಹಿಲೇರಿ ಚುನಾವಣೆ ಕಣಕ್ಕೆ ಇಳಿಯುತ್ತಾಳೆ. ಆದ್ದರಿಂದ ತಾನು ದಿಟ್ಟ ಮಹಿಳೆ, ಗಂಡ ಕ್ಲಿಂಟನ್ನನ ಕೈಗೊಂಬೆಯಲ್ಲ ಎಂದು ತೋರುವುದು ಅಗತ್ಯವಾಗಿದೆ. ಆದ್ದರಿಂದ ಆಕೆ ಇತ್ತೀಚೆಗೆ 'ಕ್ಲಿಂಟನ್ನನ ಚಪಲಗಳನ್ನು ಹೇಗೆ ಸಹಿಸಿದೆ?' ಎಂಬ ಪ್ರಶ್ನೆಯನ್ನು ತಾನೇ ಕೇಳಿಕೊಂಡು ಉತ್ತರಿಸಿದ್ದಾಳೆ. 'ನನ್ನ ... ಇವೆ. ಆದರೂ ಮಾಡಿದ್ದರಲ್ಲಿ ವಿಶೇಷವೇನಿಲ್ಲ.'


● ಜೂನ್ 23, 1999

ರಂಗ-ಅಂತರಂಗ

ರಂಗ 'ಗಡಿ' ಕಟ್ಟುತ್ತಿರುವ 'ರಂಗವಾಹಿನಿ

ಚಾಮರಾಜನಗರ ರಾಜ್ಯದ ದಕ್ಷಿಣದ ಗಡಿ ಜಿಲ್ಲೆ, ಸಿದ್ದಪ್ಪಾಜೀ, ಮಂಟೇಸ್ವಾಮಿ, ಮಲೈಮಹದೇಶ್ವರ ಹೀಗೆ ಪವಾಡ ಪುರುಷರು ನಡೆದಾಡಿದ ನಾಡಿದು. ಜಾನಪದ ಸಿರಿ ಕಲೆಗಳ ತವರೂರಿದು. ರಂಗ ಚಟುವಟಿಕೆಗಳಿಗೆ, ಮೂಲನಿವಾಸಿಗಳ ಸಂಸ್ಕೃತಿಯ ಪಳೆಯುಳಿಕೆಗೆ ಸಿದ್ಧಮಾದರಿಯ ನೆಲವಿದು. ಇಂತಹ ಪರಿಸರದಲ್ಲಿ ಜಿಲ್ಲೆಯ ರಂಗಸಂಸ್ಥೆ 'ರಂಗವಾಹಿನಿ' ರಂಗ ಸೇವೆಗೈಯುತ್ತಿದೆ. ಒಂದರ್ಥದಲ್ಲಿ ರಾಜ್ಯದ ರಂಗಕ್ಷೇತ್ರಕ್ಕೆ ಸಂಬಂಧಿಸಿದಂತೆ ರಂಗವಾಹಿನಿ ರಂಗ'ಗಡಿ' ಕಟ್ಟುತ್ತಿದೆ!

ಖಂಡಿತ, ಚಾಮರಾಜನಗರದ ಸಂಸ್ಥೆಯೆಂದರೆ ಅದರ ಮೊದಲ ಆದ್ಯತೆ ಅಲ್ಲಿಯ ಜಾನಪದ ಸೊಗಡಿನ ಪ್ರತಿಬಿಂಬಕವೇ ಆಗಿರುತ್ತದೆ. ಈ ನಿಟ್ಟಿನಲ್ಲಿ ಖ್ಯಾತ ಕವಿ ಹೆಚ್.ಎಸ್.ಶಿವಪ್ರಕಾಶ್ ಅವರ 'ಮಂಟೇಸ್ವಾಮಿ ಕಥಾಪ್ರಸಂಗ'ವನ್ನು ತನ್ನದಾಗಿಸಿಕೊಂಡ 'ರಂಗವಾಹಿನಿ' ಮಾಲತೇಶ ಬಡಿಗೇರರ ನಿರ್ದೇಶನದಲ್ಲಿ ಆ ನಾಟಕವನ್ನು ಮೈಸೂರು ದಸರಾ ಉತ್ಸವ, ಹಂಪಿ ಉತ್ಸವ, ನಾಗಮಂಗಲದ ಕನ್ನಡಸಂಘ, ಸುತ್ತೂರು ಜಾತ್ರೆ ಹೀಗೆ ನಾನಾ ಕಡೆ 16 ಪ್ರದರ್ಶನಗಳನ್ನು ನೀಡಿದೆ.



ಸಿ.ಎಂ.ನರಸಿಂಹಮೂರ್ತಿ

ಅಂದಹಾಗೆ 40 ಮಂದಿಯ ಈ ತಂಡದ ನೇತೃತ್ವ ಜಿಲ್ಲೆಯ ಕ್ರಿಯಾಶೀಲ ರಂಗಕರ್ಮಿ, ಸ್ವತಃ ಜಾನಪದ ಗಾಯಕರೂ ಆಗಿರುವ ಕಲಾವಿದ ಸಿ.ಎಂ.ನರಸಿಂಹಮೂರ್ತಿಯವರದ್ದು. ಸಿ.ಎಂ.ಎನ್ ಸಿಜಿಕೆ, ಕೆ.ವಿ. ನಾಗರಾಜಮೂರ್ತಿ, ಶ್ರೀನಿವಾಸ್.ಜಿ. ಕಪ್ಪಣ್ಣ ಮುಂತಾದ ಖ್ಯಾತ ರಂಗಕರ್ಮಿಗಳ ನಡುವೆ ಬೆಳೆದ ಕಲಾವಿದ. ನಾಗರಾಜಮೂರ್ತಿಯವರ 'ಪ್ರಯೋಗ ರಂಗ'ದ ಮೂಲಕ ರಂಗ 'ಬಣ್ಣ' ಹಚ್ಚಿಕೊಂಡ ನರಸಿಂಹಮೂರ್ತಿ ಮುಂದೆ ಹಿಂದಿರುಗಿ ನೋಡಿದ್ದೇ ಇಲ್ಲ. ಪ್ರಾರಂಭದಲ್ಲಿ 'ರಂಗ ತರಂಗ' ನಂತರ 'ರಂಗವಾಹಿನಿ'ಯ ಚುಕ್ಕಾಣಿ ಹಿಡಿದ ನರಸಿಂಹಮೂರ್ತಿ ತಮ್ಮ ಸಂಸ್ಥೆಗಾಗಿ 'ಕೆರೆಗೆ ಹಾರ', 'ಪೋಲಿಕಿಟ್ಟಿ', 'ಅಲ್ಲೇ ಇದ್ದವರು', 'ನೀರು', 'ಆಲಿಬಾಬಾ ಮತ್ತು 40 ಮಂದಿ ಕಳ್ಳರು', 'ಕಾರಿಹೆಗ್ಗಡೆ ಕೆಂಚವ್ವ', 'ಅರಿವಿನೆಡೆಗೆ' ಹೀಗೆ ಹಲವು ನಾಟಕಗಳನ್ನು ನಿರ್ದೇಶಿಸಿದ್ದಾರೆ. ಪಾತ್ರಧಾರಿಯಾಗಿಯೂ ಕಾರ್ಯನಿರ್ವಹಿಸಿದ್ದಾರೆ. 2004ರಲ್ಲಿ ರಂಗವಾಹಿನಿ ಸ್ಥಾಪನೆಗೊಂಡಾಗಿನಿಂದ ಚಾಮರಾಜನಗರದಲ್ಲಿ ಪ್ರತಿ ವರ್ಷ ನರಸಿಂಹಮೂರ್ತಿ ಗಡಿನಾಡ ನಾಟಕೋತ್ಸವವನ್ನ ನಡೆಸುತ್ತಾ ಬಂದಿದ್ದಾರೆ. ಕಳೆದ ವರ್ಷವಷ್ಟೆ 'ಮಂಡ್ಯ ರಮೇಶ್ ನಾಟಕೋತ್ಸವ' ನಡೆಸಿದ್ದ ರಂಗವಾಹಿನಿ ಈ ವರ್ಷ ನಿರ್ದೇಶಕ 'ಮಾಲತೀಶ ಬಡಿಗೇರ ನಾಟಕೋತ್ಸವ' ನಡೆಸಲು ಸಕಲ ಸಿದ್ಧತೆ ನಡೆಸುತ್ತಿದೆ.



ರಂಗವಾಹಿನಿ ಅಭಿನಯಿಸಿದ ಮಂಟೇಸ್ವಾಮಿ ನಾಟಕದ ದೃಶ್ಯ




ರಂಗವಾಹಿನಿ ಅಭಿನಯಿಸಿದ ಅಂಬೇಡ್ಕರ್ ನಾಟಕದ

'ರಂಗವಾಹಿನಿ'ಯದ್ದು ಬರೀ ಸ್ಟೇಜ್ ನಾಟಕಗಳ ಬಗ್ಗೆಯಷ್ಟೇ ಗಮನವಲ್ಲ. ಅಸ್ಪೃಶ್ಯತೆ, ಅನಕ್ಷರತೆ, ಮಹಿಳೆಯರ ಸಂಕಷ್ಟ, ಹೀಗೆ ಸಮಾಜದ ನಾನಾ ಪಿಡುಗುಗಳ ಬಗ್ಗೆ ಜಾಗೃತಿ ಮೂಡಿಸುವ ಕಾಯಕ ಕೈಗೆತ್ತಿಕೊಂಡಿರುವ ಅದು ಈ ನಿಟ್ಟಿನಲ್ಲಿ 'ಧರೆಹತ್ತಿ ಉರಿದೊಡೆ', 'ವಿಮುಕ್ತಿ', 'ಬೆಳ್ಳಕ್ಕಿಗಳ ಲೋಕದಲ್ಲಿ', 'ತುಂಡುದನ', 'ಜಗಳ', 'ಕದ್ದವರಾರಣ್ಣ ಬೀಜಗಳ', 'ಜಾತಿ ಮಾಡಬ್ಯಾಡಿ ಪಂಚಾಯಿತಿಯೊಳಗ', 'ಅಸ್ಪೃಶ್ಯತೆ', 'ಕೂಲಿಯಿಂದ ಶಾಲೆಗೆ', 'ಸಾಧನೆ', 'ಅರಿವು', 'ಜೀತ', 'ಶೋಷಣೆ', 'ಸ್ತ್ರೀಶಕ್ತಿ', 'ನಾವು ನಮ್ಮೂರು', 'ಬಾರವ್ವ ಭಾಗೀರತಿ', 'ಹೀಗೊಂದು ಅತ್ಯಾಚಾರ' ಹೀಗೆ ಹತ್ತು ಹಲವು ಬೀದಿನಾಟಕಗಳನ್ನು ಪ್ರದರ್ಶಿಸಿದೆ. ತನ್ಮೂಲಕ ಸಾಮಾಜಿಕ ಪಿಡುಗನ್ನು ಮೂಲೋತ್ಪಾಟನೆ ಮಾಡುವ ನಿಟ್ಟಿನಲ್ಲಿ ರಂಗವಾಹಿನಿ ಪ್ರಬಲವಾಗಿ ಕೈಜೋಡಿಸಿದೆ. ಅಲ್ಲದೆ ರಂಗ ತರಬೇತಿ ಶಿಬಿರ, 'ಪರಿಶಿಷ್ಟ ಜಾತಿ/ವರ್ಗಗಳ ರಂಗಶಿಬಿರ, ರಂಗಗೀತೆಗಳ ಗಾಯನ ಶಿಬಿರ, ರಂಗವಿಚಾರ ಸಂಕಿರಣ, ಗಡಿ ಜಿಲ್ಲೆಯಲ್ಲಿ ರಂಗಕ್ಕೆ ಹತ್ತಿರವೆನಿಸುವ ಜಾನಪದ ಉತ್ಸವ, ಹಾಡುಗಾರಿಕೆ ಹೀಗೆ ನಾನಾ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ 'ರಂಗವಾಹಿನಿ' ರಂಗಸಂಸ್ಥೆಯೊಂದು ತೆಲುಪಬಹುದಾದ ವಿವಿಧ ಆಯಾಮಗಳನ್ನು ಪರಿಚಯಿಸುತ್ತಾ ಬಂದಿದೆ.

'ರಂಗವಾಹಿನಿ'ಯ ಒಂದು ವಿಶಿಷ್ಟ ಸಂಸ್ಕೃತಿ ಎಂದರೆ ಗಡಿಜಿಲ್ಲೆಯಲ್ಲಿ ಎಲೆಮರೆಯ ಕಾಯಂತಿರುವ ಅನೇಕ ರಂಗ ಪ್ರತಿಭೆಗಳನ್ನು ಬೆಳಕಿಗೆ ತರುವುದು. ಅವರನ್ನು ಇಡೀ ರಾಜ್ಯವೇ ಗುರುತಿಸುವಂತೆ ಮಾಡುವುದು. ಈ ನಿಟ್ಟಿನಲ್ಲಿ 'ಕರ್ನಾಟಕ ನಾಟಕ ಅಕಾಡೆಮಿ'ಯ ಮಾಜಿ ಸದಸ್ಯರು ಆದ ಸಂಸ್ಥೆಯ ಅಧ್ಯಕ್ಷ ಸಿ.ಎಂ.ನರಸಿಂಹಮೂರ್ತಿ ಜಿಲ್ಲೆಯ ಯಜಮಾನ್ ಹನುಮಯ್ಯ, ಬಣ್ಣದ ಬಸವರಾಜಪ್ಪ, ತಬಲ ಗುಂಡಪ್ಪ, ಘಟಂ ಕೃಷ್ಣ, ಲಯವಾದ್ಯದ ವೆಂಕಟೇಶ ಬಾಬು ಹೀಗೆ ಅನೇಕರಿಗೆ ನಾಟಕ ಅಕಾಡೆಮಿಯ ಪುರಸ್ಕಾರ ದೊರಕಲು ಕಾರಣರಾಗಿದ್ದಾರೆ. ಜಿಲ್ಲೆಯ ಗೊರವ ಕುಣಿತದ ಹಿರಿಯ ಕಲಾವಿದ ಪುಟ್ಟಮಲ್ಲೇಗೌಡರಿಗೆ ರಾಜ್ಯಮಟ್ಟದ 'ಜಾನಪದ ಶ್ರೀ' ಪ್ರಶಸ್ತಿ ಸಲ್ಲುವಂತೆ ಮಾಡಿದ್ದು ರಂಗವಾಹಿನಿಯ ಮತ್ತೊಂದು ಹೆಗ್ಗಳಿಕೆ. ಈ ನಿಟ್ಟಿನಲ್ಲಿ ಜಿಲ್ಲೆಯ ಗಾಯಕ ಸಿ.ವಿಶ್ವನಾಥ್, ಗಮಕಿ ಹೆಚ್.ರಾಮದಾಸ್, ರುಕ್ಮಿಣಮ್ಮ ಮುಂತಾದವರಿಗೆ 'ಕರ್ನಾಟಕ ಕಲಾಶ್ರೀ' ಪ್ರಶಸ್ತಿ ಸಲ್ಲಲು ಕೂಡ ರಂಗವಾಹಿನಿಯ ಹಕ್ಕೊತ್ತಾಯವೇ ಮುಖ್ಯ ಕಾರಣ.


ಈಚೆಗಷ್ಟೇ 'ರಂಗವಾಹಿನಿ' ಖ್ಯಾತ ದಲಿತ ಕವಿ ಡಾ.ಎಲ್.ಹನುಮಂತಯ್ಯನವರ 'ಅಂಬೇಡ್ಕರ್' ನಾಟಕವನ್ನು ಚಾಮರಾಜನಗರದ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಸ್ವತಃ ಸಿ.ಎಂ.ನರಸಿಂಹಮೂರ್ತಿಯ[ವರ] ನಿರ್ದೇಶನದಲ್ಲಿ ಕಿಕ್ಕಿರಿದ ಪ್ರೇಕ್ಷಕರ ಸಮ್ಮುಖದಲ್ಲಿ ಪ್ರದರ್ಶಿಸಿ ತನ್ನ ರಂಗ ಗರಿಮೆಯನ್ನು ಮತ್ತಷ್ಟು ಹೆಚ್ಚಿಸಿಕೊಂಡಿದೆ. ಸದಾ ಕ್ರಿಯಾಶೀಲವಾಗಿರುವ 'ರಂಗವಾಹಿನಿ' ಇನ್ನಷ್ಟು ಎತ್ತರಕ್ಕೆ ಬೆಳೆಯಲಿ. ಜಿಲ್ಲೆ ತನ್ಮೂಲಕ ಈ ರಾಜ್ಯದ ರಂಗಸೇವೆಗೈಯುವ ನಿಟ್ಟಿ[ನಲ್ಲಿ] ಮತ್ತಷ್ಟು ಮುನ್ನಡೆಯಲಿ. ರಂಗ ಪತಾಕೆಯನ್ನು ಹಾರಿಸುತ್ತಾ ಜಾನಪದದ ಈ ಮಣ್ಣಿನ (ಚಾ.ನಗರ) ಸೊಗಡನ್ನು ಎಲ್ಲೆಡೆ ಪಸರಿಸಲಿ ಎಂಬುದೇ ರಂಗಸಹೃದಯಿಗಳ ಕಳಕಳಿ.



ರಘೋತ್ತಮ ಹೊ.ಬ.
ಚಾಮರಾಜನಗರ


'ಪತ್ನಿ ಪೀಡಿತರ ಕತೆ-ವ್ಯಥೆ' ಲೇಖನ ಮಾಲಿಕೆಯ ಉದ್ದೇಶವೇನು

ಪತ್ರಿಕೆಯ ಇತ್ತೀಚಿನ ಸಂಚಿಕೆಗಳಲ್ಲಿ ಮಾಲಿಕೆಯಾಗಿ ಪ್ರಕಟವಾಗುತ್ತಿರುವ ರಾಜಲಕ್ಷ್ಮಿ ಅಂಕಲಗಿಯವರ ಲೇಖನಗಳ ಕುರಿತು ಪರ-ವಿರೋಧವಾಗಿ ವ್ಯಾಪಕ ಚರ್ಚೆಯಾಗುತ್ತಿದೆ. 'ಪತ್ನಿ ಪೀಡಿತರ ಕತೆ-ವ್ಯಥೆ' ಎಂಬ ಶೀರ್ಷಿಕೆಯಡಿ ಇಂತಹ ಲೇಖನಗಳು ಬಹುಶಃ ಮೊಟ್ಟಮೊದಲ ಬಾರಿಗೆ ಲಂಕೇಶ್‌ನಲ್ಲಿ ಪ್ರಸಾರಗೊಳ್ಳುತ್ತಿದೆ ಎಂಬುದು ನನ್ನ ತಿಳಿವಳಿಕೆ. ಗೌರಿ ಲಂಕೇಶ್ ಪತ್ರಿಕೆಯ ಮೂಲ ಒಕ್ಕಣೆಯೇ ಹೇಳುವಂತೆ ಪತ್ರಿಕೆ ಇರುವುದು ರಂಜನೆ, ಬೋಧನೆ ಮತ್ತು ಪ್ರಚೋದನೆಗಾಗಿ ಎಂಬುದಲ್ಲವೇ! ಹಾಗಾಗಿ ಈ ಮಾಲಿಕೆಯ ಬರಹಗಳು ರಂಜನೆ ಮಾಡಲಂತೂ ಸಾಧ್ಯವಿಲ್ಲ, ಏನನ್ನು ಬೋಧನೆ ಮಾಡುತ್ತಿದೆಯೋ ಅರ್ಥವಾಗುತ್ತಿಲ್ಲ, ಬಹುಸಂಖ್ಯಾತ ಶೋಷಿತ ಮಹಿಳೆಯರ ಪರವಾಗಿರುವ ಕಾನೂನುಗಳ ವಿರುದ್ಧ ಯಜಮಾನಿಕೆ ಸಂಸ್ಕೃತಿಯನ್ನು ಪೋಷಿಸುವಂತಹ ಪುರುಷರನ್ನು ಪ್ರಚೋದನೆ ಮಾಡಲು ಬರೆದಿರಬಹುದೇನೋ ಎಂಬಂತಿದೆ! ಈ ಲೇಖನ ಮಾಲಿಕೆಯ ಉದ್ದೇಶವಂತೂ ನನಗೆ ಸ್ವಲ್ಪವೂ ಸ್ಪಷ್ಟವಾಗಿಲ್ಲ.



ನಿಜ, ಶೋಷಣೆಯು ವ್ಯಕ್ತಿಗಳಿಂದಲೇ ಆರಂಭವಾದರೂ ಸಹ ಅವುಗಳ ಮೂಲ ಮಾತ್ರ ಈ ಸಮಾಜದೊಳಗೇ ಅಡಗಿದ್ದು, ಅದು ಚಾರಿತ್ರಿಕ ಕಾರಣಗಳಿಂದ ನಡೆಯುತ್ತಿರುವುದು ನಾವೆಲ್ಲರೂ ಉಸಿರಾಡುತ್ತಿರುವಷ್ಟೇ ಸತ್ಯ. ಶೋಷಣೆ ಎಂದಾಕ್ಷಣ ಇಲ್ಲಿ ಪತಿಪೀಡಿತೆ-ಪತ್ನಿಪೀಡಿತ ಎಂದು ಕೇವಲ ವೈಯಕ್ತಿಕ ನೆಲೆಯಲ್ಲಿ ವಿಶ್ಲೇಷಿಸುವ ಬದಲು ಅದನ್ನು ವಿಶಾಲವಾದ ಸಾಮಾಜಿಕ ದೃಷ್ಟಿಕೋನದಿಂದ ವಿಚಾರ ಮಾಡಿ, ಇಂದು ದೇಶದಲ್ಲಿ ಹಲವಾರು ಬದಲಾವಣೆಗಳಿಂದಾಗಿ ಉಂಟಾಗುತ್ತಿರುವ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ತಲ್ಲಣಗಳನ್ನು ಬಿಂಬಿಸಿದರೆ ಈ ಲೇಖನ ಮಾಲೆಯು ಅರ್ಥಪೂರ್ಣವಾಗುತ್ತದೆ. ಇದು ಆರೋಗ್ಯಕರ ಚರ್ಚೆಗಳಿಗೂ ಆಸ್ಪದ ನೀಡುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ.

ಆದರೆ ಈಗ ಪ್ರಕಟವಾಗುತ್ತಿರುವ ಮಾದರಿಯ ಲೇಖನಗಳು ವಾಸ್ತವ ಸಂಗತಿಗಳಿಂದ ಕೂಡಿದ್ದರೂ ಸಹ ಮನುಷ್ಯನನ್ನು ಹರಾಜಿನ ಸರಕಾಗಿಸಿರುವ, ಉಸಿರಿಂದ ಹಿಡಿದು ಬಸಿರಿನ ತನಕವು ಎಲ್ಲವನ್ನೂ "ಕೊಳ್ಳು-ಮಾರು" ಎನ್ನುವ ಕೊಳ್ಳುಬಾಕ ಸಂಸ್ಕೃತಿಯನ್ನು ಎಗ್ಗಿಲ್ಲದೆ ಪೋಷಿಸುತ್ತಿರುವ ಇಂದಿನ ಸರ್ಕಾರಗಳ ಜಾಗತೀಕರಣ, ಉದಾರೀಕರಣದ ನೀತಿಗಳು, ಅವುಗಳಿಂದ ತನಗೇ ಗೊತ್ತೋ ಗೊತ್ತಿಲ್ಲದೆಯೋ ತೀವ್ರ ಪ್ರಭಾವಕ್ಕೊಳಗಾಗುತ್ತಿರುವ ನಮ್ಮ ಸಮಾಜ, ಅದರ ಭಾಗಿಗಳೇ ಆದ ಕೆಲ ಅಕ್ಷರಸ್ಥ (ಸುಶಿಕ್ಷಿತರಲ್ಲದ) ಮಹಿಳೆಯರು - ಹೀಗೆ ಕಾರಣಗಳು ಹತ್ತು ಹಲವಾರು ಇದ್ದರೂ ಬಲಿಯಾಗುತ್ತಿರುವುದು ಮಾತ್ರ ಸಾಮಾನ್ಯ ಜನರೇ. ಲೇಖನಗಳು ಈ ವಾಸ್ತವ ಸತ್ಯಗಳನ್ನು ತೆರೆದಿಡದೆ ಪತಿಪೀಡಿತರೆಂದೋ ಪತ್ನಿಪೀಡಿತರೆಂದೋ ಒಕ್ಕಣೆ ನೀಡುವುದು ಸಮಾಜದ ಹಿತದೃಷ್ಟಿಯಿಂದ ಉಚಿತವಲ್ಲ.



ಭಾರತದಲ್ಲಿ ಸಂಪ್ರದಾಯದ ಹೆಸರಿನಲ್ಲಿ ಹಾಗು ಇನ್ನಿತರೆ ನೆಪಗಳನ್ನೊಡ್ಡಿ ಸಾವಿರಾರು ವರ್ಷಗಳಿಂದ ತುಳಿಯಲ್ಪಟ್ಟಿರುವ, ಹುಟ್ಟಿನಿಂದ ಸಾಯುವವರೆಗೂ ತನ್ನೊಳಗೇ ತನ್ನ ನೋವನ್ನು ನುಂಗಿಕೊಳ್ಳುವ, ಯಾರ ಗಮನಕ್ಕೂ ಬಾರದ, ಬಂದರೂ ಸ್ಪಂದನೆಗೊಳಪಡದ, ಕೋಟ್ಯಾಂತರ ಹೆಣ್ಣುಗಳ ಗೋಳನ್ನು, ಕಣ್ಣೀರನ್ನು ಒರೆಸಲು ಸಹಾಯಕವಾದ ಕಾನೂನುಗಳನ್ನು ನಮ್ಮ ದೇಶದ ಮಹಿಳಾ ಸಂಘಟನೆಗಳ ತೀವ್ರ ಹೋರಾಟದ ಫಲವಾಗಿ ರೂಪಿಸಲಾಗಿದೆ. ಆದರೆ ಇವುಗಳನ್ನು ನಿರ್ನಾಮ ಮಾಡುವ ಪ್ರಯತ್ನಗಳು ದೇಶದಲ್ಲಿ ಸಾಕಷ್ಟು ನಡೆಯುತ್ತಿವೆ. ಇದಕ್ಕೆ ಈ ಲೇಖನ ಮಾಲೆಯು ಸ್ಫೂರ್ತಿಯಾಗಬಾರದೆಂಬುದೇ ನಮ್ಮ ಆಶಯ! ಯಾವುದೇ ಸಮಸ್ಯೆಯನ್ನು ಸಮಗ್ರವಾಗಿ ವಿಶ್ಲೇಷಿಸಿದಾಗ ಮಾತ್ರ ಪರಿಹಾರ ಸಾಧ್ಯ.....

ಆದ್ದರಿಂದ ಲೇಖನಗಳನ್ನು ಪ್ರಕಟಿಸುವ ಮುನ್ನ ಅವುಗಳು ಸಮಾಜದ ಮೇಲೆ ಬೀರುವ ಪರಿಣಾಮವನ್ನು ಆಲೋಚಿಸಿ ಮುಂದುವರಿದರೆ ಒಳ್ಳೆಯದು. ಇಲ್ಲವಾದರೆ ನಮ್ಮೆಲ್ಲರ ನೆಚ್ಚಿನ 'ಲಂಕೇಶ್'ಗೂ ಇತರೆ ಸಾಮಾನ್ಯ ಪತ್ರಿಕೆಗಳಿಗೂ ವ್ಯತ್ಯಾಸವಿಲ್ಲದಂತೆ ಆದೀತು!

ಹಾಗೆ ಆಗಬಾರದೆಂಬ ಸದಾಶಯದೊಂದಿಗೆ....

- ಜ್ಯೋತಿ. ಎ, ಅಧ್ಯಕ್ಷೆ, ಭಾರತೀಯ ಮಹಿಳಾ ಒಕ್ಕೂಟ, ಕರ್ನಾಟಕ ರಾಜ್ಯ ಮಂಡಳಿ, ಬೆಂಗಳೂರು


ಸಮಸ್ಯೆಯ ಸಾರ್ವತ್ರೀಕರಣದ ಹಿಂದಿರುವ ಅಪಾಯ

ರಾಜಲಕ್ಷ್ಮಿ ಅಂಕಲಗಿ ಅವರ 'ಪತ್ನಿ ಪೀಡಿತರ ಕತೆ-
ಅಂಕಣ ಭಿನ್ನ ರೀತಿಯ ಆಲೋಚನೆಗಳ
ಹುಟ್ಟುಹಾಕುತ್ತಿದೆ. ಈ ಭಿನ್ನ ರೀತಿಯ ಆಲೋಚ
ಹಿಂದೆ ಸಮಾಜ ಪರ ನಿಲುವಿನ ಭಿನ್ನ ದೃಷ್ಟಿಕೋನ
ಕೆಲಸ ಮಾಡಿವೆ. ಡಾ. ಹೆಚ್.ವಿ.ವಾಸು ಅವರು
ಲೇಖನದ ಆರಂಭ ಘಟ್ಟದಲ್ಲೊಂದು ತಕರಾರು ತೆಗೆ
ಇದನ್ನು ಕೊಂಚಮಟ್ಟಿಗೆ ಒಪ್ಪಿಕೊಳ್ಳುತ್ತಲೇ ಶಶಿಕಲಾ ಚ
ಅವರು 'ಪುರುಷರ ನೋವಿಗೂ ಸ್ಪಂದಿಸೋಣ' ಎ
ಸಹಾನುಭೂತಿಯೆಡೆಗೆ ಚರ್ಚೆ ಕೊಂಡೊಯ್ದರು.
ತಕರಾರುಗಳ ಎಳೆಗಳನ್ನು ಹಿಡಿದು ಚರ್ಚಿಸುವ ಮೊ
ಇವರಿಬ್ಬರಲ್ಲಿನ ಸಮಾನ ಅಂಶಗಳನ್ನು ಕಂಡುಕೊಳ್ಳು
ಉತ್ತಮ.

ಮೊದಲನೆಯದಾಗಿ ಲಂಕೇಶ್ ಪತ್ರಿಕೆ ಎಲ್ಲ ಪ್ರಗ
ಶಕ್ತಿಗಳ ಮತ್ತು ವ್ಯಕ್ತಿಗಳ ವೇದಿಕೆ. ಸದಾ ದಮನಿತರ
ನಿಲುವನ್ನು ತಾಳುತ್ತಾ ಬಂದಿರುವ ಮತ್ತು ಸಾಮ
ಜವಾಬ್ದಾರಿಯೊಂದಿಗೆ ಕಾರ್ಯನಿರ್ವಹಿಸುತ್ತಿರುವ
ಎರಡನೆಯದು ಪುರುಷರು ಮಹಿಳೆಯರಿಂದ
ಪ್ರಮಾಣದಲ್ಲಿ ಶೋಷಣೆಗೊಳಗಾಗಿರುವ ನಿದರ್ಶನ
ಇವೆ. ಇಬ್ಬರಲ್ಲಿನ ಈ ಸಮಾನ ಅಂಶಗಳನ್ನು ಬ
ಮಿಕ್ಕ ಆಲೋಚನೆಗಳು ಭಿನ್ನತೆಯಿಂದ ಕೂಡಿವೆ.

ಇಲ್ಲಿ ಸಮಸ್ಯೆಯನ್ನು ಗುರುತಿಸುವುದು ಲೇ
ಆಲೋಚನೆಯಲ್ಲೋ ಅಥವಾ ತಕರಾರುಗಳ
ಅನ್ನುವುದಕ್ಕಿಂತ ಇಂತಹ ಪ್ರಗತಿಪರ ಪತ್ರಿಕೆಯ ಮ
ಸಮಾಜದ ನೋವುಗಳನ್ನು ಬಿಂಬಿಸುವಾಗ ಕೆಲವೊ
ಸಮಸ್ಯೆಗಳನ್ನು ಸಾರ್ವತ್ರೀಕರಣದೆಡೆಗೆ ಕೊಂಡೊ
ಬಹುದೇ? ಎನ್ನುವುದು ಬಹಳ ಮುಖ್ಯ. ಗಂಡು
ಎಂಬ ಲಿಂಗತಾರತಮ್ಯವಿಲ್ಲದೆ ಎಲ್ಲರ ಸಮಸ್ಯೆಗಳಿಗ
ಕೊಡಬೇಕಾಗಿರುವುದು ಲಂಕೇಶ್ ತರದ ಪ್ರಗತಿಪರ ಪ
ಆದ್ಯ ಕರ್ತವ್ಯ. ಇದನ್ನು ಲಂಕೇಶ್ ಮೊದಲಿನಿಂ

ಶಿಪ್ ಆಫ್ ಥೀಸಿಯಸ್: ಬಿಡಿಭಾಗಗಳನ್ನು ಕಳಚಿಟ್ಟ ಮನುಷ್ಯ ಮತ್ತು ಬದುಕು!



ಭಾರತೀಯ ಚಿತ್ರ ಪರಂಪರೆಯಲ್ಲಿ ಕಲಾತ್ಮಕ ಚಳವಳಿಯ ಬೇರುಗಳನ್ನು ತಡಕಾಡಿದರೆ ಅಲ್ಲಿ ಕೈಗೆ ತೊಡರುವುದು ಕನ್ನಡ ಮತ್ತು ಬಂಗಾಳಿ ಮೊದಲಾದ ಪ್ರಾದೇಶಿಕ ಭಾಷೆಗಳು. ಬಾಲಿವುಡ್ ಮಂದಿ ಸಿನಿಮಾವನ್ನು ಒಂದು ಉದ್ಯಮವಾಗಿ ಭಾವಿಸಿ ಚಿತ್ರಗಳನ್ನು ಮಾಡುತ್ತಿದ್ದಾಗ ಕನ್ನಡ, ಬಂಗಾಳಿ, ಮಲಯಾಳಂನಂತಹ ಪ್ರಾದೇಶಿಕ ಭಾಷೆಗಳು ಸಿನಿಮಾವನ್ನು ಕಲೆಯಾಗಿ ಸ್ವೀಕರಿಸಿ, ಹಲವು ಪ್ರಯೋಗಗಳನ್ನು ಮಾಡಿದವು. ಕಲಾತ್ಮಕ ಮತ್ತು ವಾಣಿಜ್ಯ ಎಂದು ಗೆರೆ ಎಳೆದಂತೆ ಸಿನಿಮಾ ಸೀಳಾದಾಗ, ಅದರ ನಡುವೆ ಒಂದು ಸೇತುವೆಯನ್ನು ನಿರ್ಮಿಸಿ ಚಿತ್ರವನ್ನು ಮಾಡುವ ನಿರ್ದೇಶಕರ ತಂಡ ಹುಟ್ಟಿಕೊಂಡಿತು. ಬಾಲಿವುಡ್‌ನಲ್ಲಿ ಅರ್ಧ ಸತ್ಯ, ಅಂಕುರ್, ಉತ್ಸವ್, ಮಂಡಿ ಹೀಗೆ ಕಲಾತ್ಮಕತೆಯ ಜೊತೆಗೇ ಸಿನಿಮಾವನ್ನು ಜನರೆಡೆಗೆ ಕೊಂಡೊಯ್ಯುವ ಪ್ರಯತ್ನ ನಡೆಯಿತು. ಮಲಯಾಳಂ ಚಿತ್ರಗಳೂ ಇದರಲ್ಲಿ ಯಶಸ್ವಿಯಾದವು. ಆದರೆ ಕರ್ನಾಟಕದಲ್ಲಿ ದುರದೃಷ್ಟವಶಾತ್ ಇನ್ನೂ ಆ ಪ್ರಯತ್ನ ನಡೆದಿಲ್ಲ. ಈ ಕಾರಣದಿಂದಲೇ ಕನ್ನಡದ ಚಿತ್ರೋದ್ಯಮ ನಿಂತ ನೀರಾಗಿ ಕೊಳೆಯುತ್ತಿದೆ.

ಇದೇ ಸಂದರ್ಭದಲ್ಲಿ ಬಾಲಿವುಡ್‌ನ ಕೆಲವು ಪ್ರತಿಭಾವಂತ ತರುಣರು ಇಂದು ಅಂತಾರಾಷ್ಟ್ರೀಯ ಚಲನ ಚಿತ್ರೋತ್ಸವಗಳಲ್ಲಿ ಗುರುತಿಸಿಕೊಳ್ಳುತ್ತಿದ್ದಾರೆ ಮತ್ತು ಅವುಗಳಿಗಾಗಿಯೇ ಚಿತ್ರಗಳನ್ನು ಮಾಡುವಲ್ಲಿ ಆಸಕ್ತಿ ತೋರಿಸುತ್ತಿದ್ದಾರೆ. ಮಲ್ಟಿಪ್ಲೆಕ್ಸ್‌ನ ಬುದ್ಧಿಜೀವಿ ಜನರನ್ನು ಗುರಿಯಾಗಿರಿಸಿಕೊಂಡು ಗಂಭೀರ ಚಿತ್ರಗಳು ಒಂದರನಂತರ ಒಂದರಂತೆ ಬರತೊಡಗಿವೆ. ಅವುಗಳಲ್ಲಿ ಮುಖ್ಯವಾದದ್ದು ಮತ್ತು ಇತ್ತೀಚೆಗೆ ಭಾರೀ ಸುದ್ದಿಯಲ್ಲಿರುವುದು ಆನಂದ್ ಗಾಂಧಿ ಎನ್ನುವ 30ರ ತರುಣ ನಿರ್ದೇಶಕನ 'ಶಿಪ್ ಆಫ್ ಥೀಸಿಯಸ್'. 'ಭಾರತದ ಚಿತ್ರಗಳೂ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಗಳ ಚಿತ್ರಗಳ ಮಟ್ಟಿಗೆ ಬೆಳೆದಿದೆ ಎನ್ನುವುದನ್ನು ಶಿಪ್ ಆಫ್ ಥೀಸಿಯಸ್' ತೋರಿಸಿಕೊಂಡಿದೆ ಎಂದು ವಿದೇಶಿ ಚಿತ್ರ ವಿಮರ್ಶಕರು ಈ ಚಿತ್ರವನ್ನು ವೀಕ್ಷಿಸಿ ತಮ್ಮ ಷರಾವನ್ನು ಬರೆದಿದ್ದಾರೆ. ಜೊತೆಗೆ ಬಾಲಿವುಡ್‌ನ ಹಿರಿಯ, ಖ್ಯಾತ ನಿರ್ದೇಶಕರೂ ಆನಂದ್ ಗಾಂಧಿಯ ಪ್ರಯತ್ನವನ್ನು ಅಭಿನಂದಿಸಿದ್ದಾರೆ. ಭಾರತೀಯ ಚಿತ್ರಪಂಡಿತರ ಹೊಗಳಿಕೆಯ ಸುರಿಮಳೆಯೇ ಈ ಚಿತ್ರದ ಮೇಲೆ ಸುರಿದಿದೆ. ಹಲವು ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನೂ ಈ ಚಿತ್ರ ತನ್ನದಾಗಿಸಿಕೊಂಡಿದೆ.

'ಶಿಪ್ ಆಫ್ ಥೀಸಿಯಸ್' ಮೂಲಭೂತವಾಗಿ ತತ್ವಶಾಸ್ತ್ರಕ್ಕೆ ಸಂಬಂಧಿಸಿದ ಶಬ್ದ. ಒಂದು ವಸ್ತುವಿನ ಎಲ್ಲ ಭಾಗಗಳನ್ನು ಬಿಡಿಬಿಡಿಯಾಗಿ ಸ್ಥಳಾಂತರಿಸಿ, ಪುನರ್ನಿರ್ಮಿಸಿದರೆ ಅದು ಮೂಲವಸ್ತುವಾಗಿ ಉಳಿಯುತ್ತದೆಯೆ? ಎಂಬ ವಿರೋಧಾಭಾಸದ ಕುರಿತು ಉತ್ತರವನ್ನು ಹುಡುಕುವ ಪ್ರಯತ್ನವೇ 'ಶಿಪ್ ಆಫ್ ಥೀಸಿಯಸ್'. ಹೆರಾಕ್ಲಿಟಸ್, ಸಾಕ್ರಟೀಸ್, ಪ್ಲೇಟೋರಂತಹ ಚಿಂತಕರನ್ನು ತಲೆಕೆಡಿಸಿದ ಪ್ರಶ್ನೆಯಿದು. ಥೀಸಿಯಸ್ ಎಂಬ ಹಡಗಿನ ಬಿಡಿಭಾಗಗಳನ್ನು ತೆಗೆದು ಹೊಸ ಹಡಗನ್ನು ನಿರ್ಮಿಸಲಾಯಿತು. ಈಗ ಹಡಗು ಮೂಲ ಹಡಗಾಗಿ ಉಳಿದಿದೆಯೆ? ಎನ್ನುವ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಪ್ಲುಟಾರ್ಕ್, ಥಾಮಸ್ ಹೋಬ್ಸ್ ತಮ್ಮದೇ ಆದ ವ್ಯಾಖ್ಯಾನಗಳನ್ನು ನೀಡುತ್ತಾರೆ. ಆನಂದ್ ಗಾಂಧಿ ಆ ಸಿದ್ಧಾಂತವನ್ನು ಕೇಂದ್ರವಾಗಿಸಿಕೊಂಡು, ಮನುಷ್ಯನ ಕುರಿತಂತೆ ಈ ಚಿತ್ರದಲ್ಲಿ ಚರ್ಚಿಸುತ್ತಾರೆ.

• ಕಿರುಚಿತ್ರಗಳ ಮೂಲಕ ಬಾಲಿವುಡ್‌ಗೆ ಕಾಲಿಟ್ಟ ಆನಂದ್ ಗಾಂಧಿಯ ಈ ಚಿತ್ರವೂ ಮೂರು ಕಿರುಚಿತ್ರಗಳ ಸಂಗಮ. ಆದರೆ ಕ್ಲೈಮಾಕ್ಸ್‌ನಲ್ಲಿ ಈ ಮೂರು ಚಿತ್ರಗಳ ಮುಖ್ಯ ಪಾತ್ರಗಳನ್ನು ಜೊತೆ ಸೇರಿಸುವ ಪ್ರಯತ್ನವನ್ನು ಮಾಡುತ್ತಾರೆ. ಚಿತ್ರದಲ್ಲಿ ಮೂರು ವಿಭಿನ್ನ ಪಾತ್ರಗಳಿವೆ. ಒಬ್ಬ ಕುರುಡಿ ಛಾಯಾಚಿತ್ರಗ್ರಾಹಕಿ, ಇನ್ನೊಬ್ಬ ಜೈನ ಸನ್ಯಾಸಿ ಮತ್ತು ಮಗದೊಬ್ಬ ಷೇರು ಉದ್ಯಮಿ. ಈ ಮೂರು ಪಾತ್ರಗಳಿಗೆ ತಮ್ಮತಮ್ಮ ಐಡೆಂಟಿಟಿಗಳು ಸವಾಲಾಗುವುದು ಮತ್ತು ಆ ಸವಾಲನ್ನು ಮುಖಾಮುಖಿಯಾಗುವುದು ಒಟ್ಟು ಚಿತ್ರದ ಕತೆ.

ಛಾಯಾಗ್ರಾಹಕಿಯ ಕತೆ ಅಲೌಕಿಕ ಪ್ರಜ್ಞೆಗೆ ಸಂಬಂಧಿಸಿದ್ದು. ಕುರುಡಿಯಾಗಿದ್ದರೂ ಸದ್ದುಗಳನ್ನು ಆಲಿಸುತ್ತಲೇ ಮುಂದಿರುವ ದೃಶ್ಯಗಳನ್ನು ತನ್ನ ಕ್ಯಾಮರಾದಲ್ಲಿ ಸೆರೆ ಹಿಡಿಯುವ ಚಾಕಚಕ್ಯತೆ ಆಲಿಯಾ ಕಮಾಲ್ ಅವಳದು. ಈ ಮೂಲಕವೇ ಅವರು ವಿಶ್ವವಿಖ್ಯಾತಳಾಗುತ್ತಾಳೆ. ಅವಳ ಫೋಟೋಗಳು ಬಹು ಚರ್ಚೆಗೊಳಗಾಗುತ್ತವೆ. ಇದೇ ಸಂದರ್ಭದಲ್ಲಿ ವೈದ್ಯರ ಶಸ್ತ್ರಚಿಕಿತ್ಸೆಯ ಬಳಿಕ ಅವಳಿಗೆ ಕಣ್ಣು ಮರಳಿ ಬರುತ್ತದೆ. ವಿಪರ್ಯಾಸವೆಂದರೆ, ಅವಳಿಗೆ ಈಗ ಮೊದಲಿನಂತೆ ಸದ್ದುಗಳನ್ನು ಹಿಂಬಾಲಿಸಿ ದೃಶ್ಯವನ್ನು ಸೆರೆಹಿಡಿಯುವುದಕ್ಕಾಗುವುದಿಲ್ಲ. ಮೊದಲಿನಂತೆ ಅದ್ಭುತ ಫೋಟೋಗಳನ್ನು ಹಿಡಿಯುವಲ್ಲಿ ಅವಳು ವಿಫಲಳಾಗುತ್ತಾಳೆ. ತನಗೆ ದೊರಕಿದ ಕಣ್ಣು ಮತ್ತು ಸದ್ದು ಇವುಗಳ ನಡುವಿನ ತಿಕ್ಕಾಟದಲ್ಲಿ ಆಲಿಯಾ ತತ್ತರಿಸುತ್ತಾಳೆ. ಆದರೆ ಒಂದು ಸಂದರ್ಭದಲ್ಲಿ ಅವಳು ಮುಖಾಮುಖಿಯಾಗುವ ಹಿಮಾಲಯದ ತಪ್ಪಲು, ಹರಿಯುವ ನೀರು, ನೀಲಿ ಆಕಾಶ, ಸುತ್ತಲಿನ ನೀರವತೆ ಅವಳ ಆಲೋಚನೆಯ ದೃಷ್ಟಿಯನ್ನು ಬದಲಿಸುತ್ತದೆ. ಕ್ಯಾಮರಾ ಕೈ ಜಾರುತ್ತದೆ. ಪ್ರಕೃತಿಯನ್ನು ವಿನೀತಳಾಗಿ, ಮೂಕವಿಸ್ಮಿತಳಾಗಿ ಆಸ್ವಾದಿಸತೊಡಗುತ್ತಾಳೆ.

ಎರಡನೆಯ ಕಥೆ ಮಧ್ಯ ವಯಸ್ಸಿನ ಜೈನ ಸನ್ಯಾಸಿಯದು. ಇಲ್ಲಿಯ ತಾಕಲಾಟ ಹಿಂಸೆ ಮತ್ತು ಅಹಿಂಸೆಯದು. ಔಷಧಿ ತಯಾರಿಕೆಗಾಗಿ ಮೂಕಪ್ರಾಣಿಗಳ ಹಿಂಸೆಯ ವಿರುದ್ಧ ನ್ಯಾಯಾಲಯದ ಮೆಟ್ಟಿಲೇರಿ ಹೋರಾಟ ನಡೆಸುವ ಮೈತ್ರೇಯಿಗೆ ಪರಿಚಯವಾಗುವುದು ಚಾರ್ವಾಕ ಎಂಬ ಯುವ ವಕೀಲ. ಈ ಹೋರಾಟದ ಹಂತದಲ್ಲೇ ಸನ್ಯಾಸಿಯ ಅತ್ಯಂತ ಕಠಿಣ ಬದುಕನ್ನೂ ತೋರಿಸಲಾಗುತ್ತದೆ. ಇದೇ ಸಂದರ್ಭದಲ್ಲಿ ಸನ್ಯಾಸಿ ಯಕೃತ್ತಿನ ಕ್ಯಾನ್ಸರಿಗೆ ಒಳಗಾಗುತ್ತಾನೆ. ಈಗ ಅವನ ಆಯ್ಕೆ ಒಂದೋ ಕೃತಕ ಅಂಗವನ್ನು ಪಡೆದು, ಔಷಧಿಯನ್ನು ಸೇವಿಸುವುದು ಅಥವಾ ದೇಹತ್ಯಾಗ ಮಾಡುವುದು. ಈ ಹಂತದಲ್ಲಿ ಸನ್ಯಾಸಿ ದೇಹ ತ್ಯಾಗಕ್ಕಿಳಿಯುತ್ತಾನೆ. ಇದೇ ಸಂದರ್ಭದಲ್ಲಿ ಚಾರ್ವಾಕ ಕೇಳುವ ಪ್ರಶ್ನೆ 'ತನ್ನ ದೇಹವನ್ನು ತಾನೇ ದಂಡಿಸಿಕೊಳ್ಳುವ ಹಕ್ಕು ನಮಗಿದೆಯೇ? ಅದು ಹಿಂಸೆಯಲ್ಲವೇ?' ಸಾವಿನ ಕೊನೆಯ ಹಂತದಲ್ಲಿರುವಾಗ ಆತ ಈ ಪ್ರಶ್ನೆಯನ್ನು ಒಪ್ಪಿಕೊಂಡು ಔಷಧಿಯನ್ನು ಸ್ವೀಕರಿಸಿ, ಬದುಕಿಗೆ ಮುಖ ಮಾಡುತ್ತಾನೆ.



ಮೂರನೆಯ ಕತೆ ಶೇರು ಉದ್ಯಮವನ್ನು ಅವಲಂಬಿಸಿದ ಯುವಕ ನವೀನ್ ಪರ್ನಾಮಿಗೆ ಸಂಬಂಧಿಸಿದ್ದು. ಕಿಡ್ನಿ ಶಸ್ತ್ರಕ್ರಿಯೆ ಮುಗಿಸಿ, ಚೇತರಿಸಿ ಮನೆ ಸೇರುವ ಈತನನ್ನು ಈತನ ಅಜ್ಜಿ 'ಬದುಕನ್ನು ಗಂಭೀರವಾಗಿ ಸ್ವೀಕರಿಸು' ಎಂದು ಸದಾ ತರಾಟೆಗೆ ತೆಗೆದುಕೊಳ್ಳುತ್ತಿರುತ್ತಾರೆ. ಆಕೆ ಬದುಕಿನ ಮೌಲ್ಯಗಳನ್ನು ನಂಬಿದಾಕೆ. ಒಂದು ದಿನ ಅವಳೇ ಬಿದ್ದು ಆಸ್ಪತ್ರೆ ಸೇರಬೇಕಾಗುತ್ತದೆ. ಅಜ್ಜಿಯನ್ನು ನೋಡಿಕೊಳ್ಳುವ ಹೊಣೆ ನವೀನ್ ಮೇಲೆ ಬೀಳುತ್ತದೆ. ತನ್ನ ಕಂಪ್ಯೂಟರ್ ಜೊತೆ ಕೆಲಸ ಮಾಡುತ್ತಲೇ ಅಜ್ಜಿಯ ಉಪದೇಶವನ್ನೂ ಕೇಳಬೇಕಾಗುತ್ತದೆ ಆತನಿಗೆ. ಇದೇ ಹೊತ್ತಿನಲ್ಲಿ ಆಸ್ಪತ್ರೆಯಲ್ಲಿ ಯಾರೋ ಚೀರಿದ ಧ್ವನಿ. ನವೀನ್ ಧ್ವನಿ ಬಂದತ್ತ ಧಾವಿಸುತ್ತಾನೆ. ನೋಡಿದರೆ ಜನರಲ್ ವಾರ್ಡ್‌ನಲ್ಲಿ ಒಬ್ಬಾಕೆ ಚೀರಾಡುತ್ತಿರುತ್ತಾಳೆ. ಆಕೆಯ ಗಂಡನ ಕಿಡ್ನಿಯನ್ನು ಆಸ್ಪತ್ರೆಯ ವೈದ್ಯರು ಕದ್ದಿರುತ್ತಾರೆ. ನವೀನ್ ಈ ಕುರಿತು ವಿಚಾರಿಸುತ್ತಾ ಹೋದಂತೆ ತನಗೆ ಅಳವಡಿಸಿದ ಕಿಡ್ನಿ ಅವಳ ಗಂಡನಿಂದ ಕದ್ದಿರುವುದು ಎನ್ನುವುದು ಮನವರಿಕೆಯಾಗುತ್ತದೆ. ಅದರ ಮೂಲವನ್ನು ಹುಡುಕಿ, ತನ್ನ ಕಿಡ್ನಿಯನ್ನು ಅವನಿಗೆ ಮರಳಿಸುವ ಪ್ರಯತ್ನವನ್ನು ಮಾಡುತ್ತಾನೆ. ಆರೋಪಿಗಳಿಗೆ ಶಿಕ್ಷೆಯಾಗಿಸಲು ಪ್ರಯತ್ನಿಸುತ್ತಾನೆ. ಆದರೆ ಕಿಡ್ನಿ ಕಳೆದುಕೊಂಡಾತ ಹೋರಾಟದ ಬದಲಿಗೆ, ಸಂಸ್ಥೆ ನೀಡುವ ಪರಿಹಾರಕ್ಕೇ ಸಂತೃಪ್ತನಾಗುತ್ತಾನೆ. ಆದರೆ, ಈ ಘಟನೆ ಆತನಿಗೆ ಬದುಕಿನ ಕಡೆಗೆ ಮುಖ ಮಾಡುವಂತೆ ಮಾಡುತ್ತದೆ. ಚಿತ್ರದ ಕೊನೆಯಲ್ಲಿ ಈ ಮೂರು ಕಥಾಪಾತ್ರಗಳು, ಹಾಗೆಯೇ ಇವರಂತಹ ಇನ್ನೂ ಹಲವು ಪಾತ್ರಗಳು ತಮ್ಮ ದೇಹದ ಭಾಗಗಳನ್ನು ದಾನ ನೀಡುವುದಕ್ಕಾಗಿ ಒಂದು ಆಸ್ಪತ್ರೆಯಲ್ಲಿ ಜೊತೆಯಾಗುತ್ತಾರೆ.

ಕುರುಡಿ ಮತ್ತು ಶೇರು ಉದ್ಯಮಿಯ ಕತೆ ಎದೆಯನ್ನು ಕಲಕುವಂತಿದೆ. ನಿರ್ದೇಶಕನ ಉದ್ದೇಶವನ್ನು ಮೀರಿ ಕತೆ ನಮ್ಮೊಳಗೆ ಬೆಳೆಯುತ್ತದೆ. ಆದರೆ ಜೈನ ಸನ್ಯಾಸಿಯ ಕತೆ ಎಲ್ಲೋ ಒಂದಿಷ್ಟು ವಾಚ್ಯವಾದಂತೆನಿಸುತ್ತದೆ. ಅಲ್ಲಿ ಮಾತು, ಚರ್ಚೆಗಳು ಕಥಾವಸ್ತುವಿನ ಬೆಳವಣಿಗೆಗೆ ಅಡ್ಡಿಯಾಗುತ್ತದೆ. ಕತೆಯನ್ನು ಒಟ್ಟಾಗಿ 'ಶಿಪ್ ಆಫ್ ಥೀಸಿಯಸ್' ಹಿನ್ನೆಲೆಯಲ್ಲಿ ಗ್ರಹಿಸುವಾಗ ಕೆಲವು ಸಮಸ್ಯೆಗಳು ಕಾಡುತ್ತವೆ. ಚಿತ್ರಕ್ಕೆ ಆ ಹೆಸರು ಮಿತಿಯನ್ನು ಹೇರುತ್ತದೆ. ನಿರ್ದೇಶಕ ಆ ಹೆಸರಿಗೆ ಬದ್ಧನಾಗದೆ ಉಳಿದಿದ್ದರೆ ಚೆನ್ನಾಗಿತ್ತು ಅನ್ನಿಸುತ್ತದೆ. ಚಿತ್ರದ ಕತೆ ತಣ್ಣಗೆ ಒಂದು ಕಿರು ನದಿಯಂತೆ ನಮ್ಮ ನರನಾಡಿಗಳಲ್ಲಿ ಹರಿಯತೊಡಗುತ್ತದೆ. ಸಂಗೀತದ ಅಬ್ಬರವಿಲ್ಲ. ನಿರೂಪಣೆಯ ವೈಭವವಿಲ್ಲ. ಮೂರು ಮುಖ್ಯ ಪಾತ್ರಗಳಲ್ಲಿ ಆಬಿದಾ ಅಲ್‌ಕಶಫ್, ನೀರಜ್ ಕಬಿ ಮತ್ತು ಸೋಹಮ್ ಶಾ ನಟನೆ ಚಿತ್ರವನ್ನು ಇನ್ನಷ್ಟು ಹತ್ತಿರವಾಗಿಸುತ್ತದೆ. ಒಂದು ಸಿನಿಮಾವನ್ನು ಯಾಕಾಗಿ ಮಾಡಬೇಕು, ಹೇಗೆ ಮಾಡಬೇಕು ಎನ್ನುವುದಕ್ಕೆ ಇಲ್ಲಿ ಉತ್ತರವಿದೆ. ಛಾಯಾಗ್ರಹಣವಂತೂ ಅತ್ಯದ್ಭುತವಾಗಿದೆ. ಹೃದಯದ ಕಣ್ಣುಗಳಿಂದ ಛಾಯಾಗ್ರಾಹಕ ದೃಶ್ಯಗಳನ್ನು ನಿರೂಪಿಸಿದ್ದಾನೆ. ಇವೆಲ್ಲವುಗಳ ನಡುವೆ ಒಂದು ಮಾತು. ಇದು ಮಲ್ಟಿಪ್ಲೆಕ್ಸ್‌ನ ಬುದ್ಧಿಜೀವಿಗಳನ್ನು ಗುರಿಯಾಗಿರಿಸಿಕೊಂಡು, ಅಂತಾರಾಷ್ಟ್ರೀಯ ಚಿತ್ರ ವಿಮರ್ಶಕರನ್ನು ಉದ್ದೇಶವಾಗಿಟ್ಟುಕೊಂಡು ಮಾಡಿದ ಚಿತ್ರವಾದುದರಿಂದ ಅಥವಾ ನಿರ್ದೇಶಕರಲ್ಲಿ ಮತ್ತು ನಿರ್ಮಾಪಕರಲ್ಲಿ ಆ 'ಮೇಲರಿಮೆ' ಗಟ್ಟಿಯಾಗಿರುವುದರಿಂದ ಜನಸಾಮಾನ್ಯರನ್ನು ತಲುಪುವುದು ಕಷ್ಟ.

• ಸ್ಪಂದನಾ


ಮಾಡುತ್ತಾ ಬರುತ್ತಿದೆ. ಆದರೆ ಕೆಲವೊಂದು ಸಮಸ್ಯೆಗಳನ್ನು ಇದರ ಮೂಲಕ ಸಾರ್ವತ್ರೀಕರಣಗೊಳಿಸಿದರೆ ಅದರ ಹಿಂದೆ ಬಹುದೊಡ್ಡ ಅಪಾಯವೇ ಕಾದಿರುತ್ತದೆ. ಹೆಣ್ಣು ಗಂಡನ್ನು ಶೋಷಣೆ ಮಾಡಿರುವುದು, ದಲಿತರು ಮೇಲ್ಜಾತಿಗಳನ್ನು ಅಟ್ರಾಸಿಟಿ ಕೇಸಿನಲ್ಲಿ ಸತಾಯಿಸಿರುವುದು, ಕೂಲಿಕಾರ್ಮಿಕ ಭೂಮಾಲೀಕನಿಗೆ ಮೋಸ ಮಾಡಿರುವುದು ಇಂತಹ ಕೆಲವು ಘಟನೆಗಳನ್ನು ಸಾರ್ವತ್ರೀಕರಣಗೊಳಿಸುವುದರ ಜೊತೆಗೆ ದಲಿತರಲ್ಲೂ ಭೂಮಾಲೀಕ ಬಂಡವಾಳಶಾಹಿಗಳು ಇದ್ದಾರೆ. ಅವರಿಗೇಕೆ ಮೀಸಲಾತಿ, ದಲಿತರು ಈಗ ಆರ್ಥಿಕವಾಗಿ ಪ್ರಬಲರಾಗಿದ್ದಾರೆ ಅವರಿಗೇಕೆ ಸೌಲಭ್ಯಗಳು, ದಲಿತರಲ್ಲಿ ಪ್ರತಿಭೆಯಿಲ್ಲ ಅವರಿಗೇಕೆ ಉಚಿತ ಸೀಟು ಎನ್ನುವ ಧೋರಣೆಗಳನ್ನು ಸಾರ್ವತ್ರೀಕರಣಗೊಳಿಸಿದರೆ (ಇವೆಲ್ಲವೂ ಬೆರಳೆಣಿಕೆಯಷ್ಟು ಪುರಾವೆಗಳು) ಬಹುಸಂಖ್ಯಾತರ ಸಮಸ್ಯೆಗಳಿಗೆ ಎಳ್ಳುನೀರು ಬಿಟ್ಟಂತಾಗುತ್ತದೆ. ಅಥವಾ ಸಮಸ್ಯೆ ಅಲ್ಲೂ ಇದೆ, ಇಲ್ಲೂ ಇದೆ ಅದರಲ್ಲೇನು ವಿಶೇಷ ಎನ್ನುವಷ್ಟರಮಟ್ಟಿಗೆ ಅದು ಸಹಜವಾಗಿಬಿಡುತ್ತದೆ ಅಥವಾ ಸಹಜ ಸ್ಥಿತಿಯಿಂದ ದೂರವಾಗುತ್ತದೆ. ಇಂತಹ ಪ್ರಯತ್ನದ ಮುಂದುವರಿದ ಭಾಗದಂತೆ ಅಂಕಲಗಿ ಅವರ ಲೇಖನವೂ ಕಾಣುತ್ತಿದೆ.



ಈ ದೇಶದ ಬಹುಸಂಖ್ಯಾತ ಹೆಣ್ಣುಮಕ್ಕಳು ಒಂದಲ್ಲ ಒಂದು ರೀತಿಯಲ್ಲಿ ಪುರುಷರಿಂದ ದೌರ್ಜನ್ಯಕ್ಕೆ ಒಳಗಾಗುತ್ತಲೇ ಇರುತ್ತಾರೆ. ಪುರುಷ ಪ್ರಧಾನ ವ್ಯವಸ್ಥೆಯ ಅಡಿಯಲ್ಲಿ ಸಿಕ್ಕಿ ತನ್ನ ಅಸ್ತಿತ್ವವನ್ನೇ ನಾಶ ಮಾಡಿಕೊಳ್ಳುತ್ತಿರುತ್ತಾರೆ. ಇದನ್ನು ದಿನನಿತ್ಯದ ಪತ್ರಿಕೆ ಮತ್ತು ಇನ್ನಿತರ ಮಾಧ್ಯಮಗಳ ವರದಿಗಳನ್ನು ಗಮನಿಸಿದರೆ ಗೊತ್ತಾಗುತ್ತದೆ. ಅಥವಾ ನಿತ್ಯ ಬದುಕಿನ ಸುತ್ತಮುತ್ತ ಗಮನಿಸಿದರೇ ತಿಳಿಯುತ್ತದೆ. ದಿನನಿತ್ಯ ನಡೆಯುತ್ತಿರುವ ಅತ್ಯಾಚಾರಗಳು, ವರದಕ್ಷಿಣೆಯಿಂದ ಉಂಟಾಗುತ್ತಿರುವ ಸಾವುಗಳು, ಅನೈತಿಕತೆ ಹೆಸರಿನಲ್ಲಿ ನಡೆಯುತ್ತಿರುವ ಕೊಲೆಗಳು, ಪ್ರೀತಿಪ್ರೇಮದ ಹೆಸರಿನಲ್ಲಿ ನಡೆಯುತ್ತಿರುವ ಆಸಿಡ್ ದಾಳಿಗಳು ಇವೆಲ್ಲವೂ ಇಲ್ಲಿನ ಹೆಣ್ಣುಮಕ್ಕಳ ದುರಂತ ಬದುಕನ್ನು ಕಣ್ಣಮುಂದೆ ತರುತ್ತವೆ. ಇನ್ನು ಕುಟುಂಬದೊಳಗೆ ನಡೆಯುತ್ತಿರುವ ಮಾನಸಿಕ ಹಿಂಸೆಗಳು ಲೆಕ್ಕವಿಲ್ಲದಷ್ಟು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಕುಟುಂಬದಾಚೆಗೆ ವಿಸ್ತರಿಸಿದರೆ 'ನಾನೇನ್ ಬಳೆ ತೊಟ್ಕೊಂಡಿದಿನಾ' ಎನ್ನುವ ಬೈಗುಳಗಳು, ಫೇರ ಅಂಡ್ ಲವ್ಲಿ ಜಾಹೀರಾತು ತೋರಿಸುವ ಮೈಬಣ್ಣವಿಲ್ಲದಿದ್ದರೆ ಅಸ್ತಿತ್ವವಿಲ್ಲ ಎನ್ನುವ ಹೇಳಿಕೆಗಳು, ತಮಾಷೆಯಲ್ಲಿ ನುಳಿದಾಡುವ 'ಹೆಣ್ಗಿ' ಎನ್ನುವ ಕೀಳು ಅಭಿರುಚಿಯ ಹೀಯಾಳಿಕೆಗಳು, ಟಿವಿ ನಿರೂಪಕಿ ಯಾರಾಗಬೇಕು ಎಂದರೆ ನೀವು ನೋಡಲು ಆಕರ್ಷಕವಾಗಿರಬೇಕು ಎನ್ನುವ ಜಾಹೀರಾತಿನ ಮಾತುಗಳು ಇವೆಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ಈ ದೇಶದ ಬಹುಸಂಖ್ಯಾತ ಹೆಣ್ಣುಮಕ್ಕಳನ್ನು ದಿನನಿತ್ಯ ಶೋಷಿಸುತ್ತಲೇ, ಅವಮಾನಿಸುತ್ತಲೇ ಯಾವ ಎಗ್ಗಿಲ್ಲದೆ ಪ್ರದರ್ಶನಗೊಳ್ಳುತ್ತಿವೆ. ಇನ್ನೂ ಮುಂದುವರಿದು ಜಾತಿಸೂಚಕದ ಹೆಸರಿನಲ್ಲಿ, ಸಂಬಂಧಗಳನ್ನು ಹೇಳುವ ಹೆಸರಿನಲ್ಲಿ, ನಾಡನ್ನು ಕುರಿತ ಬಣ್ಣನೆಯಲ್ಲಿ, ಬೈಗುಳಗಳಲ್ಲಿ, ಧಾರ್ಮಿಕ ವಿಧಿವಿಧಾನಗಳಲ್ಲಿ, ಕೆಲಸದ ಸಂಭಾವನೆಯಲ್ಲಿ, ದೇವರುಗಳ ಅಸ್ತಿತ್ವದಲ್ಲಿ, ಮದುವೆ ಮತ್ತಿತರ ಸಮಾರಂಭಗಳಲ್ಲಿ ಪುರುಷ ಪ್ರಧಾನ ಅಂಶಗಳೇ ಪ್ರಧಾನವಾಗಿ ನಿಂತು ಮಹಿಳೆ ದ್ವಿತೀಯದರ್ಜೆ ಪ್ರಜೆಯಾಗಿ ಪರಿಗಣಿಸಲ್ಪಡುತ್ತಿದ್ದಾಳೆ.

ಇಂತಹ ಸಂದರ್ಭದಲ್ಲಿ ಎಲ್ಲೋ ಕೆಲವು ಕಡೆ ಮಹಿಳೆಯರಿಂದ ಪುರುಷ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾನೆ ಎಂದು ಹೇಳುವುದರ ಮೂಲಕ ಶೋಷಣೆ ಹೆಣ್ಣಲ್ಲೂ ಇದೆ, ಗಂಡಲ್ಲೂ ಇದೆ ಎಂದು ಸಾರ್ವತ್ರೀಕರಣಗೊಳಿಸಬಾರದು.

ಏಕೆಂದರೆ ನ್ಯಾಷನಲ್ ಕ್ರೈಂ ರಿಪೋರ್ಟ್ ಬ್ಯೂರೋ 'ದಿನಕ್ಕೊಂದು ಹೆಣ್ಣುಮಕ್ಕಳ ಅತ್ಯಾಚಾರ ನಡೆಯುತ್ತಿದೆ, ದಿನಕ್ಕೆ ಮೂರು ದಲಿತರು ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ, ದಿನನಿತ್ಯ ದಲಿತರ ಗುಡಿಸಲು ಭಸ್ಮವಾಗುತ್ತಿವೆ' ಎಂಬ ವರದಿ ನೀಡಿದೆ. ಇದು ಈ ದೇಶದ ಮಹಿಳೆ ಮತ್ತು ದಲಿತರ ಪರಿಸ್ಥಿತಿಗೆ ಹಿಡಿದ ಕನ್ನಡಿ. ಇಂತಹ ದೌರ್ಜನ್ಯಗಳು ದಿನನಿತ್ಯ ಸಾಲುಸಾಲು ನಡೆಯುತ್ತಿರುವಾಗ 'ಪತ್ನಿ ಪೀಡಿತರ ಕತೆ-ವ್ಯಥೆ' ಯಂತಹ ಲೇಖನಗಳು ಇವುಗಳ ಸಮಸ್ಯೆಯನ್ನು ಸರಳೀಕರಣಗೊಳಿಸಿ, ಸಹಜಗೊಳಿಸಿಬಿಡುತ್ತವೆ ಎಂಬ ಗುಮಾನಿಯೂ ಕಾಡುತ್ತದೆ. ಜೊತೆಗೆ ಪುರುಷರಿಂದ ಯಾವ ಎಗ್ಗಿಲ್ಲದೆ ಮಹಿಳೆಯರ ಮೇಲೆ ನಡೆಯುತ್ತಿರುವ ಅಸಂಖ್ಯ ದೌರ್ಜನ್ಯಗಳನ್ನು ಮರೆಮಾಚಿಬಿಡುತ್ತದೆ ಎಂಬ ಅನುಮಾನವೂ ಆವರಿಸುತ್ತದೆ. ಹಾಗಂತ ಹೇಳಿ ಹೆಣ್ಣಿನಿಂದಾಗುವ ಶೋಷಣೆಯನ್ನು ಮರೆ ಮಾಡಬೇಕು ಎಂದು ಹೇಳುತ್ತಿಲ್ಲ. ಇವೂ ಕೂಡ ದೌರ್ಜನ್ಯಗಳೇ. ಶೋಷಣೆ ಎಲ್ಲಿ ನಡೆದರೂ ಅದನ್ನು ಖಂಡಿಸಬೇಕು. ಇದು ಮನುಷ್ಯ ಧರ್ಮ. ಇದನ್ನು ನಿವಾರಿಸಬೇಕಿರುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಕೂಡ. (ಇದನ್ನು ಸಮಸ್ಯೆ ಎಂದು ಪರಿಗಣಿಸುವಾಗ ಆ ಸಮಸ್ಯೆಗೆ ಮೂಲ ಕಾರಣವನ್ನು ಸುತ್ತಲಿನ ಪರಿಸರದಿಂದ ಮತ್ತು ಕುಟುಂಬದ ಒಳಗಿನಿಂದ ಅರ್ಥೈಸುವುದೂ ಬಹಳ ಮುಖ್ಯ) ಹಾಗಂತ ಅದನ್ನು ಪ್ರಗತಿಪರ ಪತ್ರಿಕೆಯ ಮೂಲಕ ಸಾರ್ವತ್ರೀಕರಣಗೊಳಿಸಿದರೆ ಅದು ಕೊಡುವ ಸಂದೇಶ ಇನ್ನೊಂದು ಮುಖದ ಅನಾವರಣದ ನೆಪದಲ್ಲಿ ಶೋಷಕರಿಗೆ ಮತ್ತೊಂದು ಅವಕಾಶವನ್ನು ದಯಪಾಲಿಸಿದಂತಾಗುತ್ತದೆ. ಆದ್ದರಿಂದ ಅಂಕಲಗಿ ಅವರು ಮತ್ತೊಮ್ಮೆ ಡಾ. ವಾಸು ಅವರು ಹೇಳುವಂತೆ 'ಇದನ್ನೊಂದು ಸಮಗ್ರ ಹಾಗೂ ಸಂಕೀರ್ಣ ಆಯಾಮಗಳನ್ನು ಪರಿಚಯಿಸುವ ಲೇಖನ ಮಾಲೆಯನ್ನಾಗಿ ಪರಿವರ್ತಿಸಿ ಪ್ರಕಟಿಸುವುದು ಅಗತ್ಯ' ಎನಿಸುತ್ತದೆ. ಇಂತಹ ವಿಷಯಗಳನ್ನು ಪ್ರಕಟಿಸುವ ಮಾನ್ಯ ಸಂಪಾದಕರ ದೃಷ್ಟಿಕೋನ ಒಂದು ರೀತಿಯಲ್ಲಿ ಒಳ್ಳೆಯದಿದ್ದರೂ ಇದನ್ನು ಧಾರಾವಾಹಿ ರೂಪದಲ್ಲಿ ಪ್ರಕಟಿಸುವಾಗ ಅದು ಮುಂದೆ ಸಮಾಜದಲ್ಲಿ ಬೀರಬಹುದಾದ ಪರಿಣಾಮಗಳ ಕಡೆ ಗಮನ ಹರಿಸುವುದು ಕೂಡ ಬಹಳ ಮುಖ್ಯ ಎನಿಸುತ್ತದೆ.



- ಹೆಚ್.ಡಿ. ಉಮಾಶಂಕರ್, ಸಹಾಯಕ ಪ್ರಾಧ್ಯಾಪಕರು, ಸ.ಪ್ರ.ದ. ಕಾಲೇಜು, ಕೆ.ಆರ್.ಪೇಟೆ

'ಪತ್ನಿ ಪೀಡಿತರ ಕತೆ ವ್ಯಥೆ' ಮಹಿಳಾ ವಿರೋಧಿ ಅಂಕಣವಾಗಿದೆ. ಈ ಸಮಾಜ ಪುರುಷ ಪ್ರಧಾನವಾಗಿದೆ. ಒಂದಿಬ್ಬರು ಮಹಿಳೆಯರು ಮಾಡಿದ ತಪ್ಪನ್ನೇ ಬಿಂಬಿಸಬಾರದು. ಈ ಸಮಾಜದಲ್ಲಿ ಮಹಿಳೆಯರಿಗೆ ಸ್ಥಾನಮಾನವಿಲ್ಲ, ದೌರ್ಜನ್ಯ, ವರದಕ್ಷಿಣೆ ಕಿರುಕುಳಕ್ಕೆ ಮಹಿಳೆಯರೇ ಹೆಚ್ಚು ತುತ್ತಾಗುತ್ತಿದ್ದಾರೆಂಬ ಸತ್ಯವನ್ನು ನೀವು ಮರೆತಿದ್ದೀರಾ ಅನ್ನಿಸುತ್ತಿದೆ.

ಲಂಕೇಶ್ ಪತ್ರಿಕೆ ವೈಚಾರಿಕತೆ, ಮಹಿಳಾಪರವಾದ ಹೋರಾಟದಲ್ಲಿದ್ದು ಈ ಅಂಕಣ ಮುಂದುವರೆಸುವುದು ಸಮಾಜಕ್ಕೆ ಯಾವುದೇ ರೀತಿಯಲ್ಲಿ ಒಳ್ಳೆ ಸಂದೇಶ ಕೊಡುವುದಿಲ್ಲ, ಹಾಗಾಗಿ ಈ ಅಂಕಣವನ್ನು ಈ ವಾರವೇ ನಿಲ್ಲಿಸಿ ಎಂದು ಮನವಿ.

- ದಾಕ್ಷಾಯಿನಿ, ಚೀರನಹಳ್ಳಿ

ರವಿಚಂದ್ರನ್ ಅವರ ಬಗ್ಗೆ ಪಾರ್ವತೀಶ ಅವರು ಚೆನ್ನಾಗಿ ಬರೆದಿದ್ದಾರೆ. ನಾನು ರವಿ ಸಾರ್ ಅವರ ಅಭಿಮಾನಿ. ಅವರೆಂದರೆ ನನಗೆ ತುಂಬಾ ಇಷ್ಟ. ಅವರು ತೆಗೆದಿರುವ ಪ್ರತಿಯೊಂದು ಸಿನಿಮಾವನ್ನು ನಾನು ಮೆಚ್ಚಿದ್ದೇನೆ.

- ಎಸ್. ಬಾಲು, ಕೊನಗವಳ್ಳಿ

ಗೌರಿ ಲಂಕೇಶರು ಬರೆದ 'ದಕ್ಷರನ್ನು ಭಸ್ಮ ಮಾಡುವ ಭ್ರಷ್ಟರು' ಲೇಖನವು ಪ್ರಜಾಪ್ರಭುತ್ವವನ್ನು ಬದಿಗೊತ್ತಿ ಸ್ವಾರ್ಥತೆಯನ್ನು ಸಮರ್ಥಿಸಿಕೊಂಡ ನಿರಂಕುಶತೆ ಯಾವ ರೀತಿ ದೇಶದಲ್ಲಿ ತಲೆ ಎತ್ತುತ್ತಿದೆ ಎಂಬುದಕ್ಕೆ ಜ್ವಲಂತ ನಿದರ್ಶನವಾಗಿದೆ. ಇಂತಹ ವರ್ಗಕ್ಕೆ ಧಿಕ್ಕಾರವಿರಲಿ.

ಭ್ರಷ್ಟಾಚಾರದ ವಿರುದ್ಧ ಎಷ್ಟೇ ಸಮರ ಸಾರಿದರೂ ಅದರ ಕದಂಬಬಾಹು ವಿಸ್ತಾರಗೊಳ್ಳುತ್ತಲೇ ಇದೆ. ಅದಕ್ಕೆ ಸ್ಪಷ್ಟ ಉದಾಹರಣೆ ದುರ್ಗಾ ಶಕ್ತಿಯ ಅಮಾನತು. ನಮ್ಮ ದೇಶದಲ್ಲಿ ನಿಷ್ಠೂರ ಅಧಿಕಾರಿಗೆ ಬೆಲೆ ಇಲ್ಲ ಅಂತ ಸಾಮಾನ್ಯ ಜನರಿಗೆ ಅರ್ಥ ಆಗಲು ತುಂಬಾ ದಿನ ಬೇಕಿಲ್ಲ. ಚೆನ್ನಾಗಿ ವಿವರಿಸಿದ್ದೀರ ಗೌರಿ ಅವರೆ.

- ಹರೀಶ್, ಮಂಗಳೂರು

ಗೌರಿ ಲಂಕೇಶರ 'ದಕ್ಷರನ್ನು ಭಸ್ಮ ಮಾಡುವ ಭ್ರಷ್ಟರು' ಅಂಕಣ ಚೆನ್ನಾಗಿತ್ತು.

- ಸುಷ್ಮಾ ಮಲ್ಲಿಕಾರ್ಜುನ್, ಸಾಗರ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಕಳುಹಿಸಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರಿಗೂ ಚಿಕ್ಕದಾಗಿ ಮತ್ತು ಚೊಕ್ಕವಾಗಿ SMS ಕಳುಹಿಸಬಹುದು.

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly Price Rs. 14/- 04-09-2013 RNI No. KARKAN2005/…

ಸಿನಿಮಾ ಸಿಂಪಲ್, ಬರ್ತ್‌ಡೇ ಗ್ರ್ಯಾಂಡ್



ಬಹುದಿನಗಳ ನಂತರ ಮೊನ್ನೆ ಸುದೀಪ್ ನಿರ್ದೇಶನದ ಚಿತ್ರ ಸದ್ದುಗದ್ದಲವಿಲ್ಲದೇ ಆರಂಭವಾಯಿತು. ಈ ಹಿಂದೆ ಸುದೀಪ್ ನಿರ್ದೇಶಿಸಿ-ನಟಿಸಿದ್ದ 'ಕೆಂಪೇಗೌಡ' ಚಿತ್ರದ ಮುಹೂರ್ತ ಬಸವೇಶ್ವರ ನಗರದ ಮುಖ್ಯರಸ್ತೆಯಲ್ಲಿರುವ ಗಣಪತಿ ದೇವಸ್ಥಾನದಲ್ಲಿ ನಡೆದಿತ್ತು. ಆ ಕಾರಣಕ್ಕೆ ಈ ಬಾರಿಯೂ ಅದೇ ದೇವಸ್ಥಾನದಲ್ಲಿ ಮುಹೂರ್ತವನ್ನು ತುಂಬಾ ಸಿಂಪಲ್ ಆಗಿ ಸುದೀಪ್ ಮಾಡಿದ್ದಾರೆ.

ಆದರೆ ಸೆಪ್ಟೆಂಬರ್ 2 ರಂದು ಸುದೀಪ್ ತಮ್ಮ ಬರ್ತ್‌ಡೇಯನ್ನು ಅತ್ಯಂತ ಅದ್ದೂರಿಯಾಗಿ ಆಚರಿಸಲಿದ್ದಾರಂತೆ. ಈಗ ಸುದೀಪ್ ಹಿಂದಿ ಮತ್ತು ತೆಲುಗು ಚಿತ್ರೋದ್ಯಮಗಳಲ್ಲೂ ಹೆಸರು ಮಾಡಿರುವದರಿಂದ ಅವರ ಬರ್ತ್‌ಡೇಗೆ ವೆಂಕಟೇಶ್, ಮಮ್ಮುಟ್ಟಿ, ಸುನೀಲ್ ಶೆಟ್ಟಿ, ಸಲ್ಮಾನ್ ಖಾನ್, ಅರ್ಜುನ್‌ಸರ್ಜಾ, ಕಮಲಹಾಸನ್ ಮಾತ್ರವಲ್ಲದೆ ಇನ್ನೂ ಅನೇಕ ನಾಯಕ-ನಾಯಕಿಯರು ಬರಲಿದ್ದಾರಂತೆ. ಜೊತೆಗೆ ಕನ್ನಡ ಚಿತ್ರರಂಗದವರು ಮತ್ತು ಸುದೀಪ್ ನಾಯಕತ್ವದ ಕ್ರಿಕೆಟ್ ತಂಡದ ಸದಸ್ಯರು ಇದ್ದೇ ಇರುತ್ತಾರೆ.

ಕನ್ನಡದ ಹುಡುಗನೊಬ್ಬ ಬೇರೆ ಭಾಷೆಗಳ ಸಿನಿಮಾಗಳಲ್ಲಿ ಮಾತ್ರವಲ್ಲ ಟಿ.ವಿ. ಶೋಗಳಲ್ಲೂ ಮಿಂಚಿ ಹೆಸರು ಮಾಡಿರುವುದು ಮೆಚ್ಚುಗೆಯ ವಿಚಾರ.

ಓವರ್‌ಟೇಕ್ ಮಾಡಿದ ವಿಕ್ಟರಿ



ಈ ವಾರ ಹಾಸ್ಯನಟ ಶರಣ್ ನಾಯಕನಾಗಿ ನಟಿಸುತ್ತಿರುವ 'ವಿಕ್ಟರಿ' ಚಿತ್ರ ಬಿಡುಗಡೆಯಾಗುತ್ತಿದೆ. ಚಿತ್ರದ ಹೆಸರಿಗೆ ತಕ್ಕಂತೆ ಇದು ಬಿಡುಗಡೆಯಾಗುವ ಮೊದಲೇ ಇದರ ನಿರ್ಮಾಪಕ ಆನಂದ್ ಆಡಿಯೋ ಸಂಸ್ಥೆಯ ಮಾಲೀಕ ಮೋಹನ್ ಛಾಬ್ರಿಯಾ ವಿಕ್ಟರಿ ನಗೆಯನ್ನು ಬೀರುತ್ತಿದ್ದಾರೆ. ಇದಕ್ಕೆ ಕಾರಣವಿಷ್ಟೇ: ಶರಣ್ ನಾಯಕನಾಗಿ ನಟಿಸಿದ ಈ ಚಿತ್ರದ ಟಿ.ವಿ ಹಕ್ಕು ಎರಡು ಕೋಟಿ ರೂ.ಗಳಿಗೆ ಮಾರಾಟವಾಗಿದೆ. ಶರಣ್ ನಾಯಕನಾಗಿ ನಟಿಸಿರುವ ಎರಡನೇ ಚಿತ್ರ ಇಷ್ಟು ದೊಡ್ಡ ಮೊತ್ತಕ್ಕೆ ಮಾರಾಟವಾಗಿರುವುದು ಉಳಿದ ನಾಯಕನಟರು ಹುಬ್ಬೇರಿಸುವಂತೆ ಮಾಡಿದ್ದಾರೆ.

ಶರಣ್‌ನಂತೆಯೇ ಹಾಸ್ಯನಟನ ಸ್ಥಾನದಿಂದ ಹೀರೋ ಸ್ಥಾನಕ್ಕೆ ಬಡ್ತಿ ಪಡೆದಿದ್ದ ಕೋಮಲ್ ಈತನಕ ಅತ್ಯಂತ ಹೆಚ್ಚು ಸಂಭಾವನೆ ಮತ್ತು ಸ್ಯಾಟಲೈಟ್ ಹಕ್ಕನ್ನು ಪಡೆದ ನಟರಾಗಿದ್ದರು. ಆದರೀಗ ಶರಣ್ ಕೋಮಲ್ ಅವರನ್ನು ಓವರ್‌ಟೇಕ್ ಮಾಡಿದ್ದಾರೆ. ಶರಣ್ ವೇಗ ಮತ್ತು ಯಶಸ್ಸನ್ನು ನೋಡಿ ಖಂಡಿತವಾಗಿಯೂ ಕೋಮಲ್ ಚಿಂತಾಕ್ರಾಂತರಾಗಿದ್ದಾರೆ ಎಂದೇ ಗಾಂಧಿನಗರದವರು ಆಡಿಕೊಳ್ಳುತ್ತಿದ್ದಾರೆ. ಇದಕ್ಕೆ ಕಾರಣವೂ ಇದೆ. ಕೋಮಲ್ ನಾಯಕನಾಗಿ ನಟಿಸಿರುವ ಸುಮಾರು ನಾಲ್ಕು ಚಿತ್ರಗಳು ಸಾಲುಸಾಲಾಗಿ ತೆರೆಕಾಣಲು ತಯಾರಾಗಿದ್ದರೂ ಅವುಗಳನ್ನು ಈತನಕ ಯಾವುದೇ ಟಿ.ವಿ. ವಾಹಿನಿಗಳು ಖರೀದಿಸಲು ಮನಸ್ಸು ಮಾಡಿಲ್ಲವಂತೆ. ಹೀಗಾಗಿ ಈಗ ಪರೋಕ್ಷವಾಗಿ ಕೋಮಲ್ ಮತ್ತು ಶರಣ್ ನಡುವೆ ಒಂದು ರೀತಿಯ ಪೈಪೋಟಿ ಆರಂಭವಾಗಿದೆ.

ಶಂಕರೇಗೌಡರಿಗೆ ಬಡ್ತಿ?



ಮಾಲಾಶ್ರೀ ನಾಯಕಿಯಾಗಿ ನಟಿಸುತ್ತಿರುವ 'ಬಾಯ್ಸ್' (ಬ ಅವೇರ್ ಆಫ್ ಗರ್ಲ್ಸ್) ಎಂಬ ಚಿತ್ರಕ್ಕೆ ಈಗ ನಿರ್ಮಾಪಕ ಶಂಕರೇಗೌಡರು ಸ್ಟಾರ್ಟ್, ಕಟ್ ಹೇಳಲಿದ್ದಾರೆ, ಅಂದರೆ ನಿರ್ದೇಶಕರಾಗಲಿದ್ದಾರೆ.

ಶಂಕರೇಗೌಡರು ನಾಯಕ ನಟ ಸುದೀಪ್ ಅವರ ಅತ್ಯಂತ ಆಪ್ತರು. ಸುದೀಪ್ ಅವರ ಎರಡು-ಮೂರು ಚಿತ್ರಗಳನ್ನು ನಿರ್ಮಿಸಿರುವ ಶಂಕರೇಗೌಡರು ನಿರ್ದೇಶಕನಾಗುವ ಆಶಯವನ್ನು ಬಹಳ ಹಿಂ… ವ್ಯಕ್ತಪಡಿಸಿದ್ದರು. ಹಾಗೆ ನೋಡಿದರೆ ಅವರಿಗೆ ನಾಯಕನಟನಾಗುವ ಆ… ಇತ್ತು. ಆದರೆ ಯಾರೂ ಇವರ ಇಂಗಿತವನ್ನು ಗಂಭೀ… ಪರಿಗಣಿಸಲಿಲ್ಲವಾದ್ದರಿಂದ ಅವರು ನಿರ್ಮಾಪಕರಾಗಿಯೇ ಮುಂದುವ…

ಬಹಳ ಸಮಯದ ಹಿಂದೆ ಸುದೀಪ್ ಚಿತ್ರವನ್ನು ನಿರ್ದೇಶಿಸುತ್ತೇನೆ ಶಂಕರೇಗೌಡರು ಕೆಲವು ಆಪ್ತಪತ್ರಕರ್ತರಲ್ಲಿ ಹೇಳಿದ್ದರು. ಆನಂತರ 'ಚಿರಂಜೀವಿ ಸರ್ಜ ಕಾಲ್‌ಶೀಟ್ ನೀಡಿದ್ದಾರೆ. ಆತನ ಚಿತ್ರವನ್ನು ನಿರ್ದೇಶಿಸುವುದು ಗ್ಯಾರಂಟಿ' ಎಂದಿದ್ದರು. ಮಗದೊಮ್ಮೆ ಜೋಡ… ಭಾಷೆಯ ಚಿತ್ರವನ್ನು ನಿರ್ಮಿಸಿ, ನಿರ್ದೇಶಿಸುವ ಆಶಯವನ್ನು ಗೆಳೆಯರ… ಹಂಚಿಕೊಂಡಿದ್ದರು. ಆದರೆ ಅದ್ಯಾವುದೂ ಸೆಟ್ಟೇರಲೇ ಇಲ್ಲ.

ಇದೀಗ ದಿಢೀರನೆ ಯಾವುದೇ ಸದ್ದುಗದ್ದಲವಿಲ್ಲದೆ ಅವರು ಮಾ… ಚಿತ್ರವನ್ನು ನಿರ್ದೇಶಿಸಲು ಹೊರಟಿರುವುದು ಅಚ್ಚರಿ ಮೂಡಿಸುತ್ತಿದೆ. '… ಈ ಚಿತ್ರದಲ್ಲಿ ನಿರ್ದೇಶನದ ಕೆಲಸವನ್ನು ಕಲಿತು, ಮುಂದೆ ಸುದೀಪ್ ಮತ್ತೊಬ್ಬ ದೊಡ್ಡ ನಟನ ಚಿತ್ರವನ್ನು ಇವರು ನಿರ್ದೇಶಿಸಬಹುದು' ಗಾಂಧಿನಗರದ ಜನ ಈಗ ಮಾತನಾಡಿಕೊಳ್ಳುತ್ತಿರುವುದು ಸುಳ್ಳಲ್ಲ.

ಪೂಜಾಳ ಹೊಸ ಅವತಾರ



'ಮುಂಗಾರು ಮಳೆ' ಖ್ಯಾತಿಯ ಪೂಜಾ ಗಾಂಧಿ ಬರುವ 30ನೇ ತಾರೀಖು ಹೊಸ ಅವತಾರದಲ್ಲಿ ಪ್ರೇಕ್ಷಕರ ಮುಂದೆ ನಿಲ್ಲಲಿದ್ದಾರೆ. ಈ ಹಿಂದೆ ನಾಯಕಿಯಾಗಿ, ಆನಂತರ ಐಟಂ ಸಾಂಗ್ ನೃತ್ಯಗಾರ್ತಿಯಾಗಿ, ಅದಾದ ನಂತರ ರಾಜಕಾರಣಿಯಾಗಿ, ಕೊನೆಗೆ ಮದುವಣಗಿತ್ತಿಯಾಗಿಯೂ ಜನರ ಮುಂದೆ ನಿಂತಿದ್ದ ಪೂಜಾ ಗಾಂಧಿ ಈಗ ತಮ್ಮದೇ ಆದ ಒಂದು ಸ್ವಂತ ಚಿತ್ರ ನಿರ್ಮಾಣ ಸಂಸ್ಥೆಯನ್ನು ಆರಂಭಿಸಲು ಸಜ್ಜಾಗಿದ್ದಾರೆ.

ತಮ್ಮ ಹೊಸ ಚಿತ್ರಕ್ಕೆ ಪೂಜಾ 'ಅಭಿನೇತ್ರಿ' ಎಂಬ ಹೆಸರಿಟ್ಟಿದ್ದಾರೆ. ಚಿತ್ರದ ಹೆಸರು ಕೇಳಿದಾಕ್ಷಣ ಇದು ಹಿರೋಯಿನ್ ಒರಿಯಂಟೆಡ್ ಚಿತ್ರ ಎಂದು ಸುಲಭವಾಗಿ ತೀರ್ಮಾನಿಸಬಹುದು. ಆಕೆಯೇ ಈ ಚಿತ್ರದ ನಾಯಕಿಯೂ ಆಗಿದ್ದು ಅವರ ಜೊತೆ ಕನಿಷ್ಠವೆಂದರೂ ಮೂರ್‍ನಾಲ್ಕು ಜನ ನಾಯಕರು ನಟಿಸುವ ಸಾಧ್ಯತೆಯಿದೆ ಎಂಬ ಮಾತು ಕೇಳಿಬರುತ್ತಿದೆ.

ರಾಜಕಾರಣಿಯಾಗಿ ಹೆಜ್ಜೆಗೊಮ್ಮೆ ಮುಗ್ಗರಿಸಿದ, ಮದುವೆಯ ವಿಷಯದಲ್ಲಿ ಸಂಪೂರ್ಣವಾಗಿ ಯಾಮಾರಿದ ಪೂಜಾ ಗಾಂಧಿ ತಮ್ಮ ಸ್ವಂತ ನಿರ್ಮಾಣದ ಚಿತ್ರದಲ್ಲಿ ಎಲ್ಲ ರೀತಿಯ ಯಶಸ್ಸು ಮತ್ತು ಕೀರ್ತಿಯನ್ನು ಪಡೆಯುವಂತಾಗಲಿ ಎಂದು ಆಶಿಸುತ್ತೇವೆ.

ಪರ್ಮನೆಂಟ್ 'ಅಣ್ಣ-ತಂಗಿ'?

ಸಾಮಾನ್ಯವಾಗಿ ಚಿತ್ರರಂಗದ ಯಾವುದೇ ನಟ ಅಥವಾ ನಟಿ ರಕ್ಷಾ ಬಂಧನ ಹಬ್ಬವನ್ನು ಆಚರಿಸುವುದಿಲ್ಲ. ಯಾಕೆಂದರೆ ಚಿತ್ರಲೋಕದಲ್ಲಿ ಸಹೋದರ-ಸಹೋದರಿ ಎಂಬ ಭಾವನಾತ್ಮಕ ನಂಟು ಸಾಧಾರಣವಾಗಿ ಯಾವ ನಟ-ನಟಿಯ ನಡುವೆ ಇರುವುದೇ ಇಲ್ಲ.



ಆದರೆ ಮೊನ್ನೆ ಅದಕ್ಕೆ ಅಪವಾದ ಎಂಬಂತೆ ನಾಯಕ ನಟ ಶಿವರಾಜ್‌ಕುಮಾರ್ ಅವರ ಮನೆಗೆ ತೆರಳಿದ ನಾಯಕಿ ನಟಿ ರಾಧಿಕಾ ಕುಮಾರಸ್ವಾಮಿ ಸುಮಾರು ಎಪ್ಪತ್ತು ಸಾವಿರ ರೂಪಾಯಿ ಬೆಲೆಬಾಳುವ ಚಿನ್ನದ ರಾಖಿಯನ್ನು ಕಟ್ಟಿ ಶಿವಣ್ಣನ ಆಶೀರ್ವಾದ ಪಡೆದುಕೊಂಡರು. ನಿಮಗೆ ಗೊತ್ತಿರಬಹುದು. ಶಿವಣ್ಣ ಮತ್ತು ರಾಧಿಕಾ ನಟಿಸಿದ್ದ 'ತವರಿಗೆ ಬಾ… ಕೆಲವು ವರ್ಷಗಳ ಹಿಂದೆ ಬಾಕ್ಸ್ ಆಫೀಸ್‌ನಲ್ಲಿ ಭರ್ಜರಿ ಜಯಭೇರಿ… ಭಾರಿಸಿತ್ತು. ಆದಾದನಂತರ ಅವರಿಬ್ಬರೂ ಅಣ್ಣತಂಗಿಯರ ತರಹವೇ ಬಾಂಧವ್ಯವನ್ನು ಉಳಿಸಿಕೊಂಡಿದ್ದಾರೆ.

ಇದೀಗ 'ಸ್ವೀಟಿ' ಎಂಬ ಚಿತ್ರದ ಬಿಡುಗಡೆಯ ನಂತರ ರಾ… ಕುಮಾರಸ್ವಾಮಿ ಅಣ್ಣ-ತಂಗಿಯ ಪ್ರೀತಿ ಮತ್ತು ತ್ಯಾಗದ ಕಥಾವಸ್ತುವಿನ ಚಿತ್ರ… ನಿರ್ಮಿಸಲಿದ್ದಾರೆ. ಸಾಯಿಪ್ರಕಾಶ್ ನಿರ್ದೇಶನದ ಈ ಚಿತ್ರದಲ್ಲಿ ಮತ್ತೆ ಎಂದಿ… ಶಿವರಾಜ್‌ಕುಮಾರ್ ಆಕೆಯ ಅಣ್ಣನ ಪಾತ್ರವನ್ನು ನಿರ್ವಹಿಸಲಿದ್ದಾರೆ. … ಶಿವಣ್ಣ ಮತ್ತು ರಾಧಿಕಾ ಚಿತ್ರರಂಗದ ಪರ್ಮನೆಂಟ್ ಅಣ್ಣ-ತಂಗಿ ಅ… ಅಲ್ಲವೇ?



ಕಮಲ್ ಜತೆ ಮತ್ತೆ ರಮೇಶ್

ರಮೇಶ್ ಅರವಿಂದ್ ತಮ್ಮ ವೃತ್ತಿಜೀವನದಲ್ಲಿ ಹೊಸ ಅಧ್ಯಾಯವನ್ನು ಬರೆಯುವ ತವಕದಲ್ಲಿದ್ದಾರೆ. ಈಗ 'ಹೆಚ್ಚು ಬೇಡಿಕೆ ಇಲ್ಲದ ನಟರಾಗಿರುವ ರಮೇಶ್ ಹಲವಾರು ಚಿತ್ರಗಳನ್ನು ನಿರ್ದೇಶಿಸಿದ್ದರೂ ಅದ್ಯಾವುದೂ ಅವರಿಗೆ ಅಷ್ಟು ಯಶಸ್ಸನ್ನು ತಂದುಕೊಟ್ಟಿಲ್ಲ. ಆದ್ದರಿಂದ ಅವರೀಗ ಮತ್ತೆ ತಮ್ಮ ಹಳೆ ದೋಸ್ತ್ ಕಮಲಹಾಸನ್ ಅವರ ಮೊರೆ ಹೋಗಿದ್ದರೆ. ಈ ಹಿಂದೆ ಕಮಲಹಾಸನ್



ಅವರನ್ನು ಹಾಕಿಕೊಂಡು 'ರಾಮಾ ಶಾಮಾ ಭಾಮಾ' ಎಂಬ ಚಿತ್ರವನ್ನು ರಮೇಶ್ ನಿರ್ದೇಶಿಸಿದ್ದರು. 'ವಿಶ್ವರೂಪಂ ಭಾಗ 2' ಚಿತ್ರದಲ್ಲಿ ಸಂಪೂರ್ಣವಾಗಿ ಮಗ್ನರಾಗಿದ್ದ ಕಮಲಹಾಸನ್ ಈಗ ಆ ಚಿತ್ರವನ್ನು ಮುಗಿಸಿದ್ದಾರೆ. ಹೀಗಾಗಿ ರಮೇಶ್ ನಿರ್ದೇಶನದ ಚಿತ್ರಕ್ಕೆ ಕಾಲ ಕೂಡಿಬಂದಿದೆ ಎಂದೇ ಮದ್ರಾಸಿನ ಮೂಲಗಳು ಹೇಳುತ್ತಿವೆ.

ಈ ಬಗ್ಗೆ ರಮೇಶ್ ಅರವಿಂದ್ ಹೇಳಿದ್ದಿಷ್ಟೇ: 'ಕಮಲಹಾಸನ್ ಜೊತೆಗೆ ನಾನು ಸಿನಿಮಾ ಮಾಡುವುದು ಬಹುತೇಕ ಖಚಿತವಾಗಿದೆ. ಈಗಾಗಲೇ ಕಥೆಯ ಬಗ್ಗೆ ಅವರ ಜೊತೆಗೆ ಮೂರ್‍ನಾಲ್ಕು ಸುತ್ತಿನ ಮಾತುಕತೆ ಮುಗಿಸಿದ್ದೇವೆ. ಆದರೆ ಚಿತ್ರವನ್ನು ಕನ್ನಡ ಮತ್ತು ತಮಿಳಿನಲ್ಲಿ ಏಕಕಾಲದಲ್ಲಿ ಮಾಡುತ್ತೇವೋ? ಅಥವಾ ತಮಿಳು ಮತ್ತು ಹಿಂದಿಯಲ್ಲಿ ಏಕಕಾಲದಲ್ಲಿ ನಿರ್ಮಿಸುತ್ತೇವೋ? ಎಂಬ ಬಗ್ಗೆ ಇನ್ನೂ ಅಂತಿಮವಾದ ನಿರ್ಣಯವನ್ನು ಕೈಗೊಂಡಿಲ್ಲ. ಇವೆಲ್ಲವನ್ನೂ ಕಮಲ್ ಅವರೇ ನಿರ್ಧರಿಸುತ್ತಾರೆ. ಒಟ್ಟಾರೆಯಾಗಿ ಕಮಲ್ ಚಿತ್ರ ಮಾಡುವುದು ಖಂಡಿತ, ಆದರೆ ಅದು ಯಾವಾಗ ಸೆಟ್ಟೇರುತ್ತದೆ ಎಂದು ಈಗಲೇ ಹೇಳುವುದು ಕಷ್ಟ.'

ಆದರೆ ಒಂದು ಮಾತಂತೂ ಸತ್ಯ. ಈ ಚಿತ್ರದ ಮುಖಾಂತರ ರಮೇಶ್ ತಮಿಳು ಅಥವಾ ಹಿಂದಿ ಚಿತ್ರರಂಗಕ್ಕೆ ನಿರ್ದೇಶಕರಾಗಿ ಪರಿಚಯವಾಗಲಿದ್ದಾರೆ.



ಲಂಕೇಶ್ ಮೀಡಿಯಾದ ಹೊಸ ಸಂಚಿಕೆಗಳು

ಈಗ ಎಲ್ಲೆಡೆ ಲಭ್ಯ

ಜಾಬ್ ನ್ಯೂಸ್ ಹೊಸ ಸಂಚಿಕೆ

ಗೈಡ್ ಸೆಪ್ಟೆಂಬರ್ 2013

ಪ್ರತಿಗಳಿಗಾಗಿ 080-26676427 9880302817



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427 Fax : 26604536, E-mail :lankesh70@rediffmail…